ಸಮುದಾಯವು ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ : ಬಳ್ಳಾರಿಜಿಲ್ಲೆ ಒಂದು ಅಧ್ಯಯನ

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾ ಪ್ರಬಂಧ

ಸಂಶೋಧಕ :
ಎಚ್. ಬಾಲರಾಜು

ಮಾರ್ಗದರ್ಶಕರು :
ಡಾ. ಜಿ. ನಾಗೇಂದ್ರ ಪ್ರಸಾದ್

ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

2002

34

ಸಮುದಾಯವು ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ: ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾ ಪ್ರಬಂಧ

ಸಂಶೋಧಕ

ಎಚ್. ಬಾಲರಾಜು

ಮಾರ್ಗದರ್ಶಕರು

ಡಾ. ಜಿ. ನಾಗೇಂದ್ರ ಪ್ರಸಾದ್

ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

2002

ಸಮುದಾಯವು ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ:ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಮಹಾ ಪ್ರಬಂಧ

ಸಂಶೋಧಕ

ಎಚ್. ಬಾಲರಾಜು

ಮಾರ್ಗದರ್ಶಕರು

ಡಾ. ಜಿ. ನಾಗೇಂದ್ರ ಪ್ರಸಾದ್

ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

2002

ಪ್ರಮಾಣ ಪತ್ರ

''**ಸಮುದಾಯವು ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ : ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ**'' ಎಂಬ ವಿಷಯ ಕುರಿತು ಡಾ। ಜಿ. ನಾಗೇಂದ್ರಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡಿ ಈ ಮಹಾ ಪ್ರಬಂಧವನ್ನು ಪಿಎಚ್. ಡಿ. ಪದವಿಗಾಗಿ ಸಿದ್ಧಪಡಿಸಿದ್ದೇನೆ.

ಈ ಮಹಾ ಪ್ರಬಂಧವನ್ನು ಇದುವರೆಗೆ ಯಾವುದೇ ವಿಶ್ವವಿದ್ಯಾಲಯಕ್ಕೆ ಪದವಿ ಅಥವಾ ಡಿಪ್ಲೊಮಾಗಳಿಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೆ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ನನ್ನ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಎಚ್. ಬಾಲರಾಜು)
ಸಂಶೋಧಕ

ದಿನಾಂಕ: 25-01-2002.
ಸ್ಥಳ: ಹೊಸಪೇಟೆ

ಮಾರ್ಗದರ್ಶಕರ ಪ್ರಮಾಣ ಪತ್ರ

''ಸಮುದಾಯವು ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ: ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ'' ಎಂಬ ವಿಷಯದ ಕುರಿತು ಎಚ್.ಬಾಲರಾಜು ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡಿ ಈ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ.

ಈ ಮಹಾ ಪ್ರಬಂಧವನ್ನು ಇದುವರೆಗೆ ಯಾವುದೇ ವಿಶ್ವವಿದ್ಯಾಲಯಕ್ಕೆ ಪದವಿ ಅಥವಾ ಡಿಪ್ಲೋಮಾಗಳಿಗಾಗಿ ಪ್ರಸ್ತುತಪಡಿಸಿಲ್ಲ. ಅಲ್ಲದೇ ಇದು ಇಲ್ಲಿಯವರೆಗೆ ಎಲ್ಲಿಯೂ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಮತ್ತು ಇದು ಅವರ ಸ್ವತಂತ್ರ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: 25-01-2002

ಸ್ಥಳ: ಬೆಂಗಳೂರು

(ಡಾ. ಜಿ. ನಾಗೇಂದ್ರ ಪ್ರಸಾದ್)

ಮಾರ್ಗದರ್ಶಕರು

ಕೃತಜ್ಞತೆಗಳು

'ನಹೀ ಜ್ಞಾನೇನ ಸದೃಶಂ' ಎಂಬ ಗೀತೋಕ್ತಿಯಂತೆ, ಹಾಗೂ 'ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ' ಎಂಬ ಬಸವಣ್ಣನವರ ವಚನೋಕ್ತಿಯಂತೆ ಶಿಕ್ಷಣವಿಲ್ಲದ ಸಮಾಜ ಎಂದೆಂದೂ ಪ್ರಗತಿಯನ್ನು ಸಾಧಿಸಲಾರದು. ಮಾನವನ ಸಾಮಾಜಿಕ ಅನಿಷ್ಟಗಳ ಪರಿಹಾರಕ್ಕೆ ಶಿಕ್ಷಣವೂ ಒಂದು 'ಸಿದ್ಧೌಷಧ' ಎಂಬ ಅಂಶವನ್ನು ಸಾರ್ವತ್ರಿಕವಾಗಿ ಅಂಗೀಕರಿಸಲಾಗಿದೆ. ಮ್ಯಾಕ್ಸ್‌ಮುಲ್ಲರ್‌ರವರು ಹೇಳಿರುವಂತೆ ಶೈಕ್ಷಣಿಕವಾಗಿ ಭವ್ಯ ಪರಂಪರೆಯನ್ನು ಹೊಂದಿದ್ದ ಭಾರತ ಇಂದು ವಿಶ್ವದಲ್ಲೇ ಅತಿ ಹೆಚ್ಚು ಅನಕ್ಷರಸ್ಥರನ್ನು ಹೊಂದಿರುವುದು ಇತಿಹಾಸದ ಒಂದು ವಿಪರ್ಯಾಸ. ಭಾರತದ ಶೋಚನೀಯವಾದ, ಶೈಕ್ಷಣಿಕವಾದ ಪರಿಸ್ಥಿತಿಗಳಿಗೆ ಕಾರಣಗಳೇನು? ಎಂಬುದರ ಬಗ್ಗೆ ತಜ್ಞರು, ಯೋಜನಕಾರರು ಮಂಥನ ನಡೆಸುತ್ತಲೇ ಬಂದಿದ್ದಾರೆ. 1961ರವೇಳೆಗೆ ಸಂಪೂರ್ಣ ಸಾಕ್ಷರತೆ ಸಾಧಿಸಬೇಕಾಗಿದ್ದ ಭಾರತ ಇಂದಿಗೂ ಗುರಿಯನ್ನು ಸಾಧಿಸಲಾಗಲಿಲ್ಲ. ನಾವೂ ಶಿಕ್ಷಣ ವ್ಯವಸ್ಥೆಯನ್ನು ನಿರಾಶೆಗೊಳಿಸಿದ್ದೇವೆಯೇ? ಅಥವಾ ಶಿಕ್ಷಣ ವ್ಯವಸ್ಥೆಯೇ ವಿಫಲವಾಯಿತೆ? ಇವೆರಡೂ ಪ್ರಶ್ನೆಗಳನ್ನು ವಿಷದವಾಗಿ ವಿಶ್ಲೇಷಿಸಬೇಕಾಗುತ್ತದೆ.

ಶಿಕ್ಷಣ ವ್ಯವಸ್ಥೆಯನ್ನೂ ವಿಕೇಂದ್ರೀಕರಿಸದೆ, ಸಮುದಾಯದ ಬೇಡಿಕೆಗಳನ್ನೂ, ಆಶಯಗಳನ್ನೂ, ಪ್ರಾಂತೀಯ ಭಿನ್ನತೆಗಳನ್ನೂ ಗಮನದಲ್ಲಿಟ್ಟುಕೊಳ್ಳದೆ, ಕೇಂದ್ರೀಕೃತ ಶಿಕ್ಷಣ ಪದ್ಧತಿಯನ್ನು ವಿವೇಚನೆಯಿಲ್ಲದೆ ಜಾರಿಗೊಳಿಸಿದ್ದು ಈ ಪರಿಸ್ಥಿತಿಗೆ ಕಾರಣವೆಂದು ಅನೇಕ ಸಂಶೋಧಕರು ತಿಳಿಸಿದ್ದಾರೆ. ತಮ್ಮ ಪ್ರಗತಿ ಹಾಗೂ ತಮ್ಮ ದೇಶದ ಪ್ರಗತಿಗೆ ತಾವೇ ಶಿಲ್ಪಿಗಳು ಎಂಬುದನ್ನು ಜನತೆ ಅರಿತುಕೊಳ್ಳಬೇಕು. '' ನಮ್ಮ ದೇಶದ ಭವಿಷ್ಯ ನಮ್ಮ ಶಾಲಾ ಕೊಠಡಿಗಳಲ್ಲಿ ರೂಪುಗೊಳ್ಳುತ್ತಿದೆ'' ಎಂದು ಕೊಠಾರಿ ಆಯೋಗವು ನುಡಿದಿರುವುದು ಒಂದು ವಾಸ್ತವಿಕ ಸಂಗತಿ. ಯೋಜನೆಗಳು ಜನತೆಯಿಂದಲೇ ರೂಪಗೊಳ್ಳಬೇಕು. ಇದೇ ರೀತಿ 'ಸಮುದಾಯ'ವೇ ತನ್ನ ಶೈಕ್ಷಣಿಕ ಬೇಡಿಕೆಗಳನ್ನು, ಆಶಯಗಳನ್ನು ಗುರುತಿಸಿ ಅಗತ್ಯವಾದ ವ್ಯವಸ್ಥೆಯನ್ನು ರೂಪಿಸಿಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣ ದೊರಕಿಸಿಕೊಡಲು ಮುಂದಾಗಿ ಸಕ್ರಿಯವಾಗಿ ಪಾತ್ರವಹಿಸಬೇಕು. ಆದರೆ ಇದುವರೆವೆಗೂ ಇಂತಹ ಪ್ರಯತ್ನಮಾಡದೆ, ಎಲ್ಲವೂ ಕೇಂದ್ರೀಕೃತವಾಗಿದ್ದುದರಿಂದ ಜನರಲ್ಲಿ ಪರಾವಲಂಬನೆ ಹಾಗೂ ಒಂದು ರೀತಿಯ ಅವಜ್ಞ ಮನೋಭಾವ ಬೆಳೆದು ಶಿಕ್ಷಣ ವ್ಯವಸ್ಥೆಯ ವೈಫಲ್ಯಕ್ಕೆ ಕಾರಣವಾಯಿತು.

ಕಳೆದ ಒಂದು ದಶಕದಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಶಿಕ್ಷಣದಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡಲು ಹಾಗೂ ಪ್ರಕ್ರಿಯೆಗಳನ್ನು ವಿಕೇಂದ್ರೀಕರಿಸಲು ಸೂಕ್ಷ್ಮ ಯೋಜನಾ ವಿಧಾನವನ್ನು ಅಳವಡಿಸಿಕೊಂಡು ರಾಜ್ಯದ ಆಯ್ದ ಜಿಲ್ಲೆಗಳ ಆಯ್ದ ತಾಲೂಕುಗಳಲ್ಲಿ ಕಾರ್ಯಗತ ಮಾಡಲಾಗಿದೆ. ಇದರಲ್ಲಿ ಪ್ರತಿ ಗ್ರಾಮಗಳು 'ಗ್ರಾಮ ಶಿಕ್ಷಣ ಸಮಿತಿ'ಗಳನ್ನು ರಚಿಸಿಕೊಂಡು ಜನರಿಗೆ ಪ್ರೇರಣೆ ನೀಡಿ, ಇಡೀ ಶಿಕ್ಷಣ ಪ್ರಕ್ರಿಯೆಯನ್ನು ಕಾರ್ಯಗತ ಮಾಡುವಲ್ಲಿ ಶ್ರಮವಹಿಸಿ ದುಡಿಯಬೇಕಾಗುತ್ತದೆ.

ಈಗಾಗಲೇ ಕಾರ್ಯಗತವಾಗಿರುವ ಈ ಕಾರ್ಯಕ್ರಮದ ಸಾಧನೆಯೇನು? ಸಾಧಕ-ಬಾಧಕಗಳೇನು? ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ? ಎಂಬುದರ ಬಗ್ಗೆ ಸಂಶೋಧನೆಯ ಅವಶ್ಯಕತೆಯಿದೆ ಎನಿಸುತ್ತದೆ. ಅಲ್ಲದೆ ಇಡೀ 'ಸೂಕ್ಷ್ಮ ಯೋಜನೆ'ಯ ಕಲ್ಪನೆ, ಅದರ ವಿಧಿ-ವಿಧಾನಗಳು, ಪ್ರಕ್ರಿಯೆಗಳನ್ನು ಶೈಕ್ಷಣಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಪರಿಭಾವಿಸುವುದು ಅಗತ್ಯವೆನಿಸಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನೆಯು ರೂಪುಗೊಂಡಿದೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಮತ್ತು ಹೊಸಪೇಟೆ ತಾಲೂಕುಗಳಲ್ಲಿ ಕಾರ್ಯಗತಗೊಂಡಿರುವ 'ಸೂಕ್ಷ್ಮ ಯೋಜನಾ' ಕಾರ್ಯಕ್ರಮದ ಬಗ್ಗೆ, ಪ್ರಾಥಮಿಕ ಹಾಗೂ ಆನುಷಂಗಿಕ ಮೂಲಗಳಿಂದ ಮಾಹಿತಿ ಹಾಗೂ ದತ್ತಾಂಶವನ್ನು ಸಂಗ್ರಹಿಸಿ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಈ ಸಂಶೋಧನೆಗೆ ಸ್ಫೂರ್ತಿ, ನನ್ನ ತಂದೆ ದಿ|| ಹುಳ್ಳಿಹನುಮಂತಪ್ಪ ಮತ್ತು ನನ್ನ ಬೆಳವಣಿಗೆಗೆ ಸದಾಶಯ ಕೋರುತ್ತಿರುವ ನನ್ನ ತಾಯಿ ಶ್ರೀಮತಿ ಹುಳ್ಳಿಲಕ್ಕಮ್ಮ ಅವರಿಗೆ ಈ ಮೂಲಕ ಈ ಪ್ರಬಂಧವನ್ನು ಸಮರ್ಪಿಸುತ್ತಿದ್ದೇನೆ.

ಈ ಸಂಶೋಧನೆಯಲ್ಲಿ ನನಗೆ ಮಾರ್ಗದರ್ಶನ, ಸಲಹೆಗಳು ಹಾಗೂ ಅನೇಕ ರೀತಿಯ ನೆರವನ್ನು ನೀಡಿದವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ನಮ್ರಕರ್ತವ್ಯ. ನನ್ನಲ್ಲಿ ಸುಪ್ತವಾಗಿ ಅಡಗಿದ್ದ ಬೌದ್ಧಿಕ ಆಸೆಯನ್ನು ಜಾಗೃಗಗೊಳಿಸಿ, ಪ್ರೋತ್ಸಾಹಿಸಿ ತಮ್ಮ ಬಿಡುವಿಲ್ಲದ ಕಾರ್ಯಭಾರಗಳ ನಡುವೆ ಅತ್ಯಮೂಲ್ಯವಾದ ಮಾರ್ಗದರ್ಶನ ನೀಡಿದ ಡಾ:ಜಿ.ನಾಗೇಂದ್ರಪ್ರಸಾದ್. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವಿಶೇಷಜ್ಞರು, ಜಲ ಸಂವರ್ಧನೆ ಯೋಜನಾ ಸಂಘ, ಕರ್ನಾಟಕ ಸರ್ಕಾರ ಬೆಂಗಳೂರುರವರಿಗೆ ಸನಮ್ರವಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶಿಕ್ಷಣ ಕ್ಷೇತ್ರದಲ್ಲಿ ಪರಿಣಿತರಾದ ಡಾ: ಎಂ.ಕೆ.ಶ್ರೀಕಂಠಯ್ಯ, ಬೆಂಗಳೂರು ಇವರು ಎಲ್ಲಾ ಅಧ್ಯಾಯ ಗಳನ್ನು ಓದಿ, ಕೆಲವು ಆಕರ ಗ್ರಂಥಗಳನ್ನು ಒದಗಿಸಿ ಹಲವು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಅವರ ಸಹಾಯವನ್ನು ನಮ್ರತೆಯಿಂದ ಸ್ಮರಿಸುತ್ತೇನೆ.

ಸಂಶೋಧನಾ ಅಧ್ಯಯನಕ್ಕೆ ಅನುಮತಿ ನೀಡಿ, ನನ್ನ ಸದಾಶಯಗಳಿಗೆ ಉತ್ತೇಜನ ನೀಡಿ ನನ್ನ ಸಂಶೋಧನೆ ಪೂರ್ಣವಾಗಲು ಅನೇಕ ರೀತಿಯಲ್ಲಿ ನೆರವು ನೀಡಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಈ ಹಿಂದಿನ ಆಯುಕ್ತರಾಗಿದ್ದ ಶ್ರೀಯುತ ಸಂಜಯಕೌಲ್ ಮತ್ತು ಈಗಿನ ಆಯುಕ್ತರಾದ ಶ್ರೀ ಟಿ.ಎಂ. ವಿಜಯಭಾಸ್ಕರವರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಪಿಎಚ್.ಡಿ. ಅಧ್ಯಯನವನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಕೈಗೊಳ್ಳಲು ಅನುಮತಿ ನೀಡಿ ಅವಕಾಶವನ್ನು ಕಲ್ಪಿಸಿ ಸದಾ ಮಾರ್ಗದರ್ಶನ ನೀಡುತ್ತಿರುವ ಈ ಹಿಂದಿನ ಉಪ ಕುಲಪತಿಗಳಾದ ಡಾ: ಚಂದ್ರಶೇಖರಕಂಬಾರ, ನನ್ನ ವಿದ್ಯಾಗುರುಗಳಾದ ಡಾ: ಎಂ.ಎಂ.ಕಲಬುರ್ಗಿ ಹಾಗೂ ಈಗಿನ ಉಪಕುಲಪತಿಗಳಾದ ಡಾ: ಹೆಚ್.ಜೆ.ಲಕ್ಕಪ್ಪಗೌಡ ಇವರಿಗೆ ನನ್ನ ಸವಿನಯ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪಿಎಚ್.ಡಿ. ಪದವಿಗೆ ನೋಂದಾಯಿಸಲು ಅವಶ್ಯಕವಾದ ಪೂರ್ವಭಾವಿ ಪರೀಕ್ಷೆಗೆ ಮಾರ್ಗದರ್ಶನ ನೀಡಿ ನನ್ನ ಸಂಪ್ರಬಂಧವನ್ನು ಪರಿಶೀಲಿಸಿ ನನ್ನ ಪ್ರಯತ್ನ ಯಶಸ್ವಿಯಾಗಲು ಮಾರ್ಗದರ್ಶನ ನೀಡಿದ ಶ್ರೀಮತಿ ಎಂ.ಡಿ.ಗಾಯಿತ್ರಿದೇವಿದತ್. ನಿರ್ದೇಶಕರು ದಕ್ಷಿಣ ಭಾರತ ಆಂಗ್ಲಭಾಷಾ ಪ್ರಾದೇಶಿಕ ಕೇಂದ್ರ. ಜ್ಞಾನ ಭಾರತಿ ಕ್ಯಾಂಪಸ್, ಬೆಂಗಳೂರು ಇವರನ್ನು ಆತ್ಮೀಯವಾಗಿ ಸ್ಮರಿಸುತ್ತೇನೆ.

ಪ್ರಾರಂಭದ ದಿಶೆಯಲ್ಲಿ ಅಧ್ಯಯನ ಕೈಗೊಳ್ಳಲು ಉತ್ತೇಜನ ನೀಡಿದ ಶ್ರೀಶೋಅಬ್ ಹಸನ್, ಸಹನಿರ್ದೇಶಕರು, ಆಯುಕ್ತರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಸರ್ವರೀತಿಯಿಂದಲೂ ಸಹಕರಿಸಿದ ಶ್ರೀ ಕೆ. ಪ್ರಹ್ಲಾದಾಚಾರ್, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ ಇವರಿಗೆ ನಾನು ಆಬಾರಿಯಾಗಿದ್ದೇನೆ.

ಅಧ್ಯಯನಕ್ಕೆ ಪೂರ್ವಭಾವಿಯಾಗಿ ಸಂಶೋಧನೆ ಕುರಿತು ಮಾರ್ಗದರ್ಶನ ನೀಡಿದ ಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ:ಬಿ.ಶೇಷಾದ್ರಿ, ಶ್ರೀ ಟಿ.ಆರ್.ಚಂದ್ರಶೇಖರ್ ಮತ್ತು ಅಧ್ಯಯನ ಕೈಗೊಳ್ಳಲು ಉತ್ತೇಜನ ನೀಡಿ ಸಹಕರಿಸಿದ ಡಾ: ಮಂಜುನಾಥ ಬೇವಿನಕಟ್ಟಿ, ಕುಲಸಚಿವರಾದ ಡಾ:ಕೆ.ವಿ.ನಾರಾಯಣ ಅಧ್ಯಯನಾಂಗದ ನಿರ್ದೇಶಕರಾದ ಡಾ:ಹಿ.ಚಿ.ಬೋರಲಿಂಗಯ್ಯನವರು ಮತ್ತು ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಡಾ: ಸುರೇಶ್, ಶ್ರೀ ಬಾಲಸುಬ್ರಹ್ಮಣ್ಯಂ, ಪ್ರೊ.ಎ.ವಿ.ನಾವಡ ಅವರಿಗೆ ನಮ್ರವಾದ ಕೃತಜ್ಞತೆಗಳನ್ನು ಸ್ಮರಿಸುತ್ತೇನೆ.

ಸಂಶೋಧನ ಕಾರ್ಯಕ್ಕೆ ಪರೋಕ್ಷವಾಗಿ ಮತ್ತು ಅಪರೋಕ್ಷವಾಗಿ ಸಲಹೆ, ಸೂಚನೆಗಳು, ಮಾರ್ಗದರ್ಶನ ನೀಡಿದ ಬಂಧುಗಳಾದ ಶ್ರೀ ಉಪ್ಪಿನ ತಾರಾನಾಥ, ಶ್ರೀಮತಿ. ಟಿ. ದೊಡ್ಡ ಹುಲುಗಮ್ಮ ಮತ್ತು ಸಣ್ಣ ಹುಲುಗಮ್ಮ ,ಡಾ: ತಾರಿಹಳ್ಳಿ ಹನುಮಂತಪ್ಪ, ಶ್ರೀ ತಾರಿಹಳ್ಳಿ ಧೃವಕುಮಾರ್, ಡಾ. ತಾರಿಹಳ್ಳಿ ಚಂದ್ರಶೇಖರ್ಹಾಗೂ ಹಿತೈಷಿಗಳಾದ ಶ್ರೀ ಬ್ಯಾನರ್ಜಿ, ಶ್ರೀ ಮಂಜುನಾಥ ಬೆಂಗಳೂರು , ಇವರೆಲ್ಲರಿಗೂ ನನ್ನ ಸವಿನಯ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನಾ ಸಮಯದಲ್ಲಿ ಬಹುಕೃತ್ಯದ ಭಾರಗಳನ್ನು ಹೊತ್ತು ನನ್ನ ಅಧ್ಯಯನದಲ್ಲಿ ಎಲ್ಲಾ ರೀತಿಯ ನೆರವು ನೀಡಿದ ನನ್ನ ಪತ್ನಿ ಸರ್ವಮಂಗಳ ಮತ್ತು ಮಕ್ಕಳಾದ ಎಚ್.ಬಿ. ವಿನಯ್, ಎಚ್.ಬಿ. ಕವಿತಾ, ಎಚ್.ಬಿ. ಕಾವ್ಯ ಇವರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಧ್ಯಯನದ ಸಂದರ್ಭದಲ್ಲಿ ಪ್ರೋತ್ಸಾಹಿಸಿದ ಡಿ.ಪಿ.ಇ.ಪಿ. ಕಾರ್ಯಾಲಯ ಬಳ್ಳಾರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ, ಶ್ರೀ ಕೆ.ಓಬಪ್ಪ, ಶ್ರೀಸೋಮಶೇಖರ್, ಶ್ರೀ ಶ್ರೀಧರ, ಶ್ರೀ ಸುದರ್ಶನ, ಶ್ರೀಮತಿ ಅರುಣ, ಶ್ರೀ ಎಚ್.ಎಂ.ಚಂದ್ರಮೌಳಿ ಮತ್ತು ಶ್ರೀ ಮಹಾಂತೇಶ್ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಅಧ್ಯಯಕ್ಕಾಗಿ ಕ್ಷೇತ್ರಾಧ್ಯಯನ ಕೈಗೊಂಡ ಸಂದರ್ಭದಲ್ಲಿ ಸಾಕಷ್ಟು ಶ್ರಮವಹಿಸಿ ಸಹಕಾರ ನೀಡಿದ ಕೂಡ್ಲಿಗಿ ತಾಲೂಕಿನ ಕ್ಷೇತ್ರ ಸಂಪನ್ಮೂಲ ಕೇಂದ್ರ (ಬಿ.ಆರ್.ಸಿ.)ದ ಶ್ರೀ ಕೆ.ರಾಮನಗೌಡ, ಶ್ರೀ ಕೆ.ಮಾರೆಣ್ಣ ಮತ್ತು ಶ್ರೀ ಎಚ್.ಎಂ.ಚನ್ನಯ್ಯ ಹಾಗೂ ಸಮೂಹ ಸಂಪನ್ಮೂಲ ಕೇಂದ್ರ (ಸಿ.ಆರ್.ಸಿ)ದ ಸಂಯೋಜಕರಿಗೆ, ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ, ಹೊಸಪೇಟೆಯ ಕ್ಷೇತ್ರ ಸಂಪನ್ಮೂಲ ಕೇಂದ್ರದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೂ, ಮರಿಯಮ್ಮನಹಳ್ಳಿ ಸಿ.ಆರ್.ಸಿ. ಸಂಯೋಜಕರಾದ ಶ್ರೀ ಆನಂದ ಪುಷ್ಪರತ್ನ, ಕ್ಷೇತ್ರಾಧ್ಯಯನ ಕಾರ್ಯದಲ್ಲಿ ನೆರವಾದ ಐದೂ ಗ್ರಾಮಗಳ ಶಾಲೆಗಳಲ್ಲಿಯ ಮುಖ್ಯೋಪಾಧ್ಯಾಯರು, ಶಿಕ್ಷಕರು, ಗ್ರಾಮದ ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರಿಗೆ ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನೆಯ ಹಸ್ತ ಪ್ರತಿಯ ಮುದ್ರಣವನ್ನು ಶಿಸ್ತು-ಬದ್ಧವಾಗಿ ಮುದ್ರಿಸಿಕೊಟ್ಟ ಹೊಸಪೇಟೆಯ ಶಶಿ ಕಂಪ್ಯೂಟರ್ ಮತ್ತು ಜೆರಾಕ್ಸ್ ಸೆಂಟರ್‌ನ ಶ್ರೀ ಹೆಚ್.ಎಂ.ಜಂಬುನಾಥ ಹಾಗೂ ಅವರ ಸಹಾಯಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಎಚ್. ಬಾಲರಾಜು,

ಸಂಶೋಧಕ

ಪರಿವಿಡಿ

ಅಧ್ಯಾಯ - ಮೂರು

ರೇಖಾಚಿತ್ರಗಳು :

ಕೋಷ್ಟಕಗಳು :

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪೀಠಿಕೆ

1.1. ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ

1.2. ಸಾಹಿತ್ಯ ಅವಲೋಕನ

1.3. ವಿಕೇಂದ್ರೀಕರಣ ಯೋಜನೆ

1.4. ಅಧ್ಯಯನದ ಸ್ವರೂಪ, ವ್ಯಾಪ್ತಿ

1.5. ಅಧ್ಯಯನದ ಉದ್ದೇಶಗಳು

1.6. ಅಧ್ಯಯನದ ಆಯಾಮ

1.7. ಮಾದರಿ ವಿನ್ಯಾಸ

1.8. ಆನುಷಂಗಿಕ ಮೂಲಗಳು

1.9. ಪ್ರಾಥಮಿಕ ದತ್ತಾಂಶ ಸಂಗ್ರಹಣೆ

1.10. ಪ್ರಾಥಮಿಕ ಮಾಹಿತಿಯ ಲಕ್ಷಣಗಳು

1.11. ಮಾದರಿ ಆಯ್ಕೆ

1.12. ದತ್ತಾಂಶ ಸಂಗ್ರಹದ ಸಾಧನ-ಸಾಮಗ್ರಿಗಳು

1.13. ಪ್ರಶ್ನಾವಳಿಗಳು

1.14. ದತ್ತಾಂಶ ವಿವರಣೆ

1.15. ಅಧ್ಯಯನದ ಅಧ್ಯಾಯಗಳು

ಪೀಠಿಕೆ :

ನಮ್ಮ ದೇಶದ ಭಾಗ್ಯಶಿಲ್ಪಿಗಳು ನಮ್ಮ ಶಾಲಾ ಕೊಠಡಿಗಳಲ್ಲಿ ರೂಪುಗೊಳ್ಳಬೇಕು ಎಂದು ಕಳೆದ ನಾಲ್ಕು ದಶಕಗಳ ಹಿಂದೆಯೆ ಕೊಠಾರಿ ಆಯೋಗ ತನ್ನ ಮುನ್ನುಡಿಯ ಮೊದಲ ವಾಕ್ಯದಲ್ಲಿಯೇ ಹೇಳಿತ್ತು, ಅದರಂತೆ, ಅನಕ್ಷರತೆಯನ್ನು ನಿರ್ಮೂಲ ಮಾಡಿ ಶಿಕ್ಷಣದ ಬೆಳಕನ್ನು ಎಲ್ಲೆಲ್ಲೂ ಚೆಲ್ಲಿ ದೇಶದ ಅಭಿವೃದ್ಧಿಯನ್ನು ಸಾಧಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸತತವಾಗಿ ಶ್ರಮಿಸುತ್ತಿವೆ. ಆದರೂ ಅನಕ್ಷರತೆ ನಮ್ಮ ನಾಡಿಗೆ ಒಂದು ಕ್ಲಿಷ್ಟ ಸವಾಲಾಗಿಯೇ ಉಳಿದಿದೆ. 1961ರ ವೇಳೆಗೆ ದೇಶದಲ್ಲಿ ಸಂಪೂರ್ಣ ಸಾಕ್ಷರತೆಯನ್ನುಂಟು ಮಾಡಬೇಕು ಎಂದು ಸಂವಿಧಾನ ಆದೇಶಿಸಿತ್ತು. ಆದರೆ ಇಂದಿಗೂ ಪ್ರತಿಶತ 35ಕ್ಕೂ ಹೆಚ್ಚು ಅನಕ್ಷರಸ್ಥರನ್ನು ಉಳಿಸಿಕೊಂಡು ದೇಶ 21ನೇ ಶತಮಾನಕ್ಕೆ ಪದಾರ್ಪಣಾ ಮಾಡಿದೆ. ವಿದ್ಯುನ್ಮಾನ ಕ್ಷೇತ್ರದಲ್ಲಿ ಅಭಿವೃದ್ಧಿ ಪಡೆದ ರಾಷ್ಟ್ರಗಳ ಮುಂಚೂಣಿಯಲ್ಲಿ ಭಾರತವಿದ್ದರೂ ಜಗತ್ತಿನ ಅತಿ ಹೆಚ್ಚು ಅನಕ್ಷರಸ್ಥರನ್ನು ಪಡೆದ ದೇಶವೆಂಬ ಅಪಕೀರ್ತಿಗೂ ಗುರಿಯಾಗಿದೆ. ಎಂತಹ ವಿಪರ್ಯಾಸ: ದೀಪದಡಿಯೇ ಕತ್ತಲು.

ಅನಕ್ಷರತೆ ನಮ್ಮ ಸಮಾಜದಿಂದ ಸಂಪೂರ್ಣವಾಗಿ ತೊಲಗದಿರಲು ಕಾರಣವೇನು ? ಎಂದು ರಾಷ್ಟ್ರ ತೀವ್ರವಾಗಿ ಯೋಚಿಸಬೇಕಾಗಿದೆ. ಚಿಂತಕರು, ಶಿಕ್ಷಣ ತಜ್ಞರು ಮತ್ತು ಸಂಶೋಧಕರು ಶಿಕ್ಷಣ ಕ್ಷೇತ್ರ ಕುಂಠಿತವಾಗಲು ಹಲವಾರು ಕಾರಣಗಳನ್ನು ಪತ್ತೆ ಹಚ್ಚಿದ್ದಾರೆ. ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತ ಮಾಡುವ ಎಲ್ಲಾ ಪ್ರಕ್ರಿಯೆಗಳಲ್ಲೂ ಸಮುದಾಯವನ್ನು ತೊಡಗಿಸಿಕೊಳ್ಳದೇ ಇರುವುದು ಒಂದು ಬಹುಮುಖ್ಯ ಕಾರಣವೆಂದು ಭಾವಿಸಿದ್ದಾರೆ. ಬಹುಶಃ ಈ ಅಭಿಪ್ರಾಯ ನಿಜವಾದುದು. ಏಕೆಂದರೆ, ಯಾವುದೇ ಸಮುದಾಯ, ತಮ್ಮ ಮಕ್ಕಳ ಶಿಕ್ಷಣದಲ್ಲಿ ಸಕ್ರಿಯ ಪಾತ್ರವನ್ನು ವಹಿಸಬೇಕಾಗುತ್ತದೆ. ಅವಶ್ಯಕವಿರುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರ ಒದಗಿಸಬಹುದು. ಆದರೆ ಅವುಗಳ ಸದುಪಯೋಗ ಪಡೆದು ತಮ್ಮ ಸಮುದಾಯದ ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವುದು ಜನರ ಹೊಣೆಗಾರಿಕೆ. ಇದೇ ರೀತಿ ಶಿಕ್ಷಣದ ವಿಧಿವಿಧಾನಗಳನ್ನು, ಪ್ರಕ್ರಿಯೆಗಳನ್ನು ಸಮುದಾಯದೊಡನೆ ಸಮಾಲೋಚಿಸಿ ನಿರ್ಧರಿಸುವುದು ಆಡಳಿತ ಯಂತ್ರದ ಜವಾಬ್ದಾರಿಯೂ ಹೌದು. ಅಂದರೆ ಶಿಕ್ಷಣ ಪ್ರಸರಣದ ಪ್ರಕ್ರಿಯೆಗಳು ಸಂಪೂರ್ಣವಾಗಿ ವಿಕೇಂದ್ರೀಕರಣಗೊಳ್ಳಬೇಕು. ಶಿಕ್ಷಣದ ಯೋಜನೆಗಳು ಜನರ ಬೇಕುಬೇಡಿಕೆಗಳಿಗೆ ಸ್ಪಂದಿಸಬೇಕು.

ಕಳೆದ ದಶಕದಿಂದ ಅಭಿವೃದ್ಧಿ ಕ್ಷೇತ್ರದ ಎಲ್ಲಾ ಆಯಾಮಗಳನ್ನು, ಯೋಜಿತ ಚಟುವಟಿಕೆಗಳನ್ನು ವಿಕೇಂದ್ರೀಕರಿಸಿ ಗ್ರಾಮ ಮಟ್ಟದಿಂದಲೇ ಯೋಜನೆ ಪ್ರಾರಂಭವಾಗಬೇಕು ಎಂಬ ಚಿಂತನೆ ಆಡಳಿತ ವರ್ಗದ ಮೇಲೆ ಪ್ರಭಾವ ಬೀರಿದೆ. ಇದರ ಪರಿಣಾಮವಾಗಿ ಶಿಕ್ಷಣ ಪ್ರಸರಣದ ಪ್ರಕ್ರಿಯೆಯೂ ವಿಕೇಂದ್ರೀಕರಿಸಲ್ಪಟ್ಟು, ''ಸೂಕ್ಷ್ಮ ಯೋಜನಾ'' ವಿಧಾನವನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯು ದೇಶದ ಅನೇಕ ಜಿಲ್ಲೆಗಳಲ್ಲಿ ಈಗಾಗಲೇ ಕಾರ್ಯಗತವಾಗಿದೆ. ಈ ಹಿನ್ನೆಲೆಯಲ್ಲಿ 'ಸೂಕ್ಷ್ಮ ಯೋಜನೆ' ಎಂದರೇನು ? ಇದರಲ್ಲಿ ಸಮುದಾಯದ ಪಾತ್ರವೇನು ? ಸಮುದಾಯದ ಭಾಗಿತ್ವವೆಂದರೇನು ? ಈ ಯೋಜನೆಯ ರೂಪರೇಷೆ, ವಿಧಿವಿಧಾನಗಳಾವುವು ?

ಎಷ್ಟರಮಟ್ಟಿಗೆ ಈ ಯೋಜನೆ ಕಾರ್ಯಗತವಾಗಿ ಫಲಪ್ರದವಾಗಿದೆ ? ಈ ಯೋಜನೆ ನಮ್ಮ ಶಾಲಾ ಶಿಕ್ಷಣವನ್ನು ಕಾಡಿಸುತ್ತಿರುವ ಸಮಸ್ಯೆಗಳಿಗೆ ಉತ್ತಮ ಪರಿಹಾರವಾಗಬಲ್ಲದೇ ? ಇತ್ಯಾದಿ ಕೆಲವು ಮೂಲಭೂತ ಪ್ರಶ್ನೆಗಳ ಬಗ್ಗೆ ಚಿಂತಿಸಿ, ಅಧ್ಯಯನ ನಡೆಸುವುದು ಅಗತ್ಯವೆನಿಸುತ್ತದೆ. ಏಕೆಂದರೆ, ಇಂತಹ ಪ್ರಯತ್ನ ಯೋಜನೆ ಸಾಗುತ್ತಿರುವ ಗತಿ ಹಾಗೂ ಅದರಿಂದ ಕಲಿಯಬಹುದಾದ ಅಂಶಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈ ಹಿನ್ನಲೆಯಲ್ಲಿ ಪ್ರಸಕ್ತ ಸಂಶೋಧನೆ ರೂಪತಳೆದಿದೆ.

1.1. ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ :

ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ತಂದೆ ತಾಯಿಯರ ಪ್ರಮುಖ ಕರ್ತವ್ಯವೆಂದೇ ನಮ್ಮ ಸಂಸ್ಕೃತಿಯಲ್ಲಿ ಭಾವಿಸಲಾಗಿದೆ. 'ಅಕ್ಷರಭ್ಯಾಸ' ಮತ್ತು ' ಉಪನಯನ' ಸಂಸ್ಕಾರಗಳನ್ನು ಇಲ್ಲಿ ಉದಾಹರಿಸಬಹುದು. ಹೀಗಾಗಿ ತಮ್ಮ ಮಕ್ಕಳ ಶಿಕ್ಷಣದಲ್ಲಿ ತಂದೆ ತಾಯಿಗಳು ಪ್ರಮುಖ ಪಾತ್ರವಹಿಸಬೇಕೆಂಬ ಅರಿವು ತುಂಬಾ ಪ್ರಾಚೀನವಾದುದು. ಇದೇ ರೀತಿ ಬಹುತೇಕ ಸಮುದಾಯಗಳೂ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಸೌಲಭ್ಯಕಲ್ಪಿಸಲು ಮುಂದಾಗುತ್ತಿದ್ದವು. ಶಿಕ್ಷಣದ ಇತಿಹಾಸವನ್ನು ಗಮನಿಸಿದಾಗ ಬ್ರಿಟಿಷರ ಆಗಮನದವರೆಗೂ ಭಾರತವನ್ನು ಆಳಿದ ಯಾವುದೇ ಸರಕಾರಗಳು ಜನತೆಗೆ ಶಿಕ್ಷಣವನ್ನು ನೀಡುವುದು ತಮ್ಮ ಜವಾಬ್ದಾರಿಯೆಂದು ಭಾವಿಸಿರಲಿಲ್ಲ. ಅನೇಕ ಹಳ್ಳಿಗಳಲ್ಲಿ ಗುರುಕುಲಗಳನ್ನು, ಕಲಿಕೆಯ ಮಠಗಳನ್ನು ಸ್ಥಾಪಿಸಿ ಬೋಧಕರಿಗೆ ಸಮುದಾಯವೇ ಸಹಾಯ ಧನ ನೀಡುತ್ತಿತ್ತು. ಭಾರತದ ಶಿಕ್ಷಣದ ಇತಿಹಾಸದ ಪುಟಗಳನ್ನು ನೋಡಿದಾಗ ಶಿಕ್ಷಣದ ಪ್ರಸರಣದಲ್ಲಿ ಸಮುದಾಯ ಸಕ್ರಿಯ ಪಾತ್ರವಹಿಸುತ್ತಿದ್ದುದು ನಿಚ್ಚಳವಾಗಿ ತಿಳಿದು ಬರುತ್ತದೆ.

ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ ಪ್ರಾಚೀನ ಪರಂಪರೆಯನ್ನು ಹೊಂದಿದ್ದರೂ ಇದರ ಲಾಭ, ಸೌಲಭ್ಯ ಕೇವಲ ಮೇಲ್ಜಾತಿಯವರಿಗೆ ಮಾತ್ರ ಸೀಮಿತವಾಗಿತ್ತು. ಶೂದ್ರ, ದೀನ-ದಲಿತರ ಪಾಲಿಗೆ ಶಿಕ್ಷಣ ನಿಲುಕದ ನಕ್ಷತ್ರವಾಗಿತ್ತು. ಬ್ರಿಟಿಷ್ ಆಳ್ವಿಕೆಯ ಕೆಲವು ದಶಕಗಳ ನಂತರ ರಾಜ್ಯ ನಿರ್ದೇಶಿತ ಸಾರ್ವಜನಿಕ ಶಿಕ್ಷಣ ರೂಪ ತಾಳಿದ್ದರೂ, ಈ ವ್ಯವಸ್ಥೆ ಆಡಳಿತ ವರ್ಗದ ಹಿಡಿತಕ್ಕೆ ಒಳಪಟ್ಟಿತೇ ಹೊರತು, ತಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕಾದುದು ಸಮುದಾಯದ ಜವಾಬ್ದಾರಿ ಎಂಬ ಪ್ರಜ್ಞೆಯನ್ನು ಮೂಡಿಸಲು, ತೀವ್ರ ಪ್ರಯತ್ನ ಆಗಲೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಸ್ವಾತಂತ್ರ್ಯನಂತರದಲ್ಲಿಂದಲೂ ಸಹ ಇದೇಧೋರಣೆ ಮುಂದುವರಿಯಿತು. ಆಡಳಿತ ವ್ಯವಸ್ಥೆಯು ಕೇಂದ್ರದ ಹಂತದಲ್ಲಿಯೇ ಯೋಜನೆಗಳನ್ನು ರೂಪಿಸಿ ಸಮುದಾಯದ ಮೇಲೆ ಹೇರಲು ಪ್ರಯತ್ನಪಟ್ಟಿತೇ ಹೊರತು, ಶಿಕ್ಷಣದ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವ ವ್ಯವಸ್ಥಿತ ಪ್ರಯತ್ನವನ್ನು ಮಾಡಲೇ ಇಲ್ಲ.

ತಮ್ಮ ಹಳ್ಳಿಯಲ್ಲಿ ಶಾಲೆ ಏಕೆ ಇದೆ ?

ಅದರ ಅವಶ್ಯಕತೆ ಯಾದರೂ ಏನು ?

ಅದನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ?

ಅದನ್ನು ಯಾವ ರೀತಿ ಅಭಿವೃದ್ಧಿಪಡಿಸಿಕೊಳ್ಳಬೇಕು ?

ಮಕ್ಕಳಿಗೆ ಶಿಕ್ಷಣವಾದರೂ ಏಕೆ ಬೇಕು ?

ಎಂಬುದರ ಬಗ್ಗೆ ಸಮುದಾಯವೂ ವ್ಯವಸ್ಥಿತ ಯೋಚನೆಯನ್ನು ಮಾಡಲಿಲ್ಲ. ಇತ್ಯಾದಿ ಪ್ರಶ್ನೆಗಳನ್ನು ಸಮುದಾಯವೂ ಮಾಡಲಿಲ್ಲ. ಸರ್ಕಾರವು ಸಹ ಸಮುದಾಯವನ್ನು ಪ್ರಚೋದಿಸುವ ಪ್ರಯತ್ನವನ್ನೂ ಮಾಡಲಿಲ್ಲ. ಹೀಗಾಗಿ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ದೊರಕಿಸಿ ಕೊಡುವುದು ಸರ್ಕಾರದ ಹೊಣೆಗಾರಿಕೆಯೆಂಬ ಆಲಸ್ಯಪೂರಿತ ಅವಜ್ಞಾನ ಜನರಲ್ಲಿ ಮೂಡಿತು. ಸ್ವಾತಂತ್ರ್ಯಾನಂತರ ಐವತ್ತೈದು ವರ್ಷ ಕಳೆದರೂ ಭಾರತ ಇಂದಿಗೂ ಪ್ರತಿಶತ 38ಕ್ಕೂ ಹೆಚ್ಚು ಅನಕ್ಷರಸ್ಥರನ್ನು ಹೊಂದಿರಲು ಮೇಲೆ ತಿಳಿಸಿದ ಜನತೆಯ ಮನೋಭಾವವೂ ಒಂದು ಕಾರಣ ಎಂದರೆ ತಪ್ಪಾಗಲಾರದು.

ಪ್ರತಿ ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ.ಸ್ವಲ್ಪವಾದರೂ ಹಣಕಾಸು; ಪ್ರತಿ ಹಳ್ಳಿಗೂ ಕನಿಷ್ಠ ಒಂದು ಶಾಲೆಯನ್ನಾದರೂ ಒದಗಿಸಲಾಗಿದೆ. ಆದರೂ ಅನಕ್ಷರತೆ ಭಾರತದಿಂದೇಕೆ ಹೊರಹೋಗುತ್ತಿಲ್ಲ? ಈ ಪ್ರಶ್ನೆಗೆ ಉತ್ತರಿಸಲು ಅನೇಕ ಚಿಂತಕರು, ಸಂಶೋಧಕರು ಪ್ರಯತ್ನಿಸಿದ್ದಾರೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಅಮರ್ಥ್ಯಸೇನ್‌ರವರು ತಮ್ಮ ಇತ್ತೀಚಿನ ಕೃತಿಯಲ್ಲಿ ಭಾರತದ ಶೋಚನೀಯವಾದ ಶೈಕ್ಷಣಿಕ ಪರಿಸ್ಥಿತಿಗೆ ಆಡಳಿತ ವ್ಯವಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ವಿಶ್ವದ ಬಹುತೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಶಾಲಾಮಟ್ಟದ ಶಿಕ್ಷಣವನ್ನು ಸಮುದಾಯವೇ ನಿರ್ವಹಿಸುತ್ತದೆ. 'ಸಮುದಾಯ ಶಾಲೆಗಳು' ಅಮೇರಿಕ, ರಷ್ಯಾದಲ್ಲಿ ಜನಪ್ರಿಯವಾಗಿವೆ. ಕಳೆದ ಒಂದು ದಶಕದಿಂದ ನಮ್ಮ ಆಡಳಿತ ವ್ಯವಸ್ಥೆ ಶಿಕ್ಷಣದ ಪ್ರಗತಿಯಲ್ಲಿ ಸಮುದಾಯವನ್ನು ತೊಡಗಿಸುವ ಮಹತ್ವವನ್ನು ಅರಿತು ದೇಶದಾದ್ಯಂತ 'ಸೂಕ್ಷ್ಮ ಯೋಜನೆ'ಗಳನ್ನು ರೂಪಿಸಿ ಹಂತ ಹಂತವಾಗಿ ಕಾರ್ಯಗತ ಮಾಡುತ್ತದೆ. ಈ ಹಿನ್ನೆಲೆಯಲ್ಲಿ 'ಸೂಕ್ಷ್ಮ ಯೋಜನೆ' ಎಂದರೇನು? ಅದರ ರೂಪರೇಷೆಗಳೇನು? ಕಳೆದ ದಶಕದಲ್ಲಿ ಅದರ ಸಾಧನೆಯೇನು? ಶಿಕ್ಷಣದ ಪ್ರಗತಿಯಲ್ಲಿ ಸಮುದಾಯದ ಪಾತ್ರವೇನು? ಇತ್ಯಾದಿ ಮಹತ್ವಪೂರ್ಣ ಪ್ರಶ್ನೆಗಳು ಉದ್ಭವಿಸುತ್ತವೆ. ಇವುಗಳನ್ನು ವಿಶ್ಲೇಷಿಸಿ ಶಿಕ್ಷಣವು ನಡೆಯಬೇಕಾದ ಗತಿಯನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ. ಪ್ರಸ್ತುತ ಈ ಸಂಶೋಧನೆ ಈ ನಿಟ್ಟಿನಲ್ಲಿ ಇತಿ-ಮಿತಿಯೊಳಗೆ ಒಂದು ಚಿಕ್ಕ ಪ್ರಯತ್ನವನ್ನು ಮಾಡಲು ಮುಂದಾಗಿದೆ. ಪೂರ್ವಭಾವಿಯಾಗಿ ಭಾರತದ ಶಿಕ್ಷಣ ಪದ್ಧತಿಯ ಕಿರು ಪರಿಚಯ, 'ಸಮುದಾದ'ದ ಪರಿಕಲ್ಪನೆ,ಅದರ ಮಹತ್ವ, 'ವಿಕೇಂದ್ರೀಕರಣ'ದ ಅಗತ್ಯತೆ, 'ಸೂಕ್ಷ್ಮ ಯೋಜನೆ'ಯ ಅರ್ಥವ್ಯಾಪ್ತಿಗಳ ಒಂದು ಪರಿಚಯವನ್ನು ಮಾಡಿಕೊಳ್ಳುವ ಅಗತ್ಯವಿದೆ. ಪ್ರಸಕ್ತ ವಿಷಯದ ಬಗ್ಗೆ ಈಗಾಗಲೇ ಸ್ವಲ್ಪ ಚಿಂತನೆ ಹಾಗೂ ಸಂಶೋಧನೆ ನಡೆದಿದೆ. ಈ ಯೋಜನೆ ಇತ್ತೀಚೆಗೆ ಕಾರ್ಯಗತವಾಗಿರುವುದರಿಂದ, ಸಾಕಷ್ಟು ಸಂಶೋಧನೆಯಾಗದೆ ಸಾಹಿತ್ಯವೂ ಸೃಷ್ಟಿ ಯಾಗಿಲ್ಲ. ಹೀಗಾಗಿ ಲಭ್ಯ ಇರುವ ಕೃತಿಗಳ ವಿಮರ್ಶಾತ್ಮಕ ಅವಲೋಕನ ಮಾಡಲಾಗಿದೆ.

1.2. ಸಾಹಿತ್ಯ ಅವಲೋಕನ :

ರೋಮ್‌ನಲ್ಲಿ ನಡೆದ ಏಷ್ಯಾ ಪ್ರಾದೇಶಿಕ ಕಾರ್ಯಾಗಾರದಲ್ಲಿ '' ಯಾವುದೇ ಅಭಿವೃದ್ಧಿ, ಪ್ರಗತಿಗೆ ಜನರ ಪಾಲ್ಗೊಳ್ಳುವಿಕೆ ಅಗತ್ಯ'' ಎಂದು ಪ್ರತಿಪಾದಿಸಿದೆ. ''ಪ್ರಗತಿಪರ ಕಾರ್ಯಕ್ರಮಗಳ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆಯ ಅವಶ್ಯಕತೆ ಇದೆ'' ಎಂದು 7ನೇ ಪಂಚವಾರ್ಷಿಕ ಯೋಜನೆಯು ತನ್ನ ಮಂಡನಾ ಪತ್ರದಲ್ಲಿ ಉಲ್ಲೇಖಿಸಿದೆ. 1986ರಲ್ಲಿ ಯೋಜನಾ ಆಯೋಗವೂ ಸಹ ''ಸ್ಥಳೀಯ ಯೋಜನೆಗಳನ್ನು ರೂಪಿಸುವುದರಲ್ಲಿ ಜನರ ಭಾಗವಹಿಸುವಿಕೆ ಅಗತ್ಯವೆಂದು ಮತ್ತು ಕೈಗೊಂಡ ಅಭಿವೃದ್ಧಿ ಕೆಲಸಗಳು ಮುಂದುವರಿಯ ಬೇಕೆಂದರೆ ಜನರು ಯೋಜನಾ ಪ್ರಕ್ರಿಯೆಯಲ್ಲಿ ಸಂಪೂರ್ಣ ಭಾಗಿದಾರರಾದಾಗ ಮಾತ್ರ ಯಶಸ್ವಿಯಾದ ಯೋಜನೆಯನ್ನು ಜಾರಿಗೊಳಿಸಲು ಸಾಧ್ಯ'' ಎಂದಿದೆ. ಈ ಅಂಶಗಳನ್ನು ಗಮನಿಸಿದಾಗ ಅಭಿವೃದ್ಧಿ ಕಾರ್ಯಗಳಲ್ಲಿ ಜನರ ಭಾಗವಹಿಸುವಿಕೆ ಅಗತ್ಯವೆಂದು ಕಂಡುಬರುತ್ತದೆ. ಮಾನವ ಸಂಪನ್ಮೂಲಾಭಿವೃದ್ಧಿಯಲ್ಲಿ 'ಶಿಕ್ಷಣ'ವು ತನ್ನದೇ ಆದ ಪಾತ್ರ ವಹಿಸುತ್ತದೆ.''ಶಿಕ್ಷಣವು ಜೀವಿತ ಕಾಲದ ಉದ್ದಕ್ಕೂ ನಡೆಯಬೇಕಾದ ಕಲಿಕೆಯ ಕ್ರಮವಾಗಿದೆ. ಜೀವನದ ಪ್ರತಿ ಹಂತದಲ್ಲಿಯೂ ನಾವು ಶಿಕ್ಷಣವನ್ನು ಪಡೆಯುತ್ತಲೇ ಇರುವೆವು. ನಿರಂತರ ಅನುಭವಗಳನ್ನು ಪುನರ್ರಚಿಸುವುದೇ ಶಿಕ್ಷಣದ ಧ್ಯೇಯವಾಗಿದೆ'' (ಜಾನ್‌ಡ್ಯೂಯಿ ಯೋಜನಾ ಜನವರಿ 1994 ಪುಟ 16ರಲ್ಲಿ ಉಲ್ಲೇಖಿತ)ಈ ಹೇಳಿಕೆಯು ಶಿಕ್ಷಣದ ಮಹತ್ವವನ್ನು ತಿಳಿಸುತ್ತದೆ. ಅಲ್ಲದೆ ''ಮಾನವ ಸಮಾಜದ ಪ್ರೌಢ ಸದಸ್ಯರು ತಮ್ಮ ಮುಂಬರುವ ಪೀಳಿಗೆಯನ್ನು ತಮ್ಮ ಸಮಾಜದ ಜೀವನಾದರ್ಶಗಳಿಗೆ ಅನುಗುಣವಾಗಿ ರೂಪಿಸುವ ಮತ್ತು ಬೆಳೆಸುವ ಪ್ರಯತ್ನವನ್ನು ಶಿಕ್ಷಣವೆನ್ನಬಹುದು''(ಜೇಮ್ಸ್ ವೆಲ್ಟನ್) ವಿಶ್ವಕೋಶದ 11ನೇ ಪುಟದಲ್ಲಿದೆ. ಈ ಹೇಳಿಕೆಗಳು ಮಾನವನ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿವೆ. ಈ ಮೂಲಕ ಮಾನವ ಸಂಪನ್ಮೂಲಾಭಿವೃದ್ಧಿಯಾಗಬೇಕಾಗಿದೆ. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಮಾತ್ರ ಪ್ರಾತಿನಿಧ್ಯನೀಡಿಲ್ಲ. ಅದು ಮಾನವನ ನಿರೀಕ್ಷಿತ ಫಲವೂ ಆಗಿದೆ. '' ಶಿಕ್ಷಣವು ಮಾನವನಲ್ಲಿಟ್ಟ ಠೇವಣಿ. ಅಥವಾ ಮಾನವ ಸಂಪನ್ಮೂಲದ ಮೇಲೆ ಹೂಡಿದ ಬಂಡವಾಳ. ಯಂತ್ರಗಳು ಹಾಗೂ ಯಂತ್ರಸ್ಥಾವರದ ಮೇಲೆ ಹೂಡಿದ ಬಂಡವಾಳ. ಯಂತ್ರಗಳು ಹಾಗೂ ಯಂತ್ರ ಸ್ಥಾವರದ ಮೇಲೆ ಬಂಡವಾಳ ಹೂಡುವವರಿದ್ದಾರೆ. ಯಂತ್ರಗಳಿಗೆ ಸವಕಳಿ ಇದೆ. ಕಾಲ ಕ್ರಮೇಣ ಅವು ಹಾಳಾಗುತ್ತದೆ. ತಮ್ಮ ಕಾರ್ಯ ಕ್ಷಮತೆಯನ್ನು ಕಳೆದುಕೊಳ್ಳುತ್ತವೆ. ಆದರೆ ಮಾನವನ ಮೆದುಳು ಹಾಗಲ್ಲ. ಅನುಭವ, ಮಾಹಿತಿ, ಜ್ಞಾನ, ಕೌಶಲ್ಯ ಗಳು ಹಾಗೂ ಸೂಕ್ತ ಪರಿಸರ ಮತ್ತು ಪ್ರೋತ್ಸಾಹ ಸಿಕ್ಕರೆ ಅದು ಸಾಧಿಸಬಹುದಾದ ಸಾಧನೆ ಅಮೂಲ್ಯ ವಾದುದು,ಅಪಾರವಾದುದು. ತನ್ನನ್ನು ತಾನು ಪರಿಷ್ಕರಿಸಿಕೊಳ್ಳುವುದರ ಜೊತೆಗೆ ಅದು ಅನ್ಯ ಮಿದುಳನ್ನು ಜಾಗೃತ ಗೊಳಿಸುತ್ತದೆ. ಚೇತನವನ್ನು ತುಂಬುತ್ತದೆ. ಯಂತ್ರ ಸ್ಥಾವರಗಳಿಂದ ಬರುವ ಆದಾಯವನ್ನು ನಾವು ಮುಂದಾಗಿ ಊಹಿಸಬಹುದು. ಆದರೆ ಮಾನವನಲ್ಲಿ ಹೂಡುವ ಬಂಡವಾಳವೆನಿಸುವ ವಿದ್ಯೆಯು ತರುವ ಆದಾಯ ಅಥವಾ ಉತ್ಪನ್ನವು ಅಗೋಚರವಾದುದು. ಅದು ದೀರ್ಘಕಾಲೀನ ಪರಿಣಾಮ ಬೀರುವಂಥದು'' (ಮಹಬಲೇಶ್ವರರಾವ್,1999,ಪು.201). 'ವಿದ್ಯೆಯ ಮಹತ್ವ'ದ ಬಗ್ಗೆ ಈ ಮಾತು ಒತ್ತು ನೀಡುತ್ತದೆ. ವಿದ್ಯೆಗಾಗಿ ತೊಡಗಿಸುವ ಬಂಡವಾಳ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಹೂಡುವ ಬಂಡವಾಳವಾಗಿರುತ್ತದೆ. ಇದರಿಂದ ದೇಶದ ಪ್ರಗತಿಯೂ ಸಾಧ್ಯವಾಗುತ್ತದೆ.

ಬ್ರಿಟೀಷ್ ತತ್ವಜ್ಞಾನಿ ಹಾಗೂ ಸಮಾಜ ಶಾಸ್ತ್ರದ ಸ್ಥಾಪಕ ತಜ್ಞರಲ್ಲೊಬ್ಬನಾಗಿದ್ದ ಹರ್ಬರ್ಟ್ ಸ್ಪೆನ್ಸರ್ ತನ್ನ ಸೋಶಿಯಲ್ ಸ್ಟಾಟಿಕ್ಸ್ ಪುಸ್ತಕದಲ್ಲಿ '' ಚಾರಿತ್ರ್ಯದ ಸಂವರ್ಧನೆಯೇ ಶಿಕ್ಷಣದ ಮುಖ್ಯವಾದ ಉದ್ದೇಶವಾಗಿದೆ'' ಎಂದಿದ್ದಾನೆ. ಸಾಂಪ್ರದಾಯಿಕ ಶಿಕ್ಷಣದಲ್ಲಿ ವ್ಯಕ್ತಿಯ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಯ ಬಗ್ಗೆ ಹಾಗೂ ಆತನ ಚಾರಿತ್ರ್ಯ ಸಂವರ್ಧನೆಯ ಬಗ್ಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ.

ಜಾನ್ ಡ್ಯೂಯಿ '' ಶಿಕ್ಷಣವು ಒಂದು ಸಾಮಾಜಿಕ ಪ್ರಕ್ರಿಯೆ, ಶಿಕ್ಷಣ ಒಂದು ಬೆಳವಣಿಗೆ, ಶಿಕ್ಷಣ ಜೀವನಕ್ಕೆ ಒಂದು ಸಿದ್ಧತೆಯಲ್ಲ. ಶಿಕ್ಷಣವೇ ಜೀವನ'' ಎಂಬ ಮಾತನ್ನು ಹೇಳಿ ಸಾಮಾಜಿಕ ಪ್ರಗತಿಯಲ್ಲಿ ಶಿಕ್ಷಣದ ಮಹತ್ವವನ್ನು ತಿಳಿಸಿದ್ದಾನೆ. (ಯೋಜನಾ, ಜನವರಿ 1994, ಪು.16).

ಮಹತ್ಮಾಗಾಂಧಿಯು 'ಶಿಕ್ಷಣ'ದ ಬಗ್ಗೆ ತಿಳಿಸುತ್ತಾ ''ಯಾವ ಶಿಕ್ಷಣ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಎದುರಾಗುವ ಸಮಸ್ಯೆಗಳನ್ನು ಸರಿಯಾಗಿ ಬಗೆಹರಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಯಲ್ಲಿ ಉಂಟುಮಾಡುವ ರೀತಿಯಲ್ಲಿ ಅವನ ಬುದ್ಧಿಶಕ್ತಿಯನ್ನು ಹೊರಗಳೆಯುತ್ತದೆಯೋ ಅದು ಮಾತ್ರ ಮೌಲ್ಯವುಳ್ಳದ್ದು'' ಎಂದಿದ್ದಾರೆ.

''ಶಿಕ್ಷಣವೆಂದರೆ ದೇಹ, ಮನಸ್ಸು ಸಂಸ್ಕಾರಗಳ ಸಾಮರ್ಥ್ಯವನ್ನು ಬಲಪಡಿಸುವ ವಿಧಾನ, ಬುದ್ಧಿ ಅಂತಃಕರಣ ಮತ್ತು ಕೌಶಲ್ಯವನ್ನು ಒಂದುಗೂಡಿಸುವುದು'' (ಆರ್.ಸಿ.ತ್ರಿಪಾಠಿ, ಯೋಜನಾ ಜನವರಿ - 1994, ಪು.60) ಎಂದಿದ್ದಾರೆ.

'ಶಿಕ್ಷಣ'ದ ಕುರಿತು ವಿವಿಧ ತಜ್ಞರು, ಪರಿಣಿತರು ನೀಡಿರುವ ಹೇಳಿಕೆಗಳು ಅದರ ಮಹತ್ವವನ್ನು ಸಾರುತ್ತದೆ. ಪ್ರತಿಯೊಬ್ಬ ನಾಗರಿಕನ ಜೀವನದ ಸರ್ವತೋಮುಖ ಬೆಳವಣಿಗೆಗೆ 'ಶಿಕ್ಷಣ' ಅಗತ್ಯ. ಮಾನವ ಸಂಪನ್ಮೂಲ ಅಭಿವೃದ್ಧಿಗೆ ಇದು ಪೂರಕ. ಹಾಗಾಗಿ ಮೂಲ 'ಶಿಕ್ಷಣ' ಜನರಲ್ಲಿ ಅರಿವನ್ನುಂಟು ಮಾಡುವಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸುತ್ತದೆ. ಪ್ರಾಥಮಿಕ ಶಿಕ್ಷಣ ಗ್ರಾಮೀಣ ಪ್ರದೇಶದ ಪ್ರತಿಯೊಬ್ಬ ವ್ಯಕ್ತಿಗೂ ತಲುಪಬೇಕಾಗಿದೆ. ಪ್ರತಿ ಮಗುವೂ ಶಿಕ್ಷಣ ಪಡೆಯಬೇಕಾಗಿದೆ. ಶಿಕ್ಷಣದ ಸಾರ್ವತ್ರೀಕರಣವಾಗಬೇಕಾಗಿದೆ.

'' ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ, ಹಾಗೂ ಕಾರ್ಯಗತ ಮಾಡುವಲ್ಲಿ ದೇಶದ ಶಿಕ್ಷಣ ವ್ಯವಸ್ಥೆಯು ಸಮುದಾಯವನ್ನು ಅವಗಣಿಸಿರುವುದು ವ್ಯವಸ್ಥೆಯ ವೈಫಲ್ಯಕ್ಕೆ ಕಾರಣ'' ಎಂಬುದಾಗಿ ಕರ್ನಾಟಕ ಗ್ರಾಮೀಣ ಶಿಕ್ಷಣ ಪರಿಸ್ಥಿತಿಯ ಬಗ್ಗೆ ಸಂಶೋಧನೆ ಮಾಡಿರುವ ಶ್ರೀಕಂಠಯ್ಯನವರು ತಿಳಿಸಿರುತ್ತಾರೆ. ಅವರು ಮುಂದುವರಿದು, ''ಸಮುದಾಯದ ಆಶಯಗಳ ಹಿನ್ನೆಲೆಯಲ್ಲಿ ಶೈಕ್ಷಣಿಕ ಯೋಜನೆಗಳನ್ನು ರೂಪಿಸಬೇಕು'' ಎಂದು ತಿಳಿಸಿರುತ್ತಾರೆ. ಅಲ್ಲದೆ ಗ್ರಾಮೀಣ ತಂದೆ ತಾಯಿಗಳ ಅನಕ್ಷರತೆ, ಮೌಢ್ಯ, ಕೆಲವೊಮ್ಮೆ ಬೇಜವಾಬ್ದಾರಿತನ ಗ್ರಾಮೀಣ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮಾರಕವಾಗಿದೆ ಎಂದು ತಿಳಿಸುತ್ತಾ,'ಗ್ರಾಮೀಣ ಸಮುದಾಯದ ನಾಯಕರುಗಳು ಶಾಲಾ ಅಭಿವೃದ್ಧಿಕಡೆ ಗಮನ ಹರಿಸದೇ ಇರುವುದು ಒಂದು ಕಾರಣ' ಎಂದಿದ್ದಾರೆ (ಡಾ. ಎಂ. ಕೆ. ಶ್ರೀಕಂಠಯ್ಯ, 1987).

'ಶಿಕ್ಷಣವು ಆರ್ಥಿಕ ಬೆಳವಣಿಗೆಗೆ ಬುನಾದಿ' ಈ ಹಿನ್ನೆಲೆಯನ್ನು ಗಮನಿಸಿದರೆ ''ಜಪಾನ್ ಮತ್ತು ಪೂರ್ವ ಏಷ್ಯಿಯನ್ ರಾಷ್ಟ್ರಗಳ ಅಧಿಕ ಆರ್ಥಿಕ ಬೆಳವಣಿಗೆಗೆ ಮತ್ತು ಅದನ್ನು ಸಂರಕ್ಷಣೆ ಮಾಡುವಲ್ಲಿ ಶಿಕ್ಷಣವು ಪರಿಣಾಮಕಾರಿ ಪಾತ್ರವನ್ನು ವಹಿಸಿದೆ''(ಹಕ್, 1998, 26) ಎಂಬ ಈ ಹೇಳಿಕೆಯು ಮುಂದುವರಿದ ರಾಷ್ಟ್ರಗಳ ಅಧಿಕ ಆರ್ಥಿಕ ಬೆಳವಣಿಗೆಗೆ, ಶಿಕ್ಷಣವು ಪ್ರಮುಖ ಪಾತ್ರವಹಿಸಿದೆ ಎಂದು ತಿಳಿದು ಬರುತ್ತದೆ. ಹಲವಾರು ನಿದರ್ಶನಾತ್ಮಕ ಅಧ್ಯಯನಗಳು ''ಶಿಕ್ಷಣವು ಆರ್ಥಿಕ ಬೆಳವಣಿಗೆಗೆ ಕಾಣಿಕೆ ನೀಡಿರುವುದನ್ನು ಆಧಾರಗಳ ಮೂಲಕ ದೃಢಪಡಿಸಿವೆ''(ಸ್ವೀರಿಖಿ, 1988, ವಿಶ್ವಬ್ಯಾಂಕ್, 1993,1995,ಬರ್ಡ್‌ಸಾಲ್ ಮತ್ತು ಇತರರು, 92). ''ಬಡತನವನ್ನು ಕಡಿಮೆ ಮಾಡುವಲ್ಲಿ ಶಿಕ್ಷಣದ ಪಾತ್ರವು ನಿರ್ಣಾಯಕವಾದುದಾಗಿದೆ. ಸಮಾಜದಲ್ಲಿ ಶಿಕ್ಷಣ ಮಟ್ಟ ಅಧಿಕಗೊಂಡಂತೆ, ಬಡತನದ ಪ್ರಮಾಣದಲ್ಲಿ ತೀವ್ರ ಇಳಿಕೆಯಾಗಿರುವುದನ್ನು ಹಲವಾರು ಅಧ್ಯಯನಗಳು ದೃಢಪಡಿಸಿವೆ'' (ಫೀಲ್ಡ್ಸ್, 1980, ತಿಲಕ್ 1989).

ಶಿಕ್ಷಣದ ಪಾತ್ರವು ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿರುತ್ತದೆ. ''ನೇಪಾಳ, ಮಲೇಷಿಯಾ ಮತ್ತು ಥೈಲ್ಯಾಂಡ್‌ಗಳಲ್ಲಿ ಶಿಕ್ಷಣವು ಸಣ್ಣ ರೈತರ ಕೃಷಿ ಉತ್ಪಾದಕತೆಯ ಹೆಚ್ಚಳಕ್ಕೆ ಕಾರಣವಾಗಿ, ಅದು ಅವರ ಬಡತನ ಪ್ರಮಾಣವನ್ನು ಇಳಿಮುಖಗೊಳಿಸಿದೆ''(ಹಕ್, 1998, 29). ಈ ಮಾತು ಶಿಕ್ಷಣದ ಪ್ರಭಾವವನ್ನು ಎತ್ತಿ ತೋರಿಸುತ್ತದೆಯಲ್ಲದೆ, ಆ ದೇಶಗಳಲ್ಲಿರುವ ಸಾಕ್ಷರತೆಯ ಮಹತ್ವವನ್ನು ಬಿಂಬಿಸುತ್ತದೆ. ನಮ್ಮ ದೇಶದಲ್ಲಿ ಎಲ್ಲರೂ ಶಿಕ್ಷಣಕ್ಕೆ ಮಹತ್ವ ನೀಡುತ್ತಾ ಬಂದಿದ್ದರೆ, ಈಗಿರುವ ಸಾಕ್ಷರತಾ ಪ್ರಮಾಣ ಇತರೆ ದೇಶಗಳಂತೆ ಪ್ರಗತಿಯಲ್ಲಿರುತ್ತಿತ್ತು. ದೇಶದ ಬಡತನವೂ ಕಡಿಮೆ ಯಾಗುತ್ತಿತ್ತು. ಈ ಬಗ್ಗೆ ಸಮುದಾಯದಲ್ಲಿ ಹೆಚ್ಚಿನ ಜನಜಾಗೃತಿ ಮೂಡಲಿಲ್ಲ. ಶಿಕ್ಷಣದ ಅರಿವು ಸಮುದಾಯಕ್ಕೆ ಅಗತ್ಯವಾಗಿದೆ. ಅವರ ಭಾಗಿತ್ವ ಮಹತ್ವದ್ದಾಗಿದೆ.

ಶಿಕ್ಷಣವು ಲಿಂಗ-ತಾರತಮ್ಯ ನಿವಾರಣೆಯಲ್ಲಿಯೂ ಸಹ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ''ಅಧಿಕ ಬೆಳವಣಿಗೆಯನ್ನು ಹೊಂದಿರುವ ಏಷ್ಯಿಯನ್ ಆರ್ಥಿಕತೆಗಳು ಮೂಲ ಶಿಕ್ಷಣದಲ್ಲಿಯ ಲಿಂಗ-ಬೇಧವನ್ನು ನಿಯಂತ್ರಿಸಿದ್ದರಿಂದಾಗಿ ಆ ರಾಷ್ಟ್ರಗಳು ಸಾಮಾಜಿಕ ಅವಕಾಶಗಳಲ್ಲಿ, ಆರ್ಥಿಕ ರಂಗದ ಪಾಲ್ಗೊಳ್ಳುವಿಕೆಯಲ್ಲಿ ಲಿಂಗ-ತಾರತಮ್ಯ ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿವೆ. ಮೂಲ ಶಿಕ್ಷಣದಲ್ಲಿಯ ಅಸಮಾನತೆಯು ಅಸಮರ್ಥತೆಯಾಗಿ ಪರಿವರ್ತಿತವಾಗುತ್ತದೆ, ಅಲ್ಲದೆ ಹೊಸ ಆರ್ಥಿಕ ಅವಕಾಶಗಳ ಉಪಯೋಗದಲ್ಲಿ ಮಗದೊಮ್ಮೆ ಅಸಮಾನತೆಗೆ ಕಾರಣವಾಗುತ್ತದೆ (ಡ್ರೀಜೆ ಮತ್ತು ಸೇನ್, 1995,40). ಅಸಮಾನತೆಯ ನಿವಾರಣೆಗೆ ಮೂಲ ಶಿಕ್ಷಣ ಅತ್ಯಂತ ಪ್ರಭಾವಶಾಲಿಯಾಗಿರುತ್ತದೆ. ಸಾಮಾಜಿಕ ಅಸಮಾನತೆಯಾಗಲಿ, ಲಿಂಗ-ಬೇಧವನ್ನಾಗಲಿ ಇದರಿಂದ ನಿವಾರಿಸಲು ಸಾಧ್ಯ. ನಮ್ಮ ದೇಶದಲ್ಲಿ ಈ ಬಗ್ಗೆ ಮೊದಲಿನಿಂದಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಇತ್ತೀಚಿಗೆ ಈ ಬಗೆಗಿನ ಕಾರ್ಯಕ್ರಮಗಳು ರೂಪುಗೊಳ್ಳುತ್ತಿವೆ. ಸಮುದಾಯದಲ್ಲಿ ನಿರಂತರ ಜಾಗೃತಿ ಮೂಡಬೇಕಾದ ಅವಶ್ಯಕತೆ ಇದೆ.

ನಮ್ಮ ದೇಶದ ಮಹಿಳೆಯರು ಶೋಷಿತರಾಗುತ್ತಿದ್ದಾರೆ. ಸಾಕ್ಷರತಾ ಪ್ರಮಾಣ ಗುರಿ ಮೀರಿ ಸಾಧನೆಯಾಗಿರುವುದಿಲ್ಲ. ''ಎಲ್ಲಿ ಮಹಿಳೆಯರ ಶಿಕ್ಷಣ ಸುಧಾರಿಸುತ್ತದೆಯೋ, ಆ ಪ್ರದೇಶದ ಒಟ್ಟಾರೆ ಶಿಕ್ಷಣದಲ್ಲಿಯೂ ಸಹ ಸುಧಾರಣೆ ಕಂಡುಬರುತ್ತದೆ''(ದ್ವಾರಕನಾಥ್, 2000,5). ಕಾರಣ ಒಂದು ಹೆಣ್ಣು ಅಕ್ಷರಸ್ಥಳಾದರೆ, ಇಡೀ ಕುಟುಂಬಕ್ಕೆ ಕಣ್ಣಾಗುತ್ತಾಳೆ. ಅಲ್ಲದೆ, ತನ್ನ ಸುತ್ತಮುತ್ತಲಿನ ಸಮುದಾಯವೂ ಬೆಳಗುತ್ತದೆ. ''ಮಹಿಳೆಯು ಅಕ್ಷರಸ್ಥಳಾದರೆ, ತನ್ನ ಕುಟುಂಬದ ಇತರರ ಶಿಕ್ಷಣದ ಕಡೆಗೆ ಆಸಕ್ತಿವಹಿಸುವುದರ ಜೊತೆಯಲ್ಲಿ ತನ್ನ ಸಮುದಾಯಕ್ಕೂ ಬೆಳಕನ್ನು ನೀಡುತ್ತಾಳೆ''(ಫ್ರೈಡ್, 1995). ಇದರಿಂದ ಮಹಿಳಾ ಸಾಕ್ಷರತೆಯ ಮಹತ್ವ ತಿಳಿದುಬರುತ್ತದೆ. 'ಹೆಣ್ಣೊಂದು ಕಲಿತರೆ, ಶಾಲೆಯೊಂದು ತೆರೆದಂತೆ' ಎಂಬ ಮಾತು ಇಲ್ಲಿ ಉಪಯುಕ್ತವೆನಿಸುತ್ತದೆ.

ಶಾಲೆಯನ್ನು ತೊರೆಯುವ ಮಕ್ಕಳನ್ನು ತನ್ನ 'ತಾಯಿ' ಮಾತ್ರ ಪುನಃ ಶಾಲೆಗೆ ಕಳುಹಿಸಲು ಸಾಧ್ಯ. ಈ ಅಂಶ ಇತ್ತೀಚಿನ ಅಧ್ಯಯನಗಳಿಂದ ತಿಳಿದುಬಂದಿದೆ. ಅಲ್ಲದೆ ಹಲವಾರು ಜಾಗೃತ ಕಾರ್ಯಕ್ರಮಗಳಲ್ಲಿ ಖುದ್ದು ಭಾಗವಹಿಸಿದ ಅನುಭವವೂ ಈ ಸಂಶೋಧಕನ ಅರಿವಿಗೆ ಬಂದಿದೆ.

ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡುವ ಕಾರ್ಯಕ್ರಮಗಳು ಸಾಕಷ್ಟು ಅನುಷ್ಠಾನಗೊಂಡಿವೆ. 'ಭಾರತದಲ್ಲಿ ಆಚರಣೆಗೆ ತಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ, ನಂತರದ ಸಂಪೂರ್ಣ ಸಾಕ್ಷರತಾ ಆಂದೋಲನಗಳು ಜನತೆಯಲ್ಲಿ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಪ್ರಜ್ಞೆ ಮೂಡಿಸುವುದನ್ನು ಅನೇಕ ಅಧ್ಯಯನಗಳು ತೋರಿಸಿವೆ' (ಶರ್ಮ 1989, ಫಿಲ್ಲೈ 1990 ಸೇನ್ ಗುಪ್ತ, 1996). ಸಾಕ್ಷರತೆ ಕಾರ್ಯಕ್ರಮಗಳು ಈ ದೇಶದಲ್ಲಿ ಅನಕ್ಷರಸ್ಥರಲ್ಲಿಯ ಅರಿವನ್ನು ಹೆಚ್ಚಿಸಿವೆ. ಆದರೆ ಹೆಬ್ಬೆಟ್ಟಿನ ಸಹಿ ತಪ್ಪಿಸಿ, ನಾಲ್ಕಕ್ಷರದ ಸಹಿ ಕಲಿಸಿದರೆ ಸಾಲದು. ಅವರ ಜೀವನಕ್ಕೆ ಸದುಪಯೋಗವಾಗುವಂತಹ 'ಯೋಜನೆಗಳ' ಬಗೆಗಿನ ಅರಿವು ಅಗತ್ಯ. ಅಂತಹ ಕೆಲಸ ಈ ದೇಶದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕಾಗಿದೆ.

'' ಸರ್ಕಾರದ ಚಟುವಟಿಕೆಗಳಲ್ಲಿ ನಾಗರೀಕರು ಕ್ರಿಯಾತ್ಮಕವಾಗಿ ಭಾಗವಹಿಸುವಂತೆ 'ಶಿಕ್ಷಣ' ಅವರಿಗೆ ತರಬೇತಿ ನೀಡಬೇಕು''(ಆರ್.ಸಿ. ತ್ರಿಪಾಠಿ. ಸಂಚಿಕೆ, ಯೋಜನಾ, 1994, ಪು. 62). ಅರಿಸ್ಟಾಟಲ್‌ನ ಈ ಮಾತು 'ಸಮುದಾಯ'ದ ಭಾಗವಹಿಸುವಿಕೆಯಿಂದ 'ಸರ್ಕಾರದ ಚಟುವಟಿಕೆಗಳು' ವಸ್ತುನಿಷ್ಠವಾಗಿ ಜಾರಿಯಾಗಿ ನಿಜವಾದ ಫಲಾನುಭವಿಗಳಿಗೆ ಸಿಗುವಂತಾಗುತ್ತದೆ. ಈ ಪ್ರಯೋಜನವು ಎಲ್ಲರಿಗೂ ಸಿಗಬೇಕಾದರೆ, 'ಶಿಕ್ಷಣ' ಬೇಕು. 'ಶಿಕ್ಷಣ'ದ ಮೂಲಕ ಅವರಿಗೆ ತರಬೇತಿ ಅಥವಾ ಅರಿವನ್ನು ಮೂಡಿಸುವ ಅಗತ್ಯವಿದೆ. ಇದು ಪರಿಣಾಮಕಾರಿಯಾಗಬೇಕಾಗಿದೆ.

'' ಪ್ರಾಥಮಿಕ ಶಿಕ್ಷಣವನ್ನು ನಮ್ಮ ಸಾಮಾಜಿಕ ವ್ಯವಸ್ಥೆಯ ಅತ್ಯಂತ ಕೆಳಸ್ಥರವಾದ ಗ್ರಾಮೀಣ ಪ್ರದೇಶಕ್ಕೆ ತೆಗೆದುಕೊಂಡು ಹೋಗಿ, ಗ್ರಾಮ ಮತ್ತು ಮೊಹಲ್ಲಾ ಮಟ್ಟದ ಘಟಕಗಳನ್ನು ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹಾಗೂ ಶಿಕ್ಷಣದ ಗುಣಮಟ್ಟ ಉಸ್ತುವಾರಿಗೆ ಜವಾಬ್ದಾರಿಯುತವಾಗಿ ಮಾಡಿದರೆ ಮಾತ್ರ ಪ್ರಾಥಮಿಕ ಶಿಕ್ಷಣ ಪ್ರವರ್ಧಮಾನಕ್ಕೆ ಬರುತ್ತದೆ.

ಅತ್ಯಂತ ಜನಸಂಖ್ಯೆ ಇರುವ ಒಂಭತ್ತು ರಾಷ್ಟ್ರಗಳ ' ಎಲ್ಲರಿಗೂ ಶಿಕ್ಷಣ' ಒದಗಿಸುವ ಉದ್ದೇಶದ ಶೃಂಗ ಸಮಾವೇಶ 1993ರ ಡಿಸೆಂಬರ್ 16ರಂದು ದೆಹಲಿಯಲ್ಲಿ ಮುಕ್ತಾಯವಾಯಿತು. ಈ ಶೃಂಗ ಸಭೆ ದೆಹಲಿ ಘೋಷಣೆಯನ್ನು ಹೊರಡಿಸಿದೆ. ''ಸಾರ್ವತ್ರಿಕ ಮಾನವೀಯ ಮೌಲ್ಯಗಳ, ಮಾನವ ಸಂಪನ್ಮೂಲ ಗುಣಮಟ್ಟದ ಮತ್ತು ಸಂಸ್ಕೃತಿ ವೈವಿಧ್ಯ ಗೌರವಿಸುವುದರ ಪ್ರವರ್ತನೆಯ ಸರ್ವೋತ್ಕೃಷ್ಟ ಮಾರ್ಗವೇ ಶಿಕ್ಷಣ'' ಎಂದು ಗುರುತಿಸಿದೆ. ಎಲ್ಲರಿಗೂ ಶಿಕ್ಷಣ ನೀಡುವ ವಿಶ್ವವ್ಯಾಪಿ ಗುರಿಗೆ ಬದ್ಧವಾಗಿ ಬಾಂಗ್ಲಾದೇಶ, ಬ್ರೆಜಿಲ್, ಚೀನಾ, ಈಜಿಪ್ಟ್, ಭಾರತ, ಇಂಡೋನೇಷಿಯಾ, ಮೆಕ್ಸಿಕೋ, ನೈಜೀರಿಯಾ ಮತ್ತು ಪಾಕಿಸ್ತಾನ ಈ ಒಂಭತ್ತು ದೇಶದ ನಾಯಕರು 2000 ಇಸ್ವಿಯ ವೇಳೆಗೆ ಪ್ರತಿ ಮಗುವಿಗೂ ಶಾಲಾ ಶಿಕ್ಷಣದ ಅವಕಾಶವನ್ನು ಒದಗಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. 2000 ಇಸ್ವಿ ವೇಳೆಗೆ ಒಟ್ಟಾರೆ ರಾಷ್ಟ್ರೀಯ ಆದಾಯದ ಶೇ. 6ರಷ್ಟನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡುವ ಕುರಿತು ಪ್ರಧಾನಿ ಭರವಸೆ ನೀಡಿದ್ದಾರೆ'' (ಆರ್.ಸಿ. ತ್ರಿಪಾಠಿ, ಯೋಜನಾ, ಜನವರಿ 1994, ಪು.63).

ಸಮ್ಮೇಳನದ ಈ ಒತ್ತಾಸೆಯು ದೇಶದ ಶಿಕ್ಷಣ ಕ್ಷೇತ್ರದಲ್ಲಿ ಸಂಚಲನೆಯನ್ನು ಮೂಡಿಸಿದ್ದರೂ ಕೂಡ ವ್ಯವಸ್ಥಿತ ಯೋಜನೆಗಳ ಮೂಲಕ ಹಾಕಿಕೊಂಡ ಗುರಿಯನ್ನು ತಲುಪದಿದ್ದರೆ, 'ಘೋಷಣೆ'ಗಳು ಘೋಷಣೆಗಳಾಗಿಯೇ ಉಳಿದುಬಿಡುತ್ತವೆ. ಇಂತಹ ಮಹತ್ವದ ನಿರ್ಣಯಗಳು ಜಾರಿಯಾಗಬೇಕಾದರೆ, ತಳ ಮಟ್ಟದವರೆಗೂ ಅಧಿಕಾರ ವಿಕೇಂದ್ರೀಕರಣಗೊಳ್ಳಬೇಕು. ಯೋಜನೆಗಳು ಸ್ಥಳೀಯ ಮಟ್ಟದಲ್ಲಿಯೇ ರೂಪಿತಗೊಳ್ಳಬೇಕು. ಸಮುದಾಯ ಭಾಗವಹಿಸುವಿಕೆಯ ಮುಖಾಂತರ ಅವುಗಳ ಅಭಿವೃದ್ಧಿ ಸಾಧ್ಯವಾಗುತ್ತದೆ.

ಸಮುದಾಯವು ಮಾನವ ನಿರ್ಮಿತಿಗೆ ಅಡಿಗಲ್ಲು. ಮಾನವ ಸಂಪನ್ಮೂಲ ಅಭಿವೃದ್ಧಿಯಾಗ ಬೇಕಾದರೆ, ತನ್ನದೇ ಆದ ಯೋಜನೆಗಳನ್ನು ರೂಢಿಸಿಕೊಳ್ಳಬೇಕು. ವೈಜ್ಞಾನಿಕವಾಗಿ ನಮ್ಮ ಗುರಿಯನ್ನು ಪೂರೈಸಿಕೊಳ್ಳುವ ವಿಧಾನವೇ ಯೋಜನಾ ಬದ್ಧ ಕ್ರಮ. ಯೋಜನೆಯನ್ನು ಸಿದ್ಧಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು ಸಮುದಾಯ. ಈ ಹಿನ್ನೆಲೆಯಲ್ಲಿ ವಿಕೇಂದ್ರೀಕರಣವು ಮಹತ್ವದ ಪಾತ್ರವಹಿ ಸುತ್ತದೆ. ವಿಕೇಂದ್ರೀಕರಣ ಕುರಿತು ಮಹಾತ್ಮಾಗಾಂಧೀಜಿಯವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಗ್ರಾಮ ಸ್ವರಾಜ್ಯದ ಕನಸು ಹೊತ್ತಿದ್ದರು. 'ಪಂಚಾಯಿತಿ ರಾಜ್ಯ'ಅವರ ಕನಸಿನ ಕೂಸು. ''ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ರಾಷ್ಟ್ರವನ್ನು ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ಪುನರ್ರಚಿಸಲು ಗ್ರಾಮ ಸಮುದಾಯಗಳ ರಚನೆಯೊಂದೇ ರಾಜ ಮಾರ್ಗ''. (ಪ್ರೊ. ಎಸ್. ಆರ್. ರೊಹಿಡೇಕರ್, ಪಂಚಾಯತ್ ರಾಜ್ ಮತ್ತು ಪ್ರಾಥಮಿಕ ಶಿಕ್ಷಣ, ಪು. 4) ಎಂದು ಹೇಳಿದ್ದರು.

''ವಿಕೇಂದ್ರೀಕೃತ ಆಡಳಿತ ಮತ್ತು ಸಶಸ್ತೀಕರಣ, ಬಹು ಚರ್ಚಿತ ವಿಷಯಗಳು'' ಇವುಗಳ ಪ್ರಾಮುಖ್ಯತೆಗೆ ಎರಡು ಕಾರಣಗಳು ಇವೆ. ಇವು ತಳಮಟ್ಟದ ಅಧಿಕಾರದ ವಿಕೇಂದ್ರೀಕರಣದಲ್ಲಿ ಬದಲಾವಣೆ ತಂದು, ಸಾಂಪ್ರದಾಯಿಕ ಯಜಮಾನಿಕೆಯಿಂದ ಬುಡಮೇಲು ಮಾಡುತ್ತವೆ ಎಂಬುದು ಮೊದಲನೆಯ ಕಾರಣವಾದರೆ, ಈ ರಾಜಕೀಯ ಪ್ರಕ್ರಿಯೆಯಿಂದ ಕೆಳವರ್ಗದ ಜನರು ಸಶಕ್ತೀಕರಣ ಗೊಳ್ಳುತ್ತಾರೆ ಎನ್ನುವುದು ಎರಡನೆಯ ಕಾರಣ''(ರಜನಿ ಕೊಠಾರಿ, 1996, ಪು. 34).

ವಿಕೇಂದ್ರೀಕರಣವು ಜನವಸತಿ ಪ್ರದೇಶಗಳಲ್ಲಿ ಜನರ ಬೇಡಿಕೆಗಳಿಗೆ ತೀವ್ರ ಸ್ಪಂದಿಸಲು ಹತ್ತಿರವಾಗುತ್ತವೆ. ಈಗಿನ ವಿಕೇಂದ್ರೀಕೃತ ವ್ಯವಸ್ಥೆಯ ಬಗ್ಗೆ ' ಸಾಂಸ್ಥಿಕ ದೌರ್ಬಲ್ಯಗಳಿಂದಾಗಿ, ಮಾನವ ಅಭಿವೃದ್ಧಿ ಕ್ಷೇತ್ರದಲ್ಲಿ ನೀತಿ ನಿರ್ಣಯಗಳು ಹಲವೊಮ್ಮೆ ಅಪೇಕ್ಷಿತ ಧ್ಯೇಯೋದ್ದೇಶಗಳನ್ನು ಸಾಧಿಸುವುದಿಲ್ಲ. ಅದೇ ಕಾಲದಲ್ಲಿ ನೇರ ಜನಪ್ರಿಯ ಭಾಗವಹಿಸುವಿಕೆಯನ್ನು ಕಲ್ಪಿಸುವ ಮಾರ್ಗಗಳಿಗಾಗಿ ಕೆಳ ಹಂತ ಸಂಸ್ಥೆಗಳನ್ನು ಉತ್ತೇಜಿಸಿ ಬೆಂಬಲಿಸಬೇಕಾಗಿದೆ (ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ, 1999). ಈ ಸಂಸ್ಥೆಗಳು ಸಮುದಾಯ ಭಾಗವಹಿಸುವಿಕೆಯ ಮುಖಾಂತರ ಅಭಿವೃದ್ಧಿ ಕಾರ್ಯಗಳನ್ನು ಗಟ್ಟಿಗೊಳಿಸಬಹುದು ಎಂದು ನಂಬಿವೆ. ಒಂದು ಅನುಭವದ ಪ್ರಕಾರ 'ಸ್ಥಳೀಯ ಸಂಸ್ಥೆಗಳ ಕಾರ್ಯದಲ್ಲಿ ಜನರು ವ್ಯಾಪಕವಾಗಿ ಭಾಗವಹಿಸಿದಲ್ಲಿ, ಪಂಚಾಯತಿಗಳು ತಮ್ಮ ಸಂಪನ್ಮೂಲಗಳ ಮೇಲೆ ಹೆಚ್ಚಿನ ಹಿಡಿತವನ್ನು ಹೊಂದಿ, ಉತ್ತಮವಾಗಿ ಸೇವೆಯನ್ನು ಪೂರೈಸಲು ಸಾಧ್ಯವಾಗುತ್ತದೆ' ಎಂದು ತೋರಿಸುತ್ತದೆ. 1983ರ ಶಾಸನವು 1987ರಲ್ಲಿ ಅನುಷ್ಠಾನಗೊಂಡ ನಂತರವೇ ಸರ್ಕಾರವು ನೇಮಿಸಿದ ಒಂದು ಮೌಲ್ಯಮಾಪನ ಸಮಿತಿಯು, ಪಂಚಾಯಿತಿಗಳ ಸ್ಥಾಪನೆಯಿಂದಾಗಿ ಶಾಲೆಗಳು ಮತ್ತು ಆರೋಗ್ಯ ಸೌಲಭ್ಯಗಳ ಕಾರ್ಯಾಚರಣೆ ಪ್ರತ್ಯಕ್ಷವಾಗಿ ಸುಧಾರಿಸಿತೆಂದು ವರದಿ ಮಾಡಿದೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಶಾಲಾ ಹಾಜರಾತಿ ಗಣನೀಯವಾಗಿ ಹೆಚ್ಚಿತು. ಮತ್ತು ಸ್ಥಳೀಯ ಸಂಸ್ಥೆಗಳು ಶಾಲಾ ಕಟ್ಟಡ ವಿಸ್ತರಣೆ, ರಿಪೇರಿ ಮತ್ತು ನಿರ್ವಹಣೆಗಾಗಿ ಆದ್ಯತೆ ನೀಡಿದವು'' (ಮಾನವ ಸಂಪನ್ಮೂಲ ಅಭಿವೃದ್ಧಿ, 1999, ಪು. 61). ಒಟ್ಟಾರೆಯಾಗಿ ಈ ವ್ಯವಸ್ಥೆ ಅಧಿಕಾರಶಾಹಿ ವ್ಯವಸ್ಥೆಗಳಿಗಿಂತ ಉತ್ತಮವಾಗಿ ಸ್ಥಳೀಯ ಆದ್ಯತೆಯನ್ನು ಬಿಂಬಿಸುತ್ತವೆ ಎಂದು ಕಂಡು ಬರುತ್ತದೆ. ಸಾಮಾಜಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಅದರಲ್ಲೂ 'ಶಿಕ್ಷಣದ' ಅಭಿವೃದ್ಧಿಯಲ್ಲಿ ಜನರ ನೇರ ಭಾಗವಹಿಸುವಿಕೆಯ ಅಗತ್ಯವಿದೆ. ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಕೇಂದ್ರೀಕೃತ ಆಡಳಿತ ವ್ಯವಸ್ಥೆ ತಾಲೂಕು ಮತ್ತು ಪಂಚಾಯತಿ ಮಟ್ಟದವರೆಗೂ ವಿಕೇಂದ್ರೀಕೃತಗೊಂಡಿದೆ. ಆದರೆ ಸಮುದಾಯದ ಭಾಗವಹಿಸುವಿಕೆ ತೀವ್ರವಾಗಿ ಇಲ್ಲವೆಂದೇ ಹೇಳಬಹುದು. ಯೋಜನೆಗಳು ಗ್ರಾಮದ ಹಂತದಲ್ಲಿಯೇ ಅವರ ಬೇಕು ಬೇಡಿಕೆಗಳಿಗನುಸಾರ ರೂಪುಗೊಳ್ಳಬೇಕು. 'ಶಿಕ್ಷಣ'ಕ್ಕೆ ಜನರ ಬೆಂಬಲ ಈ ಹಂತದಿಂದಲೇ ಪ್ರಾರಂಭವಾಗಬೇಕು. ಯೋಜನೆಗಳು ವಿಕೇಂದ್ರೀಕರಣಗೊಂಡಾಗ ಸಮುದಾಯ ಭಾಗವಹಿಸುವಿಕೆಯು ಬಲಗೊಳ್ಳುತ್ತದೆ. ಅದನ್ನು ಹಲವಾರು ಅಧ್ಯಯನಗಳು ಸಾಬೀತುಪಡಿಸಿವೆ.

ದೇಶದಲ್ಲಿ 6ರಿಂದ 14ವಯಸ್ಸಿನ ಪ್ರತಿ ಮಗುವಿಗೂ 'ಕಡ್ಡಾಯ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ'ಕ್ಕೆ ಒತ್ತುಕೊಟ್ಟು ಶಿಕ್ಷಣ ದೊರಕಿಸಿ ಕೊಡಲು, ವಂಚಿತ ವರ್ಗಕ್ಕೆ ಸಾಮಾಜಿಕ ನ್ಯಾಯ ಒದಗಿಸುವಂತಹ ತಳಮಟ್ಟದ ಯೋಜನೆಗಳು ಅಗತ್ಯ ಇವೆ. ಅಂತಹ ಕಾರ್ಯವನ್ನು 'ಸೂಕ್ಷ್ಮ ಯೋಜನೆ' ಮೂಲಕ ಸಾಬೀತುಗೊಳಿಸಬಹುದಾಗಿದೆ. ಸೂಕ್ಷ್ಮ ಯೋಜನೆಯು 'ಶೈಕ್ಷಣಿಕ ಯೋಜನೆ'ಗೆ ಬುನಾದಿಯಾಗಿರುತ್ತದೆ. ''ಒಂದು ದೇಶದ ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು, ಆ ದೇಶದ ರಾಜಕೀಯ ಮತ್ತು ಆರ್ಥಿಕ ವಾಸ್ತವಗಳನ್ನು ಗೌರವಿಸುತ್ತಾ, ಶಿಕ್ಷಣ ವ್ಯವಸ್ಥೆಯ ನೀತಿ ನಿರ್ಧಾರ ಮಾಡುವ, ಆದ್ಯತೆಗಳನ್ನು ಗುರುತಿಸುವ ಮತ್ತು ವೆಚ್ಚವನ್ನು ನಿಗದಿ ಮಾಡುವ ದೂರದರ್ಶಿತ್ವವೇ ಶೈಕ್ಷಣಿಕ ಯೋಜನೆ'(ಮಹಾಬಲೇಶ್ವರ ರಾವ್, 1999, ಪು. 41) ಎಂದು ಶಿಕ್ಷಣ ತಜ್ಞರು ಶೈಕ್ಷಣಿಕ ಯೋಜನೆಯ ಅರ್ಥ ತಿಳಿಸಿದ್ದಾರೆ.

''ಒಂಭತ್ತನೇ ಪಂಚವಾರ್ಷಿಕ ಯೋಜನೆಯನ್ನು ಕೇರಳ ರಾಜ್ಯವು ಒಂದು ಕ್ರಾಂತಿಕಾರಿ ಹೆಜ್ಜೆಯಾಗಿ ಅಳವಡಿಸಿಕೊಂಡಿತು. ಯೋಜನೆಗಳು ಕೆಳಹಂತದಲ್ಲಿ ರೂಪಿತವಾದಾಗ ಮಾತ್ರ ಜನರಿಗೆ ತಲುಪಲು ಸಾಧ್ಯವೆಂದು ಬಲವಾಗಿ ನಂಬಿದ್ದ ಯೋಜನಾ ಮಂಡಳಿಯು ಜನರ ಭಾಗವಹಿಸುವಿಕೆಯ ಮೂಲಕ ಯೋಜನೆ ರೂಪಿಸಲು ಅನುವು ಮಾಡಿಕೊಟ್ಟಿತು. ಇದು ಇತರ ರಾಜ್ಯಗಳಿಗೂ ಮಾದರಿಯಾಗಿ ಇಡೀ ರಾಷ್ಟ್ರದ ಕಣ್ಣು ತೆರೆಸುವಂತಾಯಿತು'' (ಡಾ. ಮೋಹನ್, ಡಾ. ಜೋಸೆಫ್, ಸದರನ್ ಎಕನಾಮಿಸ್ಟ್, ಆಗಸ್ಟ್ 1, 2001, ಪು.9). ವಿಕೇಂದ್ರೀಕೃತ ಯೋಜನೆಗಳು ಜನರ ಭಾಗವಹಿಸುವಿಕೆಯಿಂದ ಅವರ ಬೇಕು ಬೇಡಿಕೆಗಳನ್ನು ಆಧರಿಸಿ, ರೂಪಿತವಾದಾಗ ಮಾತ್ರ ಯಶಸ್ಸಿಗೆ ದಾರಿಯಾಗುತ್ತವೆ ಎಂದು ತಿಳಿದುಬರುತ್ತದೆ. ಹಾಗಾಗಿ ಗ್ರಾಮ ಮಟ್ಟದ ಯೋಜನೆಗಳು ಸಮುದಾಯ ಭಾಗವಹಿಸುವಿಕೆಯ ಮುಖಾಂತರ ರೂಪು ಗೊಳ್ಳುವ ಅಗತ್ಯವಿದೆ.

'' ಶಿಕ್ಷಣ, ತ್ವರಿತ ಆರ್ಥಿಕ ಬೆಳವಣಿಗೆಗೆ ಕಾರಣವಾಗಿದೆ. ಇದು ಮಾನವ ಬಂಡವಾಳವನ್ನು ರಚಿಸುವ ಮೂಲ ಮಂತ್ರವಾಗಿದೆ. ಮತ್ತು ಮಾನವ ಬಂಡವಾಳ ರಾಷ್ಟ್ರ ರಚನೆಯಲ್ಲಿ ಒಂದು ಅತೀ ನಿರ್ಣಾಯಕ ಅಂಶವಾಗಿದೆ. ಯಾವಾಗಲಾಗಲಿ, ಎಲ್ಲಿಯಾಗಲಿ ಮೂಲ ಶಿಕ್ಷಣವನ್ನು ವಿಸ್ತರಿಸಿದಾಗ, ಅದರಿಂದ ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನೆಗಳು ನಾಟಕೀಯ ರೂಪದಲ್ಲಿ ಗೋಚರಿಸುತ್ತವೆ'' (ಹಕ್, 1998, ಪು. 2). ಈ ಹೇಳಿಕೆಯು ಶಿಕ್ಷಣದ ಮಹತ್ವವನ್ನು ತಿಳಿಸತ್ತಾ, ಮೂಲ ಶಿಕ್ಷಣದ ವಿಸ್ತರಣೆ ಮತ್ತು ಅಭಿವೃದ್ಧಿ ಯನ್ನು ಒತ್ತಿ ಹೇಳುತ್ತದೆ.

ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲರೂ ಶ್ರಮಿಸಬೇಕಾಗಿದೆ. 'ಸಮುದಾಯ'ದ ಭಾಗಿತ್ವದ ಅಗತ್ಯತೆ ಈಗ ಹೆಚ್ಚಾಗಿ ಕಂಡುಬರುತ್ತದೆ. ಕಾರಣ ' ಪುರಾತನ ಕಾಲದಿಂದಲೂ ಶಾಲೆಯು ಸಮುದಾಯದ ಅವಿಭಾಜ್ಯ ಅಂಗವೆಂದು ಅರಿತಿದ್ದರೂ, ಅನೇಕ ವೇಳೆ ಶಾಲೆಯು ಸಮುದಾಯಕ್ಕೆ ಏನೇನೂ ಸಂಬಂಧವಿಲ್ಲವೇನೋ ಎಂಬಂತೆ ನಿರ್ಲಕ್ಷ್ಯತೆಯಿಂದ ನಡೆದುಕೊಂಡ, ನಡೆದುಕೊಳ್ಳುತ್ತಿರುವ ಸಂದರ್ಭ ಗಳಿಗೇನೂ ಕೊರತೆ ಇಲ್ಲ. ಆದರೂ ಸಮುದಾಯದ ಮೇಲೆ ಶಾಲೆಯ ಪ್ರಭಾವ ಮುದ್ರೆ ಒತ್ತುವುದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ'' (ಡಾ. ಎಚ್.ಎಂ. ಮರುಳುಸಿದ್ಧಯ್ಯ, 1993, ಪು. 57) ಎಂಬ ತಜ್ಞರ ಹೇಳಿಕೆಯು ಸಮುದಾಯದ ಭಾಗಿತ್ವ ಕುರಿತಾಗಿದ್ದು, ಪ್ರಸ್ತುತ ಸಂದರ್ಭಕ್ಕೆ ಒಪ್ಪುವಂತಹದ್ದಾಗಿದೆ.

ಸ್ಥಳೀಯ ಜನರ ಅಗತ್ಯಗಳಿಗೆ ತಕ್ಕ ಹಾಗೆ ಸಿದ್ಧಪಡಿಸುವ ಯೋಜನೆ, ಸೂಕ್ಷ್ಮ ಯೋಜನೆ ಕಾರ್ಯ ಕ್ರಮದ ಮೂಲಕ ಹೊರ ಹೊಮ್ಮುತ್ತದೆ. ಇದು ಶಾಲೆಯನ್ನು ತೊರೆಯುವ ಮಕ್ಕಳ ಸಮಸ್ಯೆಗೆ ಸಮುದಾಯವೇ ಪರಿಹಾರ ಕಂಡುಕೊಳ್ಳಲು ಮತ್ತು ಶಿಕ್ಷಣದಿಂದ ವಂಚಿತ ಮಕ್ಕಳಿಗೆ ಸೌಲಭ್ಯ ಕಲ್ಪಿಸಲು ಅವಕಾಶವಾಗುತ್ತದೆ. ಸಮುದಾಯದ ಭಾಗವಹಿಸುವಿಕೆಯ ಮೂಲಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅಭಿವೃದ್ಧಿಗೊಳ್ಳುತ್ತದೆ. ಶಿಕ್ಷಣದ ಅಭಿವೃದ್ಧಿಗಾಗಿ ಸಮುದಾಯದ ಪಾತ್ರ ಅಗತ್ಯವೆನಿಸುತ್ತದೆ. ''ಅಸಮಾನತೆಯ ನಿವಾರಣೆಗೆ ವಿಕೇಂದ್ರೀಕರಣ ಪ್ರಕ್ರಿಯೆ ಬಹಳ ಮುಖ್ಯವಾದದ್ದೆಂದು ಎಲ್ಲಾ ದೇಶಗಳು ಒಪ್ಪಿಕೊಂಡಿವೆ. ಇದು ಶಿಕ್ಷಣಕ್ಕೆ ಹೊರತಾಗಿಲ್ಲ'' (ಎನ್.ವಿ.ವರ್ಗೀಸ್, 1995, ಪು.1) ಎಂಬ ಮಾತು ಪ್ರಸ್ತುತವೆನಿಸುತ್ತದೆ.

ಖ್ಯಾತ ಶಿಕ್ಷಣ ತಜ್ಞರಾದ ಜೆ.ಪಿ. ನಾಯಕ್ (1969)ರವರು ಶೈಕ್ಷಣಿಕ ಯೋಜನೆಗಳ ಕುರಿತು ಆಡಿರುವ ಮಾತು ಯೋಜನೆಗಳ ನಿರೂಪಕರಿಗೆ ಎಚ್ಚರಿಕೆಯಂತಿವೆ. '' ಪ್ರಸಕ್ತ ಶೈಕ್ಷಣಿಕ ಯೋಜನೆಯು ತಲೆ ಭಾರವಾಗಿದ್ದು ತಲೆ ಕೆಳಗಿನ 'ಪಿರಮಿಡ್'ನ್ನು ಹೋಲುತ್ತದೆ. ನಮ್ಮ ಬಹಳಷ್ಟು ಯೋಜನೆಗಳು ಕೇಂದ್ರಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ರೂಪುಗೊಳ್ಳುತ್ತವೆ. ಹೀಗಾಗಿ ಯೋಜನಾ ಪ್ರಕ್ರಿಯೆಯ ಬುಡವನ್ನು ವಿಸ್ತರಿಸಿ, ವಿಕೇಂದ್ರೀಕರಣಕ್ಕೆ ಒಳಪಡಿಸುವುದು ಈಗ ಅಗತ್ಯವಾಗಿದೆ'' ಎಂಬ ಅವರ ಮಾತು ವಿಕೇಂದ್ರೀಕರಣಕ್ಕೆ ಒತ್ತುಕೊಟ್ಟಿದೆ.

ಬಿ.ಜಿ.ತಿಲಕ್‌ರವರು ಹೇಳುವಂತೆ '' ಯೋಜನೆ ಸಾಕಾರಗೊಳ್ಳಬೇಕಾದರೆ, ಆಚರಣೆಗೆ ಬರಬೇಕಾದರೆ, ಒಂದು ಕನಿಷ್ಠತಮ ಘಟಕ ಅಗತ್ಯ. ಕನಿಷ್ಠತಮ ಘಟಕಕ್ಕಿಂತಲೂ ಪುಟ್ಟದಾದ ಘಟಕದಲ್ಲಿ ಯೋಜನೆಯನ್ನು ಜಾರಿಗೆ ಕೊಡುವುದು ಸಾಧ್ಯ ವಾಗುವುದಿಲ್ಲ. ಒಂದೊಮ್ಮೆ ಯೋಜನೆ ಜಾರಿಗೆ ಬಂದರೂ ಕೂಡ ಅದು ಬಲು ದುಬಾರಿಯಾದೀತು. ಯೋಜನೆಗೆ ಒಗ್ಗುವ ಈ ಕನಿಷ್ಠತಮ ಘಟಕವೇ ಸೂಕ್ಷ್ಮ ಯೋಜನೆಯ ಮೂಲಭೂತ ಲಕ್ಷಣ'' (ಮಹಾಬಲೇಶ್ವರ ರಾವ್, 1992). ಕನಿಷ್ಠತಮ ಘಟಕವನ್ನು ಇಲ್ಲಿ ಒಂದು ಗ್ರಾಮವೆಂದು ಪರಿಗಣಿಸಲಾಗಿದೆ. ಸೂಕ್ಷ್ಮ ಯೋಜನೆಯು ಯಾವುದೇ ಪ್ರಕ್ರಿಯೆಗಳಲ್ಲಿ ದೋಷಗಳನ್ನು ಕೂಡಲೇ ತಿದ್ದಿ ಕೊಳ್ಳಲು ಸಾಧ್ಯ. 'ಸೂಕ್ಷ್ಮ ಯೋಜನೆ ' ಕಾರ್ಯಕ್ರಮದ ಬಗೆಗಿನ ವಿಶೇಷ ಅಧ್ಯಯನಗಳು ನಡೆದಿರುವುದು ಕಡಿಮೆ ಇದ್ದರೂ, ಬೇರೆ ಬೇರೆ ರಾಜ್ಯಗಳಲ್ಲಿ ಸೂಕ್ಷ್ಮಯೋಜನೆ ಕಾರ್ಯಕ್ರಮಗಳ ಮುಖಾಂತರ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪ್ರಯತ್ನಗಳು ನಡೆದಿರುವುದು ಕಂಡು ಬಂದಿದೆ. ರಾಜಸ್ಥಾನದ **'ಲೋಕ್ ಜುಂಬಿಷ್'** ಶಾಲೆ ತೊರೆಯುವ ಮಕ್ಕಳಿಗಾಗಿಯೇ ಅಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆಂಧ್ರ ಪ್ರದೇಶವು ಶಾಲೆ ಬಿಟ್ಟ ಮಕ್ಕಳಿಗಾಗಿ ಕಳೆದ ಮೂರು ವರ್ಷಗಳಿಂದ **'ಬ್ರಿಡ್ಜ್ ಕೋರ್ಸ್'** ಪ್ರಾರಂಭಿಸಿ ಆ ದಿಕ್ಕಿನತ್ತ ಹೆಜ್ಜೆ ಇಟ್ಟಿದೆ. ಕರ್ನಾಟಕದಲ್ಲಿಯೂ ಸಹ 1985ರ ಈಚೆಗೆ **'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ.)**ದ ಮೂಲಕ ಈ ಪ್ರಯತ್ನ ನಡೆಸಿದೆ. ಈ ಕಾರ್ಯಕ್ರಮದಲ್ಲಿ ಸಮುದಾಯ ಭಾಗವಹಿಸುವ ಕುರಿತು ನಡೆದ ಸಂಶೋಧನಾ ಅಧ್ಯಯನಗಳು ಕಂಡು ಬರುವುದಿಲ್ಲ. ಅದಕ್ಕಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

1.3. ವಿಕೇಂದ್ರೀಕರಣ ಯೋಜನೆ ಮತ್ತು ಶೈಕ್ಷಣಿಕ ಯೋಜನೆ :

ಕೇಂದ್ರೀಕೃತ ಶೈಕ್ಷಣಿಕ ಯೋಜನೆಗಳಲ್ಲಿ ಸ್ಥಳೀಯ ರೀತಿ ನೀತಿಗಳನ್ನು ಅಳವಡಿಸಿಕೊಳ್ಳಲು ಅವಕಾಶಗಳು ಕಡಿಮೆ ಇರುವುದರಿಂದ ಜನರ ಸಹಭಾಗಿತ್ವವುಳ್ಳ ಶೈಕ್ಷಣಿಕ ಯೋಜನೆಗಳ ಅಗತ್ಯವಿದೆ. ಈ ವಿಷಯ ಹಲವಾರು ಶಿಕ್ಷಣ ತಜ್ಞರ, ಸಮಾಜ ಚಿಂತಕರ ಹೇಳಿಕೆಗಳಿಂದಲೂ ಸಾಹಿತ್ಯ ಅವಲೋಕನ ಸಂದರ್ಭದಲ್ಲಿ ಕಂಡುಬಂದಿದೆ. ಯೋಜನೆಗಳ ಪ್ರಕ್ರಿಯೆಯಲ್ಲಿ ಶಿಕ್ಷಣದ ನಿರ್ಧಿಷ್ಟ ಅಗತ್ಯಗಳನ್ನು ಮೌಲ್ಯೀಕರಿಸಿ, ಅಳವಡಿಸಬೇಕಾಗಿದೆ. ಈ ಅಗತ್ಯಗಳನ್ನು ಗ್ರಾಮ ಮಟ್ಟದ ವಿಕೇಂದ್ರೀಕೃತ ವ್ಯವಸ್ಥೆಯ ಪ್ರಕ್ರಿಯೆ ಅಂದರೆ, 'ಸೂಕ್ಷ್ಮ ಯೋಜನೆ' ಕಾರ್ಯಕ್ರಮದ ಮೂಲಕ ಗುರುತಿಸಲಾಗುವುದು. ಈ ಕಾರಣಕ್ಕಾಗಿ ಸಮುದಾಯವು ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ : ಬಳ್ಳಾರಿ ಜಿಲ್ಲೆ ಒಂದು ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಶೈಕ್ಷಣಿಕ ಅಭಿವೃದ್ಧಿಗಾಗಿ ಸಮುದಾಯವು ಪರಿಣಾಮಕಾರಿ ಯಾಗಿ ಭಾಗವಹಿಸುವ ಕುರಿತು ಅರ್ಥ ಮಾಡಿಕೊಳ್ಳಬಹುದಾಗಿದೆ.

1.4. ಅಧ್ಯಯನದ ಸ್ವರೂಪ,ವ್ಯಾಪ್ತಿ :

ಈ ಅಧ್ಯಯನ ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ವಿಷಯಗಳಿಗೆ ಸಂಬಂಧಪಟ್ಟ ವಿಕೇಂದ್ರೀಕೃತ ಪ್ರಕ್ರಿಯೆಗಳಿಗೆ ಅನುಗುಣವಾಗಿರುತ್ತದೆ. ಅಲ್ಲದೆ ಜನರ ಭಾಗವಹಿಸುವಿಕೆ ಮತ್ತು ಅವರ ಪಾಲ್ಗೊಳ್ಳುವಿಕೆಯ ಮುಖಾಂತರ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಬದಲಾವಣೆಗಳನ್ನು ಅರಿಯಲು ಪ್ರಯತ್ನ ಪಡುತ್ತದೆ. ಅಧ್ಯಯನವನ್ನು ರಾಷ್ಟ್ರ ಹಾಗು ರಾಜ್ಯದ ಶೈಕ್ಷಣಿಕ ಅಭಿವೃದ್ಧಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಈ ಅಧ್ಯಯನವನ್ನು ಕ್ಷೇತ್ರಕಾರ್ಯದ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯ ಎರಡು ತಾಲೂಕುಗಳಿಗೆ ಸೀಮಿತಗೊಳಿಸಿದೆ. ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಅಂಗವಾಗಿ ತೆಗೆದುಕೊಂಡಿದ್ದ ಸೂಕ್ಷ್ಮ ಯೋಜನಾ ಕಾರ್ಯಕ್ರಮ ಗಳು, ಆ ಮುಖಾಂತರ ಆದ ಬದಲಾವಣೆಗಳು ಪ್ರಸ್ತುತ ಅಧ್ಯಯನಕ್ಕೆ ತಳಪಾಯವಾಗುತ್ತವೆ.

1.5. ಅಧ್ಯಯನದ ಉದ್ದೇಶಗಳು :

- ಜನರು ಭಾಗವಹಿಸುವ ಮುಖಾಂತರ ಸಮುದಾಯ ತನ್ನ ಶೈಕ್ಷಣಿಕ ಜವಾಬ್ದಾರಿಗಳನ್ನು ಗುರುತಿಸಲು ಹೇಗೆ ಸಾಧ್ಯವಾಗಬಹುದು ಎನ್ನುವ ಅಂಶವನ್ನು ವಿವರಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.
- ಜನರ ಭಾಗವಹಿಸುವಿಕೆಯ ಇತಿ-ಮಿತಿಗಳು ಮತ್ತು ಅದರ ಪ್ರಾಮುಖ್ಯತೆ, ಪ್ರಯೋಜನೆಗಳನ್ನು ಗುರುತಿಸುವುದು.
- ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ನೀಡಿರುವ ಆದ್ಯತೆಯನ್ನು ಗುರುತಿಸಿ ವಿಶ್ಲೇಷಿಸುವುದು.
- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಸೂಕ್ಷ್ಮ ಯೋಜನೆಗಿರುವ ನಿರ್ಣಾಯಕ ಪಾತ್ರವನ್ನು ಗುರುತಿಸುವುದು.
- ಆಯ್ದುಕೊಂಡ ಮಾದರಿ ಗ್ರಾಮಗಳಲ್ಲಿ ಸಮುದಾಯ ಭಾಗವಹಿಸುವ ಸ್ವರೂಪ ಮತ್ತು ಅವರ ಸಹಕಾರ, ಸ್ಥಳೀಯ ಜನರಿಗೆ 'ಸೂಕ್ಷ್ಮ ಯೋಜನೆ' ಕಾರ್ಯಕ್ರಮದ ಬಗೆಗಿನ ತಿಳುವಳಿಕೆ ಕುರಿತು ಅಭಿಪ್ರಾಯವನ್ನು ಸಂಗ್ರಹಿಸಿ, ವಿಶ್ಲೇಷಿಸುವುದು.

1.6. ಅಧ್ಯಯನದ ಆಯಾಮ :

ಜನರು ಭಾಗವಹಿಸಲು ಹಲವಾರು ವಿಧಾನಗಳಿದ್ದರೂ, ಇಲ್ಲಿ ಆಯ್ಕೆ ಮಾಡಿಕೊಂಡ ಕೆಲವೇ ವಿಧಾನಗಳ ಬಗ್ಗೆ ಮಾತ್ರವೇ ಚರ್ಚಿಸಲಾಗುತ್ತದೆ. ಈ ಅಧ್ಯಯನವನ್ನು ಪ್ರಾಯೋಗಿಕ ಅನುಭವದ ಆಧಾರದ ಮೇಲೆ ರೂಪಿಸಲು ಪ್ರಯತ್ನ ಮಾಡಲಾಗಿದೆ.

ಅಧ್ಯಯನಕ್ಕೆ ಬೇಕಾದ ದತ್ತಾಂಶ ಸಂಗ್ರಹಣೆಯನ್ನು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಮತ್ತು ಹೊಸಪೇಟೆ ತಾಲೂಕುಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ 1999-2000 ನೇ ಸಾಲಿನಲ್ಲಿ ಕೂಡ್ಲಿಗಿ ಹಾಗೂ 2000-2001ರಲ್ಲಿ ಹೊಸಪೇಟೆ ತಾಲೂಕುಗಳಲ್ಲಿ ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಜೊತೆಗೆ ಈ ತಾಲೂಕುಗಳಲ್ಲಿ ಜನರ ಭಾಗವಹಿಸುವಿಕೆಯ ಮುಖಾಂತರ ಪರ್ಯಾಯ ಶಾಲೆಗಳನ್ನು ಆಯಾ ವರ್ಷಗಳಲ್ಲಿ ಪ್ರಾರಂಭಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಶಿಕ್ಷಣ ಆಯಾಮಗಳು ಈ ಅಧ್ಯಯನಕ್ಕೆ ಒಂದು ಸ್ಥೂಲವಾದ ಆಧಾರವಾಗಿರುತ್ತವೆ.

1. ಸಾಮಾನ್ಯ ಶಿಕ್ಷಣ ಮತ್ತು ಸಮುದಾಯದ ಪಾತ್ರ.
2. ಸಮುದಾಯ ಭಾಗವಹಿಸುವಿಕೆಯ ಮುಖಾಂತರ ಶಿಕ್ಷಣದ ಅಭಿವೃದ್ಧಿ.
3. ವಿಕೇಂದ್ರೀಕೃತ ಶಿಕ್ಷಣ ಅಭಿವೃದ್ಧಿಯಲ್ಲಿ ಜನರ ಭಾಗವಹಿಸುವಿಕೆಯ ಅವಶ್ಯಕತೆ.
4. ಪರ್ಯಾಯ ಶಿಕ್ಷಣ ಕೇಂದ್ರಗಳ ವ್ಯವಸ್ಥೆಯಲ್ಲಿ ಸಮುದಾಯ ಭಾಗವಹಿಸುವಿಕೆ.
5. ಸಾಮಾನ್ಯ ಶಿಕ್ಷಣ ಅಭಿವೃದ್ಧಿಗಾಗಿ ಸಮುದಾಯದ ಬೆಂಬಲ.

ಮೇಲೆ ಸೂಚಿಸಿದ ವಿಷಯಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಪ್ರಾಥಮಿಕ ದತ್ತಾಂಶ ಶೇಖರಣೆ ಮಾಡಲಾಗಿದೆ. ಇದರ ಆಧಾರದ ಮೇಲೆ ಬಳ್ಳಾರಿ ಜಿಲ್ಲೆಯ ಶಿಕ್ಷಣ ಪ್ರಕ್ರಿಯೆಯ ಜನರ ಬೆಂಬಲ ಮತ್ತು ಭಾಗವಹಿಸುವಿಕೆಯನ್ನು ಅರ್ಥಮಾಡಿಕೊಳ್ಳಲಾಗಿದೆ.

1.7. ಮಾದರಿ ವಿನ್ಯಾಸ :

ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಮಾಹಿತಿ ಮತ್ತು ದತ್ತಾಂಶವನ್ನು (ಅಂಕಿ-ಅಂಶಗಳನ್ನು) ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಲಾಗಿದೆ.

1.8. ಆನುಷಂಗಿಕ ಮೂಲಗಳು :

ಮೇಲಿನ ದತ್ತಾಂಶವನ್ನು ಈ ಕೆಳಗೆ ಸೂಚಿಸಿದ ಮೂಲಗಳಿಂದ ಸಂಗ್ರಹಿಸಲಾಗಿದೆ.

- **ಶಿಕ್ಷಣ ರಂಗದಲ್ಲಿ ತಜ್ಞರ ಅಭಿಪ್ರಾಯಗಳ ಶೇಖರಣೆ, ತತ್ಸಂಬಧ ದತ್ತಾಂಶದ ಸಂಗ್ರಹಣೆ.**

  ಶಿಕ್ಷಣ ರಂಗದಲ್ಲಿ ಮತ್ತು ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ, ನಿರ್ವಹಿಸುತ್ತಿರುವ ಪರಿಣಿತರ, ತಜ್ಞರ ಅಭಿಪ್ರಾಯಗಳನ್ನು, ಹೇಳಿಕೆಯನ್ನು ಸಂಗ್ರಹಿಸಿ, ಅಧ್ಯಯನದಲ್ಲಿ

ಅಳವಡಿಸಿಕೊಳ್ಳಲಾಗಿದೆ. ಯೋಜನಾ ಆಯೋಗಗಳು ದಾಖಲಿಸಿದ ದತ್ತಾಂಶವನ್ನು ಈ ಮೂಲಕ ಸಂಗ್ರಹಿಸಿ, ಅಳವಡಿಸಿಕೊಂಡಿದೆ.

- **ಶಿಕ್ಷಣ ಇಲಾಖೆಯು ಪ್ರಕಟಿಸಿದ ವರದಿಗಳು ಮತ್ತು ಶೈಕ್ಷಣಿಕ ಮಾರ್ಗ ಸೂಚಿಗಳು :**

  ಶಿಕ್ಷಣ ಇಲಾಖೆಯು ಪ್ರಕಟಿಸಿದ 'ಶೈಕ್ಷಣಿಕ ಸಮೀಕ್ಷೆ'ಗಳು, ವರದಿಗಳನ್ನು, ಕೊಠಾರಿ ಆಯೋಗದ ವರದಿಯನ್ನು, 1986ರ ರಾಷ್ಟ್ರೀಯ ಶಿಕ್ಷಣ ನೀತಿಯ ವರದಿಯನ್ನು, 'ನೀಪಾ' ನವ ದೆಹಲಿ ಅವರ ಯೋಜನಾ ಪ್ರಣಾಳಿಕೆಗಳನ್ನು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರಕಟಿಸಿದ ಶೈಕ್ಷಣಿಕ ಮಾರ್ಗ ಸೂಚಿಗಳು, 1998-99, 1999-2000, 2000-2001 ಶೈಕ್ಷಣಿಕ ಅಂಕಿ-ಅಂಶಗಳನ್ನು, ಮಾಸಿಕ ಶೈಕ್ಷಣಿಕ ಸಂಚಿಕೆಗಳನ್ನು ಅಧ್ಯಯನದಲ್ಲಿ ಆಧಾರವಾಗಿ ಅಳವಡಿಸಿಕೊಳ್ಳಲಾಗಿದೆ. ಡಿ.ಎಸ್.ಇ.ಆರ್.ಟಿ. ಬೆಂಗಳೂರು, ಡಿ.ಪಿ.ಇ.ಪಿ.ಯ ರಾಜ್ಯ ಯೋಜನಾ ಕಛೇರಿ, ಬೆಂಗಳೂರು ಇಲ್ಲಿಂದಲೂ ಸಹ ಶೈಕ್ಷಣಿಕ ಅಂಕಿ-ಅಂಶಗಳ ವಿವರಗಳನ್ನು ಪಡೆಯಲಾಗಿದೆ.

- **ಬಳ್ಳಾರಿ ಜಿಲ್ಲೆಯ ಉಪ ನಿರ್ದೇಶಕರ ಕಛೇರಿಯಿಂದ ಸಂಗ್ರಹಿಸಿದ ದತ್ತಾಂಶ ಮಾರ್ಗ ಸೂಚಿಗಳು:**

  ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ ಅವರ ಕಛೇರಿಯಲ್ಲಿ ಲಭ್ಯವಿದ್ದ ಜಿಲ್ಲೆಯ ಶಾಲಾ ವಿವರಗಳು, ಶಿಕ್ಷಕರು, ಶಾಲಾ ಕಟ್ಟಡಗಳು, ಮಕ್ಕಳ ದಾಖಲಾತಿ, ಹಾಜರಾತಿ, ಶಾಲಾ ಸೌಲಭ್ಯಗಳ ವಿವರಗಳನ್ನು ಕುರಿತು ಮಾಹಿತಿಯನ್ನು ಪಡೆಯಲಾಗಿದೆ. ಡಿ.ಪಿ.ಇ.ಪಿ. ಕಛೇರಿಯಿಂದ ಕಾರ್ಯಕ್ರಮಗಳ ಕುರಿತು ಅಂಕಿ-ಅಂಶಗಳು, ಇ.ಎಂ.ಐ.ಎಸ್. ಮಾಹಿತಿಯನ್ನು ಪಡೆದು, ಅಧ್ಯಯನದ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

- **ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಹೊರಗೆ ಬಂದ ದತ್ತಾಂಶ ವಿವರಗಳು :**

  ಕೂಡ್ಲಿಗಿ ಮತ್ತು ಹೊಸಪೇಟೆ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಶೈಕ್ಷಣಿಕ ಅಂಕಿ-ಅಂಶಗಳ ಮಾಹಿತಿಗಾಗಿ ಮಾಸಿಕ ವರದಿಗಳನ್ನು, ಸೂಕ್ಷ್ಮ ಯೋಜನೆ ಕಾರ್ಯಕ್ರಮ ನಡೆದ ಗ್ರಾಮದ ವಿವರಗಳನ್ನು, ಪರ್ಯಾಯ ಶಾಲೆಗಳ ಮಾಹಿತಿಗಳನ್ನು ಮತ್ತು ಆಯ್ದ ಗ್ರಾಮಗಳ ಶಾಲಾ ಮಾಹಿತಿಯನ್ನು ಪಡೆದುಕೊಂಡು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಇದಲ್ಲದೆ ಜಿಲ್ಲಾ ಪಂಚಾಯಿತಿ ಬಳ್ಳಾರಿ, ಜಿಲ್ಲಾ ಅಂಕಿ-ಅಂಶಗಳ ಸಂಗ್ರಹಣಾ ಕಚೇರಿಯಿಂದಲೂ ಅಂಕಿ-ಅಂಶಗಳನ್ನು ಸಂಗ್ರಹಿಸಿ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

1.9. ಪ್ರಾಥಮಿಕ ದತ್ತಾಂಶ ಸಂಗ್ರಹಣೆ :

ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ ಮತ್ತು ದತ್ತಾಂಶದ ಜೊತೆಗೆ ಪ್ರಾಥಮಿಕ ದತ್ತಾಂಶ ಶೇಖರಣೆಯನ್ನು ಮಾಡಲಾಗಿದೆ. ಈ ದತ್ತಾಂಶವನ್ನು ಕೂಡ್ಲಿಗಿ ಮತ್ತು ಹೊಸಪೇಟೆ ತಾಲೂಕುಗಳ ಆಯ್ದ ಐದು ಗ್ರಾಮಗಳಿಂದ ಸಂಗ್ರಹಿಸಲಾಗಿದೆ.

1.10. ಪ್ರಾಥಮಿಕ ಮಾಹಿತಿಯ ಲಕ್ಷಣಗಳು :

ಈ ದತ್ತಾಂಶ ಕೆಳಗೆ ಸೂಚಿಸಿದ ಲಕ್ಷಣಗಳನ್ನು ಹೊಂದಿರುತ್ತದೆ.

1. ಆಯ್ಕೆಯಾದ ಗ್ರಾಮದಲ್ಲಿರುವ ಕೌಟುಂಬಿಕ ವಿವರಗಳು.
2. ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳ ವಿವರ.
3. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಇ.ಪಿ.)ದಡಿಯಲ್ಲಿ ನಡೆದ ಸೂಕ್ಷ್ಮ ಯೋಜನಾ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಜನರ ಅಭಿಪ್ರಾಯಗಳು.
4. ಇಂತಹ ಕಾರ್ಯಕ್ರಮಗಳಲ್ಲಿ ಜನರ ಭಾಗವಹಿಸುವಿಕೆ ಮತ್ತು ಈ ಕಾರ್ಯಕ್ರಮಗಳ ಮುಖಾಂತರ ಲಭ್ಯವಾದ ಶೈಕ್ಷಣಿಕ ಪ್ರಗತಿಯ ಬಗ್ಗೆ ಜನರ ಅಭಿಪ್ರಾಯಗಳು.
5. ಗ್ರಾಮಮಟ್ಟದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ರಚನೆ ಮಾಡಿದ ಗ್ರಾಮ ಶಿಕ್ಷಣ ಸಮಿತಿಗಳ ಪಾತ್ರ, ಅದರ ಬಗೆಗೆ ಜನರಿಗಿರುವ ತಿಳುವಳಿಕೆ.
6. ಗ್ರಾಮ ಶಿಕ್ಷಣ ಸಮಿತಿಗಳು ಶಾಲಾ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಚಟುವಟಿಕೆಗಳು, ಶಿಕ್ಷಣ ಇಲಾಖೆಯಿಂದ ದೊರೆತಿರುವ ತರಬೇತಿಗಳು, ಅವುಗಳ ಪರಿಣಾಮ ಮತ್ತು ಶಾಲೆಯಲ್ಲಿ ಶಿಕ್ಷಣದ ಗುಣಮಟ್ಟ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟ ದತ್ತಾಂಶ ಶೇಖರಣೆ ಮಾಡಲಾಗಿದೆ.
7. ಗ್ರಾಮದಲ್ಲಿರುವ ಸಮುದಾಯದೊಡನೆ ಚರ್ಚಿಸಿದ ನಂತರ ಸ್ಥಳೀಯ ಪರಿಸ್ಥಿತಿಗಳಿಗನುಗುಣ ವಾಗಿ ಸ್ಥಾಪಿಸಲ್ಪಟ್ಟ ಪರ್ಯಾಯ ಶಿಕ್ಷಣ ಕೇಂದ್ರಗಳ ಮುಂದುವರಿಕೆ ಮತ್ತು ಅವುಗಳು ಶಿಕ್ಷಣದಿಂದ ವಂಚಿತರಾದ ಮಕ್ಕಳ ಮೇಲೆ ಬೀರಿರುವ ಪರಿಣಾಮ. (ಈ ದತ್ತಾಂಶ ಪರ್ಯಾಯ ಶಿಕ್ಷಣದ ಮಕ್ಕಳ ಪಾಲಕ/ಪೋಷಕರ ಅಭಿಪ್ರಾಯಗಳನ್ನೊಳಗೊಂಡಿರುತ್ತದೆ).
8. ಗ್ರಾಮದಲ್ಲಿರುವ ಶಾಲೆಯ ಶೈಕ್ಷಣಿಕ ಮಾಹಿತಿ. ಈ ಶೈಕ್ಷಣಿಕ ಮಾಹಿತಿಯು ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ:-
   - ದಾಖಲಾತಿ ವಿವರಗಳು ಕಳೆದ ಮೂರು ವರ್ಷಗಳಿಂದ.
   - ಹೆಣ್ಣು ಮತ್ತು ಗಂಡು ಮಕ್ಕಳ ದಾಖಲಾತಿ ಮತ್ತು ಹಾಜರಾತಿ.
   - ಶಿಕ್ಷಕರ ವಿವರ.
   - ಶಾಲೆಯಲ್ಲಿರುವ ಸೌಲಭ್ಯಗಳು.

ಮೇಲೆ ಸೂಚಿಸಲಾದ ವಿಷಯಗಳ ಆಧಾರವಾಗಿ ದತ್ತಾಂಶವನ್ನು ನಿರ್ದಿಷ್ಟಪಡಿಸಿದ ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಿ ವಿಶ್ಲೇಷಿಸಿ, ನಿರ್ಣಯಗಳನ್ನು ದಾಖಲೀಕರಣ ಮಾಡಲಾಗಿದೆ.

1.11. ಮಾದರಿ ಆಯ್ಕೆ :

ಕೆಳಗೆ ಸೂಚಿಸಿದ ಮಾದರಿ ಗ್ರಾಮಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಕ್ರ.ಸಂ.	ತಾಲೂಕು	ಆಯ್ಕೆಯಾದ ಗ್ರಾಮಗಳ ಹೆಸರು	ಗ್ರಾಮದಲ್ಲಿರುವ ಒಟ್ಟು ಕುಟುಂಬಗಳು	ಸಂಪರ್ಕಿಸಿದ ಕುಟುಂಬಗಳು
1	ಕೂಡ್ಲಿಗಿ	1. ಗಜಾಪುರ	189	189
		2. ಜಂಗಮ ಸೋವೇನ ಹಳ್ಳಿ	126	126
		3. ಮರಬಾನಹಳ್ಳಿ	140	140
2	ಹೊಸಪೇಟೆ	4. ನಂದಿಬಂಡಿ	185	185
		5. ದೇವಲಾಪುರ	227	227
	ಒಟ್ಟು		**867**	**867**

ಈ ಮೇಲಿನ ಎರಡೂ ತಾಲೂಕುಗಳಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಸುಮಾರು 80 ಸೂಕ್ಷ್ಮ ಯೋಜನಾ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಕಾರ್ಯಕ್ರಮದ ಅನುಸರಣೆ ಅಂಗವಾಗಿ 49 ಪರ್ಯಾಯ ಶಿಕ್ಷಣ ಕೇಂದ್ರಗಳನ್ನು ಸಹ ತೆರೆಯಲಾಗಿದೆ. ಪರ್ಯಾಯ ಶಿಕ್ಷಣ ಕೇಂದ್ರಗಳು ಚಾಲ್ತಿಯಲ್ಲಿದ್ದವು.

ಈ ಅಧ್ಯಯನಕ್ಕೆ 867 ಮನೆಗಳ ಸಂದರ್ಶನ ಮತ್ತು ಅವುಗಳಿಂದ ಬಂದಿರುವ ದತ್ತಾಂಶವನ್ನು ವಿಶ್ಲೇಷಿಸಿ, ಅಧ್ಯಯನಕ್ಕೆ ಪೂರಕವಾಗಿ ನಿರ್ಣಯಗಳನ್ನು ದಾಖಲಿಸಲಾಗಿದೆ.

1.12. ದತ್ತಾಂಶ ಸಂಗ್ರಹದ ಸಾಧನ ಸಾಮಗ್ರಿಗಳು :

ಸಂಶೋಧನೆಗೆ ಬೇಕಾದ ಪ್ರಾಥಮಿಕ ಮತ್ತು ಆನುಷಂಗಿಕ ದತ್ತಾಂಶ ಸಂಗ್ರಹಕ್ಕಾಗಿ ಈ ಕೆಳಗಿನ ಸಾಧನ ಸಾಮಗ್ರಿಗಳನ್ನು ಬಳಸಿಕೊಳ್ಳಲಾಯಿತು :

1.13. ಪ್ರಶ್ನಾವಳಿಗಳು :

ಅಧ್ಯಯನಕ್ಕಾಗಿ ಸಿದ್ಧಪಡಿಸಿರುವ ಪ್ರಶ್ನಾವಳಿಗಳು ಈ ಕೆಳಕಂಡ ವಿವರಗಳನ್ನು ಹೊಂದಿವೆ. ಸಿದ್ಧ ಪಡಿಸಿರುವ ಪ್ರಶ್ನಾವಳಿಗಳ ನಮೂನೆಗಳನ್ನು ತಜ್ಞರ ಪರಿಶೀಲನೆಗೆ ಕಳುಹಿಸಿ, ಅವರಿಂದ ಸಲಹೆಗಳನ್ನು ಪಡೆದು, ಗ್ರಾಮದಲ್ಲಿಯ ಕುಟುಂಬದ ಮುಖ್ಯಸ್ಥರಿಗೆ, ಗ್ರಾಮ ಶಿಕ್ಷಣ ಸಮಿತಿ ಸದಸ್ಯರಿಗೆ, ಪರ್ಯಾಯ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ, ಪಾಲಕ/ಪೋಷಕರಿಗೆ ಪ್ರಶ್ನೆಗಳನ್ನು ಕೇಳಲು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಭಾಗ - 1 ಕೌಟುಂಬಿಕ ಮಾಹಿತಿ :

ಈ ಭಾಗದಲ್ಲಿ ಗ್ರಾಮದ ಹೆಸರು, ಸಮೂಹ ಸಂಪನ್ಮೂಲ ಕೇಂದ್ರದ ಹೆಸರು, ಶಾಲೆಯ ಹೆಸರು, ಕುಟುಂಬದ ಮುಖ್ಯಸ್ಥರ ಹೆಸರು, ಕುಟುಂಬದ ವರ್ಗ(ಜಾತಿ) ಹೀಗೆ ಕುಟುಂಬದ ವಿವರವನ್ನು ಮಾಹಿತಿ ಮೂಲಕ ಪಡೆಯಲಾಗಿದೆ. ಕುಟುಂಬದ ವಿವರದಲ್ಲಿ ವಿಭಕ್ತ ಕುಟುಂಬ, ಅವಿಭಕ್ತ ಕುಟುಂಬ, ವಿಸ್ತೃತ ಕುಟುಂಬದ ಬಗ್ಗೆ ಮಾಹಿತಿ ಇದೆ. ಜೊತೆಗೆ ಕುಟುಂಬದಲ್ಲಿಯ ಮುಖ್ಯಸ್ಥನೊಂದಿಗಿರುವ ಸಂಬಂಧ, ಲಿಂಗ, ವಯಸ್ಸು,ಶಿಕ್ಷಣ, ವೃತ್ತಿ,ಆದಾಯ ಇತ್ಯಾದಿ ವಿವರವನ್ನು ಕೌಟುಂಬಿಕ ಮಾಹಿತಿ ಮೂಲಕ ಸಂಗ್ರಹಿಸಲಾಗಿದೆ.

ಭಾಗ - 2 ಸೂಕ್ಷ್ಮ ಯೋಜನಾ ಕಾರ್ಯಕ್ರಮದ ಬಗ್ಗೆ ಕುಟುಂಬಗಳ ವಿವರ :

ಗ್ರಾಮದಲ್ಲಿ ನಡೆದ ಸೂಕ್ಷ್ಮ ಯೋಜನಾ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆರು ಪ್ರಶ್ನೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿದೆ ಎಂದು ತಿಳಿಯುವುದಕ್ಕಾಗಿ ಗ್ರಾಮದ ಎಲ್ಲಾ ಕುಟುಂಬದವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಭಾಗ - 3 ಗ್ರಾಮ ಶಿಕ್ಷಣ ಸಮಿತಿಗಳ ಪಾತ್ರ ಮತ್ತು ಶಾಲಾ ಅಭಿವೃದ್ಧಿಗಾಗಿ ಅವರ ಬೆಂಬಲ :

ಈ ಭಾಗದಲ್ಲಿಯ ಪ್ರಶ್ನೆಗಳನ್ನು 'ಗ್ರಾಮ ಶಿಕ್ಷಣ ಸಮಿತಿ' ಸದಸ್ಯರಿಗೆ ಮಾತ್ರ ಸಿದ್ಧಪಡಿಸಲಾಗಿದೆ. ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರನ್ನು ನೇರವಾಗಿ ಸಂಪರ್ಕಿಸಲಾಗಿದೆ. ಕೆಲವು ಕಡೆ ಅವರನ್ನು ಖುದ್ದಾಗಿ ಸಂದರ್ಶಿಸಲಾಗಿದೆ. ಇನ್ನೂ ಕೆಲವು ಕಡೆ ಗುಂಪಾಗಿ ಚರ್ಚಿಸಿ, ಮಾಹಿತಿಯನ್ನು ಸಂಗ್ರಹಿಸಲಾಗಿದೆ. 'ಸಮುದಾಯ'ದ ಭಾಗವಹಿಸುವಿಕೆಗೆ ಮತ್ತು ಸ್ಥಳೀಯ ಶಾಲೆಯ ಅಭಿವೃದ್ಧಿಗಾಗಿ ಈ ಸದಸ್ಯರು ಎಷ್ಟರ ಮಟ್ಟಿಗೆ ಬೆಂಬಲ ನೀಡಿದ್ದಾರೆ ಎನ್ನುವ ಕುರಿತು 12 ಪ್ರಶ್ನೆಗಳ ಮೂಲಕ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸಲಾಗಿದೆ.

ಭಾಗ - 4 ಪರ್ಯಾಯ ಶಾಲೆಗಳ ವ್ಯವಸ್ಥೆಯ ಬಗ್ಗೆ ಪಾಲಕರ ಅಭಿಪ್ರಾಯಗಳು :

ಸೂಕ್ಷ್ಮ ಯೋಜನೆ ಕಾರ್ಯಕ್ರಮ ನಡೆದ ಗ್ರಾಮಗಳಲ್ಲಿ ಶಾಲೆಬಿಟ್ಟ ಮಕ್ಕಳ ವಿವರಗಳನ್ನು ಸಂಗ್ರಹಿಸಲಾಗಿದೆ. ಶಾಲೆ ಬಿಟ್ಟ ಮತ್ತು ಶಾಲೆಗೆ ದಾಖಲಾಗದ ಮಕ್ಕಳಿಗಾಗಿ ಪರ್ಯಾಯ ಶಾಲೆಗಳನ್ನು

(ಅನೌಪಚಾರಿಕ ಶಿಕ್ಷಣ ಕೇಂದ್ರ) ತೆರೆದು, ಆ ಮೂಲಕ ಶಿಕ್ಷಣ ಒದಗಿಸಿ, ಮುಖ್ಯವಾಹಿನಿಗೆ ಸೇರಿಸಲಾಗುತ್ತಿದೆ. ಈ ಪ್ರಕ್ರಿಯೆಯು ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಗ್ರಾಮಗಳಲ್ಲಿ ನಡೆದಿದೆ. ಪರ್ಯಾಯ ಶಾಲಾ ಮಕ್ಕಳ ಪಾಲಕ/ಪೋಷಕರಿಗೆ ಪರ್ಯಾಯ ಶಾಲೆ ಬಗ್ಗೆ, ಅವರ ಮಕ್ಕಳ ಬಗ್ಗೆ ಏಳು ಪ್ರಶ್ನೆಗಳ ಮೂಲಕ ವಿಷಯ ಸಂಗ್ರಹಿಸಿ, ವಿಶ್ಲೇಷಿಸಲಾಗಿದೆ.

ಭಾಗ - 5 ಶಾಲಾ ಮಾಹಿತಿ ಮತ್ತು ಪರ್ಯಾಯ ಶಾಲಾ ಶಿಕ್ಷಣ ವಿವರಗಳು :

ಆನುಷಂಗಿಕ ಮೂಲಗಳಿಂದ ಈ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಶಾಲಾ ಮುಖ್ಯ ಗುರುಗಳು ನೀಡಿದ ದಾಖಲೆಗಳ ಆಧಾರದ ಮೇಲೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಶಾಲೆಯ ಹೆಸರು, ಶಾಲೆ ಪ್ರಾರಂಭವಾದ ವರ್ಷ, ಶಾಲಾ ಮಾದರಿ, ಶಿಕ್ಷಕರ ವಿವರ, ಮೂರು ವರ್ಷಗಳ (1998 ರಿಂದ 2001ರವರೆಗೆ) ಮಕ್ಕಳ ದಾಖಲಾತಿ, ಹಾಜರಾತಿ, ದೀರ್ಘ ಗೈರು ಹಾಜರಾತಿ ವಿವರವನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

1.14. ದತ್ತಾಂಶ ವಿವರಣೆ :

ಸಂಗ್ರಹಿಸಿದ ದತ್ತಾಂಶವನ್ನು ವಿವಿಧ ಮೂಲಗಳಿಂದ, ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಣೆಯ ಅನುಕೂಲಕ್ಕಾಗಿ, ತುಲನಾತ್ಮಕ ವಿಶ್ಲೇಷಣೆ, ಸಂಖ್ಯಾಶಾಸ್ತ್ರೀಯ ವಿಧಾನಗಳಾದ ರೇಖಾಚಿತ್ರ, ಕೋಷ್ಠಕಗಳು, ತಃಖ್ತೆಗಳನ್ನು ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಲ್ಲೆಲ್ಲಾ ಬಳಸಿಕೊಂಡು, ಗುಣಾತ್ಮಕವಾಗಿ ಮತ್ತು ಪರಿಮಾಣಾತ್ಮಕವಾಗಿ ವಿಶ್ಲೇಷಿಸಲಾಗಿದೆ.

1.15. ಅಧ್ಯಯನದ ಅಧ್ಯಾಯಗಳು :

ಪ್ರಸ್ತುತ ಅಧ್ಯಯನವನ್ನು ಸ್ಥೂಲವಾಗಿ ಐದು ಅಧ್ಯಾಯಗಳನ್ನಾಗಿ ವಿಭಜಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಅಗತ್ಯ, ಉದ್ದೇಶಗಳು, ವ್ಯಾಪ್ತಿ ಮತ್ತು ಅಳವಡಿಸಿಕೊಂಡ ವಿಧಾನಗಳ ಬಗ್ಗೆ ವಿವರಣೆ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ 'ಮಾನವ ಸಂಪನ್ಮೂಲಾಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ'ದ ಬಗ್ಗೆ ಸ್ಥೂಲವಾಗಿ ಚರ್ಚಿಸಲಾಗಿದೆ. ಶಿಕ್ಷಣದ ಅಭಿವೃದ್ಧಿ, ಸಮುದಾಯದ ಭಾಗವಹಿಸುವಿಕೆ ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಆನುಷಂಗಿಕ ಮೂಲಗಳಿಂದ ದೊರೆತ ದತ್ತಾಂಶವನ್ನು ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯ 'ಸಮುದಾಯ ಮತ್ತು ಶೈಕ್ಷಣಿಕ ಯೋಜನೆಗಳು'. ಶಿಕ್ಷಣ ಕ್ಷೇತ್ರದಲ್ಲಿ ಹಮ್ಮಿಕೊಂಡ ವಿವಿಧ ಯೋಜನೆಗಳನ್ನು ಈ ಅಧ್ಯಾಯದಲ್ಲಿ ಪರಿಶೀಲಿಸುತ್ತಾ, ಅವುಗಳಲ್ಲಿ ಜನರ ಸಹಭಾಗಿತ್ವಕ್ಕೆ ಇರುವ ಮಾರ್ಗೋಪಾಯಗಳನ್ನು ಶೋಧಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪ್ರಾಥಮಿಕ ದತ್ತಾಂಶದ ಆಧಾರವಾಗಿ ಶಿಕ್ಷಣದ ಬಗ್ಗೆ ಸಮುದಾಯದ ಅಭಿಪ್ರಾಯಗಳನ್ನು, ಸಮುದಾಯ ಭಾಗವಹಿಸಲು ಇರುವ ಮಾರ್ಗೋಪಾಯಗಳನ್ನು ಹುಡುಕಿ ಎರಡೂ ತಾಲೂಕುಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳನ್ನು ವಿಶ್ಲೇಷಿಸಿ, ಅವುಗಳ ಆಧಾರದ ಮೇಲೆ ನಿರ್ಣಯಗಳನ್ನು ದಾಖಲಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಹೊರ ಬಂದಿರುವ ಫಲಿತಾಂಶಗಳನ್ನು ಕ್ರೋಢೀಕರಿಸಿ, ವಿವರಣೆ ನೀಡಲಾಗಿದೆ.

ಅಧ್ಯಾಯ - ಎರಡು

ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ

ಪೀಠಿಕೆ :

2.1. ಭಾರತದಲ್ಲಿ ಆಧುನಿಕ ಶಿಕ್ಷಣ

2.2. 1854ರ ವುಡ್‌ನ ಪ್ರಪತ್ರ

2.3. ಹಂಟರ್ ಆಯೋಗ (1882)

2.4. ಶಿಕ್ಷಣದ ಆಂದೋಲನ (1902-1918).

2.5. ಪ್ರಾಥಮಿಕ ಶಿಕ್ಷಣ ಕಾಯ್ದೆ (1918-50) ಹಾಗೂ ನಂತರದ ಬೆಳವಣಿಗೆ.

2.6. ಗಾಂಧೀಜಿಯವರ ಮೂಲ ಶಿಕ್ಷಣ ಅಥವಾ ವಾರ್ಧಾ ಶಿಕ್ಷಣ ಯೋಜನೆ.

2.7. ಸಾರ್ಜೆಂಟ್ ಯೋಜನೆ (1944).

2.8. ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ವಿವಿಧ ಚಿಂತನೆಗಳು.

2.9. ಶಿಕ್ಷಣ ಮತ್ತು ನಿರೀಕ್ಷಿತ ಫಲ.

2.10. ಸಾಕ್ಷರತಾ ಮಟ್ಟಗಳು (ಕರ್ನಾಟಕದ 17 ಜಿಲ್ಲೆಗಳಿಗೆ ಅನ್ವಯಿಸಿ).

2.11. ಶಿಕ್ಷಣವೆಂಬುದು ಸಾಮಾಜಿಕ ಮತ್ತು ವೈಯಕ್ತಿಕ ಅಗತ್ಯ.

2.12. ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣದ ಪ್ರಗತಿ.

2.13. ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾಥಮಿಕ ಶಿಕ್ಷಣ.

2.14. ಕರ್ನಾಟಕದಲ್ಲಿ ಶಿಕ್ಷಣದ ಪ್ರಗತಿ.

2.15. ಬಳ್ಳಾರಿ ಜಿಲ್ಲೆಯಲ್ಲಿ ಶಿಕ್ಷಣದ ಪ್ರಗತಿ.

2.16. ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಅಂಕಿ-ಅಂಶಗಳ ಮಾಹಿತಿ.

ಪೀಠಿಕೆ :

ಕಾಲಾಂತರದ ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯ ಏಕೆ ಆಸಕ್ತಿ ತೋರಲಿಲ್ಲ? ಅಥವಾ ಸಮುದಾಯ ವನ್ನು ಕಡೆಗಾಣಿಸಲಾಯಿತೆ?. ಶಿಕ್ಷಣ ಪ್ರಕ್ರಿಯೆ ಏಕೆ ವಿಕೇಂದ್ರೀಕರಣಗೊಳ್ಳಲಿಲ್ಲ?. ಎಲ್ಲಾ ಏಕೆ ಕೇಂದ್ರೀಕೃತ ವಾಯಿತು ? ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಇವುಗಳಿಗೆ ಉತ್ತರಗಳನ್ನು ಭಾರತ ದಲ್ಲಿ ಶಿಕ್ಷಣವು ಬೆಳೆದು ಬಂದ ಇತಿಹಾಸದ ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಕಿರು ಪ್ರಯತ್ನ ಮಾಡಲಾಗಿದೆ. ಭಾರತದಲ್ಲಿ ಶಿಕ್ಷಣ ಇತಿಹಾಸದ ಮೈಲುಗಲ್ಲುಗಳನ್ನು ಗುರುತಿಸುವ ಪ್ರಯತ್ನದ ಪೂರ್ವಭಾವಿಯಾಗಿ ಶಿಕ್ಷಣದ ಅರ್ಥ ಮತ್ತು ಸ್ವರೂಪವನ್ನು ತಿಳಿದುಕೊಳ್ಳುವುದು ಸೂಕ್ತವೆನಿಸುತ್ತದೆ.

ಮಾನವನ ಸರ್ವತೋಮುಖ ಅಭಿವೃದ್ಧಿಯಲ್ಲಿ 'ಶಿಕ್ಷಣ' ಮಹತ್ವದ ಪಾತ್ರವಹಿಸುತ್ತದೆ. ಆದಿಯಿಂದಲೂ ಮಾನವನು ತನ್ನ ಬೆಳವಣಿಗೆಗಾಗಿ, 'ಜೀವನ'ವನ್ನು ಉತ್ತಮವಾಗಿ ರೂಪಿಸಿಕೊಳ್ಳುವುದಕ್ಕಾಗಿ ಅನೇಕ ವೃತ್ತಿಗಳನ್ನು ಅವಲಂಬಿಸುತ್ತಾ ಬಂದಿರುವನು. ವೃತ್ತಿಯನ್ನು ಉತ್ತಮಗೊಳಿಸಿಕೊಳ್ಳಲು ಶಿಕ್ಷಣ ಮತ್ತು ತರಬೇತಿ ಅವಶ್ಯಕ. ಇದರಿಂದ ಮಾನವರ ಸಾಮರ್ಥ್ಯಗಳನ್ನು ಅರಿತು ಅವುಗಳನ್ನು ತನ್ನ ಅಭ್ಯುದಯಕ್ಕಾಗಿ ಉಪಯೋಗಿಸಿಕೊಳ್ಳಲು ಸಹಾಯವಾಗುತ್ತದೆ. ತಾನು ಉದ್ಯೋಗ ಮಾಡುವ ಸಂಸ್ಥೆಯ ಬೆಳವಣಿಗೆಗೆ ಅನುಕೂಲ ಮಾಡುತ್ತಾನೆ. ಮಾನವನು ಈ ರೀತಿ ತನ್ನ ಕೆಲಸವನ್ನು ಕುರಿತಂತೆ ಮಾಡಲು ಬೇಕಾದ ಶಿಕ್ಷಣ ಮತ್ತು ತರಬೇತಿ ಪಡೆಯುವುದಕ್ಕೆ 'ವಿಕಾಸ' ಎನ್ನುತ್ತಾರೆ.

''ಮಾನವನಲ್ಲಿನ ಅಪರಿಮಿತ ಅಂತಸ್ಥ ಸಾಮರ್ಥ್ಯಗಳನ್ನು ಸೂಕ್ತ ವಾತಾವರಣ ನಿರ್ಮಿಸುವುದ ರಿಂದಾಗಿ ಹೊರಬರುವಂತೆ ಮಾಡಿ, ಇವುಗಳನ್ನು ಪೋಷಿಸಿ, ಉಪಯುಕ್ತವಾಗುವಂತೆ ಮಾಡುವುದೇ ಮಾನವನ ಸಂಪನ್ಮೂಲ ಅಭಿವೃದ್ಧಿಯ ಪದ್ಧತಿ. ನಿಶ್ಚಿತ ಕಾಲದಲ್ಲಿ ವೃತ್ತಿ/ ಉದ್ದಿಮೆಯಲ್ಲಿ ಪರಿಣತಿ ಪಡೆದು, ಅದರ ಉಪಯೋಗವನ್ನು ಸ್ವಂತ ಬೆಳವಣಿಗೆಗೆ ಮತ್ತು ಸಂಸ್ಥೆಯ ಅಭ್ಯುದಯಕ್ಕೆ, ಉಪಯೋಗಪಡಿಸುವುದಕ್ಕೆ ಮಾನವ ಸಂಪನ್ಮೂಲಾಭಿವೃದ್ಧಿ ಎಂದು ಹೆಸರು'' (ನಾಡ್ಲೆರ್, 1984,'ಕರ್ನಾಟಕದ ಆರ್ಥಿಕತೆ', ಕೃತಿ. ಲೇಖನ: ಕರ್ನಾಟಕದಲ್ಲಿ ಮಾನವ ಸಂಪನ್ಮೂಲಾಭಿವೃದ್ಧಿ : ಒಂದು ಸಮೀಕ್ಷೆ, ಲೇಖಕಿ: ಉಷಾ ರಾಮ್‌ಕುಮಾರ್, ಪು. 16).

ಮಾನವನ ಸಾಮರ್ಥ್ಯಗಳು ವೈಯಕ್ತಿಕ ಬೆಳವಣಿಗೆ ಮತ್ತು ವೃತ್ತಿ ಅಥವಾ ಉದ್ಧಿಮೆಯ ಅಭ್ಯುದಯಕ್ಕೆ ಪೂರಕ. ಇಂಥ ಮಾನವ ಸಂಪನ್ಮೂಲ ಆಭಿವೃದ್ಧಿಗೆ ಶಿಕ್ಷಣವೇ ಬುನಾದಿ. ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕೆ ಅವನ ಅಂತರ್ಮುಖಿತ್ವವನ್ನು ಚೇತನಗೊಳಿಸಲು ಭೌತಿಕ ಜಗತ್ತನ್ನು ಅರಿಯಲು ಅದು ಬುನಾದಿ. 'ಶಿಕ್ಷಣ' ಎಂಬ ಪದವು ತುಂಬಾ ವಿಶಾಲವಾಗಿದ್ದು, ಶಿಕ್ಷಣ ತಜ್ಞರು, ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯದ ಮೂಲಕ ವ್ಯಾಖ್ಯಾನಿಸಿದ್ದಾರೆ.

ಶಿಕ್ಷಣದ ಅರ್ಥವನ್ನು ಅನೇಕ ವಿದ್ವಾಂಸರು ಬೇರೆ ಬೇರೆಯಾಗಿ ಅರ್ಥೈಸಿದ್ದಾರೆ. 'ಶಿಕ್ಷಣ' ನಿಂತ ನೀರಲ್ಲ. ಇದು ಅವ್ಯಾಹತವಾಗಿ ಹರಿಯುತ್ತಲೇ ಇರುತ್ತದೆ. ಹಳೇ ನೀರು ಹೊರಚೆಲ್ಲಿ, ಹೊಸ ನೀರು ಒಳ ಬರುತ್ತದೆ. ಹಾಗೆ ಕಾಲದಿಂದ ಕಾಲಕ್ಕೆ ಶಿಕ್ಷಣದ ಅರ್ಥ ವೈಶಾಲ್ಯವೂ ಬದಲಾಗುತ್ತಾ ಬಂದಿದೆ. 'ಶಿಕ್ಷಣ' ಎಂಬ ಪದದ ಮೂಲ, ಇಂಗ್ಲೀಷಿನ Education ಎಂದಾಗುತ್ತದೆ. ಮಗುವಿನ ಬುದ್ಧಿಮಟ್ಟವನ್ನು ಎತ್ತರಿಸು ಎಂದರ್ಥ. ಲ್ಯಾಟಿನ್ ಭಾಷೆಯಲ್ಲಿ ಇದರರ್ಥ 'ಹೊರ ಹೊಮ್ಮಿಸು' ಎಂದಾಗುತ್ತದೆ. ಅಂದರೆ ಮಗುವಿನ ಜ್ಞಾನವನ್ನು ಶಿಕ್ಷಣದ ಮುಖಾಂತರ ಹೊರ ಹೊಮ್ಮಿಸುವುದಾಗಿದೆ.

ಸಂಸ್ಕೃತ ಭಾಷೆಯ 'ಶಿಕ್ಷಾ' ಎಂಬ ಪದವು ಶಿಕ್ಷಣ ಪದಕ್ಕೆ ಸಮಾನ ಎನ್ನಲಾಗುತ್ತದೆ. ಇದರ ಅರ್ಥ 'ಶಿಸ್ತಿನಿಂದಿರಿಸು' ಅಥವಾ 'ಹಿಡಿತದಲ್ಲಿಟ್ಟುಕೊಳ್ಳು', 'ಮಾರ್ಗದರ್ಶನ ಮಾಡು', 'ಕಲಿಸು' ಎಂದರ್ಥವಾಗುತ್ತದೆ. ಋಗ್ವೇದದಲ್ಲಿ ಶಿಕ್ಷಣವು ಮನುಷ್ಯನನ್ನು ಸ್ವಾವಲಂಬಿಯಾಗಿ ಮಾಡಿದರೆ; ಯಾಜ್ಞವಲ್ಕ್ಯ ಮಹರ್ಷಿಯು 'ಶಿಕ್ಷಣ'ವು ಮನುಷ್ಯನನ್ನು ಒಳ್ಳೆಯ ಗುಣವುಳ್ಳವನನ್ನಾಗಿ ಮಾಡುತ್ತದೆ ಎಂದಿದ್ದಾನೆ. ಪಾಣಿನಿಯು ಶಿಕ್ಷಣವು ಮನುಷ್ಯನಿಗೆ ಸೃಷ್ಟಿಯ ಮುಖಾಂತರ ತರಬೇತಿ ನೀಡುತ್ತದೆ ಎಂದಿದ್ದಾನೆ. ಕೌಟಿಲ್ಯನು ಶಿಕ್ಷಣವು ದೇಶಕ್ಕಾಗಿ ಪ್ರೀತಿ ಹಾಗೂ ತರಬೇತಿಯನ್ನು ನೀಡುತ್ತದೆ, ಅಂದರೆ ರಾಷ್ಟ್ರಪ್ರೇಮವನ್ನು ಬೆಳೆಸುತ್ತದೆ ಎಂದು ಹೇಳಿದ್ದಾನೆ. ಶಿಕ್ಷಣವೆಂದರೆ ಆತ್ಮ ಸಾಕ್ಷಾತ್ಕಾರ ಎಂದು ಶಂಕರಾಚಾರ್ಯರು ಹೇಳಿದರೆ, ಗುರು ನಾನಕರು ಶಿಕ್ಷಣದಿಂದ ವಿಚಾರಗಳು ಬೆಳೆಯುವುದರ ಜೊತೆಗೆ ಪರೋಪಕಾರಿಯೂ ಆಗುತ್ತಾನೆ ಎಂದು ಹೇಳಿದ್ದಾನೆ.

''ಒಳ್ಳೆಯ ನಡತೆ, ದೃಢ ಮನಸ್ಸು, ಬುದ್ಧಿಶಕ್ತಿ ಹಾಗೂ ತನ್ನ ಕಾಲಿನ ಮೇಲೆ ನಿಲ್ಲುವುದು, ಈ ಗುಣ ಗಳನ್ನು ಮೂಡಿಸುವುದೇ ಶಿಕ್ಷಣ'' ಎಂಬ ವಿವೇಕರ ವಾಣಿಯಲ್ಲಿ ವ್ಯಕ್ತಿಯ ಸ್ವಂತಿಕೆಯನ್ನು ರೂಢಿಸಿಕೊಂಡು ಬೆಳೆಯಬೇಕು. ಯಾರಲ್ಲಿ ಸ್ವಂತಿಕೆ ಇಲ್ಲವೋ, ಅವರು ಯಾವುದನ್ನು ಸಾಧಿಸಲೂ ಸಾಧ್ಯವಿಲ್ಲ. ಸಾಧನೆ ಸ್ವಂತ ಬಲದಿಂದ ಮೂಡುತ್ತದೆ. ಅದಕ್ಕೆ ದೃಢ ಮನಸ್ಸು ಬೇಕು. ಮನಸ್ಸಿಗೆ ತಕ್ಕ ನಡತೆ, ನಡತೆಗೆ ತಕ್ಕ ಬುದ್ಧಿ ಇದ್ದರೆ ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಲ್ಲಲು ಸಾಧ್ಯ. ಇದೆಲ್ಲದಕ್ಕೂ ಮೂಲ ಶಿಕ್ಷಣ. ಅದೇ ರೀತಿ ''ಒಂದು ಮಗುವಿನಲ್ಲಿ ಮತ್ತು ಮನುಷ್ಯನಲ್ಲಿ ಅತ್ಯುತ್ತಮವಾಗಿರುವ ಸಮಸ್ತವನ್ನು ಅಂದರೆ ದೇಹ, ಬುದ್ಧಿ, ಚೇತನ ಇವುಗಳಲ್ಲಿರುವ ಸಂಪೂರ್ಣ ಸತ್ವವನ್ನು ವಿಕಸಿಸುವಂತೆ ಮಾಡುವುದು ಶಿಕ್ಷಣ'' ಎಂಬ ಗಾಂಧೀಜಿಯವರ ಮಾತುಗಳು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಅಗತ್ಯವಾಗಿದೆ ಎಂದು ಧ್ವನಿಸುತ್ತದೆ. ಭಾರತದ ಖ್ಯಾತ ಶಿಕ್ಷಣ ತಜ್ಞರಾದ ರಾಧಾಕೃಷ್ಣನ್ ಅವರು ''ಮಕ್ಕಳು ಮಾನವರಾಗಿ, ನಾಗರಿಕರಾಗಿ ಇನ್ನೊಬ್ಬರೊಡನೆ ಪ್ರೀತಿ ಗೌರವ ಘನತೆಗಳಿಂದ ವರ್ತಿಸುವಂತೆ ಮಾಡಿ ಮಕ್ಕಳಲ್ಲಿ ಔದಾರ್ಯ, ಸೋದರ ಭಾವನೆ, ಸಹಾನುಭೂತಿ, ಬೆಳೆಯುವಂತೆ ಮಾಡುವುದೇ ಶಿಕ್ಷಣ. ಉತ್ತಮ ನಾಗರಿಕನಾಗಿ ಬೆಳೆಯುವ ವ್ಯಕ್ತಿಗೆ ಬಾಲ್ಯದ ಸಂಸ್ಕಾರ ನೀರೆರೆಯುತ್ತದೆ. ಆ ಸಂಸ್ಕಾರ ಇತರರೊಡನೆ ಸೌಹಾರ್ದಯುತವಾಗಿ ಬೆರೆಯುವುದನ್ನು ಕಲಿಸುತ್ತದೆ. ಎಲ್ಲಕ್ಕಿಂತ ಮೊದಲು ಮಾನವನನ್ನಾಗಿ ಮಾಡುತ್ತದೆ. 'ಸಂಸ್ಕಾರ'ದ ಆವಿಷ್ಕಾರಕ್ಕೆ ಶಿಕ್ಷಣವೇ ಮೂಲವಾಗಿದೆ''. ''ಸಹ ಜೀವಿಗಳನ್ನು, ಸಮಾಜವನ್ನು, ದೇಶವನ್ನು ಅನ್ಯ ರಾಷ್ಟ್ರಗಳನ್ನು ಅರಿತುಕೊಂಡು ಅವುಗಳಿಗೆಲ್ಲ ಉಚಿತ ಗೌರವ ನೀಡುವ ಪದ್ಧತಿಯನ್ನು ಕಲಿಸುವವಂಥದೇ ನಿಜವಾದ ಶಿಕ್ಷಣ''(ರವೀಂದ್ರನಾಥ ಟ್ಯಾಗೋರ್,

ಆಧಾರ: ಎನ್.ಎಸ್.ವೀರಪ್ಪ, 1984,ಪು.9-10). ವ್ಯಕ್ತಿಯು ಅರಿವಿನ ಮೂಲವನ್ನು ಕಂಡುಕೊಳ್ಳದಿದ್ದರೆ ಬದುಕಿನ ಅರ್ಥವನ್ನು ಕಲ್ಪಿಸಿ ಕೊಳ್ಳುವುದು ಕಠಿಣ ವಾಗುತ್ತದೆ. ಪರಸ್ಪರರೊಂದಿಗೆ ಕೂಡಿ ಬಾಳುವುದನ್ನು, ಸಮಾಜವನ್ನು, ನಾಡನ್ನು, ಇತರೆ ರಾಷ್ಟ್ರವನ್ನು ಅರ್ಥ ಮಾಡಿಕೊಂಡು ಗೌರವ ಭಾವನೆಯನ್ನು ಬೆಳೆಸಿಕೊಳ್ಳುವಂತೆ ಮಾಡುತ್ತದೆ. ಇದೆಲ್ಲದರ ಕಲಿಕೆಯೇ 'ಶಿಕ್ಷಣ'. ''ಅದೃಷ್ಟವಾದವನ್ನು ಖಂಡಿತ ಬಿಡಿ, ಪ್ರಯತ್ನ ಮಾಡಿ ವಿದ್ಯಾವಂತರಾಗಿ'' ಎಂದು ಡಾ॥ಬಿ.ಆರ್. ಅಂಬೇಡ್ಕರ್ ವಿದ್ಯೆಯ ಮಹತ್ವ ಕುರಿತು ಹೇಳಿದ್ದಾರೆ.

ಪಾಶ್ಚಾತ್ಯ ಶಿಕ್ಷಣ ತಜ್ಞರ ಶಿಕ್ಷಣದ ಬಗೆಗಿನ ಅಭಿಪ್ರಾಯಗಳು ಭಿನ್ನ ಭಿನ್ನವಾಗಿವೆ.

'' ಶಿಕ್ಷಣವು ಜೀವಿತ ಕಾಲದ ಉದ್ದಕ್ಕೂ ನಡೆಯಬೇಕಾದ ಕಲಿಕೆಯ ಕ್ರಮವಾಗಿದೆ. ಪ್ರತಿ ಶಿಕ್ಷಣದ ಜೀವನದಲ್ಲಿಯೂ ನಾವು ಶಿಕ್ಷಣ ಪಡೆಯುತ್ತಲೇ ಇರುವೆವು. ನಿರಂತರವೂ ಅನುಭವಗಳನ್ನು ಪುನರ್‌ರಚಿಸುವುದೇ ಶಿಕ್ಷಣದ ಧ್ಯೇಯವಾಗಿದೆ''(ಜಾನ್‌ಡ್ಯೂಯಿ). '' ಸಂಗ್ರಹಿಸಿದ ಜ್ಞಾನವನ್ನು ಉಚಿತವಾದ ರೀತಿಯಲ್ಲಿ ಉಪಯೋಗಿಸುವುದೇ ಶಿಕ್ಷಣ'' (ವೈಟ್ ಹೆಚ್, ಆಧಾರ: ಶಂಕರರಾವ್ ಚ.ನ., 1992,ಪು.302). ''ಒಂದು ಸಮಾಜದ ಪರಿಪಕ್ವವಾದ ಹಿರಿಯ ಸದಸ್ಯರು ಆ ಸಮಾಜದ ಕಿರಿಯ ಪೀಳಿಗೆಗೆ ತಮ್ಮ ಸಮಾಜದ ಸಂಗ್ರಹಿತ ಕೌಶಲ್ಯಗಳು, ಜ್ಞಾನ ಮತ್ತು ಅಭಿಪ್ರಾಯಗಳನ್ನೊಳಗೊಂಡ ಜೀವನದ ರೀತಿಯನ್ನು ಬುದ್ಧಿ ಪೂರ್ವಕವಾಗಿ ತಿಳಿಸಿಕೊಡಲು ಮಾಡುವ ಪ್ರಯತ್ನವೇ ವಿದ್ಯಾಭ್ಯಾಸ ''(ಎಲ್ಜಿನ್ ಎಫ್. ಹಂಟ್, ಆಧಾರ: ಶಂಕರರಾವ್ ಚ.ನ.,1992,ಪು.86). '' ಮಾನವ ಸಮಾಜದ ಪ್ರೌಢ ಸದಸ್ಯರು ತಮ್ಮ ಮುಂಬರುವ ಪೀಳಿಗೆಯನ್ನು ತಮ್ಮ ಸಮಾಜದ ಜೀವನಾದರ್ಶಗಳಿಗೆ ಅನುಗುಣವಾಗಿ ರೂಪಿಸುವ ಮತ್ತು ಬೆಳೆಸುವ ಪ್ರಯತ್ನವನ್ನು ಶಿಕ್ಷಣವೆನ್ನಬಹುದು'' (ಜೇಮ್ಸ್ ವೆಲ್ಟನ್, ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕ, 11ನೇ ಸಂಪುಟ).

ಶಿಕ್ಷಣವೆಂದರೆ ಕೇವಲ ಜ್ಞಾನ-ಸಂಪತ್ತಿನ ವರ್ಗಾವಣೆ ಮಾತ್ರವಾಗಿರದೇ, ಭವಿಷ್ಯವನ್ನು ಎದುರಿಸಲು ಅಗತ್ಯವಾದ ಕಲೆ-ಕುಶಲತೆಗಳನ್ನು ಮತ್ತು ಮನೋಭಾವವನ್ನು ಮಗುವಿನಲ್ಲಿ ಬೆಳೆಸುವುದೇ ಆಗಿದೆ. ಶಿಕ್ಷಣದ ಉದ್ದೇಶ ಮಾನವನ ಸ್ವಸ್ಥ ಮನಸ್ಸನ್ನು ಬೆಳೆಸುವುದಾಗಿದೆ. ಪ್ಲೇಟೋನ ಅಭಿಪ್ರಾಯದಲ್ಲಿ ಶಿಕ್ಷಣದ ಮೂಲ ಉದ್ದೇಶವು ''ವಿದ್ಯಾರ್ಥಿಯ ದೇಹ ಮತ್ತು ಆತ್ಮದಲ್ಲಿ ಆತನ ಅರ್ಹತೆಗೆ ತಕ್ಕಂತೆ ಎಲ್ಲಾ ಸೌಂದರ್ಯ ಮತ್ತು ಪರಿಪಕ್ವತೆಯನ್ನು ಬೆಳೆಸುವುದು'' ಎಂದಾಗಿದೆ. ಪ್ಲೇಟೋನ ಶಿಷ್ಯ ಅರಿಸ್ಟಾಟಲ್ ಶಿಕ್ಷಣದ ಅಂತಿಮ ಉದ್ದೇಶದ ಬಗ್ಗೆ ಹೀಗೆ ಹೇಳಿದ್ದಾನೆ ''ಪರಿಪೂರ್ಣ ಆನಂದವನ್ನು ಒಳಗೊಂಡಿರುವ ಉದಾತ್ತ ಸತ್ಯ. ಸದ್ಗುಣ ಮತ್ತು ಸೌಂದರ್ಯಗಳ ಬಗ್ಗೆ ಧ್ಯಾನಿಸಲು ಚಿಂತಿಸಲು ಅನುವಾಗುವಂತೆ ಮಾನವನ ಸಾಮರ್ಥ್ಯಗಳನ್ನು ಮುಖ್ಯವಾಗಿ ಮನಸ್ಸನ್ನು ಬೆಳೆಸುವುದು ಶಿಕ್ಷಣದ ಗುರಿಯಾಗಿದೆ''.

ಬ್ರಿಟಿಷ್ ತತ್ವಜ್ಞಾನಿ ಹಾಗೂ ಸಮಾಜಶಾಸ್ತ್ರದ ಸ್ಥಾಪಕ ತಜ್ಞರುಗಳಲ್ಲೊಬ್ಬನಾಗಿದ್ದ ಹರ್ಬರ್ಟ್ ಸ್ಪೆನ್ಸರ್ ತನ್ನ 'ಸೋಶಿಯಲ್ ಸ್ಟಾಟಿಕ್ಸ್' ಪುಸ್ತಕದಲ್ಲಿ ''ಚಾರಿತ್ರ್ಯದ ಸಂವರ್ಧನೆಯೇ ಶಿಕ್ಷಣದ ಮುಖ್ಯವಾದ ಉದ್ದೇಶವಾಗಿದೆ'' ಎಂದಿದ್ದಾನೆ. ಸಾಂಪ್ರದಾಯಿಕ ಶಿಕ್ಷಣದಲ್ಲಿ ವ್ಯಕ್ತಿಯ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಯ ಬಗ್ಗೆ, ಮುಖ್ಯವಾಗಿ ಆತನ ಚಾರಿತ್ರ್ಯ ಸಂವರ್ಧನೆಯ ಬಗ್ಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಆಧುನಿಕ ಶಿಕ್ಷಣದಲ್ಲಿ ನಾಗರಿಕ ಜೀವನವನ್ನು ಸಮರ್ಥವಾಗಿ ನಡೆಸಲು ಬೇಕಾದ ಗುಣಗಳನ್ನು ಬೆಳೆಸಿಕೊಳ್ಳುವುದರ ಬಗ್ಗೆ ಒತ್ತುಕೊಟ್ಟಿರುವುದನ್ನು ಗಮನಿಸಬಹುದು. ಅಮೇರಿಕದ ಹಾರ್ಲ್ ಆರ್.ಡೌಗ್ಲಾಸ್‌ರವರ ಬರಹದಲ್ಲಿ ''ಶಿಕ್ಷಣದ ಉದ್ದೇಶಗಳೆಂದರೆ, ಉತ್ತಮ ಪೌರತ್ವವನ್ನು ಬೆಳೆಸಿಕೊಳ್ಳಲು ತರಬೇತಿ ನೀಡುವುದು; ಹಾಗೆಯೇ ಉತ್ತಮ ಪೌರತ್ವವನ್ನು ಬೆಳೆಸಿಕೊಳ್ಳಲು, ಪರಿಣಾಮಕಾರಿಯಾಗಿ ಹಾಗೂ ಉಪಯುಕ್ತಕರವಾಗಿ ವಿರಾಮದ ಅವಧಿಯನ್ನು ಕಳೆಯಲು; ವಿಷಯ ಜ್ಞಾನವನ್ನು ಸಂಗ್ರಹಿಸಲು, ಉತ್ತಮ ಆಸಕ್ತಿಗಳನ್ನು ಬೆಳೆಸಿಕೊಳ್ಳಲು ಮತ್ತು ನಾನಾ ತೆರನಾದ ನೈಪುಣ್ಯತೆಗಳನ್ನು ರೂಢಿಸಿಕೊಳ್ಳಲು ಸೂಕ್ತ ತರಬೇತಿಯನ್ನು ನೀಡುವುದು ಅಥವಾ ಸಿದ್ಧತೆಗಳನ್ನು ನಡೆಸುವುದೇ ಆಗಿದೆ''.

ಮೇಲೆ ಉಲ್ಲೇಖಿಸಿದ ವ್ಯಾಖ್ಯೆಗಳು ಶಿಕ್ಷಣದ ಅರ್ಥ, ಸ್ವರೂಪ ಮತ್ತು ಕಾರ್ಯಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡುತ್ತವೆ. ಆದರೂ ಸಂಶೋಧನೆಯ ದೃಷ್ಟಿಕೋನವನ್ನು ಗಮನದಲ್ಲಿಟ್ಟುಕೊಂಡು ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರವನ್ನು ವಿಶ್ಲೇಷಿಸುವುದು ಅಗತ್ಯ.

ವ್ಯಕ್ತಿತ್ವವೆಂದರೆ ಸದೃಢ ಕಾಯವಲ್ಲ. ಅದು ಪ್ರಬುದ್ಧ ಮನಸ್ಸನ್ನು ಒಳಗೊಂಡಿರುತ್ತದೆ. ಒಂದು ದೇಶ ನೈಸರ್ಗಿಕ ಸಂಪತ್ತನ್ನು ಹೊಂದಿದ್ದರೆ ಮಾತ್ರ ಸಾಲದು, ಉತ್ತಮ ಜ್ಞಾನ, ತಂತ್ರಜ್ಞಾನ, ಕೌಶಲ್ಯ, ವಿವೇಚನೆ ಹಾಗೂ ವೈಜ್ಞಾನಿಕ ಮನೋಭಾವವುಳ್ಳ ಜನತೆ ಮಾತ್ರ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಂಡು ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಬಲ್ಲದು. ಇಂದಿಗೂ ಭಾರತವೂ ಸೇರಿದಂತೆ ಅನೇಕ ದೇಶಗಳು ನೈಸರ್ಗಿಕ ಸಂಪತ್ತನ್ನು ಹೊಂದಿದ್ದರೂ ಆರ್ಥಿಕವಾಗಿ ಹಿಂದುಳಿಯಲಿಕ್ಕೆ ಮಾನವ ಸಂಪನ್ಮೂಲ ಕೊರತೆಯೇ ಕಾರಣ. ಆರೋಗ್ಯವಂಥ, ಸದೃಢಕಾಯ, ಜ್ಞಾನ ಮತ್ತು ತಂತ್ರಜ್ಞಾನವನ್ನು ಮೈಗೂಡಿಸಿಕೊಂಡ ವ್ಯಕ್ತಿಗಳು ಮಾತ್ರ ಮಾನವ ಸಂಪತ್ತಾಗುತ್ತಾರೆ. ಸ್ಥೂಲವಾಗಿ ಯೋಚಿಸಿದಾಗ ಮಾನವ ಸಂಪನ್ಮೂಲದಲ್ಲಿ ಶಿಕ್ಷಣ ಕೆಳಕಂಡಂತೆ ಪಾತ್ರ ವಹಿಸಬಲ್ಲದು.

1. ಮೂಲಭೂತವಾದ ಓದು, ಬರಹ ಮತ್ತು ಗಣಿತ ಜ್ಞಾನವನ್ನು ಒದಗಿಸುವುದು.
2. ವ್ಯಕ್ತಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು.
3. ಸಂಶೋಧನೆಯಿಂದ ಅಂತಃಸ್ಥವಾದ ಸುಪ್ತ ಜ್ಞಾನವನ್ನು ಹೊರತೆಗೆಯುವುದು.
4. ತಾಂತ್ರಿಕತೆ ಮತ್ತು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವುದು.
5. ಜನರಲ್ಲಿ ವೈಚಾರಿಕತೆ, ಕ್ರಿಯಾಶೀಲತೆ ಹಾಗೂ ಆಶಾದಾಯಕ ಮನೋಭಾವಗಳನ್ನು ಬೆಳೆಸುವುದು.

ಒಟ್ಟಿನಲ್ಲಿ ಹೇಳುವುದಾದರೆ, ಜನತೆಗೆ ಅಗತ್ಯವಾದ ಎಲ್ಲಾ ಜ್ಞಾನ ಮತ್ತು ಚಿಂತನೆಗಳನ್ನು ಬೆಳೆಸುವುದೇ ಶಿಕ್ಷಣದ ಪಾತ್ರ.

2.1. ಭಾರತದಲ್ಲಿ ಶಿಕ್ಷಣ :

ಪ್ರಸ್ತುತ ಪ್ರಬಂಧದ ಕೇಂದ್ರ ವಿಷಯವನ್ನು ಗಮನದಲ್ಲಿಟ್ಟುಕೊಂಡು 'ನಮ್ಮ ದೇಶದ ಶಿಕ್ಷಣ ಪದ್ಧತಿ' ಬೆಳೆದುಬಂದ ಬಗೆಯ ಕಿರು ಪರಿಚಯ ಮಾಡಿಕೊಳ್ಳುವುದು ಅವಶ್ಯಕವೆನಿಸುತ್ತದೆ.

''ಯಾವುದೇ ಪ್ರಕಾರದ ಶಿಕ್ಷಣ ಪದ್ಧತಿ ಇಲ್ಲದ ಸಮಾಜವನ್ನು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬುದಾಗಿ'' ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಶಿಕ್ಷಣವನ್ನು ಮೂಲಭೂತವಾಗಿ ಮಾಹಿತಿ, ಜ್ಞಾನ ಹಾಗೂ ವೃತ್ತಿಕೌಶಲ್ಯಗಳನ್ನು ವರ್ಗಾಯಿಸುವ ಪ್ರಕ್ರಿಯೆ ಎಂಬ ಅರ್ಥದಲ್ಲಿ ಪರಿಭಾವಿಸಿದಾಗ, ಮೇಲಿನ ಹೇಳಿಕೆಯ ಸತ್ಯತೆ ಅರ್ಥವಾಗುತ್ತದೆ. ಹೀಗಾಗಿ ಯಾವುದೇ ಸಮಾಜ- ಆದಿವಾಸಿ ಇರಲಿ, ಗ್ರಾಮೀಣ ಇರಲಿ ಅಥವಾ ಆಧುನಿಕವಾಗಿರಲಿ ಒಂದಲ್ಲಾ ಒಂದು ಪ್ರಕಾರದ ಶಿಕ್ಷಣ ಪದ್ಧತಿಯನ್ನು ಹೊಂದಿರಲೇಬೇಕಾಗುತ್ತದೆ. ಅಲ್ಲದೆ, ಶಿಕ್ಷಣ ವಿಧಾನವು ಔಪಚಾರಿಕವಾಗಿರಬೇಕೆಂಬ ನಿಯಮವೂ ಕಡ್ಡಾಯವಲ್ಲ. ಆಳವಾಗಿ ಚಿಂತಿಸಿದಾಗ ಶಿಕ್ಷಣವಿಲ್ಲದೆ ಮಾನವ ನಾಗರೀಕತೆಯೆಂಬ ಪ್ರಗತಿ ಸಾಧ್ಯವೇ ಆಗುತ್ತಿರಲಿಲ್ಲ.

ಅತ್ಯಂತ, ಪುರಾತನವಾದ, ಸಮಾಜಗಳಲ್ಲಿ ಹಾಗೂ ಆದಿವಾಸಿ ಸಮುದಾಯಗಳಲ್ಲಿ 'ಶೈಕ್ಷಣಿಕ ಸಂಸ್ಥೆ' ಗಳೆಂಬ ಪ್ರತ್ಯೇಕ ಸಂಸ್ಥೆಗಳೇ ಇರಲಿಲ್ಲ. ಮಕ್ಕಳು ತಂದೆ-ತಾಯಂದಿರು ಮಾಡುವ ಕೆಲಸ-ಕಾರ್ಯಗಳನ್ನು ಗಮನಿಸುತ್ತಾ, ತಮ್ಮ ಸುತ್ತಮುತ್ತಣ ಪರಿಸರದ ಹಿರಿಯರು ಮಾಡುವುದನ್ನು ನೋಡುತ್ತಾ, ವರ್ತಿಸುವುದನ್ನು ವೀಕ್ಷಿಸುತ್ತಾ, ತಾವು ನೋಡಿದ್ದನ್ನು ಮತ್ತು ಗಮನಿಸಿದ್ದನ್ನು ತಮ್ಮದೇ ಆದ ರೀತಿಯಲ್ಲಿ ಅನುಕರಿಸುತ್ತಾ ಬರುವುದು ಈ ಸಮಾಜಗಳಲ್ಲಿ ತೀರಾ ಸಾಮಾನ್ಯವಾಗಿತ್ತು. ಕೆಲವೊಮ್ಮೆ ತಂದೆ-ತಾಯಿಯರು ತಮ್ಮ ಮಕ್ಕಳಿಗೆ ಬೇಟೆಯಾಡುವ, ಮೀನು ಹಿಡಿಯುವ, ಕೃಷಿ ಕಾರ್ಯ ಮಾಡುವ, ಅರಣ್ಯದ ಹುಟ್ಟುವಳಿಗಳನ್ನು ಒಟ್ಟುಗೂಡಿಸುವ, ಮನೆಗೆಲಸಗಳನ್ನು ಮಾಡುವ ಕ್ರಮಗಳ ಬಗ್ಗೆ ಸಲಹೆ ಸೂಚನೆ ನೀಡಿ ಮಾರ್ಗದರ್ಶನ ಮಾಡುವುದು ಇಲ್ಲದಿರಲಿಲ್ಲ. ಅಂದರೆ, ಈ ಬಗೆಯ 'ತರಬೇತಿ' ನೀಡುವ ಅಥವಾ 'ಅನೌಪಚಾರಿಕ ಶಿಕ್ಷಣ' ನೀಡುವ ಹೊಣೆಗಾರಿಕೆ ಕುಟುಂಬದ್ದಾಗಿತ್ತೇ ವಿನಃ ಬಾಹ್ಯ ಸಂಸ್ಥೆಗಳದ್ದಾಗಿರಲಿಲ್ಲ.

''ಸಂಸ್ಕೃತಿಗಳು ಸಂಕೀರ್ಣಗೊಳ್ಳುತ್ತಾ ಬಂದಂತೆ ಕುಟುಂಬದೊಳಗಣ ಕಲಿಕೆ ಅಸಾಧ್ಯವಾಗಿ ಶಾಲೆಗಳು ಹುಟ್ಟಿಕೊಂಡವು ರಾಜಕೀಯವಾಗಿ ಸಮಾಜ ಬಲಿಷ್ಠವಾಗಿ ಸಾಮ್ರಾಜ್ಯಗಳು ಬೆಳೆದು ನಿಂತಾಗ ರಾಜ್ಯದ ಆಡಳಿತ ನಡೆಸಲು, ಲೆಕ್ಕಪತ್ರಗಳನ್ನು ನೋಡಿಕೊಳ್ಳಲು, ತರಬೇತಿ ಪಡೆದ ಕಾರಕೂನರುಗಳ ಅಗತ್ಯತೆ ತಲೆದೋರಿತು. ಹಾಗೆಯೇ ಮತಧರ್ಮವು ಬೆಳೆಯುತ್ತಾ ಬಂದಂತೆ ಅದಕ್ಕೆ ಸಂಬಂಧಿಸಿದ ಸ್ತೋತ್ರಗಳು, ಭಜನೆಗಳು, ಪುರಾಣಗಳು, ದೈವಿಕ ಶಕ್ತಿಯನ್ನು ಪ್ರಕಟವಾಗಿ ಸಾರುವ ಕಥೆಗಳು, ವಿವಿಧ ಬಗೆಯ ಧಾರ್ಮಿಕ ಕ್ರಿಯಾವಿಧಿಗಳು ಮತ್ತು ಪವಿತ್ರ ಗ್ರಂಥಗಳಲ್ಲಿ ವಿವರಣೆಗಳನ್ನು ನೆನಪಿಟ್ಟುಕೊಂಡು ವ್ಯಾಖ್ಯಾನಿಸುವುದು ಮತ್ತು ಅವುಗಳಿಗನುಗುಣವಾಗಿ ನಡೆದುಕೊಳ್ಳುವುದು ಕಷ್ಟವಾಯಿತು. ಅದಕ್ಕಾಗಿ ವಿಶಿಷ್ಟ ಬಗೆಯ ಅಧ್ಯಯನದ ಹಾಗೂ

ತರಬೇತಿಯ ಅವಶ್ಯಕತೆ ತಲೆದೋರಿತು. ಅದಕ್ಕೂ ಜ್ಞಾನವುಳ್ಳ 'ಅಧ್ಯಾಪಕ' ಅಥವಾ ಬೋಧಿಸುವ ಕ್ರಮವು ಔಪಚಾರಿಕ ಸ್ವರೂಪವನ್ನು ಪಡೆಯುತ್ತಾ ಹೋಗಿ 'ಶಾಲೆ'ಗಳೆಂಬ ಔಪಚಾರಿಕ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡವು'' (ಹಾರ್ಟಿನ್ ಮತ್ತು ಹಂಟ್: ಎನ್. ಎಸ್. ವೀರಪ್ಪ ,1984,ಪು.18).

ಪ್ರಾಚೀನ ಭಾರತದಲ್ಲಿ ಶಿಕ್ಷಣದ ವ್ಯವಸ್ಥೆಯು ವ್ಯಕ್ತಿಯ ಶೀಲ ನಿರೂಪಣೆಗೆ ಪ್ರಧಾನ ಸ್ಥಾನ ನೀಡಿತ್ತು. ವ್ಯಕ್ತಿಯ ಬೌದ್ಧಿಕ ವಿಕಸನಕ್ಕೆ ಶಿಕ್ಷಣ ಪೂರಕವಾಗಿದ್ದರೂ ಅದಕ್ಕಿಂತಲೂ ಹೆಚ್ಚಾಗಿ ಆ ಕಾಲದಲ್ಲಿ ವ್ಯಕ್ತಿಯಲ್ಲಿ ಮೂಡುವ ಗುಣಶೀಲನೆಗೆ ಪ್ರಾಮುಖ್ಯತೆ ಇತ್ತು. ವೇದಗಳು ದೈವ ವಾಣಿಯೆಂದು ನಂಬಿದವರು ಅವನ್ನು ಸಂರಕ್ಷಿಸುವ ಕಡೆ ಗಮನಿಸುತ್ತಿದ್ದರು . ಮನುವು '' ಮೂರು ವೇದಗಳಲ್ಲಿ ಪಾಂಡಿತ್ಯ ಸಾಧಿಸುವ ಅವಗುಣಿಗಿಂತ ಅಷ್ಟಿಷ್ಟು ವೇದಾಧ್ಯಯನ ಮಾಡಿರುವ ಸದ್ಗುಣಿಯೇ ಆದರಣೀಯನೆಂದು'' ಸೂಚಿಸಿದ್ದಾನೆ.

ಕ್ರಿ.ಶ.ಏಳನೆಯ ಶತಮಾನದಲ್ಲಿ ಭಾರತದಾದ್ಯಂತ ಯಾತ್ರೆಯನ್ನು ಕೈಗೊಂಡಿದ್ದ ಚೀನಾದೇಶದ ಹ್ಯೂಯಾನ್‌ತ್ಸಾಂಗ್ ''ಭಾರತೀಯರು ಆತುರದ ಮತ್ತು ಅಸ್ಥಿರದ ಸ್ವಭಾವದವರಾದರೂ ನೈತಿಕ ತತ್ವಶುದ್ಧಿಯುಳ್ಳವರು; ಮೋಸ ಮುರುಸುಗಳಿಲ್ಲದೆ ಒಳ್ಳೆಯ ನಡತೆಯಲ್ಲಿ ನಿಷ್ಠೆಯುಳ್ಳವರು ಅವರು ಮಾತಿಗೆ ತಪ್ಪುವವರೂ ಅಲ್ಲ'' ಎಂದಿದ್ದಾನೆ (ಎನ್.ಎಸ್. ವೀರಪ್ಪ,1984,ಪು.9-10). ಭಾರತದ ಅಂದಿನ ಜನರ ಗುಣ ಸ್ವಭಾವವನ್ನು ಹ್ಯೂಯಾನ್‌ತ್ಸಾಂಗ್ ತಿಳಿಸುತ್ತಾ ಅಸ್ಥಿರ ಮನಸ್ಸಿನ ಭಾರತೀಯರು 'ಆಧ್ಯಾತ್ಮ'ದತ್ತ ಒಲವುಳ್ಳವರಾಗಿದ್ದರಿಂದ ಅವರ ಅಭ್ಯುದಯಕ್ಕೆ ಯಾವ ಚ್ಯುತಿಯೂ ಇರಲಿಲ್ಲವೆಂದು ಹೇಳಿದ್ದಾನೆ.

''ಪ್ರಾಚೀನ ಕಾಲದ ಶಿಕ್ಷಣವು ವ್ಯಕ್ತಿಯಲ್ಲಿ ಆತ್ಮಸಂಯಮವನ್ನು ರೂಢಿಸಿಕೊಳ್ಳಲು ಸಹಕಾರಿಯಾಗಿತ್ತು. ವಿದ್ಯಾರ್ಥಿ ನಿತ್ಯ ಜೀವನದಲ್ಲಿ ಅನುಸರಿಸ ಬೇಕಾಗಿದ್ದ ಆದರ್ಶವೂ ನಿಷ್ಠಾಪೂರ್ಣವೂ ಆದ ಜೀವನ ಕ್ರಮದಿಂದ ಅದು ಸಾಧ್ಯವಾಗುತಿತ್ತು . ಕೆಲವರು ಅಂಥ ನಿಷ್ಠೆಯ ಫಲವಾಗಿ ವ್ಯಕ್ತಿಯ ಸ್ವಾಭಾವಿಕ ಆಸಕ್ತಿಗಳೂ ಲಕ್ಷಣಗಳು ವಿಕಸಿಸಲಾರದೆ ದಮನವಾಗಿ ಹೋಗುತ್ತಿದ್ದುವೆಂದು ಟೀಕಿಸಿರುವುದುಂಟು. ಆತ್ಮ ಸಂಯಮ ದಮನ ಕಾರ್ಯಕ್ಕಿಂತ ಭಿನ್ನವೂ, ಆದರಣೀಯವೂ ಆದ ಅಂಶವೆಂಬುದನ್ನು ಮರೆಯಬಾರದು'' (ಎನ್.ಎಸ್.ವೀರಪ್ಪ,1984). ಆತ್ಮ ಸಂಯಮ ಎಂಬುದು ವ್ಯಕ್ತಿ ಮತ್ತು ಸಮಾಜ ಜೀವನದ ತಳಹದಿ ಎಂಬುದು ಇದರಿಂದ ಗೊತ್ತಾಗುತ್ತದೆ. '' ಅಂದಿನ ಶಿಕ್ಷಣಾರ್ಥಿಗಳು ಹೊಟ್ಟೆ ತುಂಬ ಊಟ ಮಾಡಲು ಯಾವ ತೊಡಕುಗಳೂ ಇರಲಿಲ್ಲ . ಆದರೆ ಅದು ಸಾತ್ವಿಕ ಆಹಾರವಾಗಬೇಕಿತ್ತು. ಮೈತುಂಬ ಉಡುಪು ಧರಿಸಲು ಅಡ್ಡಿಯೇನಿರಲಿಲ್ಲ, ಮನರಂಜನೆಯನ್ನೇನೂ ನಿಷೇಧಿಸಿರಲಿಲ್ಲ. ಆದರೆ ಅದು ಕ್ಷುಲ್ಲಕ ರೀತಿಯದಾಗಿರಲಿಲ್ಲ''. ವಿದ್ಯಾರ್ಥಿಗಳಿಗೆ ಆತ್ಮ ನಿಯಂತ್ರಣದ ಕಠಿಣ ಸಾಧನೆಗೆ ಇಂಥ ನಿರ್ಧಾರಗಳು ಅಗತ್ಯವಾಗಿದ್ದವು . ಕಾರಣ ಅಂದಿನ ಗುರುಗಳ ಆದರ್ಶಗಳು , ಸಚ್ಚಾರಿತ್ರ್ಯಗಳು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುತ್ತಿದ್ದವು . ಪ್ರಾಚೀನ ಭಾರತದಲ್ಲಿಯ ಶಿಕ್ಷಣ ಜನ ಜೀವನಕ್ಕೆ ಮತ್ತು ಸಾಂಸ್ಕೃತಿಕ ಪರಂಪರೆಯ ಉಳಿವಿಗೆ ಒತ್ತು ನೀಡಿತ್ತು. ಆದರೆ ಆಗ ಅನ್ಯದೇಶೀಯರ ಸಂಪರ್ಕವಿರಲಿಲ್ಲ. ಅಕ್ಷರಜ್ಞಾನ 'ಸರ್ವರಿಗೂ' ಅಲ್ಲ ಎಂಬುದು ಆಗಿನ ಕಾಲದಲ್ಲಿ ಬಲವಾದ ನಂಬಿಕೆಯಾಗಿತ್ತು. ಅಂದಿನ ಶಿಕ್ಷಣ

'ವರ್ಗ' ಪ್ರಧಾನವಾಗಿತ್ತು. ಶಿಕ್ಷಣ ಕೇವಲ ಮೇಲು ಜಾತಿಯ ಜನರಿಗೆ ಮತ್ತು ಸಮಾಜದ ಪ್ರತಿಷ್ಠಿತವರ್ಗದವರಿಗೆ ಎಂಬ ಭಾವನೆ ಬಲವಾಗಿ ಬೇರೂರಿತ್ತು. ಈಗಿನಂತೆ ಸಮೂಹ ಶಿಕ್ಷಣವಾಗಿರಲಿಲ್ಲ. ಸಾಂಸ್ಕೃತಿಕವಾಗಿ ರೂಢವಾಗಿದ್ದ ಜಾತಿ ಪದ್ಧತಿ ಶಿಕ್ಷಣದ ಅವಕಾಶಗಳನ್ನು ನಿಯಂತ್ರಿಸುತ್ತಿತ್ತು. ಕೆಳಜಾತಿಗಳ, ಕೆಳವರ್ಗಗಳ ಜನ ತಮ್ಮ ಕುಲ ಕಸಬುಗಳನ್ನು ಪರಂಪರಾಗತವಾಗಿ ಕಲಿಯುತ್ತಿದ್ದರಾದರೂ ಅವರು ಶ್ರೇಣೀಕೃತವಾದ ಸಮಾಜದ ನಿರ್ಬಂಧನೆಗಳಿಂದಾಗಿ ಅಕ್ಷರ ಜ್ಞಾನ ಗಳಿಸಲು ಸಾಧ್ಯವಾಗುತ್ತಿರಲಿಲ್ಲ. ಆ ಕಾಲದ ಶಿಕ್ಷಣ ಇಂದಿನ ಶಿಕ್ಷಣದಂತೆ ಲೌಕಿಕವೂ ಮತ ನಿರಪೇಕ್ಷವೂ ಆಗಿರಲಿಲ್ಲ. ಅದು ಪ್ರಧಾನವಾಗಿ ಆಧ್ಯಾತ್ಮಿಕ ಅಥವಾ ಪಾರಮಾರ್ಥಿಕ ಶಿಕ್ಷಣವಾಗಿತ್ತು. ಹೀಗಾಗಿ ದೇಶೀಯ ಶಿಕ್ಷಣ ಆಗ ಸಂಪ್ರದಾಯಬದ್ಧವಾಗಿತ್ತು.

ಶಿಕ್ಷಣ ಇಂದು ವ್ಯಕ್ತಿಯ ಮೂಲಭೂತ ಹಕ್ಕಾಗಿದೆ. ಎಲ್ಲರಿಗೂ ಶಿಕ್ಷಣ ಎಂಬ ಘೋಷಣೆ ಈಗ ಪ್ರಚಲಿತದಲ್ಲಿದೆ. ಶಿಕ್ಷಣವನ್ನು ಶೀಘ್ರಗತಿಯಲ್ಲಿ ಸಾರ್ವತ್ರೀಕರಣಗೊಳಿಸಬೇಕಾಗಿದೆ. ಇಲ್ಲದಿದ್ದರೆ ಸಾಮುದಾಯಿಕ ಅಭಿವೃದ್ಧಿ ಹಾಗೂ ರಾಷ್ಟ್ರ ನಿರ್ಮಾಣ ಕಾರ್ಯ ಹಿಂದೆ ಬೀಳಬಹುದು. ಇದು ಎಲ್ಲರ ನಂಬಿಕೆಯಾಗಿದೆ. ಹಿಂದೆ ಈ ರೀತಿಯ ಕಲ್ಪನೆ ಜನರಲ್ಲಿ ಇರಲಿಲ್ಲ. ಔಪಚಾರಿಕ ಶಿಕ್ಷಣ ಎಲ್ಲರಿಗಲ್ಲ ಎಂಬ ಭಾವನೆ ಆಗಿನ ಕಾಲದಲ್ಲಿತ್ತು. ಕೆಲವೇ ಪಟ್ಟಭದ್ರಹಿತಾಸಕ್ತಿಗಳ ಪರವಾಗಿ 'ಶಿಕ್ಷಣ' ಬೇರೂರಿತ್ತು. ಸಮಾಜದ ಕೆಳಸ್ತರದ ಜನರಿಗೆ ಸುಲಭವಾಗಿ ದಕ್ಕದ ಸ್ಥಿತಿಯಲ್ಲಿ ಶಿಕ್ಷಣ ವ್ಯವಸ್ಥೆ ರೂಪುಗೊಂಡಿತ್ತು. ಶ್ರೇಣೀಕೃತ ಸಮಾಜದ ನಿರ್ಬಂಧನೆಗಳಿಂದಾಗಿ ಅಕ್ಷರಜ್ಞಾನ ಗಳಿಸಲು ಸಾಮಾನ್ಯ ಜನರಿಗೆ ಸಾಧ್ಯವಾಗಿರಲಿಲ್ಲ. ಅಂದಿನ ಶಿಕ್ಷಣ ಪ್ರಧಾನವಾಗಿ ಆಧ್ಯಾತ್ಮಿಕ ಅಥವಾ ಪಾರಮಾರ್ಥಿಕವಾಗಿತ್ತು. ಇಂದಿನಂತೆ ಲೌಕಿಕವೂ ಮತ್ತು ಮತ ನಿರಪೇಕ್ಷೆಯೂ ಆಗಿರಲಿಲ್ಲ. ಬ್ರಿಟಿಷರು ಭಾರತದಲ್ಲಿ 'ಶಿಕ್ಷಣ'ಕ್ಕೆ ಆದ್ಯತೆಯನ್ನು ನೀಡಿದರು. ಅವರು ಭಾರತಕ್ಕೆ ಕಾಲಿಟ್ಟಾಗಲೇ 'ಶಿಕ್ಷಣ' ವ್ಯವಸ್ಥೆಯನ್ನು ಬದಲಿಸುವ ಯೋಚನೆ ಮಾಡಿದರು. ಆಗಲೇ ದೇಶದಲ್ಲಿ ನೂರಾರು ದೇಶೀಯ ಶಾಲೆಗಳು ಅಸ್ತಿತ್ವದಲ್ಲಿದ್ದವು. ಆಗ 'ಪಾಠ ಶಾಲೆಗಳು' ಮತ್ತು 'ಮದ್ರಸಾಗಳು' ಉನ್ನತ ಶಿಕ್ಷಣ ಕೇಂದ್ರಗಳಾಗಿದ್ದವು. ''ಪಂಡಿತರು , ವೈದ್ಯರು ಹಾಗೂ ಮೌಲ್ವಿಗಳನ್ನು ರೂಪಿಸುವುದೇ ಈ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಶಿಕ್ಷಣ ಸಂಸ್ಥೆಗಳ ಉದ್ದೇಶವಾಗಿತ್ತು. ಪ್ರಾಚೀನ 'ಸಂಸ್ಕೃತಿಯ' ಉಳಿಯುವಿಕೆಗಾಗಿ ಈ ಸಂಸ್ಥೆಗಳು ಶ್ರಮಿಸುತ್ತಿದ್ದವು. ಶಾಲೆಯ ಕಲಿಕಾಕೇಂದ್ರಗಳು ದೇವಾಲಯ ಹಾಗೂ ಮಸೀದಿಗಳಾಗಿದ್ದವು. ಮೇಲು ವರ್ಗದ ಜನರಿಗೆ ಮಾತ್ರ ಇಲ್ಲಿ ಪ್ರವೇಶಾವಕಾಶ ವಿತ್ತು. ಅದೇ ರೀತಿ ಕೆಳಜಾತಿಯವರಿಗೆ ಮತ್ತು ಹೆಣ್ಣು ಮಕ್ಕಳಿಗೆ ಶಾಲೆಗೆ ಪ್ರವೇಶವಿರಲಿಲ್ಲ. ಪಂಡಿತರೇ 'ಆಚಾರ್ಯ'ರಾಗಿ' ಕೆಲಸ ಮಾಡುತ್ತಿದ್ದರು''(ಎನ್.ಎಸ್.ವೀರಪ್ಪ,1984,ಪು.10). ಈ ಮೇಲಿನ ಶಾಲೆಗಳನ್ನು ನಡೆಸಲು ರಾಜ-ಮಹಾ ರಾಜರು ಈ ಕೇಂದ್ರಗಳಿಗೆ ದಾನ ದತ್ತಿಗಳನ್ನು ನೀಡುತ್ತಿದ್ದರು. ಕ್ರಮೇಣ ಪರ್ಷಿಯನ್ ಶಾಲೆಗಳು ಹಾಗೂ ಪ್ರಾದೇಶಿಕ 'ಭಾಷೆ ಶಾಲೆಗಳು' ಪ್ರಾಥಮಿಕ ಶಿಕ್ಷಣ ಒದಗಿಸುತ್ತಿದ್ದವು. ಹಿಂದೆ ಸ್ವತಂತ್ರವಾದ ಕಟ್ಟಡಗಳಾಗಲಿ, ಶಾಲೆಗಾಗಿ ನಿವೇಶನಗಳಾಗಲಿ ಇರುತ್ತಿರಲಿಲ್ಲ. ಆ ಕಾರಣ ಶಾಲೆಗಳು ಮರದ ಕೆಳಗೆ ನಡೆಯುತ್ತಿದ್ದವು. ಇದು ಒಂದು ರೀತಿಯ ಮಕ್ಕಳ ಕಲಿಕೆಗೆ ಉತ್ತಮ ವಾತಾವರಣ ನಿರ್ಮಿಸಿತ್ತು ಎಂದು ಹೇಳಬಹುದು. ಇತ್ತೀಚಿಗೆ ಪರಿಸರ ಪ್ರಜ್ಞೆಯ ಬಗ್ಗೆ ಸಾಕಷ್ಟು ಮಾತುಗಳು ಕೇಳಿಬರುತ್ತಿವೆ. ಅಂದಿನ ದಿನಗಳಲ್ಲಿ ವಿದ್ಯೆಯ ಮುಕ್ತ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಮಕ್ಕಳಲ್ಲಿ ಪರಿಸರಪ್ರಜ್ಞೆ ಸಹಜವಾಗಿಯೇ ಮೂಡುತ್ತಿತ್ತು ಎಂಬುದನ್ನು ಗಮನಿಸಬಹುದು.

ಅಲ್ಲಿನ ಗುರುಗಳು ಐದು ರೂಪಾಯಿಗಳನ್ನು ಸಂಪಾದಿಸುತ್ತಿದ್ದರು. ಕೆಲವು ಬಾರಿ ಮಕ್ಕಳ ತಂದೆ-ತಾಯಂದಿರು ಎಷ್ಟು ಕೊಡುತ್ತಿದ್ದರೋ ಅಷ್ಟನ್ನೇ ಪಡೆದು ತೃಪ್ತಿಪಡುತ್ತಿದ್ದರು. ಶ್ರೀಮಂತರು, ಊರಿನ ಜಮಿನ್ದಾರರು ಮನೆಗೆ ಶಿಕ್ಷಕರನ್ನು ಕರೆಯಿಸಿಕೊಂಡು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸಕೊಡಿಸುತ್ತಿದ್ದರು. ಈ ಪದ್ಧತಿ ಅಂದಿನ ಜನರಲ್ಲಿ ಸಮುದಾಯ ಭಾಗವಹಿಸುವ ಕ್ರಿಯೆಗೆ ಆದ್ಯತೆ ನೀಡಿದ್ದರು ಎಂಬುದು ಗೊತ್ತಾಗುತ್ತದೆ. ಓದು, ಬರಹ, ಲೆಕ್ಕದ ಜೊತೆಗೆ ನೀತಿ ಪಾಠವನ್ನು ಕಲಿಸಲಾಗತ್ತಿತ್ತು. ಈ ಮೂಲಕ ಮಕ್ಕಳಲ್ಲಿಯೂ ನೈತಿಕ ಮೌಲ್ಯಗಳನ್ನು ಬೆಳೆಸಲಾಗುತ್ತಿತ್ತು. ಆಗ ಈಗಿನಂತೆ 6 ರಿಂದ 11 ರವರೆಗೆ ಎಂಬ ವಯಸ್ಸಿನ ಬಂಧನ ಇರಲಿಲ್ಲ. ನಾಲ್ಕರಿಂದ ಆರು ವಯಸ್ಸಿನ ಮಕ್ಕಳು ಶಾಲೆಗೆ ಸೇರಬಹುದಾಗಿತ್ತು. ಯಾವುದೇ ಬಂಧವಿರಲಿಲ್ಲ. ಕಲಿಯ ಬೇಕಾದ ಎಲ್ಲಾ ವಿಷಯಗಳನ್ನು ಕಲಿತು ಶಾಲೆ ಬಿಡಬಹುದಾದಷ್ಟು ಸ್ವಾತಂತ್ರ್ಯವಿತ್ತು. ಮಕ್ಕಳಿಗೆ ಅನುಕೂಲವಾಗುವಂತೆ ಶಾಲೆ ವೇಳೆಯನ್ನು ಹೊಂದಿಕೆ ಮಾಡಿಕೊಳ್ಳಲಾಗುತ್ತಿತ್ತು. ಶಿಕ್ಷರಿಗೆ ಆಗ ಯಾವ ತರಬೇತಿಗಳೂ ಇರಲಿಲ್ಲ. ಒಬ್ಬ ಶಿಕ್ಷಕನು ಹತ್ತರಿಂದ ಇಪ್ಪತ್ತು ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದನು. ಸಮುದಾಯದ ನೇರ ಭಾಗಿತ್ವ ಈ ವ್ಯವಸ್ಥೆಯಲ್ಲಿ ದೊರಕಿತ್ತು. ಕಾರಣ ಸರಕಾರದಿಂದ ಯಾವುದೇ ಧನ ಸಹಾಯ ಈ ಶಾಲೆಗಳಿಗೆ ಇರಲಿಲ್ಲ. ಊರಿನ ಶ್ರೀಮಂತರು; ಜಮೀನ್ದಾರರು; ದಾನಿಗಳು ನೆರವು ನೀಡುತ್ತಿದ್ದರು. ಅನೇಕ ಹಳ್ಳಿಗಳಲ್ಲಿ ಶಾಲೆಗಳಿದ್ದರೂ ಕೇವಲ ಮೇಲು ವರ್ಗದವರಿಗೆ ಮಾತ್ರ ಶಿಕ್ಷಣ ಎಂಬ ಕಲ್ಪನೆ ಜನರಲ್ಲಿತ್ತು. ಪರಿಶಿಷ್ಟಜಾತಿ/ ಪರಿಶಿಷ್ಟ ಪಂಗಡದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣ ದೂರವಾಗಿತ್ತು. ಸಾರಿಗೆ ಸಂಪರ್ಕ, ಅಂಚೆ ಸಂಪರ್ಕ, ವಾಹನ ಸೌಕರ್ಯ ವೃತ್ತಪತ್ರಿಕೆಗಳು ಇದ್ಯಾವುದೂ ಇಲ್ಲದ ಸಂದರ್ಭವದು. ಆಗಿನ ರಾಷ್ಟ್ರೀಯ ಸಾಕ್ಷರತಾ ಪ್ರಮಾಣ ಶೇ.6 ರಿಂದ 6 ರೊಳಗೆ ಇತ್ತು. ಅನಕ್ಷರಸ್ಥರೆ ತುಂಬಿದ್ದ ಈ ದೇಶದಲ್ಲಿ ಸಾರ್ವತ್ರಿಕ ಶಿಕ್ಷಣದ ಬಗ್ಗೆ ಅರಿವೇ ಇರಲಿಲ್ಲ. ಶಿಕ್ಷಣದ ಮಹತ್ವ ಕೇವಲ ಕೆಲವರ ಸ್ವತ್ತು ಎಂಬಂತಹ ಭಾವನೆ ಜನರಲ್ಲಿ ಮೂಡಿತ್ತು. ಹಾಗಾಗಿ ಎಲ್ಲರಿಗೂ ಶಿಕ್ಷಣದ ಅಗತ್ಯತೆ ಕಂಡು ಬರಲಿಲ್ಲ.

2.2. ಭಾರತದಲ್ಲಿ ಆಧುನಿಕ ಶಿಕ್ಷಣ :

ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯೂ ಸಾಂಪ್ರದಾಯಿಕವಾಗಿತ್ತು. ಆಧುನಿಕ ದೃಷ್ಟಿಕೋನದಲ್ಲಿ ಬೆಳೆಯ ಬೇಕಾಗಿದ್ದ ಭಾರತಕ್ಕೆ ಹೊಸ ಶಿಕ್ಷಣದ ವ್ಯವಸ್ಥೆ ಅಗತ್ಯವಾಗಿತ್ತು. ಬ್ರಿಟೀಷರು ದೇಶದಲ್ಲಿ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ಅದಕ್ಕೊಂದು ಹೊಸ ಸ್ವರೂಪ ಬಂದಿತು. ಬ್ರಿಟೀಷರು ಹೊಸ ಹೊಸ ಕಾಯಿದೆಗಳನ್ನು ರೂಪಿಸಿ ಶಿಕ್ಷಣವನ್ನು ಜಾರಿಗೊಳಿಸಿದರು. ಇದರಿಂದ ಭಾರತದಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆಗೆ ಚಾಲನೆ ದೊರಕಿದಂತಾಯಿತು.

ಭಾರತದಲ್ಲಿ ಆಧುನಿಕ ಶಿಕ್ಷಣವು 1813 ರಿಂದಲೇ ಜಾರಿಯಾಯಿತು ಎನ್ನಬಹುದು. ಇದಕ್ಕೆ ಕಾರಣ 1813ರ ಅನುದಾನ ಕಾಯ್ದೆ. ಭಾರತದಲ್ಲಿ ಪ್ರತಿವರ್ಷ ಒಂದು ಲಕ್ಷರೂಪಾಯಿ ಶಿಕ್ಷಣಕ್ಕೆ ವೆಚ್ಚ ಮಾಡಬೇಕೆಂದು, ಬ್ರಿಟಿಷ್ ಪಾರ್ಲಿಮೆಂಟ್ ಈಸ್ಟ್ ಇಂಡಿಯಾ ಕಂಪನಿಗೆ ನಿರ್ದೇಶನ ನೀಡಿತು. ಆದರೆ ಕಂಪನಿಯು ಕೊರತೆ ಆಯ-ವ್ಯಯ ನೆಪವೊಡ್ಡಿ ಅದರ ಜವಾಬ್ದಾರಿಯನ್ನು ಹೊತ್ತುಕೊಳ್ಳಲಿಲ್ಲ. ಹತ್ತು ವರ್ಷಗಳನಂತರ 1823 ರಲ್ಲಿ ವಾರ್ಷಿಕ 10 ಲಕ್ಷರೂಪಾಯಿ ಮೊತ್ತವನ್ನು ನಿಗದಿಗೊಳಿಸಿದನಂತರ ಬ್ರಿಟಿಷ್ ಪಾರ್ಲಿಮೆಂಟಿನ ನಿರ್ದೇಶವನ್ನು ಜಾರಿಗೊಳಿಸಲಾಯಿತು.

ಲಾರ್ಡ್‌ಮೆಕಾಲೆ ಕಾಲದಲ್ಲಿ ಶಿಕ್ಷಣದಲ್ಲಿ ಗೊಂದಲವುಂಟಾಯಿತು. ತಲೆತುಂಬ ತನ್ನ ದೇಶದ ಯೋಚನೆಗಳನ್ನು ಇಟ್ಟುಕೊಂಡಿದ್ದ ಲಾರ್ಡ್‌ಮೆಕಾಲೆ ದೇಶೀಯ ಶಿಕ್ಷಣ ಮತ್ತು ಪೌರಾತ್ಯ ಶಿಕ್ಷಣ ಕ್ರಮವನ್ನು ಖಂಡಿಸಿದ್ದಲ್ಲದೇ, ಕೆಲವರಿಗೆ ಮಾತ್ರ ಶಿಕ್ಷಣ ನೀಡಬೇಕು, ಎಂಬ ನೀತಿಯನ್ವಯ ಆಂಗ್ಲ ವಿದ್ಯೆಗಳಿಸಿದವರಿಗೆ ಉದ್ಯೋಗ ಎಂಬ ವಾದ ಮಂಡಿಸಿದ. ಹೀಗಾಗಿ ದೇಶದ ಶಿಕ್ಷಣ ಕ್ಷೇತ್ರದಲ್ಲಿ ಗೊಂದಲಮಯ ವಾತಾವರಣ ನಿರ್ಮಾಣವಾಯಿತು. ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ಶಿಕ್ಷಣ ಅಬಿವೃದ್ಧಿಯನ್ನು ಕೈಗೊಳ್ಳಲು ನಿಧಾನಗತಿ ಅನುಸರಿಸಿತು. ಆದರೂ ಚಾರ್ಲ್ಸ್‌ವುಡ್ ರವರು ಜವಾಬ್ದಾರಿ ವಹಿಸಿಕೊಂಡ ಮೇಲೆ ಶಿಕ್ಷಣ ಪ್ರಕ್ರಿಯೆಗೆ ಉತ್ತಮ ಚಾಲನೆ ದೊರೆಯಿತು.

2.3. 1854ರ ಚಾರ್ಲ್ಸ್‌ವುಡ್‌ರ ಪ್ರಪತ್ರ :

ವುಡ್‌ರ ಪ್ರಪತ್ರವನ್ನು ''ಭಾರತದಲ್ಲಿ ಶಿಕ್ಷಣ ಪ್ರಸಾರದ ಮಹಾಸನ್ನದು'' ಎನ್ನಲಾಗಿದೆ. ಭಾರತದಲ್ಲಿ ಸಮೂಹ ಶಿಕ್ಷಣವನ್ನು ಕಡೆಗಣಿಸಿದ ಬಗ್ಗೆ ಸರಕಾರಕ್ಕೆ ಪತ್ರ ಬರೆದು ಅದರ ಪ್ರಸಾರಕ್ಕಾಗಿ ವ್ಯಾಪಕ ಕ್ರಮ ಕೈಗೊಳ್ಳುವ ಬಗ್ಗೆ ಒತ್ತಾಯಿಸಿತು. ಅಲ್ಲದೆ ದೇಶೀಯ ಶಿಕ್ಷಣ ಶಾಲೆಗಳು ಸೊರಗುವುದನ್ನು ತಡೆಗಟ್ಟಿ ಅವುಗಳನ್ನು ಬಲಪಡಿಸುವ ಬಗ್ಗೆ ತಿಳಿಸಿದ್ದಲ್ಲದೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಹೇಳಿತು. ಇಂಗ್ಲಿಷ್ ಭಾಷೆ ಮತ್ತು ದೇಶೀಯ ಭಾಷಾ ಮಾಧ್ಯಮದ ತರಗತಿಗಳಿರಬೇಕು ಎಂದು ವುಡ್ಸ್ ಪ್ರಪತ್ರದಲ್ಲಿ ಶಿಫಾರಸ್ಸು ಮಾಡಿತು. ಇದರಿಂದ ಪ್ರಾದೇಶಿಕ ಭಾಷೆಗಳಿಗೆ ಉತ್ತೇಜನ ನೀಡಲು ಅವಕಾಶವಾದಂತಾಯಿತು.

1854 ರ ವುಡ್ಸ್ ಪ್ರಪತ್ರದನ್ವಯ 1855 ರಲ್ಲಿ ಶಿಕ್ಷಣ ಇಲಾಖೆಗಳನ್ನು ಪ್ರಾರಂಭಿಸಲಾಯಿತು. ದೇಶದಲ್ಲಿ ಪ್ರಥಮ ಬಾರಿಗೆ ಶಾಲೆಗಳಿಗೆ ಸರಕಾರದಿಂದ ಅನುದಾನ ಕೊಡುವ ವ್ಯವಸ್ಥೆ ಜಾರಿಯಾಯಿತು. ಇಂಗ್ಲಿಷ್ ಭಾಷೆ ಮತ್ತು ಹೊಸ ಹೊಸ ವಿಷಯಗಳನ್ನು ಕಲಿಸುವ ಶಾಲೆಗಳನ್ನು ತೆರೆಯಲಾಯಿತು. ಶಾಲೆಗಳು ಗುಣಾತ್ಮಕ ವಾಗಿರಬೇಕು. 'ದಕ್ಷತೆ'ಯನ್ನು ಕಾಪಾಡಬೇಕು ಎಂಬ ಕಟ್ಟುನಿಟ್ಟಿನ ಅನುಸರಣೆ ಮಾಡಬೇಕಾಗಿದ್ದರಿಂದ 1854 ರಿಂದ 1900ರ ಅವಧಿಯಲ್ಲಿ ದೇಶೀಯ ಶಾಲೆಗಳು ಕಡಿಮೆ ಯಾಗ ತೊಡಗಿದವು.

2.4. ಹಂಟರ್ ಆಯೋಗ (1882) :

ವುಡ್ ವರದಿಯು ಅನೇಕ ಶಿಫಾರಸ್ಸುಗಳನ್ನು ಜಾರಿಗೊಳಿಸಿತು. ಆದರೂ ಅದು ಜಾರಿಗೊಳಿಸಿದ ಎಲ್ಲಾ ಶಿಫಾರಸ್ಸುಗಳು ಅನುಷ್ಠಾನಗೊಳ್ಳಲಿಲ್ಲ. ಈ ಹಿನ್ನೆಲೆಯಲ್ಲಿ ಅನುಷ್ಠಾನದ ಅವಧಿಯಲ್ಲಿ ಕಂಡು ಬಂದ ಲೋಪದೋಷಗಳನ್ನು ಸುಧಾರಿಸಲು ನಂತರ ಬಂದ ಹಂಟರ್ ಅವರ ಅಧ್ಯಕ್ಷತೆಯಲ್ಲಿ ಆಯೋಗ ರಚನೆಯಾಯಿತು. ಈ ಆಯೋಗವು ದೇಶದಲ್ಲಿ ಈ ಹಿಂದಿನ ಲೋಪದೋಷಗಳನ್ನು ಸರಿಪಡಿಸಿಕೊಂಡು; ಈ ದೇಶಕ್ಕೆ ಸರಿಹೊಂದುವಂತಹ ಶಿಕ್ಷಣದ ಕಾರ್ಯಕ್ರಮಗಳನ್ನು ರೂಪಿಸುವ ಕೆಲಸವನ್ನು ಕೈಗೆತ್ತಿಕೊಂಡಿತು. ಅದರ ಒಂದು ನೋಟವನ್ನು ಈ ಕೆಳಗಿನಂತೆ ವಿವರಿಸಿದೆ.

ಹಂಟರ್ ಆಯೋಗ ನೇಮಕದ ಬಗ್ಗೆ ''ಪ್ರಾಥಮಿಕ ಶಿಕ್ಷಣದ ಸ್ಥಿತಿಗಳನ್ನು ಪರಿಶೀಲಿಸಿ, ಆ ಹಂತದ ಶಿಕ್ಷಣದ ಸುಧಾರಣೆಗಾಗಿ ನಿರ್ಧಿಷ್ಟ ಖಚಿತ ಸಲಹೆ ಸೂಚನೆಗಳನ್ನು ನೀಡಬೇಕೆಂದು ಬ್ರಿಟಿಷ್ ಸರಕಾರ ಹಂಟರ್ ಆಯೋಗವನ್ನು 1882 ರಲ್ಲಿ ನೇಮಕ ಮಾಡಿತು''(ಮಹಬಲೇಶ್ವರರಾವ್,1999,ಪು.15). ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರದ ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಆ ಆಯೋಗವು ಹಲವಾರು ಶಿಪಾರಸ್ಸುಗಳನ್ನು ಮಾಡಿತು. ಪ್ರಾಥಮಿಕ ಶಿಕ್ಷಣಕ್ಕೆ ಅದು 'ಕಡ್ಡಾಯ' ಒತ್ತು ನೀಡಲಿಲ್ಲ. ಆಗ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಜಿಲ್ಲಾ ಬೋರ್ಡ್‌ಗಳಿಗೆ, ಪುರಸಭೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ವಹಿಸುವ ಬಗ್ಗೆ ಆಯೋಗ ಶಿಫಾರಸ್ಸು ಮಾಡಿತು. ಆದರೆ ಸಂಗ್ರಹಿಸಿದ ತೆರಿಗೆಯಲ್ಲಿ, ತೆರಿಗೆಯ ಒಂದು ಭಾಗವನ್ನು ಮಾತ್ರ ಪ್ರಾಥಮಿಕ ಶಿಕ್ಷಣಕ್ಕೆ ಬಳಸಬೇಕು ಎಂದು ಸೂಚಿಸಿತು. ಬ್ರಿಟಿಷ್ ಸರಕಾರ ಈ ಬಗ್ಗೆ ಹೆಚ್ಚು ಕಾಳಜಿವಹಿಸಲಿಲ್ಲ. ಅನುದಾನವನ್ನೂ ನೀಡಲಿಲ್ಲ. ಪ್ರಾಥಮಿಕ ಶಿಕ್ಷಣ ಮತ್ತೆ ಹಿಂದೆ ಬೀಳಬೇಕಾಯಿತು. ಈ ಮೇಲಿನ ವ್ಯವಸ್ಥೆ ಅಧಿಕಾರ ವಿಕೇಂದ್ರೀಕರಣದ ಒಂದು ಭಾಗವಾಗಿ ಶಾಲೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸುವ ಕುರಿತು ಆಯೋಗ ಮಾಡಿದ ಶಿಫಾರಸ್ಸು ಸಮುದಾಯ ತೊಡಗಿಸಿಕೊಳ್ಳುವುದಕ್ಕೆ ನಾಂದಿಯಾಯಿತೆಂದು ಹೇಳಬಹುದು.

2.5. ಶಿಕ್ಷಣದ ಆಂದೋಲನ (1902 -1918) :

ಹಂಟರ್ ಆಯೋಗ ಮಾಡಿದ ಅನೇಕ ಶಿಫಾರಸ್ಸುಗಳು ಫಲಪ್ರದವಾಗದ ಕಾರಣ 1902ರ ನಂತರ ಶೈಕ್ಷಣಿಕ ರಂಗದಲ್ಲಿ ಒಂದು ಹೊಸ ಆಲೋಚನೆ ಪ್ರಾರಂಭವಾಯಿತು. ಶಿಕ್ಷಣದ ಬಗ್ಗೆ ಹೊಸ ಒಲವು ಮೂಡತೊಡಗಿತು. ಭಾರತದಲ್ಲಿ 'ಶಿಕ್ಷಣ'ದ ಬೇಡಿಕೆ ಹೆಚ್ಚತೊಡಗಿತು. ಈ ಹಿಂದಿನ ಪ್ರಯತ್ನಗಳು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಹೆಚ್ಚು ಒತ್ತು ನೀಡದಿದ್ದುದರಿಂದ ಇದಕ್ಕೆ ಹಿನ್ನೆಡೆ ಉಂಟಾಯಿತು. ಜನತೆಗೆ ಅದೊಂದು ಮಹತ್ವಕಾಂಕ್ಷಿಯಾಗಿತ್ತು. 'ಶಿಕ್ಷಣ ಒದಗಿಸಿ' ಎಂಬ ಚಳುವಳಿಗಳು ಹುಟ್ಟಿಕೊಂಡು ಮುಂದುವರಿಯುತ್ತಲೇ ಬಂದವು. ದೇಶದ ಬಗೆಗಿನ ಅಭಿಮಾನದಿಂದಾಗಿ ಜನ ಜಾಗೃತಿಗೊಂಡ ಕಾಲವದು. ಪಾಶ್ಚಿಮಾತ್ಯರ ವಿದ್ಯೆಯ ಪ್ರಭಾವದಿಂದ ಇಪ್ಪತ್ತನೇ ಶತಮಾನದ ಆದಿಯಲ್ಲಿ ಇಂಥ ಚಳುವಳಿಗಳು ತೀವ್ರಗೊಂಡವು. 1870 ರಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಮಸೂದೆ ಅಂಗೀಕೃತವಾಯಿತು . ಮುಂದಿನ

ಹದಿನೆಂಟು ವರ್ಷಗಳ ಅವಧಿಯಲ್ಲಿ ಇಂಗ್ಲೆಂಡಿನ ವಿವಿಧ ಭಾಗಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕುರಿತು ಕಾಯ್ದೆಗಳುಜಾರಿಗೆ ಬಂದವು. ಭಾರತದಲ್ಲಿಯೂ ಸಹ ಪ್ರಾಥಮಿಕ ಶಿಕ್ಷಣದ ಪರವಾಗಿ ಆಂದೋಲನಕಾರರಿಗೆ ಬೆಂಬಲ ದೊರಕಿದಂತಾಯಿತು. ಶೈಕ್ಷಣಿಕ ಮಹತ್ವ ಜನರಲ್ಲಿ ಬದಲಾವಣೆಯ ಗಾಳಿಯನ್ನು ಬೀಸಿತು. ರೂಢ ಮೂಲವಾದ ಕೆಲವೊಂದು ಆಚರಣೆಗಳು ಕೂಡ ಮಾಯವಾಗ ತೊಡಗಿದವು . ಹೀಗೆ 1870 ರಿಂದ 1900 ಅವಧಿಯಲ್ಲಿ ಶಿಕ್ಷಣದ ಬಗೆಗಿನ ಬೇಡಿಕೆ ಹೆಚ್ಚು ಗಟ್ಟಿಯಾಗತೊಡಗಿತು.

ಭಾರತೀಯರಿಗೆ ಶಾಲಾ ಶಿಕ್ಷಣವನ್ನು ಒದಗಿಸಬೇಕೆಂದು ಒತ್ತಾಯಮಾಡಿ ದಾದಾಭಾಯಿ ನವರೋಜಿಯವರು ''ಬ್ರಿಟನ್ನಿನಲ್ಲಿ ಪ್ರತಿ ಏಳು ಜನರಲ್ಲಿ ಒಬ್ಬರು ಸಾಕ್ಷರರಾದರೆ ಭಾರತದಲ್ಲಿ ಪ್ರತಿ 114 ಮಂದಿಯಲ್ಲಿ ಒಬ್ಬರು ಮಾತ್ರ ಸಾಕ್ಷರರು 25 ಮಿಲಿಯ ಜನ ಅಜ್ಞಾನ ದಲ್ಲೇ ತೊಳಲಾಡುತ್ತಿದ್ದಾರೆ''. ಎಂದು ವಾದಿಸಿದರು. ಆದರೆ ಬ್ರಿಟಿಷ್ ಸರಕಾರ ಈ ಬಗೆಯ ಬೇಡಿಕೆಗಳಿಗೆ ಬೆಲೆ ಕೊಡದಿದ್ದಾಗ (ಮಹಬಲೇಶ್ವರರಾವ್,1999,ಪು.17) ನವರೋಜಿಯವರು ಬ್ರಿಟಿಷರ ನಿರ್ಲಕ್ಷ್ಯವನ್ನು 'ದುರಂತ ಕಥೆ' ಎಂದು ಬಣ್ಣಿಸಿದರು ಮತ್ತು ಬ್ರಿಟಿಷರ ವರ್ತನೆಯನ್ನು ಖಂಡಿಸಿದರು.

ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಯಾದದ್ದು ಬರೋಡೆಯ ಮಹಾರಾಜ ಗಾಯಕ್‌ವಾಡ ಅವರ ಸಂಸ್ಥಾನದಲ್ಲಿ. ಅವರು ಅಮ್ರೇಲಿ ಮಹಲ್ ಎಂಬಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದರು. ನಂತರ ಅವರು 1906ರಲ್ಲಿ ಇಡೀ ತಮ್ಮ ಸಂಸ್ಥಾನದ ಎಲ್ಲಾ ಪ್ರದೇಶಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತಂದರು. ಇದರಿಂದ ರಾಷ್ಟ್ರೀಯವಾದಿಗಳ ಬೇಡಿಕೆಗೆ ಇನ್ನಷ್ಟು ಬಲಬಂದಂತಾಯಿತು. ಗಾಯಕವಾಡ್ ಮಹಾರಾಜರ ಸ್ವಯಂ ಸ್ಪೂರ್ತಿ ಕೆಲಸಗಳಿಂದ ಆಂದೋಲನಕಾರರಲ್ಲಿ ಆತ್ಮ ವಿಶ್ವಾಸವೂ ಮೂಡಿತು. ನಂತರ ಗೋಪಾಲ ಕೃಷ್ಣ ಗೋಖಲೆಯವರು 1866-1915 ರಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಕಡ್ಡಾಯಗೊಳಿಸಲು ಒತ್ತಾಯಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲು ಕೇಂದ್ರೀಯ ಶಾಸನದಲ್ಲಿ ಠರಾವನ್ನು ಮಂಡಿಸಿದರು. ಈ ಠರಾವು ಬ್ರಿಟೀಷರಿಗೆ ಮುಳುವಾಯಿತು. ಬ್ರಿಟೀಷ್ ಸರ್ಕಾರ ಇದನ್ನು ಸಹಾನಭೂತಿಯಿಂದ ಪರಿಶೀಲಿಸುವ ಭರವಸೆ ನೀಡಿದ ಮೇಲೆ ಗೋಖಲೆಯವರು ಆಗ ಅದನ್ನು ಹಿಂದಕ್ಕೆ ಪಡೆದರು. ಗೋಖಲೆಯವರು ಮತ್ತೆ ತಮ್ಮ ಹಠವನ್ನು ಬಿಡಲಿಲ್ಲ. 1911ರಲ್ಲಿ ಮತ್ತೊಂದು ಠರಾವನ್ನು ಮಂಡಿಸಿದರು. ಇವರು ಎರಡು ವಾದಗಳ ಕುರಿತು ಮಾತನಾಡಿದರು. (1) ಸಾಮೂಹಿಕ ಶಿಕ್ಷಣದ ಅಗತ್ಯವೇನಿದೆ? (2) ಸಾಮೂಹಿಕ ಶಿಕ್ಷಣಕ್ಕೆ ತಗಲುವ ಬಹುವೆಚ್ಚವನ್ನು ಭರಿಸಲು ಸರಕಾರಕ್ಕೆ ಸಾಧ್ಯವೆ? ಸಾರ್ವತ್ರಿಕ ಸಾಕ್ಷರತೆಯ ಅಗತ್ಯತೆಯನ್ನು ಒತ್ತಿ ಹೇಳುತ್ತಾ ಕನಿಷ್ಟ 4 ವರ್ಷಗಳಷ್ಟಾದರೂ ಮಕ್ಕಳು ಓದು ಬರಹ ಕಲಿಯಬೇಕು ಎಂದರು. ಶಿಕ್ಷಣದ ಗುಣಮಟ್ಟವನ್ನೇ ಮೂಲವಾಗಿಟ್ಟುಕೊಳ್ಳಬಾರದು. ಜನತೆಗೆ ಸಾಕ್ಷರತೆಯನ್ನು ನೀಡುವ ಮೂಲಕ ಸಮಾಜದ ಬದಲಾವಣೆ ಮಾಡಬಹುದೆಂದು ವಾದಿಸಿದರು. ಪ್ರಾಥಮಿಕ ಶಿಕ್ಷಣಕ್ಕೆ ತಗಲುವ ವೆಚ್ಚಕ್ಕೆ ಗೋಖಲೆಯವರು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳು ಆಡಳಿತ ಮಂಡಳಿಗಳಿಗೆ ವಹಿಸಿಕೊಡಬಾರದು ಎಂಬ ಇವರ ವಾದವನ್ನು ಕೆಲವರು ಬೆಂಬಲಿಸಿದರು. ಆದರೆ ಸರ್ಕಾರ ಮತ್ತು ಭಾರತೀಯ ಸಂಸ್ಥಾನಗಳಿಂದ ವಿರೋಧ ವ್ಯಕ್ತವಾಯಿತು.

ಶಿಕ್ಷಣದ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದ ಗೋಖಲೆಯವರು ಮಂಡಿಸಿದ 1912ರ ಮಸೂದೆ 38-13 ಮತಗಳ ಅಂತರದಿಂದ ಬಿದ್ದುಹೋಯಿತು. ಮಸೂದೆ ಮಂಡಿಸಿ, ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುತ್ತಾ:-

'' ನನ್ನ ದೊರೆಗಳೇ, ಈ ದಿವಸ ಕಳೆಯುವುದರೊಳಗೆ ನನ್ನ ಮಸೂದೆ ಬಿದ್ದು ಹೋಗುತ್ತದೆಂಬುದು ನನಗೆ ಗೊತ್ತು. ಈ ಬಗ್ಗೆ ನನಗೆ ಆಕ್ಷೇಪವಿಲ್ಲ. ಇದರಿಂದ ನಾನು ಹತಾಶನಾಗುವುದೂ ಇಲ್ಲ. ಏಕೆಂದರೆ, ಇಂಗ್ಲೆಂಡಿನಲ್ಲಿಯೂ ಕೂಡ 1870ರ ಮಸೂದೆ ಪಾಸಾಗುವುದಕ್ಕಿಂತ ಮುಂಚೆ ಕೈಗೊಂಡ ಪ್ರಾರಂಭಿಕ ಯತ್ನಗಳ ಕಥೆ ನನಗೆ ಚೆನ್ನಾಗಿ ಗೊತ್ತು; ಮೇಲಾಗಿ ನನಗೆ ಸದಾ ಅನ್ನಿಸುವ ಮತ್ತು ಮೇಲಿಂದ ಮೇಲೆ ನಾನು ಹೇಳುತ್ತಾ ಬಂದಿರುವ ಮಾತೆಂದರೆ, ಭಾರತದ ವರ್ತಮಾನಗಳು, ಜನಾಂಗವಾದ, ನಾವು ನಮ್ಮ ವೈಫಲ್ಯಗಳ ಮೂಲಕವೇ ನಮ್ಮ ದೇಶಕ್ಕೆ ಸೇವೆ ಸಲ್ಲಿಸಬಹುದಷ್ಟು, ನಮ್ಮ ಯಶಸ್ಸುಗಳ ಮೂಲಕ, ನಮ್ಮ ದೇಶ ಸೇವೆ ಮಾಡುವ ಸೌಭಾಗ್ಯ ಪಡೆದ ಸ್ತ್ರೀ-ಪುರುಷರು ಇನ್ನು ಮುಂದೆ ಬರಲಿದ್ದಾರೆ. ನಮ್ಮ ಮುನ್ನಡೆಯ ಹಾದಿಯಲ್ಲಿ ನಮಗೆ ಕೊಡಲಾದ ಸ್ಥಾನವನ್ನು ನಾವು ಸಂತೋಷದಿಂದ ಒಪ್ಪಿಕೊಂಡು ತೃಪ್ತಿ ಕೊಡಬೇಕು.

ಇಂದು ತಿರಸ್ಕೃತವಾದ ಈ ಮಸೂದೆ ಮತ್ತೆ ಮತ್ತೆ ಬರಲಿದೆ. ನಮ್ಮೆಲ್ಲರ ಹೃದಯಗಳಲ್ಲಿರುವ ಈ ಮಹಾನ್ ಉದ್ದೇಶದ ಈಡೇರಿಕೆಗೆ ಪರೋಕ್ಷವಾಗಿಯಾದರೂ ನಮ್ಮ ಪ್ರಯತ್ನಗಳು ಸಹಕಾರಿಯಾಗದೇ ಹೋಗಬಹುದು. ಇವು ಕೇವಲ ಕಡಲ ಕಿನಾರೆಯನ್ನು ಉಳುವಂತಹ ಪ್ರಯತ್ನಗಳಾಗಬಹುದು. ಆದರೆ ದೊರೆಗಳೇ, ನಮ್ಮ ಪ್ರಯತ್ನಗಳಿಗೆ ಯಾವ ಅದೃಷ್ಟವೇ ಕಾದಿರಲಿ, ಒಂದಂತೂ ಸುಸ್ಪಷ್ಟ ನಾವು ನಮ್ಮ ಕರ್ತವ್ಯದ ಕರೆ ಎಲ್ಲಿ ನಿಚ್ಚಳವಾಗಿದೆಯೋ ಆಲ್ಲಿ ದುಡಿಯದೆ ಸುಮ್ಮನೆ ಇರುವುದಕ್ಕಿಂತ ದುಡಿದು ಸೋಲುಣ್ಣುವುದು ಲೇಸು''(ಮಹಬಲೇಶ್ವರರಾವ್,1999,ಪು.19) ಎಂದು ಕಳಕಳಿಯ ಮನವಿ ಮಾಡಿಕೊಂಡರು.

ಗೋಖಲೆಯವರು ಮಂಡಿಸಿದ ಠರಾವುಗಳು, ಮಸೂದೆಗಳಿಗೆ ಸೋಲುಂಟಾದರೂ ಚರ್ಚೆಯ ಸಮಯದಲ್ಲಿ ಅವರು ಮಾಡಿದ ಆವೇಶ ಭರಿತ ಮಾತುಗಳು ಅವರ ಭಾಷಣ, ಒಟ್ಟಾರೆ ಪ್ರಾಥಮಿಕ ಶಿಕ್ಷಣದ ಬದಲಾವಣೆಗೆ ಒಂದು ಕ್ರಾಂತಿ ಕಾರಕ ಹೆಜ್ಜೆಯಾಯಿತೆಂದು ಹೇಳಬಹುದು.

2.6. ಪ್ರಾಥಮಿಕ ಶಿಕ್ಷಣ ಕಾಯ್ದೆ (1918-50) ಹಾಗೂ ನಂತರದ ಬೆಳವಣಿಗೆ:

1918ರಲ್ಲಿ ಮುಂಬೈಯ ಪುರಸಭೆಯು ದೇಶದಲ್ಲಿಯೇ ಪ್ರಥಮ ಬಾರಿಗೆ ಪ್ರಾಥಮಿಕ ಶಿಷಣದ ಕಾಯ್ದೆಯನ್ನು ಜಾರಿಗೊಳಿಸಿತು. ಗೋಖಲೆಯವರು ಮಂಡಿಸಿದ ಮಸೂದೆಗೆ ಹಿಂದೆ ಸೋಲುಂಟಾಗಿದ್ದರೂ ಎರಡು ವರ್ಷಗಳ ನಂತರ ಅದನ್ನು ಮತ್ತೆ ಪರಿಷ್ಕರಿಸಿ, ಜಾರಿಗೊಳಿಸಲಾಯಿತು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ವಿವಿಧ ರಾಜ್ಯಗಳಲ್ಲಿ (ಬಂಗಾಳ, ಬಿಹಾರ,ಒರಿಸ್ಸಾ, ಪಂಜಾಬ್, ತಮಿಳುನಾಡು) ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಕಾನೂನುಗಳು ಜಾರಿಯಾದವು. ಆಗಲೇ ದೇಶದಲ್ಲಿ ಜನಸಂಖ್ಯೆ ತೀವ್ರ ಸ್ವರೂಪದ

ಬೆಳವಣಿಗೆಯತ್ತ ಮುಖ ಮಾಡಿತ್ತು. ಜನಸಂಖ್ಯೆ ಹೆಚ್ಚಳದಿಂದ ದೇಶದ ಉತ್ಪಾದನೆ ಎಷ್ಟೇ ಇಮ್ಮಡಿಗೊಳಿಸಿದರೂ ಪೂರೈಕೆಯಲ್ಲಿ ಹಿಂಜರಿತ ಉಂಟಾಯಿತು. ಹೀಗಾಗಿ ಶಿಕ್ಷಣಕ್ಕೆ ಒದಗಿಸುವ ಹಣಕಾಸಿನ ಅಡಚಣೆ ಉದ್ಭವಿಸಿ, ಕಾರ್ಯಕ್ರಮದ ಅನುಷ್ಠಾನಕ್ಕೆ ಹಿನ್ನಡೆಯುಂಟಾಯಿತು.

2.7. ಗಾಂಧೀಜಿಯವರ 'ಮೂಲ ಶಿಕ್ಷಣ' ಅಥವಾ ವಾರ್ಧಾ ಶಿಕ್ಷಣ ಯೋಜನೆ:

1935ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಬ್ರಿಟಿಷ್ ಸರಕಾರ ಆಯಾ ಪ್ರಾಂತಗಳಿಗೆ ವಹಿಸಿಕೊಟ್ಟಿತು. ಗಾಂಧೀಜಿಯವರು ಮಕ್ಕಳಿಗೆ ಬರೀ ಪಠ್ಯದಲ್ಲಿಯ ವಿಷಯಗಳನ್ನು ಹೇಳಿಕೊಟ್ಟರೆ ಸಾಲದು, ಅವರಿಗೆ ವೃತ್ತಿ ಕೌಶಲ್ಯ ಗಳನ್ನು ಬೆಳೆಸಿ ಅವರನ್ನು ಸ್ವಾವಲಂಬಿ ಪ್ರಜೆಗಳನ್ನಾಗಿ ರೂಪಿಸುವಂಥ ಶಿಕ್ಷಣದ ಅಗತ್ಯತೆ ಕುರಿತು ಚಿಂತನೆ ನಡೆಸಿ ತಮ್ಮ ಸೇವಾಗ್ರಾಮದಲ್ಲಿಯೇ 'ಮೂಲ ಶಿಕ್ಷಣ'ದ ಕಲ್ಪನೆಯನ್ನು ಜಾರಿಗೊಳಿಸಲು ಪ್ರಯತ್ನಿಸಿದರು. ಡಾ॥ ಜಾಕೀರ್ ಹುಸೇನ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು 1937ರಲ್ಲಿ ನೇಮಿಸಲಾಯಿತು. ಮೂಲ ಶಿಕ್ಷಣದ ವ್ಯಾಪಕ ಚರ್ಚೆಯ ನಂತರ 1938ರಲ್ಲಿ ಇದರ ಜಾರಿಯಾಯಿತು. ಅದರ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

1) ಏಳನೇ ವಯಸ್ಸಿನಿಂದ ತೊಡಗಿಕೊಂಡ ಮಕ್ಕಳಿಗೆ ಒಟ್ಟು ಎಂಟು ವರ್ಷಗಳ ಅವಧಿಯ ಶಿಕ್ಷಣ ಕೈ-ಕಸಬಿಗೆ ಕೇಂದ್ರೀಕೃತವಾಗಿರಬೇಕು.
2) ಇಂಗ್ಲೀಷ್ ಬದಲಿಗೆ ಪ್ರಾದೇಶಿಕ ಭಾಷೆಯೇ ಶಿಕ್ಷಣ ಭಾಷಾ ಮಾಧ್ಯಮವಾಗಿರಬೇಕು.
3) ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಯಾಗಬೇಕು.
4) ಜೀವನಕ್ಕಾಗಿ ಶಿಕ್ಷಣ ಇರಬೇಕು.
5) ಮಕ್ಕಳಲ್ಲಿ ಸ್ವಾವಲಂಬಿತ್ವ ಬೆಳೆಯಬೇಕು.
6) ಶಿಕ್ಷಣ ಮಕ್ಕಳ ವಿವಿಧ ಸಾಮರ್ಥ್ಯಗಳ ಪ್ರದರ್ಶನಕ್ಕೆ ಮತ್ತು ಅವುಗಳ ಅಭಿವೃದ್ಧಿಗೆ ಪೂರಕವಾಗಿ ಇರಬೇಕು.

ಇವು ಗಾಂಧೀಜಿಯವರ ಮೂಲ ಶಿಕ್ಷಣದ ಆಶಯಗಳಾಗಿದ್ದವು. 'ಮೂಲ ಶಿಕ್ಷಣ' ಜಾರಿಯಾಗಿ ಒಂದೆರಡು ವರ್ಷಗಳ ಅಂತರದಲ್ಲಿ ಕೆಲವೇ ಪ್ರಾಂತ್ಯಗಳ ಕಾಂಗ್ರೆಸ್ ಸರಕಾರಗಳು ಇದಕ್ಕೆ ಉತ್ತೇಜನ ನೀಡಿದವು. 1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾದ ಮೇಲೆ ಪ್ರಾಂತೀಯ ಸರಕಾರಗಳು ಅಧಿಕಾರ ಹೀನವಾದವು. ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆ ಉಂಟಾಯಿತು. ಸ್ವಾತಂತ್ರ್ಯಾನಂತರ ಈ ಯೋಜನೆಗೆ ಚಲನಶೀಲತೆ ಇದ್ದರೂ ನಿರೀಕ್ಷಿಸಿದಷ್ಟು ಪ್ರಗತಿಯನ್ನು ಸಾಧಿಸಲಾಗಲಿಲ್ಲ.

2.8. ಸಾರ್ಜೆಂಟ್ ಯೋಜನೆ (1944) :

ಆಧುನಿಕ ಶಿಕ್ಷಣ ಕ್ರಮದಲ್ಲಿ ಹಿಂದಿನ ಅನೇಕ ಆಯೋಗಗಳು ಶಿಕ್ಷಣದ ಪ್ರಗತಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದರೂ, ಸಾರ್ಜೆಂಟ್ ಯೋಜನೆ ಶಿಕ್ಷಣದ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಒಂದು ಹೊಸ ರೂಪವನ್ನು ಕೊಟ್ಟಿತೆಂದೇ ಹೇಳಬಹುದು.

1935ರಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯನ್ನು ಪುನರಾರಂಭಿಸಿದ ನಂತರ, ಅದು ಶಿಕ್ಷಣದ ಬೇರೆ ಬೇರೆ ಮುಖಗಳನ್ನು ಪರಿಶೀಲಿಸಿ, ಸರಕಾರಕ್ಕೆ ಸಲಹೆ ನೀಡುತ್ತಾ ಬಂದಿತು. 1943ರ ವೇಳೆಗೆ ಅದು ಪರಿಶೀಲಿಸಿದ್ದ ಅಂಶಗಳನ್ನೆಲ್ಲಾ ಒಟ್ಟುಗೂಡಿಸಿ ಇಡೀ ಭಾರತದ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವ್ಯಾಪಕವಾದ ಯೋಜನೆಯನ್ನು ರೂಪಿಸಲು ಸಿದ್ಧವಾಯಿತು. 'ಶಿಕ್ಷಣ' ಕುರಿತು ಯೋಜನೆ ತಯಾರಿಸುವ ಜವಾಬ್ದಾರಿಯನ್ನು ಕೇಂದ್ರ ಶಿಕ್ಷಣ ಸಲಹಾ ಮಂಡಳಿಗೆ ನೀಡಿದ ಪ್ರಯುಕ್ತ, ಅಂದು ಕೇಂದ್ರ ಸರಕಾರದ ಶಿಕ್ಷಣ ಸಲಹೆಗಾರರಾಗಿದ್ದ ಜಾನ್ ಸಾರ್ಜೆಂಟರಿಗೆ ಮಂಡಳಿ ಆ ಕಾರ್ಯವನ್ನು ವಹಿಸಿತು. ಆದುದರಿಂದ ಈ ಯೋಜನೆಯನ್ನು 'ಸಾರ್ಜೆಂಟ್ ಸ್ಕೀಂ' ಎಂದೇ ಹೆಸರಿಸಲಾಯಿತು. ಅಲ್ಲಿಯವರೆಗೆ ಶಿಕ್ಷಣದ ವಿವಿಧ ಸಮಿತಿಗಳು ಸಲ್ಲಿಸಿದ ವರದಿಗಳನ್ನೆಲ್ಲಾ ಸಾರ್ಜೆಂಟ್ ಅವರು ತಾವು ರೂಪಿಸಿದ ಯೋಜನೆಯಲ್ಲಿ ಅಳವಡಿಸಿಕೊಂಡರು. ಸಲಹಾ ಮಂಡಳಿ ಅದನ್ನು 1943-44ರಲ್ಲಿ ಸಭೆ ಸೇರಿ, ಪರಿಶೀಲಿಸಿ ಅಂಗೀಕರಿಸಿತು. ಇದು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗಿನ ಎಲ್ಲಾ ಹಂತಗಳನ್ನು ಪರಿಶೀಲಿಸಿ ಅವುಗಳ ವ್ಯವಸ್ಥೆ; ಲೋಪ ದೋಷಗಳು, ಸುಧಾರಿಸುವ ವಿಧಾನ ಮತ್ತು ಇತರ ಅಂಶಗಳನ್ನು ಕುರಿತ ಶಿಕ್ಷಣದ ವ್ಯಾಪಕ ವರದಿಯಾಗಿದೆ. ಸಾರ್ಜೆಂಟ್ ಯೋಜನೆಯು ಆರರಿಂದ ಹದಿನಾಲ್ಕು ವರ್ಷದ ಎಲ್ಲಾ ಮಕ್ಕಳಿಗೆ ಎಂಟು ವರ್ಷಗಳ ಅವಧಿಯಲ್ಲಿ ಶಿಕ್ಷಣ ನೀಡಬೇಕೆಂದು ಶಿಫಾರಸ್ಸು ಮಾಡಿತಲ್ಲದೆ, ಮೂಲ ಶಿಕ್ಷಣದ ರಾಷ್ಟ್ರೀಯ ಕಾರ್ಯಕ್ರಮವನ್ನು ಅನುಮೋದಿಸಿತು. ಈ ಸಾರ್ವತ್ರಿಕ ಶಿಕ್ಷಣ ಕಾರ್ಯಕ್ರಮವನ್ನು ಅದು ಜಾರಿಯಾದ ನಲವತ್ತು ವರ್ಷಗಳ ಕಾಲಾವಧಿಯೊಳಗೆ ಅಂದರೆ, 1944ರಿಂದ ಸಾವಿರದ 1984ರೊಳಗೆ ಒಂದು ವರ್ಷಕ್ಕೆ 200 ಕೋಟಿ ರೂಪಾಯಿಗಳ ವೆಚ್ಚದ ಶಿಫಾರಸ್ಸು ಮಾಡಿ, ಹಂತ ಹಂತವಾಗಿ ಅನುಷ್ಠಾನಕ್ಕೆ ತರಬೇಕೆಂದು ಸೂಚಿಸಿತು. ತನ್ನ ಯೋಜನೆಯಲ್ಲಿ ಈ ಕೆಳಗಿನ ಮುಖ್ಯವಾದ ಅಂಶಗಳನ್ನು ಅದು ಸೂಚಿಸಿತು.

- ಪ್ರಾಂತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಅಧ್ಯಾಪಕರ ಸಂಬಳವನ್ನು ಉತ್ತಮಪಡಿಸುವುದು. ಇದರಿಂದ ಶಿಕ್ಷಕರಲ್ಲಿ ದಕ್ಷತೆ, ಪ್ರಾಮಾಣಿಕತೆ ಹೆಚ್ಚಿ, ಕೆಲಸದಲ್ಲಿ ಆಸಕ್ತಿಯಿಂದ ದುಡಿಯಬೇಕೆಂಬ ನಿಲುವು ಅದರಲ್ಲಿತ್ತು. ಈ ಉದ್ದೇಶದಿಂದ ಅವರೆಲ್ಲರಿಗೆ ರೂ.20.00ಕ್ಕೆ ಕಡಿಮೆಯಾಗದಂತೆ ಪೂರ್ಣವೇತನ ನೀಡಬೇಕೆಂದು ಶಿಫಾರಸು ಮಾಡಲಾಯಿತು.
- 6-11 ವರ್ಷದ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ (ಅನಂತರ 11-14 ವರ್ಷದವರೆಗೆ ವಿಸ್ತರಿಸುವುದು).

- ವಿಶ್ವವಿದ್ಯಾಲಯಗಳ ಶಿಕ್ಷಣದ ಅಭಿವೃದ್ಧಿ.
- ತಾಂತ್ರಿಕ ಮತ್ತು ವಯಸ್ಕರ ಶಿಕ್ಷಣಕ್ಕೆ ವಿಶೇಷ ಸೌಲಭ್ಯಗಳ ಅವಕಾಶ.
- ವೈಜ್ಞಾನಿಕ ಸಂಶೋಧನೆಗಳಿಗೆ ಅವಕಾಶ ಇತ್ಯಾದಿ ಪ್ರಮುಖ ಸಲಹೆಗಳು ಸೇರಿದ್ದವು. ಸಾರ್ಜೆಂಟ್ ಸಮಿತಿ ಸೂಚಿಸಿದ್ದ, ನಲವತ್ತು ವರ್ಷಗಳ ಕಾಲಾವಧಿಯು ದೀರ್ಘಕಾಲವಾದುದಾಗಿತ್ತು. ಅದನ್ನು 16 ವರ್ಷಗಳಿಗೆ ಇಳಿಸಲಾಯಿತು. ರಾಷ್ಟ್ರ ಮಟ್ಟದಲ್ಲಿ ತಾಂತ್ರಿಕ ಶಿಕ್ಷಣ ಸಮಿತಿಯನ್ನು ರಚಿಸಲಾಯಿತು. ವಿವಿಧ ರಾಜ್ಯಗಳಲ್ಲಿ ವಿವಿಧ ವೃತ್ತಿಯ ವಿದ್ಯಾಲಯವನ್ನು (ಪಾಲಿಟೆಕ್ನಿಕ್) ಸ್ಥಾಪಿಸಿಲಾಯಿತು. 1945ರಲ್ಲಿ ಎಜುಕೇಷನ್ ಬ್ಯೂರೋವನ್ನು, 1946ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗವನ್ನು ಸ್ಥಾಪಿಸಲಾಯಿತು. 1958ರಲ್ಲಿ ಅಖಿಲ ಭಾರತ ಪ್ರಾಥಮಿಕ ಶಿಕ್ಷಣದ ಸಮಾಲೋಚನಾ ಸಭೆಯನ್ನು ಆಯೋಜಿಸಲಾಯಿತು. 1950ರ ಸಂವಿಧಾನದ 45ನೆಯ ವಿಧಿ ಆದೇಶದಂತೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ಪ್ರಯತ್ನ ಗಳನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಅದಕ್ಕೆ ವಹಿಸಲಾಯಿತು. ಇಷ್ಟೆಲ್ಲಾ ಯೋಜನೆಗಳನ್ನು ರೂಪಿಸಿದ್ದ ಸಾರ್ಜೆಂಟ್ ಯೋಜನೆ ಹಲವಾರು ಟೀಕೆಗಳಿಗೂ ಗುರಿಯಾಯಿತು. ಬ್ರಿಟೀಷ್ ಶಿಕ್ಷಣ ಮಾದರಿಯಂತಿರುವ ಈ ಯೋಜನೆ ಈ ದೇಶಕ್ಕೆ ಪೂರಕವಾದುದಲ್ಲ. ಅದು ರಾಷ್ಟ್ರ ವಿರೋಧಿಯಾದುದು. ಇದನ್ನು ಶೀಘ್ರ ಹಾಗೂ ಕಡಿಮೆ ವೆಚ್ಚದಲ್ಲಿ ಜಾರಿಗೆ ತರಬೇಕು. ಇದರ ಅನುಷ್ಠಾನದಲ್ಲಿ ವಿಳಂಬವಾದರೆ ಅನಾವಶ್ಯಕವಾಗಿ ಅಧಿಕ ವೆಚ್ಚವಾಗುತ್ತದೆ. ಈ ದೃಷ್ಟಿಯಿಂದ 40 ವರ್ಷದ ಅವಧಿ ಅತ್ಯಂತ ದೀರ್ಘ ಹಾಗೂ ಧಾರ್ಮಿಕ ಶಿಕ್ಷಣಕ್ಕೆ ಎಡೆಯಿಲ್ಲವೆಂಬ ಟೀಕೆಗಳು ಕೇಳಿ ಬಂದವು. ಇದರಲ್ಲಿ ಕೆಲವನ್ನು ಒಪ್ಪಬಹುದಾದರೂ, ಕೆಲವನ್ನು ಒಪ್ಪಲಾಗುವುದಿಲ್ಲ. ರಾಷ್ಟ್ರ ವಿರೋಧಿ ಎಂಬ ಮಾತು ಒಪ್ಪಲಾಗುವುದಿಲ್ಲ, ವಾಸ್ಥವವಾಗಿ ಇದು ಗಾಂಧೀಜಿಯ ಮೂಲ ಶಿಕ್ಷಣದ ಪರಿಕಲ್ಪನೆಯನ್ನೇ ಅಳವಡಿಸಿಕೊಂಡಿದೆ.

'' ಏಕೆಂದರೆ ಅದು ಗಾಂಧಿ ಪ್ರಣೀತ ವಾರ್ಧಾ ಯೋಜನೆಯನ್ನೇ ಆಧರಿಸಿದೆ. ಮಾತೃಭಾಷಾ ಅಥವಾ ಪ್ರಾದೇಶಿಕ ಭಾಷಾ ಮಾಧ್ಯಮಕ್ಕೆ ಮಹತ್ವ ನೀಡಿದೆ. ಧಾರ್ಮಿಕ ಶಿಕ್ಷಣಕ್ಕೆ ಎಡೆಯಿಲ್ಲದಿದ್ದರೂ ಚಾರಿತ್ರ್ಯ ವರ್ಧನೆ ಹಾಗೂ ಸ್ವಾವಲಂಬಿತ್ವದ ಸಂವರ್ಧನೆಗೆ ಬೆಲೆ ಕೊಟ್ಟಿದೆ. ಇಷ್ಟೆಲ್ಲಾ ಇದ್ದೂ ಯೋಜನೆಯು ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಯೋಜನೆಯ ಪರಿಪ್ರೇಕ್ಷ, ಜನ ಸಂಖ್ಯಾವೃದ್ಧಿಯ ಸಂಬಂಧವಾದ ಮಾಹಿತಿ ಹಾಗೂ ಭವಿಷ್ಯದಲ್ಲಿ ಆಗಬಹುದಾದ ಬೆಲೆ ಏರಿಕೆ ಮುಂತಾದವುಗಳನ್ನು ಗಮನಿಸಿಯೇ ಇಲ್ಲವೆನ್ನಬಹುದು''(ಮಹಬಲೇಶ್ವರರಾವ್, 1999) ಎಂಬ ಹೇಳಿಕೆಯು ಸಾರ್ಜೆಂಟ್ ಯೋಜನೆ ಮತ್ತು ಯೋಜಿಸಿದ ಕಾರ್ಯಕ್ರಮಗಳ ಅನುಷ್ಠಾನದಲ್ಲಿಯ ಕುಂದುಕೊರತೆಗಳ ಕುರಿತು ಹೇಳಿದ್ದಾಗಿದೆ.

'ಸಾರ್ಜೆಂಟ್' ಯೋಜನೆಯ ನಂತರ ದೇಶದ ಶಿಕ್ಷಣ ಕ್ಷೇತ್ರದಲ್ಲಿ ಸ್ವರೂಪ ಬದಲಾಯಿತು. ಪ್ರಾಥಮಿಕ, ಪ್ರೌಢ , ಉನ್ನತ ಶಿಕ್ಷಣದ ಬಗ್ಗೆ ನವೀನ ರೀತಿಯ ಚಿಂತನೆಗಳು ಪ್ರಾರಂಭವಾದವು, ಅನೇಕ ಯೋಜನೆಗಳ ಅನುಷ್ಠಾನದ ಪ್ರಯತ್ನಗಳು ನಡೆದವು. ಸ್ವಾತಂತ್ರ್ಯ ನಂತರದ ಶಿಕ್ಷಣ ಜನರು ಹೊಸದಿಕ್ಕಿನತ್ತ ಯೋಚಿಸುವಂತೆ ಮಾಡಿತು ಸಾಂಪ್ರಾದಾಯಿಕ ಶಿಕ್ಷಣದ ಬದಲಿಗೆ ಹೊಸ ತಂತ್ರಗಳು ವೈಜ್ಞಾನಿಕ ರೀತಿಯ ಆಲೋಚನೆಗಳು

ಶುರುವಾದವು. ಗಾಂಧೀಜಿಯವರ 'ಮೂಲಶಿಕ್ಷಣ' ಪರಿಕಲ್ಪನೆ ವೃತ್ತಿ ಮೂಲಕ್ಕೆ ಒತ್ತು ನೀಡಿತು. ಆದರೆ ಎಲ್ಲಾ ತರಗತಿಗಳಲ್ಲಿ ನವೀನ ರೀತಿಯ ಬೋಧನಾ ಕೌಶಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದಾಯಿತು. ಆದರೂ ವಿದ್ಯಾವಂತ ಜನರಲ್ಲಿ ಇದೊಂದು ಹೊಸ ಹೆಜ್ಜೆ ಎಂಬ ಭಾವನೆ ಬೆಳೆಯಿತು. ಅಂತರಾಷ್ಟ್ರೀಯ ಮಟ್ಟದಲ್ಲಿ ವೈಜ್ಞಾನಿಕ ಕ್ಷೇತ್ರ ಬಲಗೊಂಡಂತೆ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ವೃದ್ಧಿಯಾದಂತೆ ಭಾರತದ ಶಿಕ್ಷಣದಲ್ಲಿಯೂ ವಿದ್ಯೆಯ ಹಂಬಲ ಬಲಿಯ ತೊಡಗಿತು. ಶಿಕ್ಷಣ ತಜ್ಞರು ರೂಪಿಸಿದ ಯೋಜನೆಗಳು ಆಯೋಗಗಳು ಶಿಕ್ಷಣದ ಅಭಿವೃದ್ಧಿಗೆ ಗರಿ ಮೂಡಿಸಿದವು. ಪ್ರಾಥಮಿಕ ಹಂತದಿಂದ ಪ್ರೌಢ ಹಂತದವರೆಗೂ ನಂತರ ಉನ್ನತ ಶಿಕ್ಷಣ ಮಟ್ಟದವರೆಗೂ ಅನೇಕ ಸುಧಾರಣೆಗಳು ಜಾರಿಯಾದವು. ಶಿಕ್ಷಣದ ಮೂಲಭೂತ ಸೌಕರ್ಯಗಳು, ಶಿಕ್ಷಕರ ವೇತನ, ವೃತ್ತಿ ಕೌಶಲ್ಯಗಳ ಬೆಳವಣಿಗೆಗಾಗಿ ತರಬೇತಿ, ತಾಂತ್ರಿಕ ಶಿಕ್ಷಣಾಭಿವೃದ್ಧಿಗಾಗಿ ಹೊಸ ಹೊಸ ಪ್ರಯೋಗ ಪದ್ಧತಿಗಳು ಜಾರಿಯಾದವು.

ಜನರು ತಾವಾಗಿಯೇ 'ಶಿಕ್ಷಣದ ಹಸಿವ'ನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅವಕಾಶಗಳು ಲಭಿಸಿದವು. ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್ ಆಯೋಗ; ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರ ಆಯೋಗ; ಕೊಠಾರಿ ಆಯೋಗ; ವಿಶ್ವ ವಿದ್ಯಾಲಯ ಆಯೋಗಗಳು, 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ', ಇವುಗಳ ಶಿಫಾರಸ್ಸುಗಳು, ನಂತರದ ವಿವಿಧ ಕಾರ್ಯಕ್ರಮಗಳು ದೇಶದ ಜನತೆಯಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸಿದವು. ಈ ಮೂಲಕ ಆರ್ಥಿಕ ಚಿಂತನೆಗೂ ಅವಕಾಶವನ್ನು ಒದಗಿಸಿದಂತಾಯಿತು.

ಮೇಲಿನ ವಿಷಯಗಳಲ್ಲಿ ಮೂಡಿಬಂದ ವಿಶ್ಲೇಷಣೆಯಿಂದ ಒಂದು ಅಂಶವು ಸ್ಪಷ್ಟವಾಗುತ್ತದೆ. ಏನೆಂದರೆ ದೇಶ ಆಳಿದ ಯಾವುದೇ ರಾಜ, ಮಹಾರಾಜರಾಗಲಿ ಅಥವಾ ಬ್ರಿಟೀಷರಾಗಲಿ ಸಮುದಾಯದ ಶೈಕ್ಷಣಿಕ ಅಗತ್ಯತೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಅದರಲ್ಲೂ ಬ್ರಿಟೀಷರು ತಮ್ಮ ಕಂಪನಿಯ ಹಾಗೂ ತಮ್ಮ ಆಡಳಿತ ವ್ಯವಸ್ಥೆಗೆ ಬೇಕಾದ ನೌಕರರಿಗೆ ಅಗತ್ಯವಾದ ಶಿಕ್ಷಣವನ್ನು ರೂಪಿಸಿದರೆ ಹೊರತು ಸಮುದಾಯವನ್ನು ಗಮನದಲ್ಲಿಟ್ಟುಕೊಳ್ಳಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ದೇಶ ಆಳಿದ ಸರ್ಕಾರಗಳು ದೇಶಕ್ಕೆ ಅಗತ್ಯವಾದ ಶಿಕ್ಷಣದ ಬಗ್ಗೆ ಚಿಂತಿಸಲಿಲ್ಲ. ರಚಿಸಿದ ಆಯೋಗಗಳು, ರೂಪಿಸಿದ ಯೋಜನೆಗಳೂ ಸಹ ಬ್ರಿಟೀಷರು ಬಿಟ್ಟು ಹೋದ ಪಳಿಯುಳಿಕೆಯನ್ನೇ ಮುಂದುವರಿಸಿದವು. ಹೀಗಾಗಿ ಕಾಲ ಕ್ರಮೇಣ ಶೈಕ್ಷಣಿಕ ಆಡಳಿತ ವ್ಯವಸ್ಥೆ ಹಾಗೂ ಸಮುದಾಯಗಳು ಧ್ರುವಾಂತರದಲ್ಲಿ ನಿಂತುಬಿಟ್ಟವು.

2.9. ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ವಿವಿಧ ಚಿಂತನೆಗಳು:

ಮಾನವನ ಅಭಿವೃದ್ಧಿಗಾಗಿ ಶಿಕ್ಷಣ ತನ್ನದೇ ಆದ ಆಯಾಮಗಳನ್ನು ರೂಪಿಸಿ, ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಚಿಂತನೆ ನಡೆಸಿದೆ. ಅಂತಹ ಆಯಾಮಗಳನ್ನು ಈ ಕೆಳಗಿನಂತೆ ಗುರುತಿಸಿದೆ.

ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ ಮತ್ತು ಮಹಾವಿದ್ಯಾಲಯ ಹಂತದ ಶಿಕ್ಷಣವು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಯಶಸ್ಸು ಸಾಧಿಸಿ, ಅವರ ಬೌದ್ಧಿಕ ಚಿಂತನೆಗೆ ಒತ್ತು ಕೊಟ್ಟಿತು. ಸಾಮಾನ್ಯ ಶಿಕ್ಷಣವು ಕೆಲವು ಸ್ತರಗಳಲ್ಲಿ ಅವರ ಭವಿಷ್ಯತ್ತಿನ ಬಗ್ಗೆ ಉತ್ತಮ ಬದುಕನ್ನು ರೂಢಿಸಿಕೊಳ್ಳಲು ಅವಕಾಶ ಕಲ್ಪಿಸಿದರೂ, ಕಡ್ಡಾಯವಾಗಿ ಉದ್ಯೋಗವನ್ನು ದೊರಕಿಸಿಕೊಡುತ್ತದೆ ಎಂಬ ಭರವಸೆಯನ್ನು ಇಟ್ಟುಕೊಂಡು ಶಿಕ್ಷಣ ಪಡೆಯುವುದು ಅಸಾಧ್ಯದ ಮಾತು. ಓದಿದವರೆಲ್ಲರಿಗೂ ಉದ್ಯೋಗ ನೀಡುವ ಸರಕಾರ ಬಂದರೆ ಯಾವ ಶಿಕ್ಷಣವನ್ನಾದರೂ ಪಡೆದು ದೇಶದ 'ಅಭಿವೃದ್ಧಿ'ಯನ್ನು ಸಾಧಿಸಲು ಸಾಧ್ಯವಾಗುತ್ತಿತ್ತು. 'ಎಲ್ಲರಿಗೂ ಶಿಕ್ಷಣ' ಎಂಬ ಮಾತನ್ನು ಸ್ವತಃ ಬದುಕನ್ನು ರೂಢಿಸಿಕೊಳ್ಳುವುದಕ್ಕಾಗಿ ಎಂದು ಅರ್ಥ ಮಾಡಿಕೊಳ್ಳಬೇಕು.

ಓದಿದವರೆಲ್ಲರಿಗೂ ಉದ್ಯೋಗವಿಲ್ಲವೆಂದ ಮೇಲೆ ಏಕೆ ಓದಬೇಕು ಎಂಬ ಭಾವನೆ ಜನರಲ್ಲಿ ಮೂಡುವುದು ಸಹಜ, ಆದರೂ ಎಲ್ಲರನ್ನೂ ಶಿಕ್ಷಣದಿಂದ ವಂಚಿಸುವುದು ಸಾಧ್ಯವಿಲ್ಲ. ಸಾಮಾನ್ಯ ಶಿಕ್ಷಣ ಪಡೆದವನೂ ಉತ್ತಮ ಬದುಕನ್ನು ರೂಢಿಸಿಕೊಂಡು ಬದುಕಬಲ್ಲ. ಉನ್ನತ ಶಿಕ್ಷಣ ಅಥವಾ ತಾಂತ್ರಿಕ ಶಿಕ್ಷಣ ಪಡೆದವನು ಭರವಸೆದಾಯಕ ಉದ್ಯೋಗ ಪಡೆದುಕೊಳ್ಳಬಲ್ಲನು. ಸಾಮಾನ್ಯ ಶಿಕ್ಷಣ ಪಡೆದವನ ಮನಸ್ಸಿನಲ್ಲಿ 'ಉದ್ಯೋಗವೇ' ಶಿಕ್ಷಣದ ಗುರಿ ಎಂಬ ಭರವಸೆ ಮೂಡಿ ಉದ್ಯೋಗ ದೊರಕದಿದ್ದಾಗ ನಿರಾಸೆಯ ಹೊರೆ ಹೊತ್ತು ನೀರಸ ಬದುಕನ್ನು ನೀಗುವಾತ.

ವೃತ್ತಿ ಶಿಕ್ಷಣವೂ ಈಚಿನ ದಿನಗಳಲ್ಲಿ ಮಹತ್ವವನ್ನು ಪಡೆಯುತ್ತಿದೆ. ಈ ವಿಷಯದಲ್ಲಿ ಶಿಕ್ಷಣವನ್ನು ಪಡೆದವರು ಉದ್ಯೋಗಾಕಾಂಕ್ಷಿಗಳಾಗಿಯೇ ಹೊರಗೆಬರುತ್ತಾರೆ. ಇದು ಅವರ ಭವಿಷ್ಯತ್ತಿನಲ್ಲಿ ಉದ್ಯೋಗ ದೊರಕದಿದ್ದಾಗ ನಿರಾಶೆಯನ್ನುಂಟುಮಾಡುತ್ತದೆ. ಯಾವುದೇ ವಿಷಯದಲ್ಲಿ ಶಿಕ್ಷಣ ಪಡೆದವನು ಉದ್ಯೋಗಕ್ಕಾಗಿಯೇ ಶಿಕ್ಷಣ ಎಂಬುದನ್ನು ಮರೆತು, ವೃತ್ತಿ ಕೌಶಲ್ಯಕ್ಕಾಗಿಯೇ ಶಿಕ್ಷಣ ಎಂಬುದನ್ನು ಮನದಟ್ಟುಮಾಡಿಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವೃತ್ತಿ ಶಿಕ್ಷಣವನ್ನು ಪಡೆಯುವ ಅಗತ್ಯವಿದೆ.

ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ತಾಂತ್ರಿಕ ಶಿಕ್ಷಣ ಬಲಯುತಗೊಳ್ಳುತ್ತಿದೆ. ಆರ್ಥಿಕ ಉದಾರೀಕರಣ ಜಾಗತೀಕರಣದತ್ತ ದೇಶ ಸಾಗುತ್ತಿರುವುದರಿಂದ ಎಲ್ಲಾ ರಾಜ್ಯಗಳಲ್ಲಿ, ತಾಂತ್ರಿಕ ಶಿಕ್ಷಣದ ಬಗ್ಗೆ ಜನರು ಯೋಚಿಸುವಂತಾಗಿದೆ. ಜನತೆಯಲ್ಲಿ ನಮ್ಮ ಮಕ್ಕಳು ಇಂಜಿನಿಯರ್ ಆಗಬೇಕು; ವೈದ್ಯರಾಗಬೇಕು ಎಂಬ ಭಾವನೆ ಬೇರೂರತೊಡಗಿದೆ. ಮಧ್ಯಮ ವರ್ಗದ, ಶ್ರೀಮಂತ ಜನ ತಾಂತ್ರಿಕ ಶಿಕ್ಷಣದತ್ತ ಒಲವನ್ನು ಹೆಚ್ಚು ಬೆಳೆಸಿಕೊಳ್ಳುತ್ತಿದ್ದಾರೆ. ಇಂತಹ ಮಕ್ಕಳ ಶಿಕ್ಷಣಕ್ಕಾಗಿ ಸಾಕಷ್ಟು ಖರ್ಚು ಮಾಡುವ ಸಂಪನ್ಮೂಲ ಇವರದಾಗಿರುತ್ತದೆ. ತಾಂತ್ರಿಕ ಶಿಕ್ಷಣ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚುತ್ತಾ ನಡೆದಿದೆ. ಅಂತರಾಷ್ಟ್ರೀಯ ಮಟ್ಟದ ಹೊಸ ಹೊಸ ತಂತ್ರಜ್ಞಾನವೂ ಜನಾಕರ್ಷಣೆಗೆ ಮೂಲವಾಗಿರುವುದರಿಂದ ಈ ದೇಶದ ಸಾಮಾನ್ಯ ಶಿಕ್ಷಣವೂ ಉದ್ಯೋಗ ಭರವಸೆದಾಯಕವಾಗಿಲ್ಲದ ಕಾರಣ ಜನರು ತಾಂತ್ರಿಕ ಶಿಕ್ಷಣಕ್ಕೆ ಪ್ರಭಾವಿತಗೊಂಡು 'ಉದ್ಯೋಗ ಭರವಸೆ' ಯತ್ತ ವಾಲುತ್ತಿದ್ದಾರೆ.

ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ದೇಶದಲ್ಲಿ ಬಹು ಮಹತ್ವವನ್ನು ಪಡೆದಿದ್ದು, ಈ ಶಿಕ್ಷಣ ಪಡೆಯಲು ಭಾರತದಾದ್ಯಂತ (ವಿದೇಶೀಯ ವಿದ್ಯಾರ್ಥಿಗಳನ್ನೊಳಗೊಂಡು) ವಿದ್ಯಾರ್ಥಿಗಳು ಇಚ್ಛಿಸುವ ಕಾರಣ ಕಾಲೇಜುಗಳಲ್ಲಿ ಒತ್ತಡ ಹೆಚ್ಚುತ್ತಾ ಇದೆ.

2.10. ಶಿಕ್ಷಣ ಮತ್ತು ನಿರೀಕ್ಷಿತ ಫಲ :

ಜನನಿರೀಕ್ಷಿತ ಶಿಕ್ಷಣ ಪ್ರಚಲಿತದಲ್ಲಿ ಪ್ರಮುಖ ಅಂಶವಾಗಿದೆ. ಜನರು ಶಿಕ್ಷಣದಿಂದ ವಿದ್ಯೆಯನ್ನು ಮಾತ್ರ ನಿರೀಕ್ಷಿಸದೇ ಫಲಾಪೇಕ್ಷೆಯನ್ನು ಹೊಂದಿದವರಾಗಿದ್ದಾರೆ.

''ಶಿಕ್ಷಣವೆಂಬುದು ಮಾನವನಲ್ಲಿಟ್ಟ ಠೇವಣಿ ಅಥವಾ ಮಾನವ ಸಂಪನ್ಮೂಲದ ಮೇಲೆ ಹೂಡಿದ ಬಂಡವಾಳ. ಯಂತ್ರಗಳು ಹಾಗೂ ಯಂತ್ರ ಸ್ಥಾವರಗಳ ಮೇಲೆ ಬಂಡವಾಳ ಹೂಡುವವರಿದ್ದಾರೆ. ಯಂತ್ರಗಳಿಗೆ ಸವಕಳಿ ಇದೆ. ಕಾಲ ಕ್ರಮೇಣ ಅವು ಹಾಳಾಗುತ್ತವೆ. ತಮ್ಮ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳುತ್ತವೆ. ಆದರೆ ಮಾನವನ ಮೆದುಳು ಹಾಗಲ್ಲ. ಅನುಭವ, ಮಾಹಿತಿ, ಜ್ಞಾನ, ಕೌಶಲ್ಯಗಳು ಹಾಗೂ ಸೂಕ್ತ ಪರಿಸರ ಮತ್ತು ಪ್ರೋತ್ಸಾಹ ಸಿಕ್ಕರೆ ಅದು ಸಾಧಿಸಬಹುದಾದ ಸಾಧನೆ ಅಮೂಲ್ಯವಾದುದು, ಅಪಾರವಾದುದು, ಅಗಾಧವಾದುದು. ತನ್ನನ್ನು ತಾನು ಪರಿಷ್ಕರಿಸಿಗೊಳ್ಳುವುದರ ಜೊತೆಗೆ ಅದು ಅನ್ಯ ಮೆದುಳುಗಳನ್ನು ಜಾಗೃತಗೊಳಿಸುತ್ತದೆ. ಚೇತನವನ್ನು ತುಂಬುತ್ತದೆ. ಯಂತ್ರ ಸ್ಥಾವರಗಳಿಂದ ಬರುವ ಆದಾಯವನ್ನು ನಾವು ಮುಂದಾಗಿ ಊಹಿಸಬಹುದು. ಆದರೆ ಮಾನವನಲ್ಲಿ ಹೂಡುವ ಬಂಡವಾಳವೆನಿಸಿದ ವಿದ್ಯೆಯು ತರುವ ಆದಾಯ ಅಥವಾ ಉತ್ಪನ್ನವು ಅಗೋಚರವಾದುದು. ಅದು ದೀರ್ಘಕಾಲೀನ ಪರಿಣಾಮ ಬೀರುವಂಥದು''(ಮಹಬಲೇಶ್ವರರಾವ್, 1999, ಪು. 20).

ಮೇಲಿನ ಹೇಳಿಕೆಯು ವಿದ್ಯೆಯ ಮಹತ್ವವನ್ನು ತಿಳಿಸುತ್ತದೆ. ಯಾವುದೇ ವ್ಯಕ್ತಿಯು ಇತರೆ ಕ್ಷೇತ್ರಗಳಲ್ಲಿ ತೊಡಗಿಸುವ ಬಂಡವಾಳಕ್ಕಿಂತ ವಿದ್ಯೆಗಾಗಿ ತೊಡಗಿಸುವ ಬಂಡವಾಳ, ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ದೀರ್ಘ ಕಾಲಿಕವಾಗಿ ಹೂಡುವ ಬಂಡವಾಳವಾಗಿರುತ್ತದೆ. ಆದ್ದರಿಂದ ಬರುವ ಆದಾಯವೂ ದೇಶದ ಉತ್ಪಾದನಾಶಕ್ತಿಯನ್ನು ಹೆಚ್ಚಿಸುತ್ತದೆ.

''ಕೆಲವರು ಶಿಕ್ಷಣಕ್ಕೆ ಹಣಕಾಸನ್ನು ಒದಗಿಸುವುದನ್ನು 'ಬಂಡವಾಳ' ಹೂಡಿಕೆ ಎಂದು ಭಾವಿಸದೆ, ಬದಲಿಗೆ ವೆಚ್ಚ ಎಂದು ಭಾವಿಸುತ್ತಾರೆ. ಉದ್ದಿಮೆಗಳಲ್ಲಿ, ಕೈಗಾರಿಕೆಗಳಲ್ಲಿ ಹಣ ಹೂಡಿದರೆ, ಪ್ರತಿಫಲ ಬೇಗನೇ ದೊರೆಯುತ್ತದೆ. ಎರಡು ಮೂರು ವರ್ಷಗಳಲ್ಲಿ ಹೂಡಿದ ಹಣ ಮರಳಿ ಬರುವುದರ ಜೊತೆಗೆ ಲಾಭಾಂಶವು ಅಧಿಕವಾಗುತ್ತದೆ. ಆದರೆ ಶಿಕ್ಷಣಕ್ಕಾಗಿ ಹಣ ವ್ಯಯಿಸುವುದು ವ್ಯರ್ಥ. ಕಾರಣ ಇಲ್ಲಿ ಬೇಗನೇ

ಪ್ರತಿಫಲಗಳು ದೊರೆಯುವುದಿಲ್ಲ. ದೊರೆಯುವ ಪ್ರತಿಫಲಗಳು ಅತ್ಯಲ್ಪವಾದುದರಿಂದ ಬೆಲೆ ದುಬಾರಿಯಾಗುತ್ತದೆ. ಹೀಗಾಗಿ ಶಿಕ್ಷಣಕ್ಕಾಗಿ ಹಣ ವ್ಯಯಿಸುವುದು ಅನುತ್ಪಾದಕ ಎಂಬ ಧೋರಣೆ ಹಲವು ಆಡಳಿತಗಾರರಲ್ಲಿ, ರಾಜಕೀಯ ಧುರೀಣರಲ್ಲಿ ಕಂಡು ಬರುತ್ತಿದೆ''(ಮಹಬಲೇಶ್ವರ ರಾವ್, 1999,ಪು.21). 'ಬಂಡವಾಳ' ಹೊಂದಿದ ಜನ ಮೇಲಿನಂತೆ ಯೋಚಿಸುತ್ತಾರೆ. ಈ ದೇಶದ ಬಂಡವಾಳಶಾಹಿ ಗಳೆಲ್ಲ ವಿದ್ಯೆಯನ್ನು 'ಅನುತ್ಪಾದಕ' ಕ್ಷೇತ್ರವೆಂದು ಭಾವಿಸಿರುವುದು ಕಂಡು ಬರುತ್ತಿದೆ. ಅವರ ಮನೋಭಾವನೆ ಬದಲಾಗಬೇಕಾಗಿದೆ. 'ವಿದ್ಯಾ' ಕ್ಷೇತ್ರವು ಒಂದು ಉತ್ಪಾದಕ ಕೇಂದ್ರ ಎಂಬುದು ಈಚೆಗಿನ ಶಿಕ್ಷಣದ ಬದಲಿ ತಂತ್ರಗಳಿಂದ ಗೊತ್ತಾಗುತ್ತದೆ. ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸುವ ಬಂಡವಾಳವು ಆದಾಯದ ಮೂಲವಾಗಿ ಪರಿವರ್ತನೆಗೊಳ್ಳುತ್ತಿರುವುದು ವ್ಯಾಪಾರೀಕರಣಕ್ಕೆ ಹಾದಿಯಾಗುತ್ತಿದೆ. 'ಶಿಕ್ಷಣ'ವೆಂದರೆ ಎಲ್ಲರೂ ನಿರೀಕ್ಷಿಸುವುದು ಅದರ ಪ್ರತಿಫಲವನ್ನು. ಈ ಭಾವನೆ ಹೊಂದಿರುವವರ ಅನುತ್ಪಾದಕ ಧೋರಣೆ ಬದಲಾಗಬೇಕಾಗಿದೆ. ರಾಷ್ಟ್ರಮಟ್ಟದಲ್ಲಿ ಶಿಕ್ಷಣಕ್ಕಾಗಿ ತೊಡಗಿಸುವ ಬಂಡವಾಳ ಈ ಕಾರಣದಿಂದಲೇ ಕಡಿಮೆಯಾಗುತ್ತಾ ಬಂದಿದೆ. ಆದರೆ ಅಭಿವೃದ್ದಿ ಶೀಲ ರಾಷ್ಟ್ರಗಳಲ್ಲಿ ಶಿಕ್ಷಣದ ಮೇಲೆ ಹಣ ಹೂಡುವುದು ಅತ್ಯಂತ ಮಹತ್ವದ ನಿರ್ಣಯವಾಗುತ್ತದೆ. ಕಾರಣ ಗುಣಮಟ್ಟದ ಶಿಕ್ಷಣದ ಮೂಲಕ ಮಾನವ ಜೀವನದ ಮೌಲಿಕತೆಯನ್ನು ಹೆಚ್ಚಿಸುವುದು, ವ್ಯಕ್ತಿಗಳು ತಾವು ಪಡೆದ ಶಿಕ್ಷಣದಿಂದಾಗಿ ತಮ್ಮ ಕೌಶಲ್ಯಗಳನ್ನು, ಜ್ಞಾನವನ್ನು, ಆಲೋಚನೆಗಳನ್ನು, ಅಭಿಪ್ರಾಯಗಳನ್ನು ಅಭಿವೃದ್ಧಿಪಡಿಸಿಕೊಂಡಾಗ ಉತ್ಪಾದಕ ಪ್ರಜೆಗಳಾಗಿ ಮಾರ್ಪಡುತ್ತಾರೆ. ಉತ್ಪಾದಕ ಪ್ರಜೆಗಳಿಂದ ದೇಶದ ಆರ್ಥಿಕಾಭಿವೃದ್ಧಿಯಾಗುತ್ತದೆ.

ಎಲ್ಲರಿಗೂ ತಮ್ಮ ಮಕ್ಕಳಿಗೆ ಶಿಕ್ಷಣ ಬೇಕು ಎಂಬ ಹಂಬಲವಿರುವುದು ಸಹಜ. ಈಗಿನ ಸಾರ್ವಜನಿಕ ಸವಾಲುಗಳಲ್ಲಿ ನಿರುದ್ಯೋಗವೂ 'ಒಂದು' ಸವಾಲಾಗಿಕಾಡುತ್ತಿದೆ. ಎಷ್ಟೇ ಓದಿದರೂ ಉದ್ಯೋಗವಿಲ್ಲವೆಂಬ ಭಾವನೆ ದಿನೇ ದಿನೇ ಹೆಚ್ಚಾಗುತ್ತಿದೆ. ಹೀಗಾಗಿ ವಿದ್ಯಾವಂತರೂ ಕೂಡ ಶಿಕ್ಷಣದ ಬಗ್ಗೆ ಯೋಚಿಸುವಂತಾಗಿದೆ. ಓದಿದವರಲ್ಲಿಯೂ ಓದಿ ನಂತರ ಏನು ಮಾಡಬೇಕು? ಎಂಬ ಹತಾಶೆ ಬೆಳೆಯತೊಡಗಿದೆ. ಅವಿದ್ಯಾವಂತರಲ್ಲಿ ಶಿಕ್ಷಣ ಪಡೆದರೆ ಏನು ಪ್ರಯೋಜನ? ಎಂಬ ಭಾವನೆ ಮೂಡುತ್ತಿದೆ. ಆದರೆ 'ಶಿಕ್ಷಣ'ದ ಮಹತ್ವ ತಿಳಿಯದವರು, ಅದರ ಅರಿವಿನ ಬಗ್ಗೆ ಪರಿಜ್ಞಾನ ಹೊಂದದವರು, ಬಡತನ ರೇಖೆಗಿಂತ ಕೆಳಗಿನವರು, ಈ ಗೊಂದಲಗಳ ನಡುವೆ ಸಿಲುಕಿದ್ದಾರೆ. ಶಿಕ್ಷಣವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಪ್ರಕ್ರಿಯೆಯಾಗಿ ಪರಿಗಣಿಸಿದರೆ, ಇದಕ್ಕೆ (ಬಂಡವಾಳ ತೊಡಗುವಿಸುವಿಕೆ) ಈ ಬಂಡವಾಳ ಹಾಕುವಾಗ ಪ್ರತಿಯೊಬ್ಬರಿಗೂ ಶಿಕ್ಷಣ 'ಭವಿಷ್ಯದನಿಧಿ' ಎಂಬ ನಿರೀಕ್ಷೆ ಇರುತ್ತದೆ. ಆ ನಿರೀಕ್ಷೆಗಳು ಸಫಲವಾಗದೇ ಇದ್ದಾಗ ಶಿಕ್ಷಣದ ಮೂಲಭೂತ ಉದ್ದೇಶವೇನು ? ಎಂಬುದು ಒಂದು ಜಿಜ್ಞಾಸೆಯಾಗಿಯೇ ಉಳಿಯುತ್ತದೆ. ನಮ್ಮ ದೇಶದಲ್ಲಿ ಅನಕ್ಷರತೆ ಜಾಸ್ತಿ ಇದೆ. ಅದಕ್ಕಾಗಿ ಸಾಮಾಜಿಕವಾಗಿ ಜಾಗೃತರಾಗದ ಜನರಲ್ಲಿ ಗೊಂದಲಗಳು ಸಹಜವಾಗುತ್ತಿವೆ. ಬಡತನ, ಅಜ್ಞಾನ ಇಂದಿಗೂ ದೇಶದಲ್ಲಿ ಕಾಡುತ್ತಿರುವ ಸಮಸ್ಯೆ.

2.11. ಕರ್ನಾಟಕದಲ್ಲಿ ಸಾಕ್ಷರತಾ ಮಟ್ಟ :

"ಕರ್ನಾಟಕವು ಕಳೆದ ಕೆಲವು ದಶಕಗಳಲ್ಲಿ ಸಾಕ್ಷರತೆ ಕುರಿತಂತೆ ಪ್ರಗತಿ ಸಾಧಿಸಿದ್ದರೂ ಸಹ, ಈ ಕ್ಷೇತ್ರದಲ್ಲಿ ಸಾಧನೆ ಅತೀ ಸಾಧಾರಣವಾಗಿದೆ. ವಾಸ್ತವಿಕವಾಗಿ, ಗ್ರಾಮೀಣ ಪ್ರದೇಶಗಳಲ್ಲಿನ ಸ್ಥಿತಿ, ಕಳವಳಕ್ಕೆ ಕಾರಣವಾಗಿದೆ"(ಮಹಬಲೇಶ್ವರ ರಾವ್, 1999.) ನಾಡಿನ ಜನತೆಯ ಸಾಕ್ಷರತೆ ಪ್ರಮಾಣವು 1991ರ ಜನಗಣತಿ ಆಧರಿಸಿ, ಗಮನಿಸಿ ವಿಶ್ಲೇಷಿಸಿದಾಗ ಈ ಮಾತು ನಿಜವೆಂಬುದಾಗಿ ತೋರುತ್ತದೆ.

ಸಾಕ್ಷರತಾ ದರ 1961ರಲ್ಲಿ ಶೇ. 30ರಷ್ಟು ಇದ್ದು, 1991ರಲ್ಲಿ ಶೇ. 56ನ್ನು ತಲುಪಿರುವುದನ್ನು ಜನಗಣತಿ ಅಂಕಿ-ಅಂಶಗಳು ತೋರಿಸುತ್ತವೆ. 1996ರಲ್ಲಿ ಸಾಕ್ಷರತಾ ದರ ಶೇ. 63ರನ್ನು ಮೀರಿತ್ತೆಂದು ಶಿಕ್ಷಣದ ಇಲಾಖೆ ಅಂದಾಜು ಮಾಡಿದೆ. ಪುರುಷರು ಮತ್ತು ಮಹಿಳೆಯರ ನಡುವಿನ ಸಾಕ್ಷರತಾ ಅಂತರಗಳು ಕಡಿಮೆಯಾಗುತ್ತಿವೆಯಾದರೂ, ಪುರುಷರ ಪೈಕಿ ಸಾಕ್ಷರತೆ ಸುಮಾರು ಶೇ. 67ರಷ್ಟು ಅತ್ಯಧಿಕವಾಗಿ ಇದ್ದ ಸಮಯದಲ್ಲೇ ಮಹಿಳೆಯರಲ್ಲಿ ಇದು ಕೇವಲ ಶೇ. 44 ಆಗಿದೆಯೆಂದು 1991ರ ಜನಗಣತಿ ಅಂಕಿ-ಅಂಶಗಳು ತಿಳಿಸುತ್ತವೆ. ದಕ್ಷಿಣ ಕನ್ನಡ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆ ಅತ್ಯಧಿಕವಾಗಿ, ಶೇ. 68ರಷ್ಟು ಇದ್ದರೂ ಸಹ, ಇದು ಕೇರಳ, ತಮಿಳುನಾಡು ಹಾಗೂ ಮಹಾರಾಷ್ಟ್ರ ಮುಂತಾದ ರಾಜ್ಯಗಳು ಸಾಧಿಸಿರುವ ಅತ್ಯುನ್ನತ ಮಟ್ಟಗಳಿಗಿಂತ ಬಹಳ ಕಡಿಮೆಯಾಗಿದೆ. ಸಾಕ್ಷರತಾ ದರದಲ್ಲಿನ ವ್ಯತ್ಯಾಸ, ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಧಿಕವಾಗಿದೆ. ರಾಜ್ಯ ಗ್ರಾಮೀಣ ಮಹಿಳಾ ಸಾಕ್ಷರತೆಯು ಶೇ. 35ರಷ್ಟು ಮಾತ್ರವಾಗಿದ್ದು, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಗ್ರಾಮೀಣ ಮಹಿಳಾ ಸಾಕ್ಷರತಾ ದರ ಶೇ. 16ರ ಮಟ್ಟದಲ್ಲೇ ಇದೆ. ಮಹಿಳಾ ಸಾಕ್ಷರತೆಯು ಗುಲಬರ್ಗಾ ವಿಭಾಗದ ಇನ್ನುಳಿದ ಎರಡು ಜಿಲ್ಲೆಗಳಾದ ಬಳ್ಳಾರಿ ಮತ್ತು ಬೀದರಗಳಲ್ಲೂ ಶೇ. 30ಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿಯೂ ಮಹಿಳಾ ಸಾಕ್ಷರತಾ ಪ್ರಮಾಣ, ರಾಷ್ಟ್ರೀಯ ಸರಾಸರಿ 39ಕ್ಕಿಂತಲೂ ಬಹಳ ಕಡಿಮೆ ಇದೆ ಎಂಬುದು ಆತಂಕದ ವಿಚಾರವಾಗಿದೆ. ಇದಕ್ಕೆ ಪ್ರತಿಯಾಗಿ ದಕ್ಷಿಣ ಕನ್ನಡ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲದೇ ಕೊಡಗು ಮತ್ತು ಉತ್ತರ ಕನ್ನಡ, ಸಾಪೇಕ್ಷವಾಗಿ ಅಧಿಕ ಮಹಿಳಾ ಸಾಕ್ಷರತಾ ದರವನ್ನು ಸಾಧಿಸಿರುವ ಹೆಗ್ಗಳಿಕೆ ಗಳಿಸಿವೆ.

ಇಡೀ ರಾಜ್ಯದಲ್ಲಿ 1961 ಮತ್ತು 1996ರ ನಡುವಣ ಅವಧಿಯಲ್ಲಿ ಸಾಕ್ಷರತಾ ಪ್ರಮಾಣ, ಶೇ. 11.3ರಷ್ಟು ಸುಧಾರಿಸಿತು. ಧಾರವಾಡ 63% ಅತ್ಯಂತ ಮಂದಗತಿ ಬೆಳವಣಿಗೆಯನ್ನೂ, ಬೀದರ ಶೇ. 20.0 ಮೀರಿದ ಹೆಚ್ಚಳವನ್ನೂ ಸಾಧಿಸಿದವು. ಪುರುಷರ ಶೇ. 74ರಷ್ಟು ಹೆಚ್ಚಾದ ಸಮಯದಲ್ಲೇ ಮಹಿಳಾ ಸಾಕ್ಷರತೆಯ ಬೆಳವಣಿಗೆ ಹೆಚ್ಚು ಚುರುಕು ಗೊಂಡು ಶೇ. 21.5 ತಲುಪಿತು. ಬೀದರ್‌ನಲ್ಲಿ 1961ರಲ್ಲಿ ಶೇ. 6ಕ್ಕೂ ಕಡಿಮೆ ಇದ್ದ ಸಾಕ್ಷರತಾ ದರ 1996ರಲ್ಲಿ ಶೇ.41ಕ್ಕೆ ಏರಿತು. ಹೀಗಾಗಿ ಶೇ. 6.50ರ ಹೆಚ್ಚಳ ಸಾಧಿಸಿ, ಸಾಧನೆಯಲ್ಲಿ ಬೀದರ್ ಅಗ್ರಸ್ಥಾನಗಳಿಸಿತು. ಗುಲಬರ್ಗಾ ಮತ್ತು ಮಂಡ್ಯ ಜಿಲ್ಲೆಗಳು ಸಹ ಶೇ. 40ಕ್ಕೂ ಹೆಚ್ಚಿನ ಸಾಕ್ಷರತೆಯನ್ನು ಈ ಅವಧಿಯಲ್ಲಿ ಸಾಧಿಸಿವೆ.

ಕರ್ನಾಟಕದಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನಗಳು 1989-90ರಲ್ಲಿ ವಿಜಾಪುರ ಮತ್ತು ದಕ್ಷಿಣ ಕನ್ನಡ ದಲ್ಲಿ ಆರಂಭವಾಗಿ, ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿಲ್ಪಟ್ಟವು. ಸ್ವತಂತ್ರ ಮೌಲ್ಯ ಮಾಪನ ಅಂದಾಜಿನ ಪ್ರಕಾರ, 9-35ರ ವಯಸ್ಸಿನ ಗುಂಪಿನ 80 ಲಕ್ಷ ಜನರನ್ನು ಸಾಕ್ಷರತೆಯ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿತ್ತು. 1997-98ರಲ್ಲಿ 35 ಲಕ್ಷ ಮಂದಿ ಅಕ್ಷರಸ್ಥರಾಗಿದ್ದರು.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಪ್ರಚಾರ ಕಾರ್ಯ ಜಾರಿಯಲ್ಲಿದೆ. ಕಲಿಕೆಗಾಗಿ ಗುರುತಿಸಲ್ಪಟ್ಟು, ಮೂಲ ಸಾಕ್ಷರತಾ ಮಟ್ಟವನ್ನು ಸಾಧಿಸಲಾಗದಿದ್ದ ಜನರನ್ನು ಹೊಂದಿದ್ದ ಇತರ ಜಿಲ್ಲೆಗಳಲ್ಲಿ 1997-98ನೆಯ ವರ್ಷದಲ್ಲಿ ಒಂದು ಹೊಸ ಪ್ರಯತ್ನವನ್ನು ಹೂಡಲಾಯಿತು.

1997ರ ನವೆಂಬರ್‌ನಲ್ಲಿ ಈ ಉದ್ದೇಶಕ್ಕಾಗಿ 'ಕನ್ನಡನಾಡು ಸಾಕ್ಷರನಾಡು' ಎಂಬ ಆಂದೋಲನವನ್ನು ಆರಂಭಿಸಲಾಯಿತು.

ಒಟ್ಟಾರೆ ಸಾಕ್ಷರತೆಯು 1961ರ ನಂತರ ಶೇಕಡ 88ಕ್ಕೂ ಹೆಚ್ಚಾಗಿದೆ. ಶೇಕಡ 29.80ರಿಂದ ಹೆಚ್ಚಿ 1990-91ರಲ್ಲಿ ಶೇ.56.04 ತಲುಪಿತ್ತು. ಸಾಕ್ಷರತಾ ಆಂದೋಲಗಳು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡು 3.52 ದಶಲಕ್ಷ ಅನಕ್ಷರಸ್ಥರನ್ನು ಸಾಕ್ಷರಗೊಳಿಸಲಾಗಿದೆ.

ಇನ್ನೂ ಹತ್ತು ಜಿಲ್ಲೆಗಳಲ್ಲಿ ರಾಷ್ಟ್ರದ ಸರಾಸರಿಗಿಂತ ಶೇ. 39ಕ್ಕೂ ಕಡಿಮೆಯಾಗಿ ಮಹಿಳಾ ಸಾಕ್ಷರತಾ ದರವು 39ಕ್ಕೂ ಕಡಿಮೆಯಾಗಿದೆ. ಹಾಗೂ ರಾಯಚೂರಿನ ಗ್ರಾಮೀಣ ಮಹಿಳಾ ಸಾಕ್ಷರತಾ ದರವು ಕೇವಲ ಶೇ. 16.84ಕ್ಕೆ ನಿಂತಿದೆ.

ತಃಖ್ತೆ-1 : ಜಿಲ್ಲಾವಾರು ಸಾಕ್ಷರತಾ ದರಗಳು :

ಜಿಲ್ಲಾವಾರು ಸಾಕ್ಷರತಾ ದರಗಳು :						
ಜಿಲ್ಲೆ	1991			1996		
	ಪು.	ಮ.	ಒಟ್ಟು	ಪು.	ಮ.	ಒಟ್ಟು
ಬೆಂಗಳೂರು	82.9	68.8	76.3	89.1	77.5	83.6
ಬೆಂಗಳೂರು (ಗ್ರಾಮಾಂತರ)	61.5	38.1	50.2	66.7	43.4	55.4
ಬೆಳಗಾವಿ	66.6	38.7	53.0	73.1	46.1	59.9
ಬಳ್ಳಾರಿ	58.7	32.0	45.6	64.3	38.1	51.4
ಬೀದರ್	59.0	30.5	45.1	67.5	41.6	54.9
ಬಿಜಾಪುರ	69.7	40.1	55.1	78.0	53.5	66.0
ಚಿಕ್ಕಮಗಳೂರು	70.6	51.3	61.0	77.2	59.5	68.4
ಚಿತ್ರದುರ್ಗ	66.9	43.4	55.5	73.5	51.4	62.8
ದಕ್ಷಿಣ ಕನ್ನಡ	84.4	68.0	75.9	91.9	78.5	85.0
ಧಾರವಾಡ	71.4	45.2	58.7	76.3	52.0	64.5
ಗುಲ್ಬರ್ಗಾ	52.1	24.5	38.5	57.4	30.9	44.5
ಹಾಸನ	68.6	44.9	56.8	77.2	55.1	66.1
ಕೊಡಗು	75.3	61.2	68.3	81.9	68.4	75.1
ಕೋಲಾರ	62.7	37.7	50.4	70.2	46.0	58.3
ಮಂಡ್ಯ	59.2	36.7	48.1	67.4	46.9	57.3
ಮೈಸೂರು	56.2	37.9	47.3	63.4	46.0	54.9
ರಾಯಚೂರು	49.5	22.1	36.0	53.6	26.5	40.2
ಶಿವಮೊಗ್ಗ	71.2	51.4	61.5	77.3	59.0	68.3
ತುಮಕೂರು	66.5	41.9	54.5	73.3	51.1	62.5
ಉತ್ತರ ಕನ್ನಡ	76.4	56.8	66.7	82.0	64.0	73.1
ಕರ್ನಾಟಕ	**67.3**	**44.3**	**56.0**	**73.7**	**57.6**	**63.4**

ಮೂಲ : ಜನಗಣತಿ, 1991 ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ.

ತಃಖ್ತೆ-2 : ಕರ್ನಾಟಕದ 27 ಜಿಲ್ಲೆಗಳಿಗಾಗಿ ಆಯ್ದ ಅಂಕಿ-ಅಂಶ.

ಸಾಕ್ಷರತೆ :

ಜಿಲ್ಲೆ	ಅಕ್ಷರಸ್ಥರು			ಸಾಕ್ಷರತಾ ದರ		
	ಒಟ್ಟಾರೆ	ಪುರುಷರು	ಮಹಿಳೆಯರು	ಒಟ್ಟಾರೆ	ಪುರುಷರು	ಮಹಿಳೆಯರು
ಬಾಗಲಕೋಟೆ	608489	392888	215601	53.7	68.9	38.3
ಬೆಂಗಳೂರು	3161701	1814197	1347504	76.3	82.9	68.8
ಬೆಂಗಳೂರು (ಗ್ರಾ)	708577	447103	261474	50.2	61.5	38.2
ಬೆಳಗಾವಿ	1571044	1011113	559931	53.0	66.6	38.7
ಬಳ್ಳಾರಿ	612887	401043	211844	45.9	59.1	32.2
ಬೀದರ್	451060	302345	148715	45.1	59.0	30.5
ಬಿಜಾಪುರ	699185	447980	251205	56.5	70.4	41.7
ಚಿಕ್ಕಮಗಳೂರು	531164	310520	220644	61.0	70.6	51.3
ಚಿತ್ರದುರ್ಗ	572907	362925	209982	52.3	64.5	39.4
ಚಾಮರಾಜ ನಗರ	286946	182157	104789	38.2	47.3	28.6
ದಾವಣಗೆರೆ	722973	445130	277843	56.0	66.8	44.4
ಧಾರವಾಡ	720529	441181	279348	62.7	74.2	50.4
ದಕ್ಷಿಣ ಕನ್ನಡ	1074130	585586	488544	76.7	84.8	68.7
ಗದಗ	394758	256610	138148	55.9	71.6	39.7
ಗುಲ್ಬರ್ಗಾ	791628	544949	249979	38.5	52.1	24.5
ಹಾಸನ	756948	457334	299614	56.9	68.9	44.9
ಹಾವೇರಿ	583744	366405	217339	56.1	68.0	43.3
ಕೊಡಗು	285280	158656	126624	68.3	75.4	61.2
ಕೋಲಾರ	938777	594076	344701	50.5	62.7	37.8
ಕೊಪ್ಪಳ	290796	204763	86033	38.2	53.5	22.8
ಮಂಡ್ಯ	675502	422781	252721	48.1	59.2	36.7
ಮೈಸೂರು	980202	589759	390443	50.9	59.7	41.6
ರಾಯಚೂರು	369657	253958	115699	34.3	46.7	21.7
ಶಿವಮೊಗ್ಗ	787147	458722	328425	63.9	43.1	54.3
ತುಮಕೂರು	1065934	664855	401079	54.5	66.5	41.9
ಉಡುಪಿ	681989	353939	328050	74.6	83.7	66.8
ಉತ್ತರ ಕನ್ನಡ	689278	400692	288586	66.7	76.4	56.8
ಕರ್ನಾಟಕ	**21013232**	**12871667**	**8141565**	**56.0**	**67.3**	**44.3**

ಮೂಲ : 1991ರ ಜನಗಣತಿ.

ತಃಖ್ತೆ-3 : ಕರ್ನಾಟಕದ 27 ಜಿಲ್ಲೆಗಳಿಗಾಗಿ ಆಯ್ದ ಅಂಕಿ-ಅಂಶ.

ವಿಸ್ತೀರ್ಣ ಮತ್ತು ಜನಸಂಖ್ಯೆ

ಜಿಲ್ಲೆ	ವಿಸ್ತೀರ್ಣ (ಚ.ಕಿ.ಮೀ)	ಜನಸಂಖ್ಯೆ								
		ಒಟ್ಟಾರೆ	ಪುರುಷರು	ಮಹಿಳೆಯರು	ಸಾಂದ್ರತೆ	ಎಸ್‌ಸಿ	ಎಸ್‌ಟಿ	ಎಸ್‌ಸಿ (%)	ಎಸ್‌ಟಿ (%)	ಲೈಂಗಿಕ ಪ್ರಮಾಣ
ಬಾಗಲಕೋಟೆ	6594	1394542	703762	690780	211	218349	22175	15.7	1.6	982
ಬೆಂಗಳೂರು ನಗರ	2190	4839162	2542950	2296212	2210	711775	53631	14.7	1.1	903
ಬೆಂಗಳೂರು (ಗ್ರಾ)	5815	1673194	860231	812963	288	326599	49305	19.5	2.9	945
ಬೆಳಗಾವಿ	13415	3583606	1834005	1749601	267	406955	83076	11.4	2.3	954
ಬಳ್ಳಾರಿ	8419	1656000	842300	813700	197	311252	147869	18.8	8.9	966
ಬೀದರ್	5448	1255798	643191	612607	231	260033	104215	20.7	8.3	952
ಬಿಜಾಪುರ	10475	1533448	787257	746191	146	291513	17306	19.0	1.1	948
ಚಿಕ್ಕಮಗಳೂರು	7201	1017283	514526	502757	141	195852	26534	19.3	2.6	977
ಚಿತ್ರದುರ್ಗ	8388	1312717	672849	639868	156	285621	222763	21.8	17	951
ಚಾಮರಾಜ ನಗರ	5685	883365	452333	431032	156	206141	38703	23.3	4.4	953
ದಕ್ಷಿಣ ಕನ್ನಡ	4843	1633392	808820	824572	337	114272	64493	7.0	3.9	1019
ದಾವಣಗೆರೆ	6018	1559222	803083	756139	259	302344	155600	19.4	10	942
ಧಾರವಾಡ	4230	1374895	710671	664224	325	124645	23396	9.1	1.7	935
ಗದಗ	4657	859042	436321	422721	184	118850	20534	13.8	2.4	969
ಗುಲ್ಬರ್ಗಾ	16224	2582169	1316088	1266081	159	610641	106935	23.6	4.1	962
ಹಾಸನ	6814	1569684	785144	784540	230	273379	16581	17.4	1.1	999
ಹಾವೇರಿ	4851	1269213	655426	613787	262	167004	61169	13.2	4.8	936
ಕೊಡಗು	4102	488455	246869	241586	119	59009	40312	12.1	8.3	979
ಕೋಲಾರ	8223	2216889	1128316	1088573	270	570400	153019	25.7	6.9	965
ಕೊಪ್ಪಳ	8458	958078	483701	474377	113	148775	59828	15.5	6.2	981
ಮಂಡ್ಯ	4961	1644374	837597	806777	331	226626	11936	13.8	0.7	963
ಮೈಸೂರು	6269	2281653	1168291	1113362	364	391780	63399	17.2	2.8	953
ರಾಯಚೂರು	5559	1351809	683258	668551	243	249148	120444	18.4	8.9	978
ಶಿವಮೊಗ್ಗ	8465	1452259	739561	712698	172	236526	32948	16.3	2.3	964
ತುಮಕೂರು	10598	2305819	1177233	1128586	218	408524	167632	17.7	7.3	959
ಉಡುಪಿ	3598	1060872	497436	563436	295	61276	41666	5.8	3.9	1133
ಉತ್ತರ ಕನ್ನಡ	10291	1220260	620697	599563	119	91990	10168	7.5	0.8	966
ಕರ್ನಾಟಕ	191791	44977200	2251916	22025284	235	7369279	191569 1	16.4	4.3	960

ಮೂಲ : 1991ರ ಜನಗಣತಿ

ಅಧಾರ : ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ - 1999/ಮಾನವ ಅಭಿವೃದ್ಧಿಯಲ್ಲಿ ಪ್ರಗತಿ ಪು.11.

ತಃಖ್ತೆ-4 : ಭಾರತದ ಜನಗಣತಿ - ಒಂದು ನೋಟ.

	1991	2001
ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು	32	35
ವಿಸ್ತೀರ್ಣ ಚ.ಕಿ.ಮೀ.ಗಳಲ್ಲಿ	306502700	306502700

ಒಟ್ಟು ಜನಸಂಖ್ಯೆ : ಒಟ್ಟಾರೆ:-	838583988	1027015247
ಪುರುಷರು	435216358	531277078
ಮಹಿಳೆಯರು	403367630	495738169

ದಶ ವಾರ್ಷಿಕ ಬೆಳವಣಿಗೆ ದರ	**1981-91**	**1991-2001**
ಅಂದಾಜು ಶೇಕಡ	161242280 23.81	180627359 21.34
ಜನಸಾಂದ್ರತೆ (ಒಂದು ಚ. ಕಿ. ಮಿಾ)	267	324
ಲಿಂಗವಾರು ಪ್ರಮಾಣ		
1000 ಪುರುಷರಿಗೆ ಮಹಿಳೆಯರ ಸಂಖ್ಯೆ	927	933
0-6 ಜನಸಂಖ್ಯೆ ಒಟ್ಟು ಅಂದಾಜು	150421175	157863145
ಶೇಕಡ	17.94	15.42
ಗಂಡು :- ಅಂದಾಜು	77322151	81911041
ಶೇಕಡ	17.77	15.47
ಹೆಣ್ಣು : - ಅಂದಾಜು ಶೇಕಡ	73099024 18.12	75952104 15.36
ಸಾಕ್ಷರತೆ ಒಟ್ಟು ಅಂದಾಜು ಶೇಕಡ	359284417 52.21	566714995 65.38
ಪುರುಷರು :- ಅಂದಾಜು ಶೇಕಡ :-	229531935 64.13	339969048 75.85
ಮಹಿಳೆಯರು:- ಅಂದಾಜು ಶೇಕಡ :-	129752482 39.29	226745947 54.16

ಮೂಲ: ರಿಜಿಸ್ಟ್ರಾರ್ ಜನರಲ್, ಭಾರತ, ನವದೆಹಲಿ.

ಸೂಚನೆ : ಸಾಕ್ಷರತಾ ದರವನ್ನು ಅಳೆಯಲು 7 ವರ್ಷ ವಯಸ್ಸಿನೊಳಗಿನ ಎಲ್ಲಾ ಮಕ್ಕಳನ್ನು ಅನಕ್ಷರಸ್ಥರು ಎಂದು ಪರಿಗಣಿಸಲಾಗಿದೆ. (0-6 ವಯಸ್ಸಿನ ಮಕ್ಕಳನ್ನು ಹೊರತುಪಡಿಸಿದೆ).

2.12. ಕರ್ನಾಟಕದ ಜನಗಣತಿ- ಒಂದು ನೋಟ :

	1991	2001
ಒಟ್ಟು ಜಿಲ್ಲೆಗಳು	20	27
ವಿಸ್ತೀರ್ಣ ಚ.ಕಿ.ಮೀ.ಗಳಲ್ಲಿ	191791	191791

ಒಟ್ಟು ಜನಸಂಖ್ಯೆ : ಒಟ್ಟಾರೆ:-	4,49,77,201	5,27,33,958
ಪುರುಷರು	22,951,917	2,6856343
ಮಹಿಳೆಯರು	2,20,25,285	2,58,77,615

ದಶ ವಾರ್ಷಿಕ ಬೆಳವಣಿಗೆ ದರ	**1981-91**	**1991-2001**
ಅಂದಾಜು ಶೇಕಡ	7841487 21.12	7756757 17.25
ಜನಸಾಂದ್ರತೆ (ಒಂದು ಚ. ಕಿ. ಮಿ)	235	275
ಲಿಂಗವಾರು ಪ್ರಮಾಣ		
1000 ಪುರುಷರಿಗೆ ಮಹಿಳೆಯರ ಸಂಖ್ಯೆ	**960**	**964**
0-6 ಜನಸಂಖ್ಯೆ ಒಟ್ಟು ಅಂದಾಜು	7477611	6826168
ಶೇಕಡ		12.94
ಗಂಡು :- ಅಂದಾಜು	38,15,832	35,01,499
ಶೇಕಡ	16.63	13.04
ಹೆಣ್ಣು : - ಅಂದಾಜು ಶೇಕಡ	36,61,779 16.63	33,24,669 12.85
ಸಾಕ್ಷರತೆ ಒಟ್ಟು ಅಂದಾಜು ಶೇಕಡ	2,10,13,193 56.04	3,07,74,998 67.04
ಪುರುಷರು :- ಅಂದಾಜು ಶೇಕಡ :-	1,28,71,628 67.26	1,78,17,682 76.29
ಮಹಿಳೆಯರು:- ಅಂದಾಜು ಶೇಕಡ :-	81,41,565 44.34	1,29,57,306 57.45

ಸೂಚನೆ:- ಸಾಕ್ಷರತಾ ದರವನ್ನು ಅಳೆಯಲು ಏಳು ವರ್ಷ ವಯಸ್ಸಿನ ಎಲ್ಲಾ ಮಕ್ಕಳನ್ನು ಅನಕ್ಷರಸ್ಥರು ಎಂದು ಪರಿಗಣಿಸಲಾಗಿದೆ. 0-6 ವಯಸ್ಸಿನ ಮಕ್ಕಳನ್ನು ಹೊರತುಪಡಿಸಿದೆ.

ತಃಖ್ತೆ-5 : ಜಿಲ್ಲಾವಾರು ಲಿಂಗವಾರು ಪ್ರಮಾಣ (ಶ್ರೇಣಿವಾರು).

2001ರ ಶ್ರೇಣಿ	ಜಿಲ್ಲೆ	1000 ಪುರುಷರಿಗೆ ಮಹಿಳೆಯರ ಸಂಖ್ಯೆ		1991ರ ಶ್ರೇಣಿ
		2001	1991	
1	2	3	4	5
01	ಉಡುಪಿ	1127	1134	1
02	ದಕ್ಷಿಣ ಕನ್ನಡ	1023	1020	2
03	ಹಾಸನ	1005	999	3
04	ಕೊಡಗು	996	979	6
05	ಮಂಡ್ಯ	985	963	14
06	ಚಿಕ್ಕಮಗಳೂರು	984	977	8
07	ಕೊಪ್ಪಳ	982	981	5
08	ರಾಯಚೂರು	980	978	7
09	ಬಾಗಲಕೋಟೆ	977	982	4
10	ಶಿವಮೊಗ್ಗ	977	964	13
11	ಉತ್ತರ ಕನ್ನಡ	970	966	11
12	ಕೋಲಾರ	270	965	12
13	ಬಳ್ಳಾರಿ	969	966	10
14	ಗದಗ	968	969	9
15	ಚಾಮರಾಜ ನಗರ	968	969	9
16	ತುಮಕೂರು	966	959	16
17	ಮೈಸೂರು	965	953	18
18	ಗುಲ್ಬರ್ಗಾ	964	962	17
19	ಬೆಳಗಾವಿ	959	954	17
20	ಚಿತ್ರದುರ್ಗ	955	951	21
21	ಬೆಂಗಳೂರು (ಗ್ರಾ)	955	951	21
22	ದಾವಣಗೆರೆ	951	942	24
23	ಬೀದರ್	948	952	20
24	ಬಿಜಾಪುರ	948	948	22
25	ಧಾರವಾಡ	948	935	26
26	ಹಾವೇರಿ	942	936	25
27	ಬೆಂಗಳೂರು ನಗರ	906	903	27

ತಃಖ್ತೆ-6 : ಜಿಲ್ಲಾವಾರು ಜನಸಂಖ್ಯಾ ಸಾಂದ್ರತೆ .

2001ರ ಶ್ರೇಣಿ	ಜಿಲ್ಲೆ	1000 ಪುರುಷರಿಗೆ ಮಹಿಳೆಯರ ಸಂಖ್ಯೆ		1991ರ ಶ್ರೇಣಿ
		2001	1991	
1	2	3	4	5
01	ಬೆಂಗಳೂರು ನಗರ	2979	2210	1
02	ದಕ್ಷಿಣ ಕನ್ನಡ	416	363	2
03	ಮೈಸೂರು	383	333	3
04	ಧಾರವಾಡ	376	333	5
05	ಮಂಡ್ಯ	355	331	4
06	ಬೆಂಗಳೂರು (ಗ್ರಾ)	323	288	6
07	ಬೆಳಗಾವಿ	314	267	9
08	ಕೋಲಾರ	307	270	7
09	ದಾವಣಗೆರೆ*	302	263	10
10	ಹಾವೇರಿ *	298	263	11
11	ಉಡುಪಿ *	286	268	8
12	ಬೀದರ್	276	231	12
13	ಹಾಸನ	253	230	13
14	ಬಾಗಲಕೋಟೆ	251	211	15
15	ತುಮಕೂರು	243	218	14
16	ರಾಯಚೂರು	241	198	16
17	ಬಳ್ಳಾರಿ	240	196	17
18	ಗದಗ*	209	184	18
19	ಶಿವಮೊಗ್ಗ	193	171	20
20	ಗುಲ್ಬರ್ಗಾ	193	159	21
21	ಚಾಮರಾಜ ನಗರ*	189	173	19
22	ಚಿತ್ರದುರ್ಗ	179	156	22
23	ಬಿಜಾಪುರ	172	147	23
24	ಕೊಪ್ಪಳ*	166	133	25
25	ಚಿಕ್ಕಮಗಳೂರು	158	141	24
26	ಕೊಡಗು	133	119	26
27	ಉತ್ತರ ಕನ್ನಡ	132	119	27

* 1991ರ ನಂತರ ಅಸ್ತಿತ್ವಕ್ಕೆ ಬಂದ ಹೊಸ ಜಿಲ್ಲೆಗಳು.

ತಃಖ್ತೆ-7 : ಸಾಕ್ಷರತಾ ದರ 1961-2001:

ವರ್ಷ	ಒಟ್ಟು ಜನಸಂಖ್ಯೆ	ಪುರುಷರು	ಮಹಿಳೆಯರು
1	2	3	4
1961	29.80	42.29	16.70
1971	36.83	48.51	24.55
1981	46.21	58.73	33.17
1991	56.04	67.26	44.34
2001	67.04	76.29	57.45

ಸೂಚನೆ: 1961 ಮತ್ತು 1971 ಸಾಕ್ಷರತಾ ದರವು ಐದು ವರ್ಷ **ವಯಸ್ಸಿನ ಮೇಲ್ಪಟ್ಟವರಿಗೆ ಸಂಬಂಧಿಸಿದೆ.** 1981 ರಿಂದ 2001ರ ಸಾಕ್ಷರತಾ ದರವು 7 ವರ್ಷ ವಯಸ್ಸಿನ ಮೇಲ್ಪಟ್ಟು ಗಣನೆಗೆ ತೆಗೆದುಕೊಳ್ಳಲಾಗಿದೆ.

ನಮ್ಮ ದೇಶದಲ್ಲಿ ಇನ್ನೂ ಅನಕ್ಷರಸ್ಥರ ಸಂಖ್ಯೆ ಹೆಚ್ಚಿದೆ ಎಂಬುದಕ್ಕೆ 2001ರ ಜನಗಣತಿಯ ಅಂದಾಜು ಸಾಕ್ಷರತಾ ದರಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. 2001ರ ಜನಗಣತಿ ಪ್ರಕಾರ 67.04% ಸಾಕ್ಷರತೆ ಸಾಧನೆಯಾಗಿರುವುದು ಕಂಡು ಬರುತ್ತದೆ. ಇನ್ನೂ 33%ರಷ್ಟು ಅನಕ್ಷರಸ್ಥರು ದೇಶದಲ್ಲಿದ್ದಾರೆ.

ದೇಶದ ಜನಸಂಖ್ಯೆ	:	102,70,14,247
ಪುರುಷರು	:	53,12,77,078
ಮಹಿಳೆಯರು	:	49,57,38,169

19991-2001ರ ಅವಧಿಯಲ್ಲಿ (10 ವರ್ಷದಲ್ಲಿ ಒಟ್ಟು 21.34%) ಜನಸಂಖ್ಯೆ ಹೆಚ್ಚಳ ಕಂಡಿದೆ. ಲೈಂಗಿಕ ಪ್ರಮಾಣ 1000 ಪುರುಷರಿಗೆ, 933 ಮಹಿಳೆಯರು ಇರುವುದು ಆರೋಗ್ಯ ಪೂರ್ಣ ಬೆಳವಣಿಗೆ ಎನಿಸುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸಿಗುವ ಸ್ಥಾನಮಾನಗಳು ಇನ್ನೂ ಸಿಗಬೇಕಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣವೂ ಕೂಡ ಗಣನೀಯವಾಗಿ ಇಳಿಮುಖವಾಗಿದೆ.

ತಃಖ್ತೆ -8 :

ಕ್ರ. ಸಂ.	ರಾಜ್ಯ/ ಜಿಲ್ಲೆ	ಸಾಕ್ಷರತಾದರ					
		ಒಟ್ಟು ಜನಸಂಖ್ಯೆ		ಪುರುಷರು		ಮಹಿಳೆಯರು	
		1991	2001	1991	2001	1991	2001
1	2	3	4	5	6	7	8
01	ಕರ್ನಾಟಕ	56.04	67.04	67.26	76.29	44.34	57.45
02	ಬೆಳಗಾವಿ	53.00	64.42	66.65	75.89	38.69	52.53
03	ಬಾಗಲಕೋಟೆ	52.20	57.81	67.09	71.31	37.13	44.10
04	ಬಿಜಾಪುರ	56.27	57.46	70.18	68.10	41.57	46.19
05	ಗುಲ್ಬರ್ಗಾ	38.54	50.65	52.08	62.52	24.49	38.40
06	ಬೀದರ್	45.11	61.98	58.97	73.29	30.53	50.01
07	ರಾಯಚೂರು	34.34	49.54	46.75	62.02	21.70	36.84
08	ಕೊಪ್ಪಳ	38.23	55.02	53.47	69.15	22.78	40.76
09	ಗದಗ	55.88	66.27	71.63	79.55	39.68	52.58
10	ಧಾರವಾಡ	62.73	71.87	74.22	81.04	50.41	62.20
11	ಉತ್ತರ ಕನ್ನಡ	66.73	76.59	76.39	84.48	56.77	68.48
12	ಹಾವೇರಿ	56.10	68.09	68.05	77.94	43.28	57.60
13	ಬಳ್ಳಾರಿ	45.89	58.04	59.11	69.59	32.24	46.16
14	ಚಿತ್ರದುರ್ಗ	58.28	64.88	64.50	74.69	39.38	54.62
15	ದಾವಣಗೆರೆ	55.96	67.67	66.82	76.44	44.41	58.45
16	ಶಿವಮೊಗ್ಗ	63.90	74.86	73.12	82.32	54.33	67.24
17	ಉಡುಪಿ	74.47	79.87	83.58	86.59	66.64	74.02
18	ಚಿಕ್ಕಮಗಳೂರು	16.05	72.63	70.56	80.68	51.31	64.47
19	ತುಮಕೂರು	54.48	67.19	66.49	76.88	41.93	57.18
20	ಕೋಲಾರ	50.45	63.14	62.69	73.14	37.75	52.81
21	ಬೆಂಗಳೂರು ನಗರ	76.27	83.91	82.94	88.36	68.81	78.98
22	ಬೆಂಗಳೂರು (ಗ್ರಾ)	50.17	65.00	61.51	74.43	38.15	55.12
23	ಮಂಡ್ಯ	48.15	61.21	59.18	70.71	36.70	51.62
24	ಹಾಸನ	56.85	68.75	68.87	78.29	44.90	59.32
25	ದಕ್ಷಿಣ ಕನ್ನಡ	76.35	83.47	84.08	89.74	68.84	77.39
26	ಕೊಡಗು	68.35	78.17	75.35	83.80	61.22	72.53
27	ಮೈಸೂರು	50.88	63.69	59.71	71.30	41.60	55.81
	ಚಾಮರಾಜ ನಗರ	38.19	51.26	47.31	59.25	28.60	43.02

ಸೂಚನೆ: 7ವರ್ಷ ಮೇಲ್ಪಟ್ಟವರು ಹೊಂದಿದ ಸಾಕ್ಷರತಾ ಪ್ರಮಾಣವನ್ನು ಆಧರಿಸಿ, ಸಾಕ್ಷರತಾ ಧರ ಕಂಡು ಹಿಡಿದಿದೆ.

ಕರ್ನಾಟಕದ ಅಂಕಿ-ಅಂಶಗಳೂ ಕೂಡ, ಒಳ್ಳೆಯ ಬೆಳವಣಿಗೆಯನ್ನು ತೋರಿಸುತ್ತಿಲ್ಲ. 1991ರಲ್ಲಿ 56.04 ಇದ್ದ ಸಾಕ್ಷರತೆ ಪ್ರಮಾಣ 2001ರಲ್ಲಿ ಶೇಕಡ. 67.04 ಸ್ವಲ್ಪ ಪ್ರಮಾಣದಲ್ಲಿ ಏರಿಕೆ ಕಂಡಿದ್ದರೂ, ಅಷ್ಟೇ ಪ್ರಮಾಣದಲ್ಲಿ ಜನ ಸಂಖ್ಯೆ ಏರಿರುವುದು ಉತ್ತಮ ಬೆಳವಣಿಗೆ ಎನಿಸುವುದಿಲ್ಲ. ಪುರುಷರ ಸಾಕ್ಷರತಾ ಪ್ರಮಾಣ 1991ರಲ್ಲಿ 67.26% ಇದ್ದು, 2001ರಲ್ಲಿ 76.29 ಅದೇ ರೀತಿ ಮಹಿಳೆಯರಲ್ಲಿ 1991ರಲ್ಲಿ 44.34% ಇದ್ದು, 2001ರಲ್ಲಿ 57.45. ಈ ಬೆಳವಣಿಗೆ ಕರ್ನಾಟಕದ ಮಟ್ಟಿಗೆ ಆಶಾಭಾವನೆ ತಾಳಬಹುದಾದರೂ ಇನ್ನೂ ಶೇಕಡ. 33% ಜನ ಅನಕ್ಷರಸ್ಥರಿರುವುದು ವಿಷಾದನೀಯವೆನಿಸುತ್ತದೆ.

ರಾಜ್ಯದ ಸರಾಸರಿಗಿಂತ ಜಿಲ್ಲೆಗಳ ಪ್ರಮಾಣ ಗಮನಿಸಿದರೆ, ಬಳ್ಳಾರಿ ಜಿಲ್ಲೆಯಲ್ಲಿ 1991ರಲ್ಲಿ ಒಟ್ಟು 45.89% ಸಾಕ್ಷರತೆ ಇದ್ದದ್ದು, 2001ರಲ್ಲಿ 58.04% (12.14 ಹೆಚ್ಚಳ). ಪುರುಷರು 1991ರಲ್ಲಿ 59.11 ಸಾಕ್ಷರರಾದರೆ, 2001ರಲ್ಲಿ 69.59% (10.48 ಹೆಚ್ಚಳ). ಮಹಿಳೆಯರ ಸಾಕ್ಷರತಾ ಪ್ರಮಾಣ 1991ರಲ್ಲಿ 32.24% ಇದ್ದದ್ದು, 2001ರಲ್ಲಿ 46.16% (13.92% ಹೆಚ್ಚಳ) ಕಂಡು ಬಂದಿದೆ.

1991ರ ಜನಗಣತಿ ಆಧರಿಸಿ, ಹತ್ತು ವರ್ಷಗಳಲ್ಲಿ ಆದ ಬದಲಾವಣೆಗಳನ್ನು ಗಮನಿಸಿದರೆ, ಜನರಲ್ಲಿ 'ಶಿಕ್ಷಣದ' ಬಗ್ಗೆ ಅರಿವು ಮೂಡಿಸುವಲ್ಲಿ ಇನ್ನೂ ಸಾಕಷ್ಟು ಪ್ರಯತ್ನವನ್ನು ಮಾಡಬೇಕಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣವಂತು ಅತ್ಯಂತ ಶೋಚನೀಯ. ಮಹಿಳೆಯ ಶಿಕ್ಷಣ ಕುರಿತು ಹೆಚ್ಚಿನ ಕಾಳಜಿ ಅಗತ್ಯವೆನಿಸುತ್ತದೆ.

2.13. ಶಿಕ್ಷಣವೆಂಬುದು ಸಾಮಾಜಿಕ ಮತ್ತು ವೈಯಕ್ತಿಕ ಅಗತ್ಯ :

ಸಮಾಜದಲ್ಲಿ ಪ್ರತಿಯೊಬ್ಬರೂ ಸಂಘಜೀವಿಗಳು. ಬದುಕುವ ಯಾವನೇ ವ್ಯಕ್ತಿ 'ಸಂಘ ಜೀವಿ'. ಸಮಾಜ ಬಿಟ್ಟು ವ್ಯಕ್ತಿ ಇಲ್ಲ. ಭಾರತದಂತಹ ದೇಶದಲ್ಲಿ ಅದೂ ಇಪ್ಪತ್ತೊಂದನೇ ಶತಮಾನದಲ್ಲಿ ಇನ್ನೂ ಬಡತನ, ಅಜ್ಞಾನ, ನಿರುದ್ಯೋಗ, ಅನಕ್ಷರತೆ, ಮೂಢ ನಂಬಿಕೆ ರೂಢಿಗತ ಸಂಪ್ರದಾಯಗಳು ಸಹಜವಾಗಿಯೇ ಬೇರು ಬಿಟ್ಟಿವೆ. ಯಾವುದೇ ವರ್ಗದ ಯಾವುದೇ ಕುಟುಂಬ ಮೇಲೆ ಬರಬೇಕಾದರೆ, ದುಡಿದು ತಿನ್ನುವ ಕೈಗಳು ಬಲಗೊಳ್ಳಬೇಕು. ಹಾಗಾದರೆ ಮಾತ್ರ ಕುಟುಂಬದ ಎಲ್ಲರ ಬದುಕು ಹಸನಾಗಲು ಸಾಧ್ಯ. ಶೋಷಿತ ಸಮಾಜದಲ್ಲಿ ಶೀಘ್ರವಾಗಿ ಪರಿವರ್ತನೆಯನ್ನು ಕಾಣದಿದ್ದರೂ ಮನೆಗೊಬ್ಬ ವಿದ್ಯಾವಂತ ನಿದ್ದರೆ, ಇಡೀ ಕುಟುಂಬವನ್ನು ಸಾಕಬಹುದು. ಕುಲ ಕಸಬುಗಳು ನಶಿಸುತ್ತಿರುವ ಈ ಸಂದರ್ಭದಲ್ಲಿ 'ಶಿಕ್ಷಣ' ತುಂಬಾ ಅಗತ್ಯವೆನಿಸುತ್ತದೆ. ಒಂದು ಮನೆಯಲ್ಲಿ ಒಬ್ಬ ವ್ಯಕ್ತಿ ವಿದ್ಯಾವಂತನಾದರೆ ಇಡೀ ಕುಟುಂಬವನ್ನು ಸಾಕಬಹುದು. 'ಶಿಕ್ಷಣ'ದಿಂದ ತಕ್ಕಮಟ್ಟಿಗಾದರೂ ಜನಜಾಗೃತಿಗೊಂಡು 'ಓದನ್ನು' ಮುಖ್ಯವಾಗಿಸಿಕೊಳ್ಳುವುದು ಗಮನಾರ್ಹ ಬೆಳವಣಿಗೆ. 'ನಾನು ಓದಿದರೆ ಇನ್ನೂ ಕೆಲವರನ್ನು ಮುಂದೆ ತರಬಹುದು' ಎಂಬ ಭಾವನೆ ಜನರಲ್ಲಿ ಈಗೀಗ ಮೂಡುತ್ತಿದೆ.

ಪ್ರತಿಯೊಬ್ಬರಿಗೂ ಶಿಕ್ಷಣದ ಹಸಿವು ಹೆಚ್ಚ ತೊಡಗಿರುವುದರಿಂದ ಶಿಕ್ಷಣದಲ್ಲಿ ಆಗತ್ಯ ಬೆಳವಣಿಗೆಯನ್ನು ಗಮನಿಸಬೇಕಾಗಿದೆ. ಅನೇಕ ಯೋಜನೆಗಳು ಶಿಕ್ಷಣದ ಪ್ರಗತಿಗಾಗಿ ಜಾರಿಯಾಗಿವೆ. ಪ್ರಮುಖವಾಗಿ ಭಾರತದಲ್ಲಿ ಶಿಕ್ಷಣ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳು ಯಾವ ಪಾಲನ್ನು ನೀಡಿದವು ಎಂಬ ಬಗ್ಗೆ ಮುಂದಿನ ಅಧ್ಯಾಯದಲ್ಲಿ ಕೂಲಂಕುಷವಾಗಿ ವಿವರ ನೀಡಲಾಗಿದೆ.

2.14. ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣದ ಪ್ರಗತಿ :

ಶಿಕ್ಷಣ ಮತ್ತು ಅಭಿವೃದ್ಧಿ ಕುರಿತಂತೆ ಸಾಕಷ್ಟು ಚರ್ಚೆಗಳು ಆಗಿವೆ ಮತ್ತು ಆಗುತ್ತಲಿವೆ, ಮಾನವ ಸಂಪನ್ಮೂಲ ಅಭಿವೃದ್ಧಿಯ ಬುನಾದಿಯೇ ಶಿಕ್ಷಣ. ಮಾನವ ಸಂಪನ್ಮೂಲ ಅಭಿವೃದ್ಧಿಗೆ ಶಿಕ್ಷಣವೇ ಬುನಾದಿ ಆಗಿರುವುದರಿಂದ, ದೇಶದ ಅಭಿವೃದ್ಧಿಗೆ ಅದು ಪೂರಕವಾಗಿರುತ್ತದೆ. ಮಾನವ ಸಂಪನ್ಮೂಲದ ಸದ್ಬಳಕೆಯಾಗಬೇಕು. ಮಾನವ ಸಂಪತ್ತು ಆರ್ಥಿಕ ಅಭಿವೃದ್ಧಿಗೆ ಅಣಿಯಾಗಬೇಕಾದರೆ ಎಲ್ಲರಿಗೂ ರಚನಾತ್ಮಕವಾದ ಶಿಕ್ಷಣ ನೀಡಬೇಕು. ಆ ಕಾರಣ ಈ ಕೆಳಗಿನ ಹೇಳಿಕೆಯು :-

''ದೇಶದ ಹಾಗೂ ಸಮಾಜದ ಗುಣಮಟ್ಟ ವ್ಯಕ್ತಿಗಳ ದಕ್ಷ ಕಾರ್ಯತತ್ಪರತೆಯ ಮೇಲೆ ನಿಂತಿದೆ. ದೇಶದ ಸಂಪನ್ಮೂಲಗಳು ಸದ್ಬಳಕೆಯಾಗಿ ದೇಶವು ಅಭಿವೃದ್ಧಿಯಾಗಬೇಕಾದರೆ; ಮಾನವ ಸಂಪನ್ಮೂಲವೂ ಅಭಿವೃದ್ಧಿಯಾಗಬೇಕು. ಮಾನವ ಸಂಪನ್ಮೂಲದ ಅಭಿವೃದ್ಧಿಯೆಂದರೆ ಸಮಾಜದ ಎಲ್ಲಾ ಜನರ ಜ್ಞಾನ ವಿದ್ಯಾರ್ಹತೆ. ಆರೋಗ್ಯ ಕಾರ್ಯ ಸಮರ್ಥತೆ, ಆ ಕೌಶಲ್ಯ ಜೀವನದ ಆದರ್ಶಗಳು ಹೆಚ್ಚಿಸುವುದಾಗಿದೆ. ಈ ರೀತಿಯ ಮಾನವ ಸಂಪತ್ತು ಆರ್ಥಿಕಾಭಿವೃದ್ಧಿಗೆ ಅನುಗುಣವಾಗುವಂತೆ ಮಾಡಿ ಜನತೆಯನ್ನು ಉತ್ತಮ ವಯಸ್ಕರನ್ನಾಗಿ ತಯಾರಿಸಿ, ಅವರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಸರಿಯಾದ ಜ್ಞಾನ ಬೆಳೆಸಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲಗಳು ಅಭಿವೃದ್ಧಿಯಾಗುವಂತೆ ಸಂಪೂರ್ಣ ರಚನಾತ್ಮಕ ಕೆಲಸವಾಗುವಂತೆ ಶಿಕ್ಷಣ ನೀಡಬೇಕು''(ಓಬಳೇಶ ಘಟ್ಟಿ, 1998, ಪು.90-91).

ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ವೃತ್ತಿ ತರಬೇತಿಗಳು, ಸರ್ಕಾರ ಮತ್ತು ಪೋಷಕರು ನೀಡುವ ಸೌಲಭ್ಯಗಳು ಮೊದಲಾದ ಅಂಶಗಳು ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಪಾತ್ರವಹಿಸುತ್ತವೆ. ಮಾನವನ ಸರ್ವತೋಮುಖ ಅಭಿವೃದ್ಧಿಗೆ ಸಮಾಜದ ಆರೋಗ್ಯಪೂರ್ಣ ವಾತಾವರಣಬೇಕು. ಜನರ ಜ್ಞಾನಮಟ್ಟ ಸುಧಾರಣೆಯಾಗಬೇಕು. ಇದರ ಸುಧಾರಣೆಯ ತಳಹದಿಯೇ ಆರ್ಥಿಕಾಭಿವೃದ್ಧಿ. ಆರ್ಥಿಕಾಭಿವೃದ್ಧಿ ಮಾನವಮುಖಿ ಅಭಿವೃದ್ಧಿಗೆ ಸಾಧುವಾಗುತ್ತದೆ. ಆಗ ಮಾತ್ರ 'ಸಾಮಾಜಿಕ ಮತ್ತು ಸಾಂಸ್ಕೃತಿಕ' (ಓಬಳೇಶಘಟ್ಟಿ, ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಪು.90-91) ಜಾಗೃತಿ ಮಾನವ ಸಂಪನ್ಮೂಲಗಳ ಅಭಿವೃದ್ಧಿಯತ್ತ ಕೊಂಡೊಯ್ಯುತ್ತವೆ. ಮಾನವ ಮುಖಿ ಅಭಿವೃದ್ಧಿಗೆ 'ಶಿಕ್ಷಣ' ಪ್ರಮುಖ ಪಾತ್ರವಹಿಸುವುದರಿಂದ ಶಿಕ್ಷಣದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳು ಜಾರಿಗೊಂಡಿವೆ. ಹಣಕಾಸು ಯೋಜನೆಗಳಂತೆ 'ಶೈಕ್ಷಣಿಕ' ಯೋಜನೆಗಳು ರೂಪುಗೊಂಡಿವೆ.

''ಒಂದು ದೇಶದ ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಆದೇಶದ ರಾಜಕೀಯ ಮತ್ತು ಆರ್ಥಿಕ ವಾಸ್ತವಗಳನ್ನು ಗೌರವಿಸುತ್ತಾ ಶಿಕ್ಷಣ ವ್ಯವಸ್ಥೆಯ ನೀತಿನಿರ್ಧಾರ ಮಾಡುವ, ಆದ್ಯತೆಗಳನ್ನು ಗುರುತಿಸುವ ಮತ್ತು ವೆಚ್ಚವನ್ನು ನಿಗದಿ ಮಾಡುವ ದೂರದರ್ಶಿತ್ವವೇ ಶೈಕ್ಷಣಿಕ ಯೋಜನೆ''. ಯೋಜನೆಗಳು ನಾಲ್ಕು ಹಂತಗಳಲ್ಲಿ ರಚನೆಯಾಗುತ್ತವೆ. ಕೇಂದ್ರ ಹಂತದಲ್ಲಿ ಮೊದಲು ಪಂಚವಾರ್ಷಿಕ ಯೋಜನೆಗಳು ಸಿದ್ಧಗೊಳ್ಳುತ್ತವೆ. ಕೇಂದ್ರವು ರಾಜ್ಯಗಳಿಗೆ ನಿಗದಿಮಾಡುವ ಕಣಕಾಸು, ಆಯಾ ರಾಜ್ಯಗಳಲ್ಲಿ ಸಿಗುವ ಸ್ಥಳೀಯ ಸಂಪನ್ಮೂಲಗಳನ್ನು ಆಧರಿಸಿರುತ್ತದೆ. ರಾಜ್ಯಗಳು ಇದರ ಆಧಾರದ ಮೇಲೆ ಯೋಜನೆಗಳನ್ನು ರೂಪಿಸುತ್ತವೆ. ನಂತರ ಜಿಲ್ಲೆಗಳ ಅಭಿವೃದ್ಧಿ ಕೆಲಸಗಳನ್ನು ಗಣನೆಗೆ ತೆಗೆದುಕೊಂಡು ಜಿಲ್ಲಾಮಟ್ಟದಲ್ಲಿ, ತಾಲೂಕು ಮಟ್ಟದಲ್ಲಿ ಯೋಜನೆಗಳನ್ನು ಸಿದ್ಧಮಾಡಲಾಗುತ್ತದೆ.

ಯೋಜನೆಗಳು ಯಾವ ಹಂತದಲ್ಲಿಯೇ ರೂಪಿತವಾದರೂ ಅಭಿವೃದ್ಧಿಪರ ಕಾರ್ಯನಿರ್ವಹಿಸುವುದು ಅವುಗಳ ಗುರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ 'ಪಂಚವಾರ್ಷಿಕ ಯೋಜನೆಗಳು' ಶೈಕ್ಷಣಿಕ ಅಭಿವೃದ್ಧಿಗಾಗಿ ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿದ್ದವು ಎಂಬುದನ್ನು ಕನಿಷ್ಠ ಎಂಟು ಪಂಚವಾರ್ಷಿಕ ಯೋಜನೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಕೆಳಗೆ ವಿವರಿಸಲಾಗಿದೆ.

1. ''ಯೋಜನೆ ಒಂದು ಗುರಿಯ ಸಾಧನೆಯ ಪ್ರಕ್ರಿಯೆ. ಶೈಕ್ಷಣಿಕ ಯೋಜನೆ ಎಂದರೆ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕಾರ್ಯಾರಂಭ ಮಾಡುವುದಕ್ಕೆ ಮುನ್ನ ಪೂರ್ವಭಾವಿಯಾಗಿ ತಯಾರಿಸಿದ ಪಟ್ಟಿಯನ್ನು, ಶೈಕ್ಷಣಿಕ ಯೋಜನೆ ಎಂದು ಕರೆಯಬಹುದು''(ಮಹಬಲೇಶ್ವರ ರಾವ್,1999).
2. ಜಾರ್ಜ್ ಮತ್ತು ಟಿಬಿಯನ್‌ರವರ ಪ್ರಕಾರ ''ಶೈಕ್ಷಣಿಕ ಯೋಜನೆ ಎಂದರೆ, ಸಾಧ್ಯವಾದಷ್ಟು ನಿಯಮಿತವಾದ ಸಂಪತ್ತನ್ನು ಖರ್ಚು ಮಾಡಿ ಶೈಕ್ಷಣಿಕ ರಂಗದಲ್ಲಿ ಯೋಜನೆಗಳನ್ನು, ಯೋಜನೆ ತನ್ಮೂಲಕ ಶಿಕ್ಷಣ ರಂಗದ ಪರಮಾವಧಿಯ ಕಲ್ಯಾಣವನ್ನು ಸಾಧಿಸುವುದೇ ಶೈಕ್ಷಣಿಕ ಗುರಿ'' (ಉಲ್ಲೇಖ: ಓಬಳೇಶ ಘಟ್ಟಿ, 1998, ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಪು.91.) ಎಂದು ಹೇಳುತ್ತಾರೆ.

ಮೇಲಿನ ಎರಡೂ ಹೇಳಿಕೆಗಳು ಶೈಕ್ಷಣಿಕ ಯೋಜನೆಯ ಗೊತ್ತುಗುರಿಗಳ ಬಗ್ಗೆ ತಿಳಿಸುತ್ತವೆ. ಶೈಕ್ಷಣಿಕ ಯೋಜನೆಯ ಆರ್ಥಿಕ ಗುರಿ ಏನು ಎಂಬ ಬಗ್ಗೆ ಒತ್ತುಕೊಡುತ್ತವೆ. ಶಿಕ್ಷಣ ಅಭಿವೃದ್ಧಿಗಾಗಿ ಆರ್ಥಿಕ ಸಂಪನ್ಮೂಲ ಅಗತ್ಯ. ಸ್ವತಂತ್ರ ಭಾರತದಲ್ಲಿ ಈ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಲಾಯಿತು. ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಆದ್ಯತೆಯನ್ನು ನೀಡುವುದರ ಮೂಲಕ 'ಪಂಚವಾರ್ಷಿಕ ಯೋಜನೆ'ಗಳಲ್ಲಿ ಅದರ ಅಭಿವೃದ್ಧಿಗಾಗಿ ಹಣಕಾಸಿನ ಅವಕಾಶವನ್ನು ಕಲ್ಪಿಸಲಾಯಿತು.

2.14.1. ಮೊದಲನೆಯ ಪಂಚವಾರ್ಷಿಕ ಯೋಜನೆ (1951-55) :

ದೇಶದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ರಂಗಗಳು ಅಭಿವೃದ್ಧಿಗೊಳ್ಳಬೇಕಾದರೆ, ತನ್ನದೇ ಆದ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ. ಕ್ರೋಢೀಕರಿಸಿಕೊಂಡ ಸಂಪನ್ಮೂಲಗಳನ್ನು ಎಲ್ಲಾ ರಾಜ್ಯಗಳಿಗೆ ವಿತರಿಸುವ ಜವಾಬ್ದಾರಿಯನ್ನೂ ಸಹಾ ಸರಕಾರ ತೆಗೆದುಕೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯ ನಂತರ ದೇಶದ ಉನ್ನತಿಗಾಗಿ, ಆರ್ಥಿಕ ಅಭಿವೃದ್ಧಿಗಾಗಿ ಜವಹರಲಾಲ್ ನೆಹರುರವರು ಯೋಜನೆಗಳನ್ನು ರೂಪಿಸಿದಾಗ ಮಾತ್ರ ಸರ್ವ ರಂಗದಲ್ಲಿ ಪ್ರಗತಿಯನ್ನು ಸಾಧಿಸಬಹುದು. ಎಂಬ ಅಂಶವನ್ನು ಮನಗಂಡಿದ್ದರಿಂದ; ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ದೇಶದ ಅಭಿವೃದ್ಧಿಗಾಗಿ ಬುನಾದಿ ಹಾಕಿದರು. 1955ರಿಂದ ಜಾರಿಯಾದ ಪಂಚವಾರ್ಷಿಕ ಯೋಜನೆಗಳು ವಿವಿಧ ಕ್ಷೇತ್ರಗಳಲ್ಲಿ ಗುರಿಗಳನ್ನು ಹಾಕಿಕೊಂಡು ಪ್ರಗತಿಯನ್ನು ಸಾಧಿಸುವಲ್ಲಿ ಹೆಜ್ಜೆಯನ್ನು ಹಾಕಿವೆ. ಶೈಕ್ಷಣಿಕವಾಗಿ ರೂಪುಗೊಂಡ ಯೋಜನೆಗಳು ಪಂಚವಾರ್ಷಿಕ ಯೋಜನೆಗಳಲ್ಲಿ ಯಾವ ಆದ್ಯತೆಯನ್ನು ನೀಡಿವೆ ಎನ್ನುವ ಅಂಶವನ್ನು ಈ ಕೆಳಗಿನ ಎಂಟು ಪಂಚವಾರ್ಷಿಕ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

ಭಾರತ ಸರಕಾರವು ದೇಶದ ಶಿಕ್ಷಣಕ್ಕೆ ಮೊದಲನೆಯ ಯೋಜನೆಯಲ್ಲಿ ನೀಡಿದ ಪ್ರಾಶಸ್ತ್ಯ.

ಗುರಿಗಳು :

ಪ್ರಾಥಮಿಕ ಶಿಕ್ಷಣವನ್ನು ಪುನರ್ರಚಿಸುವುದು ಮತ್ತು ಆ ಮೂಲಕ ಪ್ರೌಢಶಾಲೆ ಶಿಕ್ಷಣವನ್ನು ಉತ್ತಮ ಪಡಿಸುವುದು.

ವಿಶ್ವವಿದ್ಯಾಲಯಗಳ ಶಿಕ್ಷಣವನ್ನು ಗುಣಾತ್ಮಕವಾಗಿ ಸಂಘಟಿಸುವುದು.

ದೇಶದ ಪ್ರಗತಿಗಾಗಿ ಬೇಕಾದ ತಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣಕ್ಕೆ ಒತ್ತು ಕೊಡುವುದು.

ಪ್ರಾಥಮಿಕ ಶಿಕ್ಷಣ ಮತ್ತು ಮೂಲ ಶಿಕ್ಷಣ :

ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣ ಪ್ರತಿಯೊಬ್ಬರಿಗೂ ಲಭಿಸಬೇಕು ಎಂಬ ಉದ್ದೇಶದಿಂದ ಹೆಚ್ಚು ಹೆಚ್ಚು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ, ಶಿಕ್ಷಣ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಲಾಯಿತು. ಆಗ ಪ್ರಚಲಿತದಲ್ಲಿದ್ದ ಮೂಲ ಶಿಕ್ಷಣವನ್ನು 4-14 ವಯಸ್ಸಿನ ಎಲ್ಲಾ ಮಕ್ಕಳಿಗೆ ಒದಗಿಸುವ ಸಲುವಾಗಿ ಎಲ್ಲಾ ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣವಾಗಿ ಪರಿವರ್ತಿಸಲು ತೀರ್ಮಾನಿಸಲಾಯಿತು.

ಪ್ರೌಢ ಶಿಕ್ಷಣ ಅಭಿವೃದ್ಧಿಗಾಗಿ ಸಂಶೋಧನೆ :

ಈ ಯೋಜನೆಯು ಆರಂಭದಲ್ಲಿಯೇ ಪ್ರೌಢಶಾಲಾ ಶಿಕ್ಷಣವು ದುರ್ಬಲ ಶಿಕ್ಷಣದ ಹಂತ ಎಂದು ಗುರುತಿಸಲಾಯಿತು. 1954-55ರಲ್ಲಿ ಇದರ ಅಭಿವೃದ್ಧಿಗಾಗಿ ಶಿಕ್ಷಣದ ಸಮಸ್ಯೆಗಳನ್ನು ಕೈಗೆತ್ತಿಕೊಂಡು, ಸಂಶೋಧನೆ ಮಾಡಲು 999.94 ರೂ.ಗಳನ್ನು ತೆಗೆದಿರಸಲಾಯಿತು.

ಪ್ರೌಢಶಾಲಾ ಶಿಕ್ಷಣದಲ್ಲಿ ಕೇವಲ ಪರೀಕ್ಷೆಗಳಷ್ಟೇ ಮಹತ್ವ ನೀಡಲಾಗಿತ್ತು. ಪ್ರೌಢಶಾಲಾ ಶಿಕ್ಷಕರ ಬೋಧನೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಹಾಗೂ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳಲು ಈ ಕೆಳಗಿನ ಗುರಿಗಳಿಗೆ ಆದ್ಯತೆ ನೀಡಲಾಯಿತು.

- ಪ್ರೌಢರ ಅವಶ್ಯಕತೆಗಳಿಗನುಗುಣವಾಗಿ ಶಿಕ್ಷಣವನ್ನು ರೂಪಿಸುವುದು.
- ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗೆ ಹೊಂದುವಂತೆ ಪ್ರೌಢ ಶಿಕ್ಷಣದಲ್ಲಿ ವೃತ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಕಲಿಸುವುದು.
- ಪ್ರಾಥಮಿಕ ಶಿಕ್ಷಣದಿಂದಲೇ ಪ್ರೌಢ ಶಿಕ್ಷಣವು ಅಭಿವೃದ್ಧಿ ಹೊಂದುವಂತೆ ಮಾಡುವುದು.

ವಿಶ್ವವಿದ್ಯಾಲಯಗಳ ಶಿಕ್ಷಣ :

1951ರಲ್ಲಿ ಭಾರತದಲ್ಲಿ 30 ವಿಶ್ವ ವಿದ್ಯಾಲಯಗಳು ಸ್ಥಾಪನೆಯಾಗಿದ್ದವು. ಇವುಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮತ್ತು ವಿಸ್ತರಿಸುವುದಕ್ಕಾಗಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯು.ಜಿ.ಸಿ)ವನ್ನು ಸ್ಥಾಪಿಸುವ ಗುರಿಯನ್ನು ಹಾಕಿಕೊಳ್ಳಲಾಯಿತು. ಇದಕ್ಕಾಗಿ 15 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿ ಕಾಯ್ದಿರಿಸಲಾಯಿತು.

ವೃತ್ತಿ ಶಿಕ್ಷಣ :

- 14-18 ವಯಸ್ಸಿನ ಮಕ್ಕಳಿಗೆ ಔದ್ಯೋಗಿಕ ಶಿಕ್ಷಣ ನೀಡಲು ತೀರ್ಮಾನ.
- ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ನಿರ್ಧಾರ.

ಹೀಗೆ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು.

ಸಾಮಾಜಿಕ ಶಿಕ್ಷಣ :

ಸಮುದಾಯ ಜಾಗೃತಿಗಾಗಿ ಸಾಕ್ಷರತೆ, ಆರೋಗ್ಯ, ಮನೋರಂಜನೆ, ಕುಟುಂಬ ಜೀವನಕ್ರಮದ ಬಗ್ಗೆ ತಿಳುವಳಿಕೆ, ಆರ್ಥಿಕ, ಸಾಮಾಜಿಕ ಅರಿವು ಮತ್ತು ನಾಗರೀಕ ಜೀವನದ ಅರಿವು ಮಾಡಿಕೊಡುವ ಉದ್ದೇಶವನ್ನು ಇಟ್ಟುಕೊಳ್ಳಲಾಯಿತು.

ವಯಸ್ಕರ ಶಿಕ್ಷಣ :

ಸ್ವಾತಂತ್ರ್ಯ ಪಡೆದ ಪ್ರಾರಂಭದಲ್ಲಿ ಅಕ್ಷರಸ್ಥರು ಕಡಿಮೆ ಇದ್ದರು. ವಯಸ್ಕ ಅನಕ್ಷರಸ್ಥರಿಗಾಗಿ 'ಸಂಜೆ' ಓದು ಕಲಿಸಲು ಪ್ರತಿ ಜಿಲ್ಲೆಯಲ್ಲಿ ' ವಯಸ್ಕರ ಶಿಕ್ಷಣ' ಕೇಂದ್ರ ತೆರೆಯಲು ಉದ್ದೇಶಿಸಲಾಯಿತು. ತಾಲೂಕು ಗ್ರಾಮ ಮಟ್ಟದಲ್ಲಿ ಶಾಲಾ ಕಾರ್ಯಕ್ರಮಗಳನ್ನು ವಿಸ್ತರಿಸುವ ಉದ್ದೇಶವನ್ನು ಹಮ್ಮಿಕೊಳ್ಳಲಾಯಿತು.

ಮಹಿಳೆಯರ ಶಿಕ್ಷಣಕ್ಕೆ ಆದ್ಯತೆ :

ಮಹಿಳೆಯರಿಗೆ ಶಿಕ್ಷಣ ನೀಡುವ ಉದ್ದೇಶದ ಜೊತೆಗೆ ಮಹಿಳಾ ಶಿಕ್ಷಣಕ್ಕಾಗಿ ವಿಶೇಷ ಸೌಲಭ್ಯಗಳನ್ನು ನಿರ್ಧರಿಸಲಾಯಿತು. ಜೊತೆಗೆ ಅನೌಪಚಾರಿಕ ಶಿಕ್ಷಣ ವ್ಯವಸ್ಥೆ ಮೂಲಕ ಯುವಕರಿಗಾಗಿ ಗ್ರಂಥಾಲಯ ಮತ್ತು ವಾಚನಾಲಯ ಸೌಲಭ್ಯ ಕಲ್ಪಿಸಲು ಗುರಿ ಹಾಕಿಕೊಳ್ಳಲಾಯಿತು.

ಸಾಧನೆಗಳು :

ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಆದ ಪ್ರಗತಿಯನ್ನು ಗಮನಿಸಿದರೆ:

ಈ ಯೋಜನೆಯಲ್ಲಿ 156ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ನಿಗದಿಪಡಿಸಲಾಯಿತು. ಒಟ್ಟು ಪ್ರತಿಶತ 2.7 ರಷ್ಟು ವಿವಿಧ ಮೂಲಗಳಿಗೆ ಈ ಹಣವನ್ನು ಖರ್ಚುಮಾಡಲಾಯಿತು. ಮುಖ್ಯವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಯಿತು. ವಿವಿಧ ಸ್ತರಗಳಲ್ಲಿ ಶಿಕ್ಷಣವನ್ನು ಉತ್ತಮಪಡಿಸಲು ಸೌಲಭ್ಯಗಳನ್ನು ಕಲ್ಪಿಸಲಾಯಿತು. ಪ್ರಯೋಗಗಳ ಮೂಲಕ ಗುಣಮಟ್ಟದ ಸುಧಾರಣೆ ಪ್ರೌಢ ಶಿಕ್ಷಣದಲ್ಲಿ ಉತ್ತಮ ಬೋಧನಾ ತೆರಬೇತಿ ನೀಡಲು ಪ್ರಯತ್ನ ನಡೆದವು.

ಪ್ರಾಥಮಿಕ ಶಿಕ್ಷಣಕ್ಕಾಗಿ ಸುಮಾರು 45 ಕೋಟಿ ರೂಪಾಯಿಗಳನ್ನು ವ್ಯಯಮಾಡಲಾಯಿತು. ಈ ಯೋಜನೆಯ ಮುಕ್ತಾಯದ ವೇಳೆಗೆ 5308 ಪ್ರಾಥಮಿಕ ಶಾಲೆಗಳನ್ನು 'ರಾಷ್ಟ್ರೀಯ ನೀತಿ'ಯಾಗಿ ಸ್ವೀಕರಿಸ ಲಾಯಿತು. ಪ್ರಾಥಮಿಕ ಶಾಲೆಗಳು ಶೇಕಡ 15ರಷ್ಟು ಹೆಚ್ಚಾದವು. ವಿದ್ಯಾರ್ಥಿಗಳು ಶೇಕಡ 25ರಷ್ಟು ಹೆಚ್ಚಾದರು. 1950-51ರಲ್ಲಿ ಪ್ರಾಥಮಿಕ ಶಾಲೆಗಳಲ್ಲಿದ್ದ ಹಾಜರಾತಿ 45.5ರಷ್ಟಿದ್ದು, 1955-56ರಲ್ಲಿ ಪ್ರತಿಶತ 55.7ರಷ್ಟು ಹೆಚ್ಚಾಯಿತು. ಇದರಿಂದ ಶಿಕ್ಷಣದ ಪ್ರಗತಿಯ ಹಂತ ಕೊಂಚ ಏರಿದೆ ಎನ್ನಬಹುದು. ಪ್ರೌಢಶಾಲಾ ಶಿಕ್ಷಣದ ಸಮಗ್ರ ಬದಲಾವಣೆಗಾಗಿ 1952ರಲ್ಲಿ ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರ ನೇತೃತ್ವದಲ್ಲಿ ಪ್ರೌಢಶಿಕ್ಷಣ ಆಯೋಗ ನೇಮಕ ಮಾಡಲಾಯಿತು. ಇದರ ಸಲಹೆ ಮೇರೆಗೆ ಪ್ರೌಢಶಾಲಾ ಶಿಕ್ಷಣದಲ್ಲಿ ಅನೇಕ ಬದಲಾವಣೆಗಳಾದವು. ಮೊದಲ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ 50 ವಿವಿದೋದ್ಧೇಶ ಶಾಲೆಗಳನ್ನು ತೆರೆಯಲಾಯಿತು. ಸಂಶೋಧನಾ ಕೇಂದ್ರ ಸ್ಥಾಪಿಸಲಾಯಿತು. ಪ್ರೌಢಶಾಲಾ ಶಿಕ್ಷಣಕ್ಕಾಗಿ 20.2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಯಿತು.

ವಿಶ್ವವಿದ್ಯಾಲಯಕ್ಕಾಗಿ 14.03 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಉನ್ನತ ಶಿಕ್ಷಣಕ್ಕಾಗಿ 1953ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವನ್ನು ರಚಿಸಲಾಯಿತು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣಕ್ಕಾಗಿ ಖರ್ಚು ಮಾಡಿದ ಹಣಕಾಸಿನ ವಿವರ (ನಿಗದಿಪಡಿಸಿದ ಮೊತ್ತ 196 ಕೋಟಿ).

ತಃಖ್ತೆ-9 :

ಕ್ರ.ಸಂ	ಶಿಕ್ಷಣದ ವಿವಿಧ ಕ್ಷೇತ್ರಗಳು	ಮೊತ್ತ
01	ಪ್ರಾಥಮಿಕ ಶಿಕ್ಷಣ	45 ಕೋಟಿ
02	ಪ್ರೌಢ ಶಿಕ್ಷಣ	20.2 ಕೋಟಿ
03	ವಿಶ್ವವಿದ್ಯಾಲಯ ಶಿಕ್ಷಣ	14.3 ಕೋಟಿ

(**ಆಧಾರ :-** ಓಬಳೇಶ ಘಟ್ಟಿ,1998,ಪು.93).

ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿಕೊಂಡ ಗುರಿಗಳಲ್ಲಿ ಎಲ್ಲವನ್ನು ಕಾರ್ಯರೂಪಕ್ಕೆ ತರಲಾಗದಿದ್ದರೂ ಕೆಲವು ಕ್ಷೇತ್ರಗಳಲ್ಲಿ ಹೊಸ ಬದಲಾವಣೆಗಳ ಮೂಲಕ ಉತ್ತಮ ಸಾಧನೆಗಳನ್ನು ಮಾಡಲು ಅವಕಾಶವಾಯಿತು. ಶಿಕ್ಷಣದ ಹೊಸ ಹೊಸ ಪರಿಕಲ್ಪನೆಗೆ ಚಾಲನೆ ದೊರೆಯಿತು. ಪ್ರಾಥಮಿಕ ಶಿಕ್ಷಣ ಸಂಪೂರ್ಣ ಸಫಲವಾಗದಿದ್ದರೂ, ಪ್ರೌಢ ಶಿಕ್ಷಣ ಮತ್ತು ಮೂಲ ಶಿಕ್ಷಣ ಕ್ಷೇತ್ರಗಳು ತಕ್ಕಮಟ್ಟಿನ ಯಶಸ್ವಿಯನ್ನು ಪಡೆದವು.

2.14.2. ಎರಡನೆಯ ಪಂಚವಾರ್ಷಿಕ ಯೋಜನೆ (1956-60) :

ಮೊದಲನೆಯ ಪಂಚವಾರ್ಷಿಕ ಯೋಜನೆಯ ಗುರಿಗಳ ಸಾಧಕ ಬಾಧಕಗಳ ಹಿನ್ನೆಲೆಯಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಗಳ ಗುರಿಗಳನ್ನು ರೂಪಿಸಲಾಯಿತು.

ಗುರಿಗಳು :

ಪ್ರಾಥಮಿಕ ಶಾಲಾ ಶಿಕ್ಷಣ :

- ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತನೆಗೊಳಿಸುವ ಪ್ರಕ್ರಿಯೆಯನ್ನು ಮುಂದುವರಿಸುವುದು.
- ಶಾಲೆಗಳಲ್ಲಿಯ ಅಪವ್ಯಯ-ಸ್ಥಗಿತತೆ ಹೆಚ್ಚುತ್ತಿದ್ದು, ಅದರ ನಿವಾರಣೆಗೆ ಕ್ರಮ ಕೈಗೊಳ್ಳುವುದು.

- ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶಿಕ್ಷಣ ಅಂದರೆ ಶಾಲೆಗಳನ್ನು ತೆರೆಯುವುದು ಮತ್ತು ಸೌಕರ್ಯಗಳನ್ನು ಕಲ್ಪಿಸುವುದು.
- 1956ರ ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಸೂಚನೆಯನ್ನು ಆಧಾರವಾಗಿಟ್ಟುಕೊಂಡು ಶಾಲೆಗಳ ಕಟ್ಟಡ ಮತ್ತು ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

ಪ್ರೌಢಶಾಲಾ ಶಿಕ್ಷಣದ ಅಭಿವೃದ್ಧಿಗಾಗಿ ಹಾಕಿಕೊಂಡ ಗುರಿಗಳು :

- ವಿವಿದೋದ್ಧೇಶ ಶಾಲೆಗಳನ್ನು ತೆರೆಯುವುದು ಮತ್ತು ಅವುಗಳನ್ನು ವಿಸ್ತರಿಸುವ ಗುರಿಯನ್ನು ಹೊಂದಲಾಯಿತು. ಅಲ್ಲದೆ, ಶಿಕ್ಷಕರಲ್ಲಿ ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಅವರ ವೇತನ ಶ್ರೇಣಿಯನ್ನು ಪುನರ್ವಿಮರ್ಶೆ ಮಾಡಲು ತೀರ್ಮಾನಿಸಲಾಯಿತು. ಹಾಗೂ ಶಿಕ್ಷಕರ ದಕ್ಷತೆಯನ್ನು ಹೆಚ್ಚಿಸಲು ಉತ್ತಮ ತರಬೇತಿ ಕಾಲೇಜುಗಳನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಭಾರತದಂತಹ ದೇಶದಲ್ಲಿ ಹೆಚ್ಚು ಹಳ್ಳಿಗಳಿದ್ದು, ಕೃಷಿಗೆ ಆದ್ಯತೆ ನೀಡಿ, ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸಲು ಗುರಿಯನ್ನುಹೊಂದ ಲಾಯಿತು.

ವಿಶ್ವವಿದ್ಯಾಲಯ ಶಿಕ್ಷಣ :

- ಬೆಳೆಯುತ್ತಿರುವ ಭಾರತದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ (ಹೆಚ್ಚಳ) ವಿಶ್ವವಿದ್ಯಾಲಯಗಳನ್ನು ಹೆಚ್ಚು ಸ್ಥಾಪಿಸುತ್ತಾ, ಅವುಗಳ ಗುಣಮಟ್ಟ ಸುಧಾರಣೆಗೆ ಗಮನ ನೀಡುವ ಗುರಿಯನ್ನು ಹಾಕಿಕೊಳ್ಳ ಲಾಯಿತು.
- ಮೂರು ವರ್ಷದ ಪದವಿ, ಗ್ರಂಥಾಲಯ, ಹಾಸ್ಟೆಲ್ ಸ್ಟೈಫಂಡರಿ, ಪ್ರಯೋಗಾಲಯ ಮುಂತಾದ ಸೌಲಭ್ಯಗಳನ್ನು ವಿಸ್ತರಿಸುವುದು ಈ ಐದು ವರ್ಷಗಳ ಅವಧಿಯಲ್ಲಿ ಏಳು ವಿಶ್ವವಿದ್ಯಾಲಯಗಳ ಸ್ಥಾಪನೆಯ ಗುರಿ ಹಾಕಿಕೊಳ್ಳಲಾಯಿತು.

ತಾಂತ್ರಿಕ ಶಿಕ್ಷಣ :

- ತಾಂತ್ರಿಕ ಶಿಕ್ಷಣ ಶಾಲೆಗಳ ಆರಂಭಿಸುವಿಕೆ, ವೃತ್ತಿ ಮಾರ್ಗದರ್ಶನ ಹಾಗೂ ಶೈಕ್ಷಣಿಕ ಮಾರ್ಗದರ್ಶನ ಸೌಲಭ್ಯವನ್ನು ಕಲ್ಪಿಸುವ ಅವಕಾಶವನ್ನು ಒದಗಿಸಲಾಯಿತು. ಶಿಕ್ಷಕರಿಗಾಗಿ ತರಬೇತಿ ಕಾಲೇಜುಗಳ ಸ್ಥಾಪನೆಯ ಗುರಿಯನ್ನು ಹಾಕಿಕೊಂಡು, ಸೇವಾವದಿಯಲ್ಲಿಯೇ ಶಿಕ್ಷಕರ ದಕ್ಷತೆಯನ್ನು ಹೆಚ್ಚಿಸಲು, ತರಬೇತಿಯ ಗುರಿಯನ್ನು ಇಟ್ಟುಕೊಳ್ಳಲಾಯಿತು.

ಸಾಧನೆಗಳು :

ಈ ಯೋಜನೆಯಲ್ಲಿ ಶಿಕ್ಷಣಕ್ಕಾಗಿ 307 ಕೋಟಿ ರೂಪಾಯಿಗಳನ್ನು ಒದಗಿಸಲಾಯಿತು. ಇದರಲ್ಲಿ ಕೇಂದ್ರದ ಪಾಲು 95 ಕೋಟಿ ರೂಪಾಯಿಗಳು. ರಾಜ್ಯದ ಪಾಲು 212 ಕೋಟಿ ರೂಪಾಯಿಗಳನ್ನು ನಿಗದಿಗೊಳಿಸಿದ್ದರಿಂದ ಉತ್ತಮ ಸಾಧನೆ ಮಾಡಲು ಅವಕಾಶ ನೀಡಲಾಯಿತು. ಪ್ರಾಥಮಿಕ ಶಿಕ್ಷಣಕ್ಕಾಗಿ 93 ಕೋಟಿ ರೂಪಾಯಿಗಳಷ್ಟು ವೆಚ್ಚ ಮಾಡಲಾಯಿತು. ಆರರಿಂದ ಹದಿನಾಲ್ಕು ವಯಸ್ಸಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಲ್ಲಿ ಗುಣಾತ್ಮಕ ಅಭಿವೃದ್ಧಿಯನ್ನು ಸಾಧಿಸಲಾಯಿತು. ಪ್ರೌಢ ಶಿಕ್ಷಣಕ್ಕಾಗಿ 50.87 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಶಾಲೆಗಳ ಅಭಿವೃದ್ಧಿ ಜೊತೆಗೆ ತರಬೇತಿ ಕಾಲೇಜುಗಳನ್ನು ಸ್ಥಾಪಿಸಲಾಯಿತು.

ವಿಶ್ವವಿದ್ಯಾಲಯ ಶಿಕ್ಷಣಕ್ಕಾಗಿ 52 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಇದರಲ್ಲಿ 34.4 ಕೋಟಿ ಕೇಂದ್ರ ಸರ್ಕಾರ ಭರಿಸಿದರೆ, ರಾಜ್ಯಗಳ ಪಾಲು 22.5 ಕೋಟಿಗಳಾಗಿತ್ತು. ವಿಶ್ವವಿದ್ಯಾಲಗಳ ಗುಣಮಟ್ಟ ಸುಧಾರಣೆಯಾಗುವುದರ ಜೊತೆಗೆ ಅಪವ್ಯಯ ಕಡಿಮೆಯಾಯಿತು. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಾಮಗ್ರಿಗಳು, ಪ್ರಯೋಗ ಸಲಕರಣೆಗಳು, ಸಾರಿಗೆ ಶಿಕ್ಷಕರಿಗೆ ಸಂಬಳ, ಉತ್ತಮಗೊಂಡವು. ನಿಗದಿಪಡಿಸಿದಂತೆ ಈ ಯೋಜನೆಯಲ್ಲಿ 7 ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ಉನ್ನತ ಶಿಕ್ಷಣದಲ್ಲಿ ಕೃಷಿ ವಿಷಯಗಳನ್ನು ಅಳವಡಿಸ ಲಾಯಿತು. 200 ಕೃಷಿ ಶಾಲೆಗಳು ಪ್ರಾರಂಭವಾದವು. ಈ ಯೋಜನೆಯಲ್ಲಿ ಸಾಧಿಸಿದ ಇನ್ನೊಂದು ಸಾಧನೆಯೆಂದರೆ ತಾಂತ್ರಿಕ ಶಿಕ್ಷಣಕ್ಕೆ ನೀಡಿದ ಆದ್ಯತೆ. ಮದರಾಸು (ಈಗಿನ ಚೆನ್ನೈ), ಮುಂಬೈ(ಮುಂಬಾಯಿ), (ಖಗಪುರ) ಖಾನ್ಪುರಗಳಲ್ಲಿ ಭಾರತೀಯ ತಾಂತ್ರಿಕ ಸಂಸ್ಥೆಗಳನ್ನು ತೆರೆದು, ವಿದ್ಯಾರ್ಥಿಗಳಿಗೆ ಯಾಂತ್ರಿಕ ಶಿಕ್ಷಣದ ಬಗ್ಗೆ ತಳಪಾಯ ಹಾಕಲಾಯಿತು. ಇದರಿಂದ ಒಂಭತ್ತು ಸಂಸ್ಥೆಗಳು ತಾಂತ್ರಿಕ ಶಿಕ್ಷಣದಲ್ಲಿ ಪದವಿಯನ್ನು ನೀಡಲಾರಂಭಿಸಿದವು. ಮತ್ತು ಇಪ್ಪತ್ತು ಡಿಪ್ಲೊಮಾ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಯಿತು. 5800 ಪದವೀಧರರು, 6850 ಡಿಪ್ಲೊಮಾ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಯಿತು.

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಆರೋಗ್ಯ ಶಿಕ್ಷಣಕ್ಕೆ 10ಕೋಟಿ ವೈಜ್ಞಾನಿಕ ತಾಂತ್ರಿಕ ಶಿಕ್ಷಣಕ್ಕೆ ವೆಚ್ಚ ಮಾಡಲಾಯಿತು. ವೈಜ್ಞಾನಿಕ, ತಾಂತ್ರಿಕ ಶಿಕ್ಷಣ ಹೆಚ್ಚಿದ್ದರಿಂದ ಪ್ರಗತಿ ಸಾಧ್ಯವಾಯಿತು. ಪ್ರಾಥಮಿಕ ಶಿಕ್ಷಣದಲ್ಲಿ ಒಂದರಿಂದ ನಾಲ್ಕನೆಯ ತರಗತಿಯ ಮಕ್ಕಳ ಸಂಖ್ಯೆ 12.5 ಮಿಲಿಯನ್ನಿನಿಂದ ಸುಮಾರು ನಾಲ್ಕು ಮಿಲಿಯನ್‌ಗೆ ಹೆಚ್ಚಾಯಿತು. ಈ ಯೋಜನೆಯಲ್ಲಿ ಸಾಮಾಜಿಕ ಶಿಕ್ಷಣವನ್ನು ಜನಪ್ರಿಯಗೊಳಿಸಲು ವಿವಿಧ ಕಾರ್ಯಕ್ರಮಗಳ ಮೂಲಕ ಶಿಕ್ಷಣದ ಪ್ರಗತಿ ಆರೋಗ್ಯಪೂರ್ಣವಾದ ದಿಕ್ಕಿನತ್ತ ಸಾಗಿತ್ತು.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿ ಯೋಜಿಸಿದ ಗುರಿಗಳಿಗೆ ತಕ್ಕಂತೆ ಸಾಧಿಸಿದ ಸಾಧನೆಯೂ ಕೂಡ ತೃಪ್ತಿದಾಯಕವಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ರೀತಿಯ ಸಾಧನೆ ಎಷ್ಟು ಸಫಲಗೊಂಡಿದೆ ಎಂಬುದನ್ನು ನೋಡೋಣ.

2.14.3. ಮೂರನೇ ಪಂಚವಾರ್ಷಿಕ ಯೋಜನೆ (1961-66) :

ಈ ಯೋಜನೆಯಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಯಿತು. ಆರರಿಂದ ಹನ್ನೊಂದು ವಯಸ್ಸಿನ ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕು ಎಂಬ ಸಿದ್ಧಾಂತಕ್ಕೆ ಬದ್ಧವಾಗಿ ಈ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಲಾಯಿತು. ಎಲ್ಲಾ ಹಂತದ ಶಿಕ್ಷಕರ ಅಭಿವೃದ್ಧಿಗಾಗಿ ತೀರ್ಮಾನ ಕೈಗೊಳ್ಳಲಾಯಿತು.

''ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಮತ್ತು ಅವಕಾಶಗಳ ಮೌಲ್ಯಗಳನ್ನು ಆಧರಿಸಿ, ಸಾಮಾಜಿಕ ವ್ಯವಸ್ಥೆಯನ್ನು, ಆರ್ಥಿಕ ಮತ್ತು ತಾಂತ್ರಿಕ ಪ್ರಗತಿಯನ್ನು ಶೀಘ್ರವಾಗಿ ತರಬಲ್ಲ ಏಕೈಕ ಅಸ್ತ್ರ ಶಿಕ್ಷಣವಾದ್ದರಿಂದ ಪ್ರೌಢ ಪೌರತ್ವವನ್ನು ಬೆಳೆಸಲು ಜನರ ಸಾಮರ್ಥ್ಯವನ್ನು ಒಂದು ಗೂಡಿಸಲು ರಾಷ್ಟ್ರೀಯ ಮತ್ತು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು. ಶೈಕ್ಷಣಿಕ ಯೋಜನೆಯ ಬಹುಮುಖ್ಯ ಗುರಿಯಾಗಬೇಕೆಂದು ತಿಳಿಸಲಾಯಿತು''.

ಗುರಿಗಳು :

ಎರಡನೇ ಪಂಚವಾರ್ಷಿಕ ಯೋಜನೆಯ ಯೋಜಿತ ಗುರಿಗಳನ್ನು ಸಾಧಿಸಿದ ಕ್ಷೇತ್ರಗಳನ್ನು ಮತ್ತು ಇನ್ನೂ ಸಾಧಿಸಬೇಕಾಗಿದ್ದ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಗುರಿಗಳನ್ನು ಹಮ್ಮಿ ಕೊಂಡು ಸಾಧಿಸಲು ಯತ್ನಿಸಲಾಯಿತು. ಆ ಗುರಿಗಳು ಮತ್ತು ಸಾಧನೆಯ ಬಗ್ಗೆ ಈ ಕೆಳಗೆ ವಿವರಿಸಲಾಗಿದೆ.

ಪ್ರಾಥಮಿಕ ಶಿಕ್ಷಣ ಮತ್ತು ತರಬೇತಿ ಹೊಂದಿದ ಶಿಕ್ಷಕರು :

ಆರರಿಂದ ಹನ್ನೊಂದು ವರ್ಷದ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯತೆ ಕಡ್ಡಾಯವೆಂದು ತೀರ್ಮಾನಿಸಲಾಯಿತು. ತರಬೇತಿ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡಲು ತೀರ್ಮಾನ ಕೈಗೊಳ್ಳಲಾಯಿತು. ಪ್ರಾಥಮಿಕ ಶಿಕ್ಷಣವನ್ನು ವಿಸ್ತೃತಗೊಳಿಸಲು ನಿರ್ಧರಿಸಲಾಯಿತು.

ಪ್ರೌಢ ಶಿಕ್ಷಣದಲ್ಲಿ ವೈಜ್ಞಾನಿಕ ಮನೋಭಾವ :

ವಿವಿದೋದ್ಧೇಶ ಶಾಲೆಗಳನ್ನು ಹೆಚ್ಚು ಅಭಿವೃದ್ಧಿಪಡಿಸಲು ನಿರ್ಣಯಿಸಲಾಯಿತು. ಪ್ರೌಢಶಿಕ್ಷಣದಲ್ಲಿ ವಿಜ್ಞಾನ, ವಾಣಿಜ್ಯ, ತಾಂತ್ರಿಕ ಶಿಕ್ಷಣವನ್ನು ವಿಸ್ತರಿಸುವುದು. ವೃತ್ತಿ ಹಾಗೂ ಶೈಕ್ಷಣಿಕ ಮಾರ್ಗದರ್ಶನಗಳ ಸೌಲಭ್ಯ ಒದಗಿಸುವುದು, ಈ ಮೂಲಕ ವೈಜ್ಞಾನಿಕ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು. ಪರೀಕ್ಷೆ ಹಾಗೂ ಮೌಲ್ಯಮಾಪನದ ಸುಧಾರಣೆ ಮಾಡುವುದು, ಪ್ರೌಢ ಶಿಕ್ಷಣದ ಪಠ್ಯ ವಸ್ತುವನ್ನು ಪುನರ್ ವಿಮರ್ಶಿಸಿ ವ್ಯವಸ್ಥೆಗೊಳಿಸುವುದು.

ವಯಸ್ಕರ ಶಿಕ್ಷಣ ಮತ್ತು ವಿದ್ಯಾಪೀಠಗಳು :

ಅನಕ್ಷರತೆಯನ್ನು ನಿವಾರಿಸುವುದಕ್ಕಾಗಿ ಸಾಮಾಜಿಕ ಶಿಕ್ಷಣವನ್ನು ನೀಡಲು ಈ ಯೋಜನೆಯಲ್ಲಿ ತೀರ್ಮಾನಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ವಿದ್ಯಾಪೀಠಗಳನ್ನು ಪ್ರಾರಂಭಿಸುವ ಗುರಿಯನ್ನು ಹಾಕಿಕೊಳ್ಳಲಾಯಿತು.

ವಿಶ್ವವಿದ್ಯಾಲಯ ಶಿಕ್ಷಣ :

ಈ ಮಟ್ಟದ ಶಿಕ್ಷಣಕ್ಕಾಗಿ ವಿಜ್ಞಾನ ಶಿಕ್ಷಣ ,ಸ್ನಾತಕೋತ್ತರ ಶಿಕ್ಷಣ, ಶಿಕ್ಷಕರ ಸಂಬಳ, ಸಾರಿಗೆ ಪ್ರಯೋಗಾಲಯ ಮತ್ತು ಗ್ರಂಥಾಲಯ ಸೌಲಭ್ಯ ಕಲ್ಪಿಸಲು ತೀರ್ಮಾನಿಸಲಾಯಿತು. ಉನ್ನತ ಶಿಕ್ಷಣದ ಬೇಡಿಕೆಗೆ ಅನುಗುಣವಾಗಿ ಹೊಸ ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವುದು ಮತ್ತು ಪ್ರವೇಶ ಪಡೆಯುವ ಅವಕಾಶಕ್ಕಾಗಿ ಹೊಸ ವಿಧಾನವನ್ನು ಅನುಸರಿಸಲಾಯಿತು. ಉನ್ನತ ಶಿಕ್ಷಣ ಹೆಚ್ಚಿನ ಅಭಿವೃದ್ಧಿಗಾಗಿ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಲು ತೀರ್ಮಾನಿಸಿ, ಸಂಜೆ ಕಾಲೇಜುಗಳನ್ನು ಹಾಗೂ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಯೋಜಿಸಲಾಯಿತು.

ಸಂಶೋಧನೆ :

ಶಿಕ್ಷಣ ರಂಗದಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ನಿಖರವಾದ ಕಾರಣ ಮತ್ತು ಕಾರಣಗಳನ್ನು ಶೋಧಿಸಲು,ಅದಕ್ಕಾಗಿ ಉತ್ತಮ ಮಾರ್ಗದರ್ಶನ, ಪ್ರೋತ್ಸಾಹ, ತಾಂತ್ರಿಕ-ತತ್ವಗಳಿಗಾಗಿ ರಾಷ್ಟ್ರೀಯ ಶೈಕ್ಷಣಿಕ ತರಬೇತಿ ಮತ್ತು ಸಂಶೋಧನಾ ಸಂಸ್ಥೆಯನ್ನು ಪ್ರಾರಂಭಿಸಲು ನಿರ್ಣಯಿಸಲಾಯಿತು. ಎರಡನೆಯ ಯೋಜನೆಯಲ್ಲಿ ನಿಗದಿಗೊಳಿಸಿದ ಯೋಜನಾ ಗುರಿಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಮುಂದುವರಿಸಲಾಯಿತು. ಕೆಲವು ಆದ್ಯತಾ ವಲಯಗಳಿಗಾಗಿ ಹೊಸ ಯೋಜನೆಗಳ ಮೂಲಕ 'ಗುರಿ' ಯನ್ನು , ವಿಶೇಷ ಗುರಿಗಳನ್ನು ನಿಗದಿಗೊಳಿಸಲಾಯಿತು.

ಸಾಧನೆಗಳು :

ಈ ಯೋಜನೆಯಲ್ಲಿ ಸುಮಾರು 589 ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡಲಾಯಿತು. ಪ್ರಾಥಮಿಕ ಶಿಕ್ಷಣಕ್ಕಾಗಿ 180 ಕೋಟಿ ರೂಪಾಯಿಗಳನ್ನು ವ್ಯಯಿಸಲಾಯಿತು. ಇಷ್ಟೊಂದು ಖರ್ಚು ಮಾಡಿದರೂ, ಗಣನೀಯವಾದ ಸಾಧನೆಯಾಗಲಿಲ್ಲವೆನ್ನಬಹುದು. 6 ರಿಂದ 7ನೇ ತರಗತಿಯಲ್ಲಿ

ಶೇಕಡ 35ರಷ್ಟು ಬಾಲಕರು ಹೆಚ್ಚಾದರೆ, ಬಾಲಕಿಯರ ಸಂಖ್ಯೆ ಶೇಕಡ 12ರಷ್ಟು ಮಾತ್ರ ಹೆಚ್ಚಾಯಿತು. ಮುಂಬೈ, ಮದರಾಸು (ಚೆನ್ನೈ), ಕೋಲ್ಕತ್ತ (ಕಲ್ಕತ್ತಾ) ಮತ್ತು ಪಂಜಾಬ್‌ಗಳಲ್ಲಿ ಪ್ರಾಥಮಿಕ ಶಿಕ್ಷಣ ಪ್ರಗತಿ ಆಶಾದಾಯಕವಾಗಿದ್ದರೆ, ಇನ್ನೂ ಕೆಲವು ರಾಜ್ಯಗಳಾದ ಒರಿಸ್ಸಾ, ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ ರಾಜಸ್ಥಾನ, ಕಾಶ್ಮೀರಗಳಲ್ಲಿ, ಜನಸಂಖ್ಯೆ ಬೆಳವಣಿಗೆಗೆ ತಕ್ಕಂತೆ ಪ್ರಾಥಮಿಕ ಶಿಕ್ಷಣ ನೀಡಲು ಕಷ್ಟವಾಯಿತು. ಈ ಎಲ್ಲಾ ಹಿನ್ನಡೆ ಇದ್ದರೂ ಒಂದು ಮತ್ತು ಎರಡನೆಯ ಯೋಜನೆಗಿಂತ ಮೂರನೆಯ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಗತಿಯನ್ನು ಸಂಪೂರ್ಣವಾಗಿ ಸಾಧಿಸಲು ಯತ್ನಿಸಲಾಯಿತು.

1957ರಲ್ಲಿ ಪ್ರೌಢ ಶಿಕ್ಷಣ ಆಯೋಗವು ಉತ್ತಮ ಶಿಫಾರಸ್ಸುಗಳನ್ನು ಮಾಡಿ, ಸಲಹೆಗಳನ್ನು ನೀಡಿದ್ದರಿಂದ, ಉದ್ದೇಶಗಳ ಈಡೇರಿಕೆ ಸುಲಭವಾಯಿತು. 3ನೇ ಯೋಜನೆಯಲ್ಲಿದ್ದ 16,600 ಮಾಧ್ಯಮಿಕ ಶಾಲೆಗಳು, 3ನೇ ಯೋಜನೆಯ ಕೊನೆಯಲ್ಲಿ 21,800ಕ್ಕೆ ಏರಿದವು. ವೃತ್ತಿ ಶಿಕ್ಷಣವನ್ನು ಉನ್ನತಮಟ್ಟಕ್ಕೊಯ್ಯಲು 1500 ಪ್ರೌಢಶಾಲೆ ಗಳನ್ನು ವಿವಿದೋದ್ಧೇಶ ಶಾಲೆಗಳಾಗಿ ಪರಿವರ್ತಿಸಲಾಯಿತು. ಸೇವಾ ನಿರತ ಶಿಕ್ಷಕರಿಗೆ ತರಬೇತಿಗಾಗಿ 312 ತರಬೇತಿ ಕೇಂದ್ರಗಳನ್ನು ತೆರೆಯಲಾಯಿತು. ವಿಶ್ವವಿದ್ಯಾಲಯಗಳಲ್ಲಿ ಅಪವ್ಯಯ-ಸ್ಥಗಿತತೆ ಕಡಿಮೆಯಾಯಿತು. ವಿದ್ಯಾರ್ಥಿಗಳ ಹಾಜರಾತಿ ಯಲ್ಲಿ ಏರಿಕೆ ಉಂಟಾಯಿತು. ಹನ್ನೆರಡು ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ಇವುಗಳ ಅಭಿವೃದ್ಧಿಗೆ 75 ಕೋಟಿ ರೂಪಾಯಿ ಖರ್ಚು ಮಾಡಲಾಯಿತು. ತಾಂತ್ರಿಕ ಶಿಕ್ಷಣಕ್ಕೆ 75 ಕೋಟಿ ರೂಪಾಯಿ ಖರ್ಚುಭರಿಸಲಾಯಿತು. 1950-51 ರಲ್ಲಿದ್ದು, 89 ತಾಂತ್ರಿಕ ಶಾಲೆಗಳು, 65-66ರಲ್ಲಿ 263ಕ್ಕೂ, ತಾಂತ್ರಿಕ ಕಾಲೇಜುಗಳು 49 ರಿಂದ 117ಕ್ಕೆ ಏರಿದ ಮಾನ್ಯತೆ ಪಡೆದ ಕಾಲೇಜುಗಳು ಹೆಚ್ಚಾದವು. ವಯಸ್ಕರ ಶಿಕ್ಷಣ, ಸಾಮಾಜಿಕ ಶಿಕ್ಷಣ, ವಿದ್ಯಾಪೀಠ, ಅಂಚೆ-ತೆರಪಿನ ಶಿಕ್ಷಣ ಹೆಚ್ಚಾದವು. 'ಭಾರತೀಯ ವಯಸ್ಕರ ಶಿಕ್ಷಣ ಸಮಿತಿ' ಅಸ್ತಿತ್ವಕ್ಕೆ ಬಂದಿತು. ರಾಜಸ್ಥಾನ, ಮೈಸೂರು ವಿಶ್ವವಿದ್ಯಾಲಯ, ವಯಸ್ಕರ ಶಿಕ್ಷಣದಿಂದ 90 ಲಕ್ಷ ಜನರನ್ನು ಸಾಕ್ಷರರನ್ನಾಗಿಸಿದವು. ಈ ಅವಧಿಯಲ್ಲಿ ಚೀನಾ-ಪಾಕಿಸ್ತಾನ ಯುದ್ಧದ ಪರಿಣಾಮವಾಗಿ ಶಿಕ್ಷಣ ಪ್ರಗತಿ ಮಂದಗತಿಯಲ್ಲಿ ಸಾಗಿತು ಎಂದೇ ಹೇಳಬಹುದು. ನಾಲ್ಕನೆಯ ಪಂಚ ವಾರ್ಷಿಕ ಯೋಜನೆಯ ಗುರಿ ಮತ್ತು ಸಾಧನೆಗಳನ್ನು ಈ ಕೆಳಗೆ ವಿವರಿಸಿದೆ.

2.14.4. ನಾಲ್ಕನೇ ಪಂಚವಾರ್ಷಿಕ ಯೋಜನೆ (1969-74) :

ಮೂರನೆಯ ಯೋಜನೆಯಲ್ಲಿ ಕಂಡು ಬಂದು ಲೋಪ-ದೋಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಗೊಳಿಸಲಾಯಿತು. ಈ ಯೋಜನೆಯಲ್ಲಿ ಸಾಮಾಜಿಕ ಸಾರ್ವತ್ರೀಕರಣ, ಸಮಾನತೆ ಕಾಪಾಡುವ ಪ್ರಯತ್ನವನ್ನು ಮುಖ್ಯ ಗುರಿಯಾಗಿಟ್ಟುಕೊಳ್ಳಲಾಯಿತು.

ಗುರಿಗಳು :

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಆದ್ಯತೆ :

ಪ್ರಾಥಮಿಕ ಶಿಕ್ಷಣಕ್ಕಾಗಿ ಈ ಯೋಜನೆಯಲ್ಲಿ 398.50 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿತ್ತು. ಭಾರತ ಸಂವಿಧಾನ ಅನುಚ್ಛೇದ 45 ವಿಧಿಯನ್ವಯ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಕಡ್ಡಾಯಗೊಳಿಸಿ, ಉಚಿತ ಶಿಕ್ಷಣ ಒದಗಿಸಲು ನಿರ್ಧರಿಸಲಾಯಿತು. ಬಾಲಕಿಯರು ಶಾಲೆಗೆ ಬರಲು ಅವಕಾಶ ನೀಡಿ ಅವರಿಗೆ ಪ್ರಾಧಾನ್ಯತೆ ನೀಡಲಾಯಿತು. ಈ ಸಂದರ್ಭದಲ್ಲಿ ಬಿಹಾರ, ಒರಿಸ್ಸಾ, ರಾಜಸ್ಥಾನ, ಮಧ್ಯ ಪ್ರದೇಶ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಬೋಧನಾ ವಿಧಾನಗಳ ಸುಧಾರಣೆ, ಪರೀಕ್ಷೆಗಳನ್ನು ಉತ್ತಮ ಪಡಿಸುವುದು. ಪಠ್ಯ ಪುಸ್ತಕಗಳು, ಲೇಖನ ಸಾಮಗ್ರಿಗಳನ್ನು ಮಕ್ಕಳಿಗೆ ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ಹಂಚುವುದು. ಮಧ್ಯಾಹ್ನದ ಉಪಹಾರ ವ್ಯವಸ್ಥೆ ಈ ಯೋಜನೆಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸುವ ಗುರಿಯನ್ನು ಹಮ್ಮಿಕೊಳ್ಳಲಾಯಿತು.

ಪ್ರೌಢಶಾಲಾ ಶಿಕ್ಷಣ :

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಮ್ಮಿಕೊಂಡಿದ್ದ ಗುರಿಗಳನ್ನೇ ಮುಂದುವರಿಸಲಾಯಿತು. ಅಂದರೆ ಇಲ್ಲಿ ತಾಂತ್ರಿಕ ವಿಜ್ಞಾನ; ಕೃಷಿ ಶಿಕ್ಷಣ ವೃತ್ತಿ ಶಿಕ್ಷಣ ಉತ್ತಮ ಪಡಿಸುವಿಕೆಯ ಗುರಿಯನ್ನು ಹೊಂದಲಾಯಿತು. ಈ ಯೋಜನೆಯ ಕೊನೆಗೆ ಪ್ರೌಢ ಶಿಕ್ಷಣಕ್ಕಾಗಿ 279.17 ಕೋಟಿ ರೂಪಾಯಿಗಳನ್ನು ಮೀಸಲಿಡಲಾಯಿತು.

ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ :

ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಉತ್ತಮ ವಿಷಯಗಳನ್ನು ಅಭ್ಯಾಸದಲ್ಲಿ ಅಳವಡಿಸಲು ನಿರ್ಧರಿಸಲಾಯಿತು. ವಿಜ್ಞಾನ, ಮಾನವಿಕ ವಿಷಯಗಳ ಮತ್ತು ತಾಂತ್ರಿಕ ವಿಷಯಗಳನ್ನು ಸಹ ಇಡಲಾಯಿತು. ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ ಗ್ರಂಥಾಲಯ, ಪ್ರಯೋಗಾಲಯಗಳ ಉತ್ತಮ ಪಡಿಸುವಿಕೆಯ ಗುರಿಯನ್ನಿಟ್ಟು ಕೊಂಡು ಒಟ್ಟು 132.45 ರೂಪಾಯಿಗಳನ್ನು ಮೀಸಲಿಡಲಾಯಿತು.

ಬೋಧಕರ ಶಿಕ್ಷಣ :

ಈ ಯೋಜನೆಯಲ್ಲಿ ಮುಖ್ಯವಾಗಿ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ನೀಡುವ ಯೋಚನೆ ಮಾಡಿತು. ಶಿಕ್ಷಕರ ತರಬೇತಿ ಕೇಂದ್ರಗಳ ಉತ್ತಮ ಪಡಿಸುವಿಕೆ ಮತ್ತು ತರಬೇತಿ ಹೊಂದದ ಶಿಕ್ಷಕರಿಗೆ ಅಂಚೆ ಮತ್ತು ತೆರಪಿನ ಮೂಲಕ ತರಬೇತಿ ನೀಡಲು ಉದ್ದೇಶಿಸಲಾಯಿತು.

ತಾಂತ್ರಿಕ ಶಿಕ್ಷಣದ ಪುನರ್ ವ್ಯವಸ್ಥೆ :

ಹಿಂದಿನ ಯೋಜನೆಯಂತೆಯೇ ತಾಂತ್ರಿಕ ಶಿಕ್ಷಣ ಪುನರ್ ವ್ಯವಸ್ಥೆಗೆ ಯೋಜಿಸಲಾಯಿತು. ತಾಂತ್ರಿಕ ಶಿಕ್ಷಣ ಸಂಸ್ಥೆ ಮತ್ತು ಕೈಗಾರಿಕೆಗಳ ನಡುವೆ ಉದ್ಯೋಗಗಳನ್ನು ವಿನಿಮಯಗೊಳಿಸಿಕೊಳ್ಳಲು ಪ್ರೋತ್ಸಾಹಿಸಲು ನಿರ್ಣಯಿಸಲಾಯಿತು. ತಾಂತ್ರಿಕ ಶಿಕ್ಷಣಕ್ಕಾಗಿ ಈ ಯೋಜನೆಯಲ್ಲಿ 252.70 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು.

ವಯಸ್ಕರ ಶಿಕ್ಷಣ ಮತ್ತು ಯುವ ಶಕ್ತಿಯ ಸದ್ಬಳಕೆ :

ಸಾಕ್ಷರತೆ ಮತ್ತು ಜನ ಜೀವನವನ್ನು ಸುಧಾರಿಸಲು ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗಿಸಿ ಕೊಳ್ಳಲು ಯೋಜನೆಯನ್ನು ರೂಪಿಸಲಾಯಿತು. ಯುವಕರ ಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳುವ ಅವಕಾಶ ವನ್ನು ಕಲ್ಪಿಸಲು ನಿರ್ಧರಿಸಲಾಯಿತು. ಎನ್.ಸಿ.ಸಿ., ಎನ್.ಎಸ್.ಎಸ್. ಗರ್ಲ್ಸ್‌ಗೈಡ್, ಸ್ಕೌಟ್ಸ್ ಮುಂತಾದ ವುಗಳನ್ನು ರಾಷ್ಟ್ರೀಯ ಯುವ ಸಂಘಟನೆಯ ಯೋಜನೆಯಡಿಯಲ್ಲಿ ರೂಪಿಸಲಾಯಿತು. ''ಕೇಂದ್ರ ಮತ್ತು ರಾಜ್ಯಯುವ ಜನ ಸೇವಾ ಇಲಾಖೆ ಅಸ್ತಿತ್ವಕ್ಕೆ ಬಂದಿತು''.

ಈ ಯೋಜನೆಯ ಗುರಿಗಳನ್ನು ಸಾಧಿಸಲು ಆಡಳಿತದಲ್ಲಿ ಬಿಗಿ ಕ್ರಮ ಅನುಸರಿಸಲು ಮೇಲ್ವಿಚಾರಣೆ ಮತ್ತು ತನಿಖೆಯ ತೀವ್ರತೆಗೆ ನಿರ್ಧರಿಸಲಾಯಿತು.

ತಃಖ್ತೆ-10 : ನಾಲ್ಕನೇ ಪಂಚ ವಾರ್ಷಿಕ ಯೋಜನೆಯ ವಿವಿಧ ಕ್ಷೇತ್ರಗಳಲ್ಲಿ ಹಣಕಾಸಿನ ಹಂಚಿಕೆ.

ಕ್ರ.ಸಂ	ಶಿಕ್ಷಣದ ವಿವಿಧ ಕ್ಷೇತ್ರಗಳು	ನಿಯೋಜಿತ ಹಣ
01	ಪ್ರಾಥಮಿಕ ಶಿಕ್ಷಣ	398.50 ಕೋಟಿ ರೂ.
02	ಪ್ರೌಢ ಶಿಕ್ಷಣ	279.14 ಕೋಟಿ ರೂ.
03	ವಿಶ್ವವಿದ್ಯಾಲಯ ಶಿಕ್ಷಣ	132.45 ಕೋಟಿ ರೂ.
04	ವಿದ್ಯಾರ್ಥಿ ವೇತನಗಳು	055.00 ಕೋಟಿ ರೂ.
05	ವಯಸ್ಕರ ಸಾಮಾಜಿಕ ಶಿಕ್ಷಣ	071.00 ಕೋಟಿ ರೂ.
06	ತಾಂತ್ರಿಕ ಶಿಕ್ಷಣ	252.70 ಕೋಟಿ ರೂ.
07	ಸಾಂಸ್ಥಿಕ ಯೋಜನೆಗಳು	016.18 ಕೋಟಿ ರೂ.
08	ಇತರೆ	055.00 ಕೋಟಿ ರೂ.
	ಒಟ್ಟು ಮೊತ್ತ :-	**1260.00 ಕೋಟಿ ರೂ.**

(ಆಧಾರ : History of Indin Education – Jainand Kapoor Fiyi)

ಈ ಯೋಜನೆಯಲ್ಲಿ ನಿಗದಿಗೊಳಿಸಿದ ಒಟ್ಟು ಮೊತ್ತ 1260 ಕೋಟಿ ರೂಪಾಯಿಗಳು. ಇದರಿಂದ ಪ್ರಾಥಮಿಕ ಶಿಕ್ಷಣದಲ್ಲಿ ಗಣನೀಯ ಬೆಳವಣಿಗೆ ಉಂಟಾಯಿತು. ಪ್ರಾಥಮಿಕ ಶಾಲೆಗಳಲ್ಲಿ 69.50 ಮಿಲಿಯನ್ ಮಕ್ಕಳು ಶಾಲೆಗೆ ಹಾಜರಾಗತೊಡಗಿದರು. ಎಂಟು ಲಕ್ಷ ಶಿಕ್ಷಕರ ನೇಮಕವಾಯಿತು. ಪ್ರಾಥಮಿಕ ಶಿಕ್ಷಣಕ್ಕಾಗಿ 398.50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಯಿತು. 5 ಕಿ.ಮೀ. ಅಂತರದಲ್ಲಿ ಶಾಲೆಗಳನ್ನು ತೆರೆಯಲಾಯಿತು.

ಸಾಧನೆಗಳು :

ಪ್ರೌಢಶಿಕ್ಷಣದಲ್ಲಿ ಡಾ|| ಡಿ.ಎಸ್.ಕೊಠಾರಿ ಆಯೋಗವು (Education and development) ನೀಡಿದ ಶಿಫಾರಸ್ಸಿನಂತೆ ಕಾರ್ಯಾನುಭವ ಚಟುವಟಿಕೆಗಳನ್ನು ಪಠ್ಯ ವಿಷಯದಲ್ಲಿ ಅಳವಡಿಸಲಾಯಿತು. ಕೃಷಿ, ವಿಜ್ಞಾನ, ವಾಣಿಜ್ಯ, ತಾಂತ್ರಿಕ ಶಿಕ್ಷಣದಲ್ಲಿ ಉತ್ತಮ ಪ್ರತಿಕ್ರಿಯೆ ಕಂಡು ಬಂದಿತು. ವಿಶ್ವವಿದ್ಯಾಲಯ ಶಿಕ್ಷಣಕ್ಕಾಗಿ ಹಾಕಿಕೊಂಡಿದ್ದ ಗುರಿಗಳನ್ನು ಅನುಷ್ಠಾನಗೊಳಿಸಿ ಸಂಶೋಧನಾ ಕ್ಷೇತ್ರದ ಸೌಲಭ್ಯವನ್ನು ಹೆಚ್ಚಿಸಲಾಯಿತು. ವೃತ್ತಿ ಮತ್ತು ಶೈಕ್ಷಣಿಕ ವಿದ್ಯಾರ್ಹತೆ ಪಡೆದ ಶಿಕ್ಷಕರಿಗೆ ಬಡ್ತಿ ಅವಕಾಶ ಕಲ್ಪಿಸಿ ನೀಡಲಾಯಿತು. 55 ಕೋಟಿ ರೂ. ವಿದ್ಯಾರ್ಥಿ ವೇತನ ನೀಡಲಾಯಿತು. ''ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಸಂಸ್ಥೆ'' (Indian council of Social Science & Research) ಸ್ಥಾಪಿಸಲಾಯಿತು. ತರಬೇತಿ ಕೇಂದ್ರಗಳ ಮೂಲಕ ತರಬೇತಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರ ಪ್ರಮಾಣವು ಶೇ. 56 ರಿಂದ 77ಕ್ಕೆ ಏರಿತು.

'' ರಾಷ್ಟ್ರೀಯ ವಯಸ್ಕರ ಶಿಕ್ಷಣ ಸಂಸ್ಥೆ''ಯನ್ನು ಸ್ಥಾಪಿಸಲಾಯಿತು. ಈ ಯೋಜನೆಯಲ್ಲಿ ಒಂದೂವರೆ ಲಕ್ಷ ಜನರಿಗೆ ವಯಸ್ಕರ ಶಿಕ್ಷಣ ನೀಡಲಾಯಿತು. ಇದಕ್ಕಾಗಿ 78ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಯಿತು. 100 ನೆಹರು ಯುವಕ ಕೇಂದ್ರಗಳನ್ನು ಸ್ಥಾಪಿಸಲಾಯಿತು.

ಭಾಷಾ ಬೆಳವಣಿಗೆಗಾಗಿ ಈ ಯೋಜನೆಯಲ್ಲಿ ಪುಸ್ತಕಗಳ ಪ್ರಕಟಣೆಗೆ ಕಾಳಜಿವಹಿಸಲಾಯಿತು. ಭಾರತೀಯ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ಅನೇಕ ಪುಸ್ತಕಗಳನ್ನು ಪ್ರಕಟಿಸಲಾಯಿತು. ಶಾಲಾ ಪಠ್ಯ ಪುಸ್ತಕಗಳ ಮುದ್ರಣಾಲಯಕ್ಕಾಗಿ ಸರಕಾರವೇ ಮುದ್ರಣಾಲಯಗಳನ್ನು ತೆರೆಯಿತು. ಈ ಯೋಜನಾ ಅವಧಿಯಲ್ಲಿ ತ್ರಿಭಾಷಾ ಸೂತ್ರ ವನ್ನು ಅನುಷ್ಠಾನಗೊಳಿಸಲಾಯಿತು. ಶಾಲಾ ಪಠ್ಯ ಪುಸ್ತಕಗಳ ರಾಷ್ಟ್ರೀಯ ಮಂಡಳಿಯನ್ನು ಸಹ ಸ್ಥಾಪಿಸಲಾಯಿತು. ಈ ಅವಧಿಯಲ್ಲಿ ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವ ಪಠ್ಯ ಪುಸ್ತಕಗಳನ್ನು ಮಕ್ಕಳಿಗಾಗಿ ಪ್ರಕಟಿಸಲಾಯಿತು. ಒಟ್ಟಾರೆ ಈ ಯೋಜನೆಯು ಸಾಧಿಸಿದ ಸಾಧನೆ ಹಾಕಿಕೊಂಡ ಗುರಿಗೆ ಬಾಧಕವಾಗದಂತೆ ಸಫಲತೆಯನ್ನು ಕಂಡಿತು.

2.14.5. ಐದನೆಯ ಪಂಚವಾರ್ಷಿಕ ಯೋಜನೆ (1974-79) :

ಈ ಯೋಜನೆಯ ಅವಧಿಯಲ್ಲಿ 1285 ಕೋಟಿ ರೂಪಾಯಿಗಳನ್ನು ಶಿಕ್ಷಣದ ಅಭಿವೃದ್ಧಿಗಾಗಿ ಮೀಸಲಿಡಲಾಯಿತು.

ಗುರಿಗಳು :

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಆಮೂಲಾಗ್ರ ಸುಧಾರಣೆ :

6-14 ವರ್ಷದ ಮಕ್ಕಳು ಶಾಲೆಗೆ ಕಡ್ಡಾಯವಾಗಿ ಹಾಜರಾಗುವಂತೆ ಆಕರ್ಷಿಸಲು ಆರೋಗ್ಯ ಸೇವೆ, ಮಕ್ಕಳ ಕಲ್ಯಾಣನಿಧಿ, ಉಪಹಾರ ಇತ್ಯಾದಿ ಪ್ರೋತ್ಸಾಹದಾಯಕ ಸೌಲಭ್ಯಗಳ ಜಾರಿಗೆ ಗುರಿಯನ್ನು ಹಮ್ಮಿಕೊಳ್ಳಲಾಯಿತು. ಗ್ರಾಮೀಣ ಬುಡಕಟ್ಟು ಜನರಿಗೆ ಮತ್ತು ಕೊಳಚೆ ಪ್ರದೇಶದ ಮಕ್ಕಳಿಗೆ ಆಹಾರ, ಪಠ್ಯಪುಸ್ತಕಗಳು, ಬಟ್ಟೆಗಳನ್ನು ಉಚಿತವಾಗಿ ನೀಡುವ ಗುರಿಯನ್ನು ಹೊಂದಲಾಗಿತ್ತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಆಮೂಲಾಗ್ರ ಸುಧಾರಣೆಗಾಗಿ ಯೋಜನೆಯಲ್ಲಿ ನಿರ್ಧರಿಸಲಾಯಿತು. ಈ ಅವಧಿಯಲ್ಲಿ ಒಂದರಿಂದ ನಾಲ್ಕನೇ ತರಗತಿಯಲ್ಲಿ 154 ಲಕ್ಷ ಮಕ್ಕಳು ಐದರಿಂದ ಏಳನೇ ತರಗತಿಗೆ 75 ಲಕ್ಷ ಮಕ್ಕಳು ಪ್ರವೇಶ ಪಡೆಯುವಂತಾಗಬೇಕೆಂದು ನಿರ್ಧರಿಸಲಾಯಿತು.

ಪ್ರೌಢ ಶಾಲಾ ಶಿಕ್ಷಕರಿಗೆ ಸೇವಾ ನಿರತ ತರಬೇತಿ :

ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಮಾದರಿ ಪ್ರೌಢಶಾಲೆಯನ್ನು ಯೋಜನೆಯ ಕೊನೆಯೊಳಗೆ ತೆರೆಯಲು ಯೋಜಿಸಲಾಯಿತು. 40 ಲಕ್ಷ ಹೆಚ್ಚುವರಿ ಮಕ್ಕಳಿಗೆ ಪ್ರೌಢಶಿಕ್ಷಣ ನೀಡುವ ಗುರಿ ಹೊಂದಲಾಯಿತು. ಪ್ರೌಢಶಾಲಾ ಶಿಕ್ಷಕರಿಗೆ ಸೇವಾ ನಿರತ ತರಬೇತಿ, ಕ್ರೀಡಾ ಸೌಲಭ್ಯ, ವೃತ್ತಿ ಮಾರ್ಗದರ್ಶನ ನೀಡಲು ಅವಕಾಶವನ್ನು ಕಲ್ಪಿಸಲಾಯಿತು. ಜೊತೆಗೆ ವಿಜ್ಞಾನ ಅಧ್ಯಯನಗಳು ಮತ್ತು ಗ್ರಂಥಾಲಯಗಳ ಸ್ಥಾಪನೆಗಾಗಿ ತೀರ್ಮಾನಿಸಲಾಯಿತು.

ಬೋಧಕರ ಶಿಕ್ಷಣಕ್ಕಾಗಿ ಮಂಡಳಿಗಳ ಸ್ಥಾಪನೆ :

ಶಿಕ್ಷಕರಿಗೆ ಸೇವಾ ಪೂರ್ವ ತರಬೇತಿ ಸೌಲಭ್ಯಗಳಿಗೆ ಅವಕಾಶ ರಾಜ್ಯಗಳಲ್ಲಿ ಶಿಕ್ಷಕರ ಶಿಕ್ಷಣದ ಮಂಡಳಿಗಳನ್ನು ಸ್ಥಾಪಿಸುವುದು. (Board & Teacher Education) ರಾಷ್ಟ್ರಮಟ್ಟದಲ್ಲಿ ಬೋಧಕರ ಶಿಕ್ಷಣದ ರಾಷ್ಟ್ರೀಯ ಪರಿಷತ್ತು (National Council of Teacher Education) ಸ್ಥಾಪಿಸಲು ತೀರ್ಮಾನಿಸಲಾಯಿತು.

ವೃತ್ತಿ ಶಿಕ್ಷಣದ ಮೂಲಕ 'ಗಳಿಕೆ' ಯ ಕಲ್ಪನೆ :

ವೃತ್ತಿ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವುದಕ್ಕಾಗಿ 9 ಮತ್ತು 10ನೇ ತರಗತಿಯ ಮಕ್ಕಳಿಗೆ ಸಾಮಾಜಿಕ ಉಪಯುಕ್ತ ಉತ್ಪನ್ನ ಕಾರ್ಯ (S.U.P.W) ಗಳನ್ನು ಮಾಡಲು ತೀರ್ಮಾನಿಸಲಾಯಿತು. ಆ ಮೂಲಕ ಮಕ್ಕಳಲ್ಲಿ 'ಗಳಿಕೆ' ಯ ನೈಪುಣ್ಯತೆಗೆ ಅವಕಾಶ ಕಲ್ಪಿಸಲಾಯಿತು. ಉನ್ನತ ಪ್ರೌಢಶಾಲೆಗಳಲ್ಲಿ 10+ 2 + 3(12 ವರ್ಷದಲ್ಲಿ)

ಕ್ರಮವನ್ನು ಅಳವಡಿಸಲು ಯೋಜಿಸಲಾಯಿತು. ಎಸ್.ಎಸ್.ಎಲ್.ಸಿ. ನಂತರದ ವೃತ್ತಿ ಶಿಕ್ಷಣಕ್ಕೆ ಇದೇ ಶಿಕ್ಷಣದ ಅವಕಾಶಕ್ಕೆ ತೀರ್ಮಾನಿಸಲಾಯಿತು.

ವಯಸ್ಕರ ಶಿಕ್ಷಣ :

ಅನಕ್ಷರಸ್ಥರಿಗೆ ಓದು, ಬರಹ ಮತ್ತು ಲೆಕ್ಕದ ಪರಿಕಲ್ಪನೆ ಮೂಡಿಸುವ ಗುರಿಯನ್ನಿಟ್ಟುಕೊಳ್ಳಲಾಯಿತು.

ಹಿಂದಿ ಭಾಷಾ ಬೆಳವಣಿಗೆಗೆ ಆದ್ಯತೆ :

ರಾಷ್ಟ್ರ ಭಾಷೆಯನ್ನಾಗಿ ಹಿಂದಿಯನ್ನು ಬೆಳೆಸಲು ಯೋಜಿಸಲಾಯಿತು. ಎರಡು ಸಾವಿರ ಹಿಂದಿ ಶಿಕ್ಷಕರ ನೇಮಕಕ್ಕೆ ತೀರ್ಮಾನಿಸಲಾಯಿತು. ಭಾಷಾಭಿವೃದ್ಧಿಗಾಗಿ ವಿವಿಧ ಚಟುವಟಿಕೆಗಳು ಮತ್ತು ಪ್ರತಿ ವರ್ಷವೂ 20,000 ಸಾಲ ರೂಪದ ವಿದ್ಯಾರ್ಥಿ ವೇತನ ನೀಡಲು ನಿರ್ಧರಿಸಲಾಯಿತು.

ಸಾಧನೆಗಳು :

ಐದು ವರ್ಷಗಳಲ್ಲಿ ಕೊಳಚೆ ಮತ್ತು ಗ್ರಾಮೀಣ ಅಭಿವೃದ್ಧಿ ಮಕ್ಕಳಿಗೆ 100 ಕೋಟಿ, ಮಧ್ಯಾಹ್ನದ ಉಪಹಾರ ಕ್ಕಾಗಿ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ಆಹಾರ, ಆರೋಗ್ಯ ಸೇವೆ, ಬಟ್ಟೆ ವಿತರಣೆಯಿಂದ ಬಡ ಮಕ್ಕಳನ್ನು ಆಕರ್ಷಿಸುವಂತಾಯಿತು. ಆರರಿಂದ ಹನ್ನೊಂದು ವಯಸ್ಸಿನ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಎಲ್ಲಾ ರಾಜ್ಯ ಗಳು ಜಾರಿಗೊಳಿಸಿದವು. ಈ ಯೋಜನಾ ಅವಧಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಮಾದರಿ ಪ್ರೌಢಶಾಲೆಯನ್ನು ತೆರೆಯಲಾಯಿತು. ಪ್ರೌಢಶಾಲೆಗಾಗಿ 250 ಕೋಟಿ ರೂಪಾಯಿ ಖರ್ಚು ಮಾಡಲಾಯಿತು. 73-74ರಲ್ಲಿ ಶೇ. 22ರಷ್ಟಿದ್ದ ಮಕ್ಕಳು 1978-79ರ ಹೊತ್ತಿಗೆ ಶೇ. 26ರಷ್ಟಾಯಿತು. ಬಡ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಶಿಕ್ಷಣ ಮುಂದುವರಿಸಲು ಸಂಜೆ ಕಾಲೇಜು ಮತ್ತು ಅಂಚೆ ಮತ್ತು ತೆರಪಿನ ಮೂಲಕ ಸೌಕರ್ಯ ಕಲ್ಪಿಸಲಾಯಿತು. ವಿಶ್ವವಿದ್ಯಾಲಯದ ಶಿಕ್ಷಣಕ್ಕಾಗಿ 292 ಕೋಟಿ ರೂಪಾಯಿಗಳ ವೆಚ್ಚ ಮಾಡಲಾಯಿತು.

ಬೋಧಕರ ಶಿಕ್ಷಣ ಸುಧಾರಣೆಗಾಗಿ 28 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಯಿತು. ಹಿಂದಿಭಾಷೆ ಅಭಿವೃದ್ಧಿಗಾಗಿ ಶ್ರಮಿಸಲಾಯಿತು. ಶಿಕ್ಷಕರ ನೇಮಕ ಮಾಡಿ ಸಾಮಗ್ರಿಗಳನ್ನು ಒದಗಿಸಿಕೊಡಲಾಯಿತು.

ತಃಖ್ತೆ-11 : ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಣಕಾಸಿನ ಹಂಚಿಕೆ :

ಕ್ರ.ಸಂ.	ಶಿಕ್ಷಣದ ವಿವಿಧ ಕ್ಷೇತ್ರ	ನಿಗದಿಪಡಿಸಿದ ಹಣ
01	ಪ್ರಾಥಮಿಕ ಶಿಕ್ಷಣ	410 ಕೋಟಿ ರೂ.
02	ಪ್ರೌಢಶಿಕ್ಷಣ	250 ಕೋಟಿ ರೂ.
03	ವಿಶ್ವವಿದ್ಯಾಲಯ	292 ಕೋಟಿ ರೂ.
04	ವಿಶೇಷ ಶಿಕ್ಷಣ	018 ಕೋಟಿ ರೂ.
05	ತಾಂತ್ರಿಕ ಶಿಕ್ಷಣ	156 ಕೋಟಿ ರೂ.
06	ಕಲೆ ಮತ್ತು ಸಂಸ್ಕೃತಿ	037 ಕೋಟಿ ರೂ.
07	ಇತರೆ	122 ಕೋಟಿ ರೂ.
	ಒಟ್ಟು ಮೊತ್ತ :	**1285 ಕೋಟಿ ರೂ.**

(ಆಧಾರ : Land mark in the History of Indian Education by J.C. Agarwal)

ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿಗೊಳಿಸಿದ ಗುರಿಗಳನ್ನು ಸಾಧಿಸಲು ಒಂದು ವರ್ಷ ಮುಂಚಿತವಾಗಿಯೇ ಕೈಬಿಡಲಾಯಿತು. ಕಾರಣ ಸರಕಾರದಲ್ಲಿ ಬದಲಾವಣೆ, ಇದರಿಂದ ಗುರಿಯ ಸಾಧನೆಗೆ ಹಿನ್ನಡೆ ಯಾದಂತಾಗಿದೆ.

2.14.6. ಆರನೆಯ ಪಂಚವಾರ್ಷಿಕ ಯೋಜನೆ (1980-85) :

ಈ ಯೋಜನೆಯಲ್ಲಿ ಹೊಸ ಹೊಸ ಗುರಿಗಳನ್ನು ಹಮ್ಮಿಕೊಳ್ಳಲಾಯಿತು.

ಗುರಿಗಳು :

ಪ್ರಾಥಮಿಕ ಶಿಕ್ಷಣದಲ್ಲಿ ಪ್ರೋತ್ಸಾಹಕ ಯೋಜನೆ ಮುಂದುವರಿಕೆ :

ಸಂವಿಧಾನದ 45ನೇ ವಿಧಿಗೆ ಪ್ರಾಮುಖ್ಯತೆಯನ್ನು ನೀಡಲಾಯಿತು. 6- 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಶಿಕ್ಷಣದ ಅವಕಾಶವನ್ನು ಕಡ್ಡಾಯಗೊಳಿಸುವುದು, ಶಾಲೆ ಬಿಟ್ಟ 9-14 ವರ್ಷದ ಮಕ್ಕಳಿಗೆ ಸಂಕ್ಷೇಪ ಕೋರ್ಸ್ (Condensed Course) ತೆರೆಯಲು ನಿರ್ಧರಿಸಲಾಯಿತು. ಹಿಂದುಳಿದ ಪ್ರದೇಶಗಳ ಶಾಲೆಗಳಲ್ಲಿ ಗೈರು ಹಾಜರಿ,ಅಪವ್ಯಯ ತಡೆಗೆ ವಿಶೇಷ ಕಾರ್ಯಕ್ರಮಗಳ ಜಾರಿಯ ಗುರಿ ಇಟ್ಟುಕೊಳ್ಳಲಾಯಿತು (ಬಟ್ಟೆ, ಪುಸ್ತಕ, ಉಪಹಾರ ಹೆಚ್ಚು ಒದಗಿಸಲು ತೀರ್ಮಾನ).

ಪ್ರೌಢಶಾಲಾ ಶಿಕ್ಷಣದಲ್ಲಿ ಸಾಮಾಜಿಕವಾಗಿ ಹಿಂದುಳಿದ ಮಕ್ಕಳಿಗೆ ಆದ್ಯತೆ :

ಜೀವನಕ್ಕೆ ಹತ್ತಿರವಿರುವ ಕಲೆ, ಸಂಸ್ಕೃತಿ, ನೃತ್ಯ, ನಾಟಕ, ಸಂಗೀತ, ಜಾನಪದ ಕಲೆಗಳನ್ನು ಉತ್ತೇಜಿಸುವುದು. ಇದರಿಂದ ಮಕ್ಕಳು ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಅವಕಾಶ ಕಲ್ಪಿಸಲು ತೀರ್ಮಾನಿಸಲಾಯಿತು. ಪ.ಜಾ./ ಪ.ಪಂ. ಭೂರಹಿತ ಹಿಂದುಳಿದ ಮಕ್ಕಳು, ಹೆಣ್ಣು ಮಕ್ಕಳ ಶಾಲಾ ಪ್ರವೇಶಕ್ಕೆ ಆದ್ಯತೆ ನೀಡಲಾಯಿತು.

ವಿಶ್ವವಿದ್ಯಾಲಯ ಶಿಕ್ಷಣ :

ವಿಶ್ವವಿದ್ಯಾಲಯಗಳಲ್ಲಿ ಗುಣಾತ್ಮಕ ಮತ್ತು ಉತ್ತಮ ಆಡಳಿತ ನೀಡುವ ಗುರಿ ಇಟ್ಟುಕೊಳ್ಳಲಾಯಿತು.

- ಭಾರತೀಯ ಭಾಷೆಗಳ ಅಧ್ಯಯನದ ಮೂಲಕ ವಿವಿಧ ಭಾಷೆಗಳನ್ನು ಎಲ್ಲರಿಗೂ ಪರಿಚಯಿಸಲು ತೀರ್ಮಾನಿಸಲಾಯಿತು. ಸ್ನಾತಕೋತ್ತರ ವಿದ್ಯಾಭ್ಯಾಸದ ಅವಕಾಶವನ್ನು ಕೇವಲ ವಿಶ್ವವಿದ್ಯಾಲಯ ಗಳಲ್ಲಿ ಮಾತ್ರ ಕಲಿಯಲು ಅನುಕೂಲ ಮಾಡಲು ಕಲ್ಪಿಸಲಾಯಿತು. ವಿಶ್ವವಿದ್ಯಾಲಯಗಳಲ್ಲಿ ಪ್ರತಿಭಾವಂತ ವಿದ್ಯಾವಂತರಿಗೆ ಮಾತ್ರ ಪ್ರವೇಶದ ಅವಕಾಶಕ್ಕೆ ನಿರ್ಧರಿಸಲಾಯಿತು. ಸ್ವಾಯತ್ತ ಕಾಲೇಜುಗಳ ಸ್ಥಾಪನೆಗೆ ಗುರಿಯನ್ನು ಹಾಕಿಕೊಳ್ಳಲಾಯಿತು.
- ಉನ್ನತ ಶಿಕ್ಷಣದಲ್ಲಿ ಸಂಶೋಧನೆಗೆ ಪ್ರೋತ್ಸಾಹಿಸಲಾಯಿತು. ಯು.ಜಿ.ಸಿ. ಅನುದಾನ ನೀಡಲು ಗುರಿ ಹೊಂದಲಾಯಿತು.

ವಯಸ್ಕರ ಶಿಕ್ಷಣದ ಮೂಲಕ ಸಾಕ್ಷರತೆಯ ಸಾಧನೆಯ ಗುರಿ :

ಈ ಶಿಕ್ಷಣಕ್ಕಾಗಿ ನೆಹರೂ ಯುವಕ ಕೇಂದ್ರ, ವಿಶ್ವವಿದ್ಯಾಲಯಗಳ ವಯಸ್ಕರ ಶಿಕ್ಷಣ ಕೇಂದ್ರಗಳು, ಗ್ರಾಮೀಣ ರೈತರ ಸಾಕ್ಷರತಾ ಯೋಜನೆ ಕಾರ್ಮಿಕ ಸಂಸ್ಥೆಗಳು, ರಾಷ್ಟ್ರೀಯ ಸೇವಾ ಯೋಜನೆ, ನಿವೃತ್ತ ಶಿಕ್ಷಕರ ಬಳಕೆ, ಸಾಮಾಜಿಕ ಸೇವಕರು, ಸಂಘಟನೆಯ ಕಾರ್ಯಕರ್ತರ ಬಳಕೆಗಾಗಿ ತೀರ್ಮಾನಿಸಲಾಯಿತು. ರಾಜ್ಯಮಟ್ಟದಿಂದ ಹೋಬಳಿ ಮಟ್ಟದವರೆಗೆ ವಯಸ್ಕರ ಶಿಕ್ಷಣ ಘಟಕಗಳು ಸ್ಥಾಪನೆಗಾಗಿ ನಿರ್ಣಯಿಸಲಾಯಿತು. ವಯಸ್ಕರ ಶಿಕ್ಷಣ ರಾಷ್ಟ್ರೀಯ ಮಂಡಳಿಯ ಸ್ಥಾಪನೆಗೆ ಉದ್ದೇಶಿಸಲಾಯಿತು. ಈ ಯೋಜನೆಯಲ್ಲಿ 15-45 ವರ್ಷದೊಳಗಿನ 650 ಲಕ್ಷ ವಯಸ್ಕರಿಗೆ ಶಿಕ್ಷಣ ನೀಡುವ ಗುರಿ ಹಮ್ಮಿಕೊಳ್ಳಲಾಯಿತು. ಆ ಮೂಲಕ ಸಾಕ್ಷರತೆಯ ಸಾಧನೆಯ ಗುರಿಯನ್ನು ಹೊಂದಲಾಯಿತು. ಇದಕ್ಕಾಗಿ 128 ಕೋಟಿ ರೂ.ಗಳ ಮೀಸಲಿಡಲಾಯಿತು.

ತಾಂತ್ರಿಕ ಶಿಕ್ಷಣದಲ್ಲಿ ನಿರಂತರ ಸಂಶೋಧನೆಗೆ ಆದ್ಯತೆ :

೬ನೇ ಯೋಜನೆಯಲ್ಲಿ ತಾಂತ್ರಿಕ ಶಿಕ್ಷಣ ಸುಧಾರಣೆಗಾಗಿ ಕ್ರಮಕೈಗೊಳ್ಳಲು ನಿರ್ಧರಿಸಲಾಯಿತು. ತಾಂತ್ರಿಕ ಶಿಕ್ಷಣದ ಪಠ್ಯ ಪುಸ್ತಕಗಳ ಬದಲಾವಣೆ, ಉಪಕರಣಗಳ ಆಧುನೀಕರಣಕ್ಕಾಗಿ ತೀರ್ಮಾನಿಸಲಾಯಿತು. ತಂತ್ರಜ್ಞಾನ ಮತ್ತು ಇಂಜಿನಿಯರಿಂಗ್ ಸ್ನಾತಕೋತ್ತರ ಕೇಂದ್ರಗಳಲ್ಲಿ ಸಂಶೋಧನೆಗಳ ನಿರಂತರತೆಗೆ ತೀರ್ಮಾನಿಸಲಾಯಿತು.

ಸಾಧನೆಗಳು :

ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಹೆಜ್ಜೆಗಳನ್ನು ಗುರುತಿಸಬಹುದು. ಶಿಕ್ಷಣ ಮತ್ತು ಸಂಸ್ಕೃತಿ, ರಾಷ್ಟ್ರೀಯ ಭಾವೈಕ್ಯತೆ ಹೆಚ್ಚು ಪ್ರಾಶಸ್ತ್ಯ ನೀಡಿ ಅಭಿವೃದ್ಧಿ ಕಾರ್ಯಗಳಿಗೆ ಪ್ರೋತ್ಸಾಹಿಸಿದಂತಾಯಿತು.

ತಃಖ್ತೆ-12 : ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಣಕಾಸಿನ ಹಂಚಿಕೆ (ಕೋಟಿಗಳಲ್ಲಿ) :

ಕ್ರ.ಸಂ	ಶಿಕ್ಷಣದ ವಿವಿಧ ಕ್ಷೇತ್ರಗಳು	ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಾಲು	ಕೇಂದ್ರದ ಪಾಲು	ಒಟ್ಟು
01	ಪ್ರಾಥಮಿಕ ಶಿಕ್ಷಣ	851.07	54.30	905.37
02	ಪ್ರೌಢ ಶಿಕ್ಷಣ	370.00	28.01	398.01
03	ಬೋಧಕರ ಶಿಕ್ಷಣ	022.00	---	022.00
04	ವಿ.ವಿ. ನಿಲಯ ಮತ್ತು ಉನ್ನತ ಶಿಕ್ಷಣ	197.00	288.75	487.75
05	ವಯಸ್ಕರ ಶಿಕ್ಷಣ	068.00	060.00	128.00
06	ಕ್ರೀಡೆ ಮತ್ತು ಯುವಕರ ಕಲ್ಯಾಣ	069.00	024.54	093.54
07	ಕಲೆ ಮತ್ತು ಸಂಸ್ಕೃತಿ	032.90	051.00	083.90
08	ತಾಂತ್ರಿಕ ಶಿಕ್ಷಣ	108.00	168.00	277.61
09	ಇತರೆ ಕಾರ್ಯಕ್ರಮಗಳು	---	---	---
	ಒಟ್ಟು ಮೊತ್ತ :-	**1788.09**	**734.75**	**2523.74**

ಆಧಾರ: (ಓಬಳೇಶ ಘಟ್ಟಿ, ಉದಯೋನ್ಮುಖ ಭಾರತದಲ್ಲಿ ಶಿಕ್ಷಣ)

ಒಟ್ಟು ಶಿಕ್ಷಣಕ್ಕಾಗಿ 2524 ಕೋಟಿ ರೂಪಾಯಿಗಳನ್ನು ಮೀಸಲಿಡಲಾಯಿತು. ಕೇಂದ್ರದ ಪಾಲು 734.75 ಕೋಟಿ ರೂಪಾಯಿಗಳಾದರೆ ರಾಜ್ಯಗಳ ಪಾಲು 1789-99 ಕೋಟಿ ರೂಪಾಯಿಗಳೆಂದು ನಿಗದಿಪಡಿಸಲಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಈ ಯೋಜನೆಯಲ್ಲಿ 905.37ಕೋಟಿ ವೆಚ್ಚ ಮಾಡಲಾಯಿತು. ಇದರಿಂದ ಶಿಕ್ಷಣದಲ್ಲಿ ಆಶಾದಾಯಕ ಬೆಳವಣಿಗೆಯುಂಟಾಯಿತು. ಪ್ರೌಢಶಿಕ್ಷಣದಲ್ಲಿ ವೃತ್ತಿ ವಿಷಯಗಳಿಗೆ ಸಂಬಂಧಿಸಿದ ವಿವಿಧೋದ್ದೇಶ ಶಾಲೆಗಳನ್ನು ತೆರೆಯಲಾಯಿತು. ವೃತ್ತಿಪರ ವಿಷಯಗಳ ಅಧ್ಯಯನಕ್ಕೆ ಡಿಪ್ಲೊಮಾ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲು ಅವಕಾಶವಾಯಿತು. ಹಿಂದುಳಿದ ವರ್ಗದ ಮಕ್ಕಳಿಗೆ ವಿದ್ಯಾರ್ಥಿ ವೇತನ, ಹಾಸ್ಟೆಲ್ ಸೌಲಭ್ಯ, ಉಚಿತ ಪಠ್ಯ ಪುಸ್ತಕ, ಸಮವಸ್ತ್ರ ಮುಂತಾದವುಗಳ ಸೌಲಭ್ಯ ಕಲ್ಪಿಸಲಾಯಿತು. ಗ್ರಾಮೀಣ ಮಕ್ಕಳಿಗೆ ಗ್ರಾಮೀಣ ಪ್ರೌಢಶಾಲೆಗಳು ಪ್ರಾರಂಭವಾದವು. ಈ ಶಿಕ್ಷಣಕ್ಕಾಗಿ 398 ಕೋಟಿ ರೂಪಾಯಿ ಖರ್ಚು ಮಾಡಲಾಯಿತು. ಉನ್ನತ ಶಿಕ್ಷಣದ ಸಂಶೋಧನೆಯಲ್ಲಿ ಪ್ರಗತಿ ಕಾಣಲಾಯಿತು. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ತೆರೆಯಲಾಯಿತು. ಅನೇಕ ಸಂಘ-ಸಂಸ್ಥೆಗಳು, ಉತ್ತಮ ಕಾರ್ಯ ಮಾಡಿದ್ದರಿಂದ ವಯಸ್ಕರ ಶಿಕ್ಷಣದ ಘಟಕಗಳು ಪ್ರಾರಂಭವಾದವು. ವಯಸ್ಕರ ಶಿಕ್ಷಣಕ್ಕಾಗಿ ಅಧಿಕಾರಿಗಳನ್ನು ನೇಮಿಸಲಾಯಿತು. ಇದರಿಂದ ಉತ್ತಮ ಸಾಧನೆಗೆ ನಾಂದಿಯಾಯಿತು.

2.14.7. ಏಳನೇ ಪಂಚವಾರ್ಷಿಕ ಯೋಜನೆ (1985-90) :

ಈ ಯೋಜನೆಯಲ್ಲಿ ಶಿಕ್ಷಣ ರಂಗದ ವಿವಿಧ ಆಯಾಮಗಳನ್ನು ಪುನರ್ ಸಂಘಟನೆಗೊಳಿಸಲು ಯೋಜಿಸ ಲಾಯಿತು. ಇದಕ್ಕಾಗಿ ಕ್ರಿಯಾತ್ಮಕ ಚಟುವಟಿಕೆಗಳನ್ನು ಪ್ರಾರಂಭಿಸಬೇಕೆಂದು ನಿರ್ಧರಿಸಲಾಯಿತು. 'ಆಧುನೀಕರಣ'ಕ್ಕಾಗಿ ವಿಶೇಷ ಕಾಳಜಿವಹಿಸಲು ತೀರ್ಮಾನಿಸಿ ''ಶಿಕ್ಷಣವೂ ಸಹ ಮಾನವಸಂಪನ್ಮೂಲ ಅಭಿವೃದ್ಧಿ'' ಮತ್ತು ''ಉತ್ಪಾದನಾ ಉದ್ದಿಮೆ'' ಎಂಬ ತೀರ್ಮಾನಕ್ಕೆ ಈ ಯೋಜನೆಯಲ್ಲಿ ಪುಷ್ಟಿಕೊಡಲಾಯಿತು. ಈ ಯೋಜನೆಯಲ್ಲಿ 6383 ಕೋಟಿ ರೂ . ಗಳನ್ನು ಮೀಸಲಿಡಲಾಯಿತು. ಕೇಂದ್ರದ ಪಾಲು 2389 ಕೋಟಿ ರೂಪಾಯಿಗಳು ಉಳಿದ 3994ಕೋಟಿ ರೂಪಾಯಿಗಳು ಆಯಾ ರಾಜ್ಯಗಳ ಪಾಲೆಂದು ತೀರ್ಮಾನಿಸಲಾಯಿತು .

ಗುರಿಗಳು :

ಪ್ರಾಥಮಿಕ ಶಿಕ್ಷಣದಲ್ಲಿ ಬಾಲಕಿಯರಿಗೆ ಮತ್ತು ಹಿಂದುಳಿದ ಮಕ್ಕಳಿಗೆ ವಿಶೇಷ ಆದ್ಯತೆ :

ಈ ಹಿಂದಿನ ಯೋಜನೆಗಳಲ್ಲಿ ಅಳವಡಿಸಿಕೊಂಡ ಎಲ್ಲಾ ಕಾರ್ಯ ಕ್ರಮಗಳನ್ನು ಮುಂದುವರೆಸುತ್ತಾ ಸಾರ್ವತ್ರೀಕರಣ ನಿರಂತರವಾಗಿ ಮುಂದುವರಿಯಲು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಎರಡನ್ನೂ ಸಂಗಮಿಸಿಲು ತೀರ್ಮಾನಿಸ್ಲಲಾಯಿತು . ಆರ್ಥಿಕ ಮತ್ತು ಸಾಮಾಜಿಕವಾಗಿ ಗಮನ ನೀಡುವುದಕ್ಕೆ ಬಾಲಕಿಯರ

ಮತ್ತು ಹಿಂದುಳಿದ ಮಕ್ಕಳ ಬಗ್ಗೆ ವಿಶೇಷ ಕಾಳಜಿಗೆ ಆದ್ಯತೆ ನೀಡಲು ನಿರ್ಧರಿಸಲಾಯಿತು . ಯೋಜನೆಯ ಅಂತ್ಯಕ್ಕೆ 50 ಮಿಲಿಯನ್ ಮಕ್ಕಳು ಶಾಲೆಗಳಲ್ಲಿ ದಾಖಲಾಗಲು ಗುರಿ ನಿಗದಿಪಡಿಸಲಾಯಿತು .

ಮಕ್ಕಳ ಕಲಿಕೆಗೆ ವಿಶೇಷ ಒತ್ತು :

ಮಧ್ಯದಲ್ಲಿಯೇ ಶಾಲೆಬಿಟ್ಟಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡು ಶಿಕ್ಷಣದ ಅಭಿವೃದ್ಧಿಗೆ ಮಾರಕವಾಗಿರುವ ಅಪವ್ಯಯ ಮತ್ತು ಸ್ಥಗಿತತೆ ದೂರೀಕರಿಸಲು ತೀರ್ಮಾನಿಸಲಾಯಿತು . ಮಕ್ಕಳ ಕಲಿಕೆಗೆ ವಿಶೇಷ ಒತ್ತು ನೀಡಿ ಆಕರ್ಷಕ ವಿಷಯಗಳನ್ನು ಮಕ್ಕಳ ಆಸಕ್ತಿಗನುಗುಣವಾಗಿ ಕಲಿಯಲು ಹೊಸ ಪಠ್ಯ ವಸ್ತುವಿನ ರಚನೆಗೆ ತೀರ್ಮಾನಿಸ ಲಾಯಿತು. ಶಿಕ್ಷಕರ ಬೋಧನೆ ಆಕರ್ಷಕವಾಗಲು ಅವರಿಗೆ ವಿಷಯಾಧಾರಿತ ತರಬೇತಿ, ಬೋಧನೆ ಉತ್ತಮವಾಗಲು ಬೋಧನೋಪಕರಣಗಳನ್ನು ಬಳಸಲು ಯೋಜಿಸಲಾಯಿತು. ಮಧ್ಯದಲ್ಲಿ ಶಾಲೆಬಿಡುವ ಬಡಮಕ್ಕಳನ್ನು ಆಕರ್ಷಿಸಲು ವಿದ್ಯಾರ್ಥಿ ವೇತನ, ಉಚಿತ ಪಠ್ಯ ಪುಸ್ತಕ, ಬಟ್ಟೆ, ಮಧ್ಯಾಹ್ನದ ಉಪಹಾರ ಒದಗಿಸಲು ಉದ್ಧೇಶಿಸಲಾಯಿತು .

ತಾಂತ್ರಿಕ ಶಿಕ್ಷಣ :

ತಾಂತ್ರಿಕ ಶಿಕ್ಷಣ ವನ್ನು ಆಧುನೀಕರಣಗೊಳಿಸಲು ಗುರಿ ಇಟ್ಟು ಕೊಳ್ಳಲಾಯಿತು . ಮಾನವ ಸಂಪನ್ಮೂಲ ಅಭಿವೃದ್ಧಿಗೆ ತೀರ್ಮಾನಿಸಲಾಯಿತು . ಈ ದೇಶಕ್ಕೆ ಹೊಂದುವ ಆರ್ಥಿಕ , ಸಾಮಾಜಿಕ , ಭೌಗೋಳಿಕ ಇತ್ಯಾದಿ ಅಂಶಗಳಿಗೆ ಸರಿ ಹೊಂದುವ ತಾಂತ್ರಿಕ ಶಿಕ್ಷಣವನ್ನು ಸಂಘಟಿಸಲು ಗುರಿ ಹಾಕಿ ಕೊಳ್ಳಲಾಯಿತು .

ಮಹಿಳಾ ಶಿಕ್ಷಣ :

ಈ ಯೋಜನೆಯಲ್ಲಿ 'ಸ್ತ್ರೀ ಶಿಕ್ಷಣ' ಕ್ಕೆ ವಿಶೇಷ ಆದ್ಯತೆ ನೀಡಲಾಯಿತು . ಇದಕ್ಕಾಗಿ ಶಾಲಾ-ಕಾಲೇಜು ಗಳನ್ನು ತೆರೆಯಲು ನಿರ್ಧಾರ ಕೈಗೊಳ್ಳಲಾಯಿತು .

ಪ್ರೌಢ ಶಾಲಾ ಶಿಕ್ಷಣ :

ಈ ಹಂತದಲ್ಲಿ ಮಕ್ಕಳಿಗೆ ಕಲಿಸುವ ವಿಧಾನವನ್ನು ನವೀನ ರೀತಿಯಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು. 'ಸಾಮಾಜಿಕ ಉಪಯುಕ್ತ ಉತ್ಪಾದನಾ' ಕಾರ್ಯಚಟುವಟಿಕೆಗಳಿಗೆ ಒತ್ತುಕೊಡಲಾಯಿತು . ಗಣಿತ ವಿಜ್ಞಾನ ಪಠ್ಯವಸ್ತುವಿನ ವಿಸ್ತರಣೆ ಮಾಡುವುದು . ಬಾಲಕಿಯರಿಗಾಗಿ ವಿಶೇಷ ಶೈಕ್ಷಣಿಕ ಸೌಲಭ್ಯ ಒದಗಿಸುವುದು. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ರಾಷ್ಟ್ರೀಯ ಭಾವೈಕ್ಯತೆ ಮೂಡಿಸಲು ಗುರಿ ಇಟ್ಟುಕೊಳ್ಳಲಾಯಿತು .

ನವೀನ ಪರೀಕ್ಷಾ ಪದ್ಧತಿ ಜಾರಿ :

ಸಾಂಪ್ರಾದಾಯಕ ಪರೀಕ್ಷಪದ್ಧತಿಯನ್ನು ಬದಲಿಸಿ ನವೀನರೀತಿಯ ಪರೀಕ್ಷಾ ಪದ್ಧತಿಯನ್ನು ಅಳವಡಿಸಲು ತೀರ್ಮಾನಿಸಲಾಯಿತು .

ಶಿಕ್ಷಕರ ಸೇವಾವಧಿ ತರಬೇತಿ :

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ಹೊಸಜ್ಞಾನ, ಕೌಶಲ್ಯ ಮತ್ತು ತಂತ್ರಗಳನ್ನು ತಿಳಿಸಲು ಯೋಜನೆಗಳನ್ನು ರೂಪಿಸಲು ತೀರ್ಮಾನಿಸಲಾಯಿತು. ಶಿಕ್ಷಕರಿಗೆ ಸೇವಾವಧಿ ತರಬೇತಿಯ ಅಗತ್ಯತೆಯನ್ನು ಮನಗಾಣಲಾಯಿತು.

ವಯಸ್ಕರ ಶಿಕ್ಷಣದ ಮೂಲಕ ಸಾಕ್ಷರತೆಯನ್ನು ಬಲಗೊಳಿಸುವುದು :

ದೇಶದ ಅಭಿವೃದ್ಧಿಗೆ ಮಾರಕವಾಗಿರುವ ಮೂಢನಂಬಿಕೆ , ಅಜ್ಞಾನ , ಅನಕ್ಷರತೆ , ಸಂಪ್ರದಾಯಗಳನ್ನು ತೊಲಗಿಸಲು 15ರಿಂದ 25 ವಯಸ್ಸಿನ ಎಲ್ಲಾ ವಯಸ್ಕರನ್ನು ಸಾಕ್ಷರರನ್ನಾಗಿ ಮಾಡಲು ಯೋಜಿಸಲಾಯಿತು . ದೇಶದ ಅಭಿವೃದ್ಧಿ ಕುರಿತು . ಆರ್ಥಿಕ , ಸಾಮಾಜಿಕ , ರಾಜಕೀಯ ಭೌಗೋಳಿಕ ಪ್ರಜ್ಞೆ ಮೂಡಿಸುವ ಉದ್ಧೇಶ ಹೊಂದಲಾಯಿತು . ಈ ಅವಧಿಯಲ್ಲಿ 90 ಮಿಲಿಯನ್ ವಯಸ್ಕರು ಸಾಕ್ಷರರಾಗಲು ಗುರಿ ಇಟ್ಟುಕೊಳ್ಳಲಾಯಿತು .

ಸಾಧನೆ :

ಪ್ರಾಥಮಿಕ ಶಿಕ್ಷಣದಲ್ಲಿ ಅಪವ್ಯಯ-ಸ್ಥಗಿತತೆ ತಪ್ಪಿಸಲು ಪ್ರಾಮಾಣಿಕ ಪ್ರಯತ್ನ ನಡೆಯಿತು. ಮಕ್ಕಳಿಗೆ ಉಚಿತ ಪಠ್ಯಪುಸ್ತಕ , ಬಟ್ಟೆ , ಉಪಹಾರ ಸರಾಗವಾಗಿ ತಲುಪುವ ವ್ಯವಸ್ಥೆಯನ್ನು ಮಾಡಲಾಯಿತು. ವಿದೇಶಿಯರ ನೆರವಿನಿಂದ ತಾಂತ್ರಿಕ ಶಿಕ್ಷಣ ಬಲಿಯಿತು . ಇದರಿಂದ ಆರ್ಥಿಕ, ಸಾಮಾಜಿಕ ಸುಧಾರಣೆಗಳು ಕಾಣತೊಡಗಿದವು. ಈ ಯೋಜನೆಯಲ್ಲಿ ಮುಖ್ಯವಾಗಿ 'ಮಹಿಳಾ ಶಿಕ್ಷಣ'ಕ್ಕೆ ಆದ್ಯತೆ ನೀಡಿ , ಮಹಿಳೆಯರನ್ನೇ ಬೋಧಕಿಯರಾಗಿ ನೇಮಿಸಲು ಕ್ರಮಕೈಗೊಳ್ಳಲಾಯಿತು. ಇದರಿಂದ ಸ್ತ್ರೀಯರ 'ಆತ್ಮ ವಿಶ್ವಾಸ'ಕ್ಕೆ ಬಲ ಬಂದಂತಾಯಿತು .

ಪ್ರೌಢಶಿಕ್ಷಣಕ್ಕಿಂತ ವೃತ್ತಿಪರ ವಿಷಯಗಳ ಅಧ್ಯನಕ್ಕೆ ಹೆಚ್ಚುಮಹತ್ವ ನೀಡಲಾಯಿತು. ಉನ್ನತ ಶಿಕ್ಷಣದಲ್ಲಿ ಅಧಿಕ ಸಂಸ್ಥೆಗಳು ಸ್ಥಾಪನೆಯಾದವು . ವಯಸ್ಕರ ಶಿಕ್ಷಣ ' ಪರೀಕ್ಷಾ ' ಸುಧಾರಣೆ ಇತ್ಯಾದಿಯಲ್ಲಿ ಸಂಪೂರ್ಣ ಗುರಿ ಸಾಧನೆ ಆಗದಿದ್ದರೂ ತಕ್ಕಮಟ್ಟಿಗೆ ತೃಪ್ತಿದಾಯಕವೆಂದೇ ಹೇಳಬಹುದು. ಈ ಯೋಜನೆಯು ಪ್ರಗತಿಪರ ಕಾರ್ಯಕ್ರಮಗಳ ಪ್ರಕ್ರಿಯೆಯಲ್ಲಿ ಜನರ ಪಾಲ್ಗೊಳ್ಳುವಿಕೆ ಅವಶ್ಯಕತೆ ಇದೆ ಎಂದು ತನ್ನ ಮಂಡನಾ ಪತ್ರದಲ್ಲಿ ಉಲ್ಲೇಖಿಸಿರುವುದು ಗಮನಾರ್ಹವಾದ ಬೆಳವಣಿಗೆ ಎನ್ನಬಹುದು.

2.14.8. ಎಂಟನೆಯ ಪಂಚವಾರ್ಷಿಕ ಯೋಜನೆ (1992-97):

ಈ ಹಿಂದಿನ ಎಲ್ಲಾ ಗುರಿಗಳನ್ನು ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡು ಮುಖ್ಯವಾಗಿ ಕೆಲವು ಆದ್ಯತಾ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಳ್ಳಲಾಯಿತು .

ಗುರಿಗಳು :

ವೃತ್ತಿಪರ ಶಿಕ್ಷಣದ ವಿಸ್ತರಣ ಮತ್ತು ಗುಣಾತ್ಮಕ ಬದಲಾವಣೆ.

ನೂರಕ್ಕೆ ನೂರರಷ್ಟು ಸಾಕ್ಷರತೆ ಸಾಧನೆಯ ಗುರಿ; ಅದಕ್ಕಾಗಿ ರಾಷ್ಟ್ರೀಯ ಸಾಕ್ಷರತಾ ಮಿಷನ್ನಿನ ಸ್ಥಾಪನೆ.

ಶಿಕ್ಷಣ, ಉದ್ಯೋಗ, ಮತ್ತು ಉತ್ಪಾದನೆಯ ಸಕ್ರಿಯ ಜಾರಿ.

ಮಹಿಳೆ ಮತ್ತು ಗ್ರಾಮೀಣ ಮಹಿಳಾ ವಿದ್ಯಾಭ್ಯಾಸಕ್ಕೆ ಒತ್ತು ನೀಡುವುದು.

ಹಿಂದುಳಿದ ಪ್ರದೇಶಗಳಲ್ಲಿ ವಿಜ್ಞಾನ ತಂತ್ರಜ್ಞಾನಕ್ಕಾಗಿ ಹೆಚ್ಚು ಸೌಲಭ್ಯ ಕಲ್ಪಿಸುವುದು.

ಉನ್ನತ ಮತ್ತು ತಾಂತ್ರಿಕ ಶಿಕ್ಷಣವನ್ನು ಗುಣಾತ್ಮಕವಾಗಿ ಅಭಿವೃದ್ಧಿಗೊಳಿಸುವುದು. ಈ ಗುರಿಗಳೆಲ್ಲವನ್ನು ಸಾಧಿಸಲು ತೀರ್ಮಾನಿಸಲಾಯಿತು.

ಈ ಮೇಲಿನ ಎಲ್ಲಾ ಯೋಜನೆಗಳನ್ನು ಗಮನಿಸಿದಾಗ ವಿಕಾಸ ಹೊಂದುತ್ತಿರುವ ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಪ್ರಾಧಾನ್ಯತೆ ಏನು? ಎಂಬುದನ್ನು ತಿಳಿಯಬಹುದು. ಅಂಕಿ -ಅಂಶಗಳನ್ನು ಆಧರಿಸಿ ಅವಲೋಕಿಸಿದಾಗ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಮೊತ್ತ ಒಟ್ಟು ಯೋಜನಾ ಮೊತ್ತಕ್ಕಿಂತಲೂ ಕಡಿಮೆ ಎಂಬುದು ಕಂಡುಬರುತ್ತಿದೆ. ನಮ್ಮ ಯೋಜನೆಯಲ್ಲಿ ಶಿಕ್ಷಣದ ಬಾಬತ್ತಿಗಾಗಿ ನೀಡಿದ ಹಣಕಾಸಿನ ವಿವರವನ್ನು ಈ ಕೆಳಗಿನ ತಖ್ತೆಯಲ್ಲಿ ಗಮನಿಸಬಹುದು :

ತಃಖ್ತೆ - 13 : ಶಿಕ್ಷಣಕ್ಕೆ ಮೀಸಲಿಟ್ಟ ನಿಧಿ.

ಕ್ರ ಸಂ.	ಯೋಜನೆಗಳು	ಒಟ್ಟು ಯೋಜನೆಯಲ್ಲಿ ಶಿಕ್ಷಣಕ್ಕಾಗಿ ಮೀಸಲಿಟ್ಟ ಮೊಬಲಗಿನ ಶೇಕಡ ಪ್ರಮಾಣ	
01	ಮೊದಲ ಯೋಜನೆ	1951-56	7.86
02	ಎರಡನೆಯ ಯೋಜನೆ	1956-61	5.83
03	ಮೂರನೆಯ	1961-66	6.87
04	ನಾಲ್ಕನೆಯ	1969-74	5.04
05	ಐದನೆಯ	1974-79	3.27
06	ಆರನೆಯ	1980-85	2.59
07	ಏಳನೆಯ	1985-90	3.55
08	ಎಂಟನೆಯ	1992-97	4.50

ತಃಖ್ತೆ - 14 : ಪ್ರಾಥಮಿಕ ಶಿಕ್ಷಣಕ್ಕಾಗಿ ಮಾಡಿದ ವೆಚ್ಚ :

ಯೋಜನೆ	ಒಟ್ಟು ವೆಚ್ಚ (ಕೋಟಿ ರೂ.ಗಳಲ್ಲಿ)	ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚ	ಒಟ್ಟು ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ವ್ಯಯಿಸಲಾದ ಹಣದ ಶೇಕಡವಾರು ಪ್ರಮಾಣ
ಮೊದಲನೆಯ 1951-56	153.00	85.00	56
ಎರಡನೆಯ 1956-61	273.00	95.00	35
ಮೂರನೆಯ 1961-66	589.00	201.00	34
ನಾಲ್ಕನೆಯ 1969-74	786.00	239.00	30
ಐದನೆಯ 1974-79	912.00	317.00	35
ಆರನೆಯ 1980-85	2530.00	836.00	33
ಏಳನೆಯ 1985-90	7633.00	2849.00	37
ವಾರ್ಷಿಕ ಯೋಜನೆಗಳು 1990-92	4727.00	1729.00	37
ಎಂಟನೆಯ ಯೋಜನೆ 1992-97	19600.00	9201.00	47

ಮೂಲ : ಕೇಂದ್ರ ಶಿಕ್ಷಣ ಇಲಾಖೆ (1993-94),

ಆಧಾರ ಗ್ರಂಥ: ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು-ಸವಾಲುಗಳು - ಮಹಾಬಲೇಶ್ವರ ರಾವ್.

ಒಟ್ಟಾರೆ ಯೋಜನೆಗಳಲ್ಲಿ 'ಧನವಿನಿಯೋಗ' ಗಮನಿಸಿದರೆ ಶಿಕ್ಷಣಕ್ಕಾಗಿ ವ್ಯಯಿಸಿದ ಮೊತ್ತ ಗಮನಾರ್ಹವಾಗಿ ಹೆಚ್ಚಿದೆ.

ಮೊದಲನೆಯ ಯೋಜನೆಯ 153 ಕೋಟಿ ರೂ . ಎಂಟನೆಯ ಯೋಜನೆಯಲ್ಲಿ 19,600 ಕೋಟಿ ರೂಪಾಯಿಗಳು, ಏರಿಕೆ ಕ್ರಮದಲ್ಲಿ ಮೊತ್ತ ನಿಗದಿಯಾಗುತ್ತಾ ಬಂದಿದೆಯಾದರೂ, ಪ್ರಾಥಮಿಕ ಶಿಕ್ಷಣಕ್ಕಾಗಿ ನಿಗದಿಗೊಳಿಸಿದ ಮೊತ್ತ ಕಡಿಮೆ ಎಂದೇ ಹೇಳಬಹುದು. ಮೊದಲ ಯೋಜನೆಯಲ್ಲಿ ಶೇಕಡ 56 ಇದ್ದದ್ದು ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ 37 ಕ್ಕೆ ಇಳಿದಿದೆ. ಎಂಟನೆಯ ಯೋಜನೆಯಲ್ಲಿ ಶೇಕಡ 47. ಒಟ್ಟು ಯೋಜನೆಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ನಿಗದಿಗೊಳಿಸಿದ ಮೊತ್ತವು ಅಸಮತೋಲನದಿಂದ ಕೂಡಿದುದಾಗಿದೆ ಎಂದೇ ಹೇಳಬಹುದು.

2.15. ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾಥಮಿಕ ಶಿಕ್ಷಣ:

ದೇಶದ ಎಂಟು ಪಂಚವಾರ್ಷಿಕ ಯೋಜನೆಗಳನ್ನು ಅವಲೋಕಿಸಿದಾಗ, ಪ್ರಾಥಮಿಕ ಶಿಕ್ಷಣ ವಲಯಕ್ಕೆ ಮೊದಲ ಪಂಚವಾರ್ಷಿಕ ಯೋಜನೆ ಹೆಚ್ಚಿನ ಆದ್ಯತೆ ನೀಡಿದ್ದು ಕಂಡುಬರುತ್ತದೆ. ಪ್ರಾಥಮಿಕ ಶಾಲಾ ಮಕ್ಕಳ ದಾಖಲಾತಿಯನ್ನು ಶೇ. 100ನ್ನು ಸಾಧಿಸಬೇಕೆಂಬ ಗುರಿ ಈಡೇರಲಿಲ್ಲ. ಮುಂದಿನ ಯೋಜನೆಯಲ್ಲಿ ದಾಖಲಾತಿಯ ಗುರಿಯನ್ನು ಸಾಧಿಸಲು ಎರಡು ಹಂತಗಳನ್ನು ಗುರುತಿಸಲಾಯಿತು. 6-11 ಹಾಗೂ 11-14 ವಯೋಮಾನದ ಮಕ್ಕಳನ್ನು ಇಲ್ಲಿ ಗುರಿಯಾಗಿ ಇಟ್ಟುಕೊಳ್ಳಲಾಯಿತು. ಈ ಗುರಿಗೆ ಆದ್ಯತೆ ನೀಡಿ, ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ (1961-66) ಗುರಿ ಸಾಧಿಸಲು ನಿರ್ಧರಿಸಿತು. ಹಿರಿಯ ಪ್ರಾಥಮಿಕ ಹಂತದ ಮಕ್ಕಳ ಸಾರ್ವತ್ರಿಕ ದಾಖಲೆಯನ್ನು ಐದನೇ ಪಂಚವಾರ್ಷಿಕ ಯೋಜನೆ(1974-79)ಯ ಹೊತ್ತಿಗೆ ಪೂರ್ಣಗೊಳಿಸಲು ನಿರ್ಧರಿಸಲಾಯಿತು. ಒಟ್ಟಾರೆಯಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಬಾಬತ್ತಿಗಾಗಿ ನಿಗದಿಗೊಳಿಸಿದ ಮೊತ್ತ, ಯೋಜನೆಯಿಂದ ಯೋಜನೆಗೆ ಅಸಮತೋಲನೆಯನ್ನು ಬಿಂಬಿಸುತ್ತದೆ. ಮೊದಲನೆಯ ಯೋಜನೆ ಬಿಟ್ಟರೆ, ಮತ್ತೆ ಎಂಟನೆಯ ಯೋಜನೆಯಲ್ಲಿ ಶಿಕ್ಷಣದ ಬಾಬತ್ತಿಗಾಗಿ ರಾಷ್ಟ್ರೀಯ ವರಮಾನದ ಶೇ. 6ರಷ್ಟನ್ನು ನಿಗದಿಗೊಳಿಸಲಾಗಿತ್ತು. ಪ್ರಾಥಮಿಕ ಶಿಕ್ಷಣಕ್ಕೆ ವ್ಯಯವಾದ ಹಣದ ಶೇಕಡ ಪ್ರಮಾಣ ಈ ಕೆಳಗಿನ ತಃಖ್ತೆಯಲ್ಲಿ ಗಮನಿಸಬಹುದು.

ತಃಖ್ತೆ-15 : ಪ್ರಾಥಮಿಕ ಶಿಕ್ಷಣಕ್ಕೆ ನಿಗದಿ ಮಾಡಿದ ಬಾಬತ್ತು (ಪಂಚವಾರ್ಷಿಕ ಯೋಜನೆಗಳಲ್ಲಿ) :

ಪಂಚವಾರ್ಷಿಕ ಯೋಜನೆಗಳು	ಪ್ರಾಥಮಿಕ ಶಿಕ್ಷಣಕ್ಕೆ ವ್ಯಯವಾದ ಹಣದ ಶೇಕಡ ಪ್ರಮಾಣ- ಒಟ್ಟು ಶಿಕ್ಷಣದ ಬಾಬತ್ತಿನಲ್ಲಿ
ಮೊದಲನೇ ಪಂಚವಾರ್ಷಿಕ ಯೋಜನೆ (1951-56)	56
ಎರಡನೇ ಪಂಚವಾರ್ಷಿಕ ಯೋಜನೆ (1956-61)	35
ಮೂರನೇ ಪಂಚವಾರ್ಷಿಕ ಯೋಜನೆ (1961-66)	34
ನಾಲ್ಕನೇ ಪಂಚವಾರ್ಷಿಕ ಯೋಜನೆ (1969-74)	30
ಐದನೇ ಪಂಚವಾರ್ಷಿಕ ಯೋಜನೆ (1974-79)	35
ಆರನೇ ಪಂಚವಾರ್ಷಿಕ ಯೋಜನೆ (1980-85)	33
ಏಳನೇ ಪಂಚವಾರ್ಷಿಕ ಯೋಜನೆ (1985-90)	37
ಎಂಟನೇ ಪಂಚವಾರ್ಷಿಕ ಯೋಜನೆ (1992-97)	47

ಆಧಾರ :- (1997ರ ಶಿಕ್ಷಣ ಇಲಾಖೆಯ ವಾರ್ಷಿಕ ವರದಿ)*

ಎಂಟು ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿ ಅನೇಕ ಗುರಿಗಳನ್ನು ಹಾಕಿಕೊಂಡು ಗುರಿಗಳ ಸಾಧನೆಗಾಗಿ ಯತ್ನಿಸಲಾಯಿತು. ಈ ಅವಧಿಯಲ್ಲಿಯೇ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಆದ ಹಲವಾರು ಬದಲಾವಣೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಶಿಕ್ಷಣದ ಪ್ರಗತಿಯನ್ನು ಗಮನಿಸಿದಾಗ ಕೆಲವು ವಿದ್ಯಾಮಾನಗಳು ಸ್ಪಷ್ಟವಾಗಿ ಮೂಡಿಬರುತ್ತವೆ. ಏನೆಂದರೆ; ಯೋಜನೆಗಳು ಹಣಕಾಸನ್ನು ಒದಗಿಸುವ ವಿಧಿ-ವಿಧಾನಗಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಲಾಯಿತೇ ವಿನಃ ಫಲದಾಯಕ ಶಿಕ್ಷಣ ಪ್ರಕ್ರಿಯೆಯ ಬಗ್ಗೆ ಗಮನ ಹರಿಸಲಿಲ್ಲವೆಂದೇ ಹೇಳಬಹುದು. ಕೇವಲ ಹಣಕಾಸು ಒದಗಿಸಿದರೆ ಶಿಕ್ಷಣ ಕ್ಷೇತ್ರ ಪ್ರಗತಿ ಸಾಧಿಸುವುದಿಲ್ಲ. ಹಣದಿಂದ ಜ್ಞಾನ ಉತ್ಪತ್ತಿಯಾಗುವುದಿಲ್ಲ.

ಪ್ರಮುಖವಾಗಿ ಗಮನಿಸಲ್ಪಟ್ಟ ಅಂಶವೆಂದರೆ, ಯೋಜನೆಗಳಡಿಯಲ್ಲಿ ನೀತಿ-ಧೋರಣೆಗಳನ್ನು ರೂಪಿಸಿಕೊಂಡರೂ, ಶಿಕ್ಷಣ ಪ್ರಕ್ರಿಯೆ ವಿಕೇಂದ್ರೀಕರಣ, ಸಮುದಾಯ ಆಧಾರಿತ ಸೂಕ್ಷ್ಮ ಯೋಜನೆ ಕಾರ್ಯಕ್ರಮ, ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯವನ್ನು ಪಾಲ್ಗೊಳ್ಳುವಂತೆ ಪ್ರಚೋದಿಸುವ ವಿಧಿ-ವಿಧಾನ ಗಳಿಗೆ ಹೆಚ್ಚು ಮಹತ್ವ ನೀಡಲಿಲ್ಲ. ಅಲ್ಲದೆ, ಆಯೋಗಗಳ ವರದಿಗಳು ಹಾಳೆಯ ಮೇಲೆ ಉಳಿದವೇ ಹೊರತು ಆಡಳಿತ ಯಂತ್ರ ಅವುಗಳನ್ನು ಕಾರ್ಯಗತ ಮಾಡುವ ಬಗ್ಗೆ ಗಮನ ಹರಿಸಲಿಲ್ಲ.

2.16. ಕರ್ನಾಟಕದಲ್ಲಿ ಶಿಕ್ಷಣ ಪ್ರಗತಿ:

ಕರ್ನಾಟಕದ ಏಕೀಕರಣದ ನಂತರ (1950) ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಯನ್ನು ಕಾಣಬಹುದಾಗಿದೆ. ರಾಷ್ಟ್ರೀಯ ಶಿಕ್ಷಣ ನಿಯಮಗಳ ಆದೇಶದಂತೆ (1948, 1964-68, 1977-90) ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳಾಗಿದ್ದು, ಅವು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಕಾರಣವಾಗಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಉನ್ನತ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ.

2.16.1. ಪ್ರಾಥಮಿಕ ಶಿಕ್ಷಣ:

1961ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಮಸೂದೆಯನ್ನು ಜಾರಿಗೆ ತರಲಾಯಿತು. 90ರ ದಶಕದಲ್ಲಿ ಇದರ ಪ್ರಗತಿಯನ್ನು ಗಮನಿಸಬಹುದು. ಐದನೇ ಪಂಚವಾರ್ಷಿಕ ಯೋಜನೆಯ ನಂತರ ಪ್ರಾಥಮಿಕ ಶಿಕ್ಷಣ ವಿಸ್ತೃತಗೊಂಡಿತು. ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಮಧ್ಯಾಹ್ನದ ಉಪಹಾರದ ಯೋಜನೆ, ಸಮವಸ್ತ್ರ ವಿತರಣೆ, ಉಚಿತ ಪಠ್ಯ ಪುಸ್ತಕ ವಿತರಣೆ, ವಿದ್ಯಾರ್ಥಿ ವೇತನ, ವಸತಿ ನಿಲಯ (ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮಕ್ಕಳಿಗಾಗಿ), ಆಶ್ರಮ ಶಾಲೆಗಳನ್ನು ತೆರೆಯಲಾಯಿತು. ಶಾಲೆಗಳ ಸಂಖ್ಯೆ ಶೇ. 8ಕ್ಕೆ ಹೆಚ್ಚಿತು. ಶಿಕ್ಷಕರ ಸಂಖ್ಯೆ 2.45ರಷ್ಟು ಹೆಚ್ಚಾಯಿತು. ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ನಾಲ್ಕುಪಟ್ಟು ಹೆಚ್ಚಿತು. ಶಿಕ್ಷಕರ ಮಕ್ಕಳ ಅನುಪಾತ 1955-56ರಲ್ಲಿ 31.5 ಇದ್ದದ್ದು, 1993-94ರಲ್ಲಿ 52ಕ್ಕೆ

ಏರಿತು. 2000ದ ವೇಳೆಗೆ ೪೦ಕ್ಕೆ ನಿಂತಿದೆ (1:40).1970ರ ನಂತರ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿ ಸಂಶೋಧನಾ ಕಾರ್ಯ ಆರಂಭಗೊಂಡು ಅವು ನೀಡಿದ ಸಲಹೆಗಳ ಮೇರೆಗೆ ಶಿಕ್ಷಣದ ಗುಣಮಟ್ಟದ ಸುಧಾರಣೆಗಾಗಿ ಆದ್ಯತೆ ನೀಡಲಾಯಿತು. ಅವುಗಳಲ್ಲಿ:-

- ಶಾಲೆಯಲ್ಲಿ ಕಲಿಯುತ್ತಿದ್ದ 6-11 ವಯಸ್ಸಿನ ಮಕ್ಕಳಿಗೆ ಅಧಿಕ ವೆಚ್ಚ ತಗುಲಿ, 11ನೇ ವಯಸ್ಸಿನಿಂದ ಮಕ್ಕಳು ಹೆಚ್ಚು ಶಾಲೆ ಬಿಡುವುದು ಕಂಡುಬಂದಿತು. ಇದಕ್ಕೆ ಬಡತನ, ಮನೆಯಿಂದ ಶಾಲೆ ದೂರವಿರುವುದು, ಗಂಡು-ಹೆಣ್ಣು ತಾರತಮ್ಯ, ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇತ್ಯಾದಿ. ಇದಕ್ಕಾಗಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ಜಾರಿಗೊಳಿಸಲಾಯಿತು.
- 1986ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯ ನಂತರ ಪ್ರಾಥಮಿಕ ಶಿಕ್ಷಣದ ಅಂತರ ತುಂಬಲು ಹಾಗೂ ಗುಣಮಟ್ಟ ಸುಧಾರಿಸಲು ಯತ್ನಿಸಲಾಯಿತು.

ಪ್ರಾಥಮಿಕ ಶಿಕ್ಷಣದ ಸರ್ವತೋಮುಖ ಅಭಿವೃದ್ಧಿಗಾಗಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವು (ವಿಶ್ವ ಬ್ಯಾಂಕ್ ನೆರವಿನ) ರಾಜ್ಯದ ಹದಿನಾರು ಜಿಲ್ಲೆಗಳಲ್ಲಿ ಜಾರಿಯಾಗಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಗೊಳ್ಳಲು ಆಡಳಿತ ಮತ್ತು ಹಣಕಾಸು ಅಗತ್ಯಕ್ಕಾಗಿ ಹಿಂದಿನ ಲೋಪ-ದೋಷಗಳನ್ನು ಸರಿಪಡಿಸಿಕೊಂಡು ಪ್ರಾದೇಶಿಕ ಯೋಜನೆ, ಸ್ಥಳೀಯ ಯೋಜನೆ ಮತ್ತು ಶಾಲಾ ನಕ್ಷೆಯನ್ನು ತಯಾರಿಸುವಿಕೆ, ಲಿಂಗ-ತಾರತಮ್ಯ ನಿವಾರಣೆ ಮತ್ತು ಶಿಕ್ಷಕರ ತರಬೇತಿ, ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ, ವಯಸ್ಕರ ಶಿಕ್ಷಣ, ಸಾಕ್ಷರತಾ ಕಾರ್ಯಕ್ರಮಗಳು, ಮಹಿಳೆ ಮತ್ತು ಪೋಷಕರ ಶಿಕ್ಷಣ ಮುಂತಾದ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಹಾಗೆಯೇ ಸ್ವಯಂ ಸೇವಾ ಸಂಸ್ಥೆಗಳು ಶಿಕ್ಷಣಕ್ಕಾಗಿ ತೊಡಗಿಸಿಕೊಳ್ಳುವ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಿ, ಸರ್ಕಾರ ಧನ ಸಹಾಯ ಒದಗಿಸುತ್ತಿದೆ.

2.16.2. ಪ್ರೌಢಶಿಕ್ಷಣ :

ಪ್ರೌಢಶಿಕ್ಷಣದಲ್ಲಿ ಆಡಳಿತದ ದೋಷಗಳನ್ನು ಗುರುತಿಸಿ, 1962-63ರ ನಂತರ ರಾಜ್ಯಾದ್ಯಂತ ಏಕರೀತಿಯ ಪ್ರೌಢಶಿಕ್ಷಣವನ್ನು ಜಾರಿ ತರಲಾಯಿತು. ಅಂದರೆ ಒಂದರಿಂದ ಹತ್ತನೇ ತರಗತಿಯವರೆಗಿನ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಲಾಯಿತು.

1963ರಲ್ಲಿ ಸೆಕೆಂಡರಿ ಶಿಕ್ಷಣ ಪರೀಕ್ಷಾ ಮಂಡಳಿಯು ಎಸ್. ಎಸ್. ಎಲ್.ಸಿ. ಪರೀಕ್ಷೆಯನ್ನು ರಾಜ್ಯಾದ್ಯಂತ ಏಕ ರೂಪವಾಗಿ ನಡೆಸಲು ಪ್ರಾರಂಭಿಸಿತು.

1956-57ರಲ್ಲಿ 537ರಷ್ಟಿದ್ದ ಪ್ರೌಢ ಶಾಲೆಗಳ ಸಂಖ್ಯೆ, 1991ರ ವೇಳೆಗೆ 1688ಕ್ಕೆ ಏರಿದವು. 1956-57ರಲ್ಲಿ ಓದುತ್ತಿದ್ದ ಮಕ್ಕಳು 1.25 ದಶಲಕ್ಷ. ಆಗಿನ ವೆಚ್ಚ 14.43. 1970-71ರ ಸುಮಾರಿಗೆ 4.54 ದಶಲಕ್ಷ ಮಕ್ಕಳು ಹೆಚ್ಚಿ, ಪ್ರೌಢ ಶಿಕ್ಷಣಕ್ಕಾಗಿ 202.38 ದಶಲಕ್ಷ ವೆಚ್ಚವಾಯಿತು. 1981ರಲ್ಲಿ 7.32ಲಕ್ಷ ಮಕ್ಕಳಿದ್ದು, ರೂ. 245.7 ದಶಲಕ್ಷ ವೆಚ್ಚ ವಾಗಿದೆ. 1999-2000ರಲ್ಲಿ 8147 ಪ್ರೌಢಶಾಲೆಗಳಿದ್ದು, 16,89,632ಮಕ್ಕಳು ಪ್ರವೇಶ ಪಡೆದಿದ್ದಾರೆ.

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರೌಢಶಿಕ್ಷಣಕ್ಕೆ ಹೆಚ್ಚಿನ ಬೆಂಬಲದೊರಕಿದೆ.

ಕರ್ನಾಟಕದಲ್ಲಿ ಪ್ರೌಢಶಿಕ್ಷಣವು ಪ್ರಗತಿಯಲ್ಲಿದ್ದರೂ, ಗುಣಮಟ್ಟ ಸುಧಾರಿಸಬೇಕಾಗಿದೆ. ಇತ್ತೀಚೆಗೆ ಈ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚುತ್ತಿದ್ದು, ಹೆಣ್ಣು ಮಕ್ಕಳ ದಾಖಲಾತಿಯಲ್ಲಿ ಕೊರತೆ ಇದೆ. ಗಮನಾರ್ಹ ಅಂಶವೆಂದರೆ; ಪ್ರೌಢಶಿಕ್ಷಣದಲ್ಲಿ ಪ.ಜಾ., ಪ.ಪಂ., ವಿದ್ಯಾರ್ಥಿಗಳ ಪ್ರವೇಶದಲ್ಲಿ ಹೆಚ್ಚು ಬೆಳವಣಿಗೆ ಕಂಡುಬಂದಿದೆ. ಶೈಕ್ಷಣಿಕ ಪ್ರಗತಿಯಲ್ಲಿ ಶಿಕ್ಷಕರಿಗಾಗಿ ತರಬೇತಿ ಇನ್ನಷ್ಟು ಚುರುಕುಗೊಳ್ಳ ಬೇಕಾಗಿದೆ. ಶಿಕ್ಷಕರ ಕೊರತೆ ನೀಗಬೇಕಾಗಿದೆ. ಭಾಷಾ ತೊಡಕಿನ ಗೊಂದಲ ನಿವಾರಣೆಯಾಗಬೇಕಾಗಿದೆ. ಇವು ಪ್ರಗತಿಗಾಗಿ ಅಡ್ಡಿಯಾಗಿದ್ದು, ನಿವಾರಣೆ ಅನಿವಾರ್ಯವಾಗಿದೆ. ಖಾಸಗಿ ಶಾಲೆಗಳನ್ನು ತೆರೆಯಲು ಅವಕಾಶ ನೀಡಿದ್ದು (ಅನುದಾನ ಸಂಹಿತೆ ಪ್ರಕಾರ) ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಯತ್ನಿಸಲಾಗುತ್ತಿದೆ.

ಎಂಟನೆಯ ಪಂಚವಾರ್ಷಿಕ ಯೋಜನೆಯ ನಂತರ, ವಿಜ್ಞಾನ ಮತ್ತು ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಗಮನ ನೀಡುತ್ತಿರುವುದು ಆರೋಗ್ಯಕರ ಬೆಳವಣಿಗೆ.

2.16.3. ಪದವಿ ಪೂರ್ವ ಶಿಕ್ಷಣ :

1956-57ರಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಒಂದು ವರ್ಷಕ್ಕೆ ಮಾತ್ರ ಸೀಮಿತಗೊಳಿಸಲಾಗಿತ್ತು. ಕೆಲವು ಪ್ರೌಢ ಶಾಲೆಗಳಲ್ಲಿ ಹನ್ನೊಂದನೆಯ ತರಗತಿ ತೆರೆಯಲಾಗಿತ್ತು. 1970ರಲ್ಲಿ 'ಪದವಿ ಪೂರ್ವ ಶಿಕ್ಷಣ ಮಂಡಳಿ'ನ್ನು ಪ್ರಾರಂಭಿಸಲಾಯಿತು. ಇವುಗಳನ್ನು ಪದವಿ ಪೂರ್ವ ಕಾಲೇಜುಗಳೆಂದು ಕರೆಯಲಾಯಿತು. 1987ರಲ್ಲಿ 650 ಪದವಿ ಪೂರ್ವ ಕಾಲೇಜುಗಳಿದ್ದು, ಸುಮಾರು 1,11,800 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. 1990ರಲ್ಲಿ ಪದವಿ ಪೂರ್ವ ಶಿಕ್ಷಣ ಮುಗಿಸಿ ವಿದ್ಯಾರ್ಥಿಗಳು ವೃತ್ತಿ ಆಧಾರಿತ ಶಿಕ್ಷಣದತ್ತ ಒಲವು ತೋರಿದ್ದರಿಂದ, ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕಡಿಮೆ ಯಾಗತೊಡಗಿದರು. ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ಒಂದು ಹೊಸ ತಿರುವು ದೊರಕಿತು. ವಿದ್ಯಾರ್ಥಿಗಳಿಗಾಗಿ ಸಾಮಾನ್ಯ ಪ್ರವೇಶ (ಸಿ.ಇ.ಟಿ.) ಮೂಲಕ ವೈದ್ಯಕೀಯ-ತಾಂತ್ರಿಕ ಶಿಕ್ಷಣ ಪ್ರವೇಶ ಭರ್ತಿಗೆ ಅವಕಾಶ ಸಿಕ್ಕಿದ್ದರಿಂದ ಸಾಕಷ್ಟು ವಿದ್ಯಾರ್ಥಿಗಳು ವೈದ್ಯಕೀಯ-ತಾಂತ್ರಿಕ ಶಿಕ್ಷಣ ಪಡೆಯುತ್ತಿದ್ದಾರೆ.

2.16.4. ವೃತ್ತಿ ಶಿಕ್ಷಣ :

ಕರ್ನಾಟಕದಲ್ಲಿ 1977ರಿಂದ ವೃತ್ತಿ ಶಿಕ್ಷಣ ಚುರುಕುಗೊಂಡು, ಅದಕ್ಕಾಗಿ ಪ್ರತ್ಯೇಕ ವೃತ್ತಿ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು. ಎಂಟನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ವೃತ್ತಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದು, ಶೇ. 25 ಭಾಗ ಸಾಮಾನ್ಯ ಶಿಕ್ಷಣದಿಂದ ವೃತ್ತಿ ಶಿಕ್ಷಣಕ್ಕೆ ಅಳವಡಿಸುವ ಭೌತಿಕ ಗುರಿಗಳನ್ನು ಹಾಕಿಕೊಳ್ಳಲಾಗಿತ್ತು. 1993-94ನೇ ಸಾಲಿನಲ್ಲಿ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳೂ ಸೇರಿದಂತೆ 205 ಹೊಸ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭಿಸಿ, ಒಟ್ಟು 591 ವಿದ್ಯಾಲಯಗಳಲ್ಲಿ 1015 ಕೋರ್ಸುಗಳನ್ನು ಆಯ್ದ 59 ಕಸುಬು ಕೋರ್ಸ್‌ಗಳನ್ನು ಪ್ರಾರಂಭಿಸಿ, ಒಟ್ಟು 1112 ವಿದ್ಯಾರ್ಥಿಗಳನ್ನು ದಾಖಲು ಮಾಡಿ ಕೊಳ್ಳಲಾಗಿದೆ. ಕೆಲವು ಖಾಸಗೀ ಶಿಕ್ಷಣ ಸಂಸ್ಥೆಗಳು ಕೂಡ ವೃತ್ತಿ ಶಿಕ್ಷಣ ಕಾಲೇಜುಗಳನ್ನು ಆರಂಭಿಸಿದೆ. ವೃತ್ತಿ ಶಿಕ್ಷಣದ ಗುಣಮಟ್ಟದ ಸುಧಾರಣೆಗೆ ಇತ್ತೀಚೆಗೆ ಸಾಕಷ್ಟು ಪ್ರಯತ್ನಗಳು ನಡೆದಿವೆ. ಇದಕ್ಕಾಗಿ ಪ್ರಾಮುಖ್ಯತೆ ಹೆಚ್ಚುತ್ತಿರುವುದು ಕಂಡು ಬರುತ್ತದೆ.

2.16.5. ಉನ್ನತ ಶಿಕ್ಷಣ :

ಎಲ್ಲಾ ಪಂಚವಾರ್ಷಿಕ ಯೋಜನೆಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ಹಾಕಿಕೊಂಡ ಎಲ್ಲಾ ಗುರಿಗಳನ್ನು ರಾಜ್ಯದಲ್ಲೂ ಜಾರಿಗೊಳಿಸಿ, ಸಾಧಿಸಲು ಯತ್ನಿಸಲಾಯಿತು. ಪದವಿ ಕಾಲೇಜುಗಳು, ಸ್ನಾತಕೋತ್ತರ ಪದವಿಗಾಗಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡವು. ರಾಜ್ಯದಲ್ಲಿ ಸಾಕಷ್ಟು ವಿವಿಧ ಕೋರ್ಸ್‌ಗಳ ಪದವಿ ಕಾಲೇಜುಗಳ ಜೊತೆಗೆ ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯಗಳು, ಕುವೆಂಪು ವಿಶ್ವವಿದ್ಯಾಲಯ ಜೊತೆಗೆ ಎರಡು ಕೃಷಿ ವಿಶ್ವವಿದ್ಯಾಲಯಗಳು ರಾಜ್ಯದಲ್ಲಿ ಸ್ಥಾಪನೆಗೊಂಡು, ಶಾಖೆಗಳ ಮೂಲಕವೂ ಉನ್ನತ ಶಿಕ್ಷಣಕ್ಕಾಗಿ ಶ್ರಮಿಸುತ್ತಿವೆ. ಏಳನೇ ಮತ್ತು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣದ ಗುಣಮಟ್ಟಕ್ಕೆ ಆದ್ಯತೆ ನೀಡಲಾಗಿದೆ. 1992ರಲ್ಲಿ ನವನೀತ್ ರಾವ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದ್ದು, ಕರ್ನಾಟಕ ವಿಶ್ವವಿದ್ಯಾಲಯಗಳ ಶೈಕ್ಷಣಿಕ, ಆಡಳಿತ ಮತ್ತು ನಿರ್ವಹಣೆಯನ್ನು ಕುರಿತಂತೆ ಇರುವ ಪ್ರಮುಖ ಸಮಸ್ಯೆಗಳ ಅಧ್ಯಯನ ಮತ್ತು ಅವುಗಳ ನಿವಾರಣೆಗಾಗಿ ಸಲಹೆಗಳನ್ನು ನೀಡಿತು. ಅವುಗಳಲ್ಲಿ ಪ್ರಮುಖವಾಗಿ:

1) ಶಿಕ್ಷಣದ ಗುಣಮಟ್ಟಕ್ಕಾಗಿ ಶಿಕ್ಷಕರಿಗೆ ತರಬೇತಿ.
2) ಶಿಕ್ಷಕರ ವೇತನ ಹೆಚ್ಚಿಸುವುದು.
3) ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು ಸ್ವಯಂ ಶಾಸನ ಪದ್ಧತಿಗೆ ಅಳವಡಿಸುವುದು.
4) ಉನ್ನತ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣವನ್ನು ಜಾರಿಗೊಳಿಸುವುದು.
5) ಕುಲಪತಿಗಳ ಸ್ಥಾನಕ್ಕೆ ಶಿಕ್ಷಣ ವೃಂದದಿಂದಲೇ ಒಬ್ಬರನ್ನು ನೇಮಕ ಮಾಡುವುದು ಇತ್ಯಾದಿ.

ಇದರಿಂದ ಉನ್ನತ ಶಿಕ್ಷಣದಲ್ಲಿ ಗಮನಾರ್ಹ ಬದಲಾವಣೆಗಳನ್ನು ನಿರೀಕ್ಷಿಸಲಾಗಿದೆ.

2.16.6. ತಾಂತ್ರಿಕ ಶಿಕ್ಷಣ :

ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಮೊದಲಿನಿಂದಲೂ ಆದ್ಯತೆ ನೀಡಲಾಗಿದೆ. 1951-56ರ ಅವಧಿಯಲ್ಲಿ ಆರು ಇಂಜಿನಿಯರಿಂಗ್ ಕಾಲೇಜುಗಳಿದ್ದು, 1961ರ ವೇಳೆಗೆ 61 ಕಾಲೇಜುಗಳಾದವು. 1992ರಲ್ಲಿ 55 ಇದ್ದ ಕಾಲೇಜುಗಳು, 2000ದ ವೇಳೆಗೆ 120ಕ್ಕೂ ಹೆಚ್ಚು ಕಾಲೇಜುಗಳು ಪ್ರಾರಂಭಗೊಂಡಿವೆ. ಅದೇ ರೀತಿ ವೈದ್ಯಕೀಯ ಕಾಲೇಜುಗಳ ಪೈಕಿ 1956ರಲ್ಲಿ ಕೇವಲ ಒಂದು ಇದ್ದದ್ದು, 1991ರಲ್ಲಿ 19 ಪ್ರಾರಂಭಗೊಂಡವು. 2000ದ ವೇಳೆಗೆ ಸುಮಾರು 25 ವೈದ್ಯಕೀಯ ಕಾಲೇಜುಗಳು ಪ್ರಾರಂಭಗೊಂಡಿವೆ. ಕರ್ನಾಟಕದ ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣ ದೇಶದಲ್ಲಿಯೇ ಮಹತ್ವವನ್ನು ಪಡೆಯುತ್ತಿವೆ. ವಿಜ್ಞಾನ ಶಿಕ್ಷಣ, ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಗಳು ಹೆಚ್ಚಿನಾಂಶ ಕಂಡು ಬರುತ್ತಿದ್ದು, ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ರಮಗಳಿಗೆ ಹೆಚ್ಚಿನ ಉತ್ತೇಜನ ನೀಡಲಾಗಿದೆ.

2.16.7. ವಯಸ್ಕರ ಶಿಕ್ಷಣ :

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣಕ್ಕಾಗಿ ಹೆಚ್ಚಿನ ಪುರಸ್ಕಾರ ದೊರಕುತ್ತಿದ್ದು, ಇದಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ರಾಷ್ಟ್ರೀಯ ಸಾಕ್ಷರತಾ ನಿಯೋಗ (ಎನ್. ಎಲ್. ಎಂ) ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲು ನಿರ್ದೇಶನಾಲಯದ ಮೂಲಕ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಹೆಚ್ಚಿನ ಹೊಣೆಗಾರಿಕೆಯನ್ನು ನೀಡಲಾಗಿದೆ. ಈಗ ರಾಜ್ಯದಲ್ಲಿ ಮುಂದುವರೆದ ಶಿಕ್ಷಣ ಕಾರ್ಯಕ್ರಮ ಅನುಷ್ಠಾನದಲ್ಲಿದ್ದು, ಅನಕ್ಷರಸ್ಥರ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇದೆ. ಶಿಕ್ಷಣ ಪ್ರಗತಿಯು ಕರ್ನಾಟಕದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಪೂರಕವಾಗಿರುವುದು ಕಂಡುಬರುತ್ತದೆ. ಈ ಪ್ರಗತಿಯು ಹಲವಾರು ಜಿಲ್ಲೆಗಳಲ್ಲಿಯೂ ಸಾಧಿತವಾಗುತ್ತಿರುವುದು ಕಂಡುಬರುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ಶಿಕ್ಷಣ ಪ್ರಗತಿ ಪಂಚವಾರ್ಷಿಕ ಯೋಜನೆಗಳ ನಂತರ ಆಶಾದಾಯಕ ಪ್ರಗತಿಯನ್ನು ಸಾಧಿಸುತ್ತಿದೆ. ಈ ಜಿಲ್ಲೆಯ ಶಿಕ್ಷಣದ ಪ್ರಗತಿಯನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.

2.17. ಬಳ್ಳಾರಿ ಜಿಲ್ಲೆಯಲ್ಲಿ ಶಿಕ್ಷಣದ ಪ್ರಗತಿ:

ಬಳ್ಳಾರಿ ಜಿಲ್ಲೆ ಹಿಂದೆ ಬ್ರಿಟಿಷ್ ಅಧಿಕಾರಿಗಳ ಆಳ್ವಿಕೆಗೆ ಒಳಗಾದಾಗ ಶೈಕ್ಷಣಿಕೆ ಪ್ರಗತಿ ಕಂಡು ಬಂದಿದೆ. ಬ್ರಿಟಿಷ್ ಅಧಿಕಾರಿಗಳು ತಮ್ಮ ಸೈನ್ಯದ ನೆಲೆಯಾಗಿ ಮತ್ತು ಜಿಲ್ಲಾ ಕೇಂದ್ರವಾಗಿ ಬಳ್ಳಾರಿ ನಗರವನ್ನು ಅಭಿವೃದ್ಧಿ ಪಡಿಸಿದರು. ಬ್ರಿಟಿಷರು 19ನೇ ಶತಮಾನದಲ್ಲಿ ಕಟ್ಟಿಸಿದ ಕಟ್ಟಡಗಳು ಈಗಲೂ ಸದೃಢವಾಗಿವೆ. ಆಂಗ್ಲರು ಆಳಿದ ಕುರುಹಾಗಿ ಬಳ್ಳಾರಿ ನಗರದ ಕೆಲವು ಬಡಾವಣೆಗಳಿಗೆ ಕೌಲ್ ಬಜಾರ್, ಮಿಲ್ಲರ್‌ಪೇಟೆ, ಬ್ರೂಸ್‌ಪೇಟೆ ಎಂಬ ಹೆಸರು ಈಗಲೂ ಇವೆ. ಶಿಕ್ಷಣದಲ್ಲಿ ಬಳ್ಳಾರಿ ಜಿಲ್ಲೆಯು ತನ್ನದೇ

ಆದ ಇತಿಹಾಸವನ್ನು ಹೊಂದಿದೆ. ಶೈಕ್ಷಣಿಕವಾಗಿ ಹಿಂದುಳಿದಿದ್ದ ಜಿಲ್ಲೆಯು ಬ್ರಿಟಿಷರ ಕಾಲದಲ್ಲಿ ಚೇತರಿಸಿಕೊಂಡಿತು. ಬ್ರಿಟಿಷ್ ಅಧಿಕಾರಿಗಳು, ಕ್ರೈಸ್ತ ಮಿಷನರಿಗಳು, ಪತ್ರಿಕೆಗಳ ಪ್ರಕಟಣೆ ಇತ್ಯಾದಿ ಇಲ್ಲಿ ಗಮನಾರ್ಹ. 1927ರಲ್ಲಿ ಹ್ಯಾಂಡ್ಸನು ಬಳ್ಳಾರಿಯಲ್ಲಿ ಆರಂಭಿಸಿದ ಪ್ರಾಥಮಿಕ ಶಾಲೆಯಲ್ಲಿ ಮೊದಲಬಾರಿಗೆ ಸ್ತ್ರೀಯರಿಗೆ ಪ್ರವೇಶ ದೊರಕಿರುವುದು ಗಮನಾರ್ಹವಾದ ಅಂಶ. ಮದ್ರಾಸ್ ಪ್ರಾಂತದಲ್ಲಿದ್ದ ಬಳ್ಳಾರಿ ಜಿಲ್ಲೆಯಲ್ಲಿ ಇಂಗ್ಲೀಷ್, ತೆಲುಗು ಭಾಷೆಯ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಕವಲೊಡೆದವು. ಶ್ರೀಮಂತರು ದೂರದ ರಾಜ್ಯ, ಜಿಲ್ಲೆಗಳಿಗೆ (ಮದ್ರಾಸ್, ಗುಂತಕಲ್ಲು, ಅನಂತಪುರ, ಆದೋನಿ ಇತ್ಯಾದಿ) ಹೆಚ್ಚಿನ ಶಿಕ್ಷಣಕ್ಕಾಗಿ ಹೋಗುತ್ತಿದ್ದರು. ಬಡ ಜನತೆಗೆ ಶಿಕ್ಷಣ ದೂರವಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಕ್ರೈಸ್ತ ಮಿಶನರಿಗಳು ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಿದರು. 1916ರಲ್ಲಿ 'ವೀರಶೈವ ವಿದ್ಯಾಭಿವೃದ್ಧಿ ಸಂಘ' ಸ್ಥಾಪನೆಗೊಂಡಿತು. ಬಡ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿತು. 1924ರಲ್ಲಿ ಪ್ರಥಮ ಬಾರಿಗೆ ಖಾಸಗಿ ಒಡೆತನದ ಕನ್ನಡ ಪ್ರಾಥಮಿಕ ಶಾಲೆಯನ್ನು ಹೀರದ ಸೂಗಮ್ಮ ಎಂಬ ಹೆಸರಿನಲ್ಲಿ ವೀರಶೈವ ವಿದ್ಯಾವರ್ಧಕ ಸಂಘ ತೆರೆಯಿತು. 1945ರಲ್ಲಿ ಕಾಲೇಜನ್ನು ಸ್ಥಾಪಿಸಲಾಯಿತು.

ಕರ್ನಾಟಕ ಏಕೀಕರಣದ ನಂತರ 1961ರಲ್ಲಿ ಸರಕಾರವು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದು, ಪ್ರಾಥಮಿಕ ಶಾಲೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯಿತು. ಖಾಸಗಿಯವರೂ ಶಾಲೆಗಳನ್ನು ತೆರೆದರು. ಶಿಕ್ಷಣ ಚಟುವಟಿಕೆಗಳಿಗೆ ಇದರಿಂದ ಉತ್ತೇಜನ ದೊರಕಿದಂತಾಯಿತು. ವೀರಶೈವ ವಿದ್ಯಾವರ್ಧಕ ಸಂಘದವರು ಬಳ್ಳಾರಿ, ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೊಟ್ಟೂರು, ಮುನಿರಾಬಾದ್, ತಂಬ್ರಹಳ್ಳಿ ಮುಂತಾದ ಕಡೆಗಳಲ್ಲಿ ಕಾಲೇಜು ತೆರೆದು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟರು. ಖಾಸಗಿಯಾಗಿ ಇತರೆ ಸಂಸ್ಥೆಯವರೂ ಸಹ ಈ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆದು, ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿದ್ದಾರೆ.

ಜವಾಹರ್ ನವೋದಯ ವಿದ್ಯಾಲಯ (ಚಿಕ್ಕಜೋಗಿಹಳ್ಳಿ), ಕೇಂದ್ರೀಯ ವಿದ್ಯಾಲಯಗಳು (ದೋಣಿಮಲೈ ಮತ್ತು ಬಳ್ಳಾರಿ), ಗಂಡು ಮಕ್ಕಳ, ಹೆಣ್ಣು ಮಕ್ಕಳ ವಸತಿ ಶಾಲೆಗಳು, ವೃತ್ತಿ ಕೈಗಾರಿಕಾ ತರಬೇತಿ ಶಾಲೆಗಳು, ತಾಂತ್ರಿಕ ಮತ್ತು ಔದ್ಯೋಗಿಕ ತರಬೇತಿ ಕಾಲೇಜುಗಳು, ಶೈಕ್ಷಣಿಕ ಬೆಳವಣಿಗೆಗೆ ಶ್ರಮಿಸುತ್ತಿವೆ. ಜಿಲ್ಲೆಯಲ್ಲಿ ಒಂದು ಸರಕಾರಿ ವೈದ್ಯಕೀಯ ಕಾಲೇಜಿದ್ದು, ಮೂರು ತಾಂತ್ರಿಕ ಶಿಕ್ಷಣ ವಿದ್ಯಾಲಯಗಳಿವೆ. ಒಂದು ಸರಕಾರಿ ಆಯುರ್ವೇದಿಕ್, ಮೆಡಿಕಲ್ ಕಾಲೇಜಿದ್ದು, ಉತ್ತಮ ಶಿಕ್ಷಣ ನೀಡುತ್ತಿದೆ. ಕಾನೂನು ಕಾಲೇಜು, ಫಾರ್ಮಸಿ ಕಾಲೇಜು ಕೂಡ ತಲೆ ಎತ್ತಿವೆ. ಜೊತೆಗೆ ಬಳ್ಳಾರಿಯ ವೀರಶೈವ ಮಹಾವಿದ್ಯಾಲಯ ದಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಶಾಖೆಯು ಸಹ ಕಾರ್ಯ ನಿರ್ವಹಿಸುತ್ತಿದೆ. ಖಾಸಗಿಯಾಗಿ ನಡೆಸುವ ಶಿಕ್ಷಣ ಸಂಸ್ಥೆಗಳಲ್ಲಿ ವೀರಶೈವ ವಿದ್ಯಾವರ್ಧಕ ಸಂಘ ಉನ್ನತ ಸ್ಥಾನದಲ್ಲಿದೆ.

ಎಸ್.ಇ.ಎಸ್. ಸಂಸ್ಥೆ, ಸೊಂಡೂರು, ಸ್ಮಯೋರ್ ಸಂಸ್ಥೆ, ವಿನಾಯಕ ಸಂಸ್ಥೆ, 'ಲಿಟ್ಲ ಫ್ಲವರ್' ಸಂಸ್ಥೆಗಳು, ಉಜ್ಜಯಿನಿ ಜಗದ್ಗುರು ಸಿದ್ಧೇಶ್ವರ ವಿದ್ಯಾ ಸಂಸ್ಥೆ, ಟಿ.ಎಂ.ಇ.,ಸಂಸ್ಥೆ, ನರಸಿಂಹಗಿರಿ ವಿದ್ಯಾ ಸಂಸ್ಥೆ, ಸೇಂಟ್ ಫಿಲಾಮಿನ, ಸೇಂಟ್ ಜೋಸೆಫ್, ವಾಸವಿ ವಿದ್ಯಾ ಸಂಸ್ಥೆ ಹಾಗೂ ಇತರೆ ಶಾಲಾ ಕಾಲೇಜುಗಳನ್ನು ತೆರೆಯುವುದರ ಮೂಲಕ ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿವೆ.

ಉನ್ನತ ಶಿಕ್ಷಣಕ್ಕಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಶಾಖಾ ಕೇಂದ್ರವಾಗಿ ಸೊಂಡೂರಿನ ನಂದಿಹಳ್ಳಿ, ಬಳ್ಳಾರಿಯಲ್ಲಿ ಸ್ನಾತಕೋತ್ತರ ಕೇಂದ್ರಗಳು ಸ್ಥಾಪನೆಯಾಗಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶವನ್ನು ಕಲ್ಪಿಸಿವೆ. ಕರ್ನಾಟಕದ ಹೆಮ್ಮೆಯ ಕನಸು 'ಕನ್ನಡ ವಿಶ್ವವಿದ್ಯಾಲಯ', ವಿಶ್ವ ವಿಖ್ಯಾತ ಹಂಪಿಯಲ್ಲಿ ಸ್ಥಾಪನೆಯಾಗಿರುವು ದೊಂದು ದೊಡ್ಡ ಹೆಜ್ಜೆಯ ಗುರುತು. ಕನ್ನಡ ಸಂಸ್ಕೃತಿ ಸಾಮ್ರಾಜ್ಯ ಸ್ಥಾಪನೆಗೆ ಈ ವಿಶ್ವವಿದ್ಯಾಲಯ ಒಂದು ಬುನಾದಿ. ಉನ್ನತ ಅಧ್ಯಯನ, ಆಳವಾದ ಸಂಶೋಧನೆ, ಗ್ರಂಥಗಳ ಪ್ರಕಟಣೆ, ಪ್ರಾದೇಶಿಕವಾಗಿ, ಸ್ಥಳೀಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕವನ್ನು ಪರಿಚಯಿಸುವುದು ಕನ್ನಡ ವಿಶ್ವವಿದ್ಯಾಲಯದ ಪ್ರಮುಖ ಆಶಯಗಳು. ಜಿಲ್ಲೆಯ ಶೈಕ್ಷಣಿಕ ಪ್ರಗತಿಗಾಗಿ ಕನ್ನಡ ವಿಶ್ವವಿದ್ಯಾಲಯವೂ ಕೂಡ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದೆ.

2.18. ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಅಂಕಿ-ಅಂಶಗಳ ಮಾಹಿತಿ (1994-95):

ತಃಖ್ತೆ - 16 :

ಪ್ರಾಥಮಿಕ ಶಾಲೆಗಳು	ವಿದ್ಯಾರ್ಥಿಗಳ ಸಂಖ್ಯೆ	ಪ್ರೌಢ ಶಾಲೆಗಳು	ವಿದ್ಯಾರ್ಥಿಗಳ ಸಂಖ್ಯೆ	ಪದವಿ ಪೂರ್ವ ಶಿಕ್ಷಣ	ವಿದ್ಯಾರ್ಥಿಗಳ ಸಂಖ್ಯೆ	ಸಾಮಾನ್ಯ ಶಿಕ್ಷಣ	ವಿದ್ಯಾರ್ಥಿಗಳ ಸಂಖ್ಯೆ
1429	336989	177	50832	37	6187	17	10502

ಮೂಲ :- ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬಳ್ಳಾರಿ.

1994-95

ತಃಖ್ತೆ -17 :

ಶಾಲೆಗಳ ಹಂತ	ಒಟ್ಟು ಶಾಲೆಗಳು	ದಾಖಲಾತಿ	ಮಂಜೂರಾದ ಶಿಕ್ಷಕರು	ಹಾಲಿ ಇರುವ ಶಿಕ್ಷಕರು
ಕಿರಿಯ ಪ್ರಾಥಮಿಕ ಶಾಲೆಗಳು	175	242630	1117	1061
ಹಿರಿಯ ಪ್ರಾಥಮಿಕ ಶಾಲೆಗಳು	1062	111229	7362	6848
ಪ್ರೌಢಶಾಲೆಗಳು	211	51220	1956	1824
ಒಟ್ಟು :-	**1748**	**405079**	**10435**	**9733**

ಮೂಲ :- ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ 1994ರ ಅವಧಿಗೂ, 1999-2000ದ ಅವಧಿಗೂ ಜಿಲ್ಲೆಯ ಶಿಕ್ಷಣದಲ್ಲಿ ಪ್ರಗತಿಯ ಹಂತವನ್ನು ಕಾಣಬಹುದಾಗಿದೆ. ಕೇವಲ 1429 ಇದ್ದದ್ದು, 1999-2000ದ ವೇಳೆಗೆ 1132 ಸರ್ಕಾರಿ ಶಾಲೆಗಳು, ಉಳಿದ ಖಾಸಗಿ ಶಾಲೆಗಳು ಸೇರಿ ಒಟ್ಟಾರೆ 1517 ಶಾಲೆಗಳು ಹಾಲಿ ಕಾರ್ಯನಿರ್ವಹಿಸುತ್ತಿವೆ. ಇದರಿಂದ ಶಾಲೆಗಳ ಸಂಖ್ಯೆ ಹೆಚ್ಚಿರುವುದು ಕಂಡುಬರುತ್ತದೆ. ಅದೇ ರೀತಿ ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಏರಿದೆ. ಪ್ರೌಢಶಾಲಾ ಹಂತದಲ್ಲಿಯೂ ಕೂಡ ಪ್ರಗತಿಯನ್ನು ಕಂಡುಕೊಳ್ಳಬಹುದಾಗಿದೆ. ಶಿಕ್ಷಕರ ನೇಮಕಾತಿಯೂ ಕೂಡ ಗಣನೀಯವಾಗಿ ಹೆಚ್ಚಳವಾಗಿದೆ. ಈ ಬೆಳವಣಿಗೆಯು ಜಿಲ್ಲೆಯ ಶಿಕ್ಷಣ ರಂಗದಲ್ಲಿ ಆಶಾದಾಯಕ ಪ್ರಗತಿ ಎಂದೇ ಹೇಳಬಹುದು. 1987ರ ನಂತರ ಜಿಲ್ಲಾ ಪರಿಷತ್ ಅನುಷ್ಠಾನವಾದ ಮೇಲೆ ಮಂಡಲ ಪಂಚಾಯತ್‌ಗಳು ಶಿಕ್ಷಣಕ್ಕಾಗಿ ಶ್ರಮಿಸಿ, ಜನರಲ್ಲಿ ಅರಿವನ್ನು ಮೂಡಿಸಿವೆ. 1993ರ ಪಂಚಾಯತ್ ರಾಜ್ ಕಾಯ್ದೆ ಅನ್ವಯ ಜಿಲ್ಲಾ ಪಂಚಾಯತ್‌ಗಳು, ತಾಲೂಕು ಪಂಚಾಯತ್‌ಗಳು, ಗ್ರಾಮ ಪಂಚಾಯಿತಿಗಳು ಈ ಜಿಲ್ಲೆಯಲ್ಲಿ ವಿಕೇಂದ್ರೀಕೃತ ವ್ಯವಸ್ಥೆಯ ತತ್ವದಡಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಅಭಿವೃದ್ಧಿಗಾಗಿ ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಂಡಿವೆ. ಸಮುದಾಯದ ಭಾಗವಹಿಸುವಿಕೆ ಗ್ರಾಮ ಮಟ್ಟದಲ್ಲಿ ಶಿಕ್ಷಣ ಬದಲಾವಣೆಗಾಗಿ ಯೋಚಿಸುವಂತಾಗಿದೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯಲ್ಲಿ ಶೈಕ್ಷಣಿಕ ಪ್ರಗತಿ ಏರುಮುಖವಾಗುತ್ತಿರುವುದು ಗಮನಾರ್ಹ. ಎಲ್ಲಿ ಶಿಕ್ಷಣದ ಪ್ರಗತಿಯಾಗುತ್ತಿದೆಯೋ, ಅಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯೂ ಹೆಚ್ಚುತ್ತದೆ. ಇದನ್ನು ಮೇಲಿನ ಶೈಕ್ಷಣಿಕ ಯೋಜನೆಗಳಲ್ಲಿ ಕಂಡುಕೊಳ್ಳಲಾಗಿದೆ. ಸಮುದಾಯವು ಹೆಚ್ಚು ಹೆಚ್ಚು ಭಾಗವಹಿಸುವ ಮೂಲಕ ಕೆಳಮಟ್ಟದ ಸ್ತರದಲ್ಲಿ ಅಧಿಕಾರ ವಿಕೇಂದ್ರೀಕರಣ ಗೊಳ್ಳುತ್ತದೆ. ಶಿಕ್ಷಣದ ಅಭಿವೃದ್ಧಿಗಾಗಿ ಶೈಕ್ಷಣಿಕ ಯೋಜನೆಗಳು ಗ್ರಾಮ ಮಟ್ಟದಲ್ಲಿ ಸ್ಥಳೀಯವಾಗಿಯೇ ರೂಪುಗೊಳ್ಳಬೇಕು. ಸಿದ್ಧಪಡಿಸಿದ ಯೋಜನೆಗಳು 'ಸಮುದಾಯ'ದ ಸಹಕಾರದೊಂದಿಗೆ ಅನುಷ್ಠಾನಗೊಳ್ಳಬೇಕು. ಇದರಿಂದ ಸ್ಥಳೀಯ ಶಿಕ್ಷಣಕ್ಕೆ ಬೆಂಬಲ ಸಿಗುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿಗೊಳ್ಳಲು ಸಾಧ್ಯವಾಗುತ್ತದೆ ಎಂಬ ಬಗ್ಗೆ ಅಧ್ಯಾಯ ಮೂರರಲ್ಲಿ ವಿಶ್ಲೇಷಿಸಲಾಗಿದೆ. ಶಿಕ್ಷಣ ಕಲ್ಪನೆಯ ಅರ್ಥ ಸ್ವರೂಪ ಮತ್ತು ಕಾರ್ಯಗಳನ್ನು ತಿಳಿಯುವುದಕ್ಕಾಗಿ ಹೆಸರಾಂತ ಶಿಕ್ಷಣ ತಜ್ಞರ ವ್ಯಾಖ್ಯೆಗಳ ವಿಶ್ಲೇಷಣೆ ಮಾಡಲಾಯಿತು. ಶಿಕ್ಷಣವು ಓದುವ, ಬರೆಯುವ ಸಾಮರ್ಥ್ಯಕ್ಕೆ ಮಾತ್ರ ಸೀಮಿತವಾಗದೇ ವ್ಯಕ್ತಿಯ ವ್ಯಕ್ತಿತ್ವ ವಿಕಸನ ಪ್ರಮುಖ ಸಾಧಾನವಾಗಬೇಕೆಂಬ ಅಂಶ ಮೂಡಿಬಂತು. ನಂತರ ಭಾರತದಲ್ಲಿ ಶಿಕ್ಷಣಕ್ಕೆ ನೀಡಿದ ಮಹತ್ವದ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳಲು ಭಾರತದ ಶಿಕ್ಷಣ ಇತಿಹಾಸದ ಪಕ್ಷಿನೋಟವನ್ನು ಪಡೆಯಲಾಯಿತು. ಈ ವಿಮರ್ಶೆಯಿಂದ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವವರೆಗೂ ಭಾರತೀಯರು ಶಿಕ್ಷಣ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲವೆಂಬುದು ಸ್ಪಷ್ಟವಾಗಿ ಮೂಡಿ ಬಂದಿತು. ಮುಂದುವರೆದು ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣ ಪ್ರಗತಿಗಾಗಿ ಮಾಡಿದ ಪ್ರಯತ್ನ ಹಾಗೂ ಅದರ ಪರಿಣಾಮವಾಗಿ ಶಿಕ್ಷಣ ರಂಗದಲ್ಲಾದ ಪ್ರಗತಿಯ ಕಿರುನೋಟವನ್ನು ಪಡೆಯಲಾಗಿ ಕ್ರಿ.ಶ. 2001ರ ಜನಗಣತಿ ಪ್ರಕಾರವೂ ನಮ್ಮ ದೇಶದಲ್ಲಿ ಇನ್ನೂ ಪ್ರತಿಶತ 38 ಮಂದಿ ಅನಕ್ಷರಸ್ಥರಿದ್ದಾರೆಂದು ವ್ಯಕ್ತವಾಯಿತು. ಕರ್ನಾಟಕದ ಶಿಕ್ಷಣ ಪ್ರಗತಿಯಲ್ಲಿಯೂ ಕೂಡ ಅನೇಕ ಬದಲಾವಣೆಗಳನ್ನು ಗಮನಿಸಿದ್ದರೂ ಸಹ ನಿರೀಕ್ಷಿತ ಮಟ್ಟ ಮುಟ್ಟುವಲ್ಲಿ ಇನ್ನೂ ಸಾಕಷ್ಟು ಪ್ರಯತ್ನಗಳು ನಡೆಯಬೇಕಾಗಿದೆ ಎಂಬುದು ಕಂಡು ಬಂದಿತು.

ಅಧ್ಯಾಯ - ಮೂರು

ಸಮುದಾಯ ಮತ್ತು ಶೈಕ್ಷಣಿಕ ಯೋಜನೆಗಳು

ಪೀಠಿಕೆ.

3.1. ಸಮುದಾಯ ಮತ್ತು ಶಿಕ್ಷಣ

3.2. ತಳಮಟ್ಟದಲ್ಲಿ ವಿಕೇಂದ್ರೀಕರಣ

3.3. ಏಕೀಕೃತ ಕರ್ನಾಟಕದಲ್ಲಿ ವಿಕೇಂದ್ರೀಕರಣ ಮತ್ತು ಪಂಚಾಯತ್‌ರಾಜ್

3.4. ಸೂಕ್ಷ್ಮ ಯೋಜನೆ

- **3.4.1.** ಪ್ರಕ್ರಿಯೆಯ ಉದ್ದೇಶಗಳು
- **3.4.2.** ಶೈಕ್ಷಣಿಕ ಅಭಿವೃದ್ಧಿಗಾಗಿ ಸೂಕ್ಷ್ಮ ಯೋಜನೆಯನ್ನು ಅಳವಡಿಸಿಕೊಳ್ಳುವ ವಿಧಾನ ಮತ್ತು ಪ್ರಕ್ರಿಯೆಯಲ್ಲಿ ಜನರು ಭಾಗವಹಿಸುವಿಕೆ
- **3.4.3.** ಹಳ್ಳಿಯ ಸಂಪನ್ಮೂಲ ಬಳಕೆ

3.5. ಜನರ ಭಾಗವಹಿಸುವಿಕೆಗೆ ಬೇಕಾದ ತಂತ್ರಗಳು

- **3.5.1.** ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ
- **3.5.2.** ಋತುಮಾನ ನಕ್ಷೆ
- **3.5.3.** ಶಾಲೆಯ ಮಕ್ಕಳ ಕೆಲಸದ ವಿವರಗಳು (ಜವಾಬ್ದಾರಿ ನಕ್ಷೆ)
- **3.5.4.** ಗೃಹ ಸಮೀಕ್ಷೆ
- **3.5.5.** ಅಂಕಿ-ಅಂಶಗಳ ಕ್ರೋಢೀಕರಣ
- **3.5.6.** ಗ್ರಾಮ ಶಿಕ್ಷಣ ವಹಿಯಲ್ಲಿ ಅಳವಡಿಸಿಕೊಳ್ಳುವ ಮುಖ್ಯ ಅಂಶಗಳು
- **3.5.7.** ಸಮುದಾಯವೇ ರೂಪಿಸಿಕೊಳ್ಳುವ ಗ್ರಾಮ ಶಿಕ್ಷಣ ಯೋಜನೆ

3.6. ಹಳ್ಳಿಯಲ್ಲಿಯ ಶೈಕ್ಷಣಿಕ ಸಮಸ್ಯೆಗಳು

3.7. ಸಾಮಾನ್ಯವಾಗಿ ಚರ್ಚಿತವಾಗುವ ಅಂಶಗಳು

3.8. ಶೈಕ್ಷಣಿಕ ಅಭಿವೃದ್ಧಿ

3.9. ಸೂಕ್ಷ್ಮ ಯೋಜನೆ ಪ್ರಕ್ರಿಯೆಯ ಪ್ರಯೋಜನಗಳು

3.10. ಸ್ಥಳೀಯ ಗ್ರಾಮ ಶಿಕ್ಷಣ ಸಮಿತಿ ಬಲಗೊಳ್ಳುವಿಕೆ

ಪೀಠಿಕೆ :

ಯಾವುದೇ ಒಂದು ಸಮಾಜದಲ್ಲಿ ವ್ಯಕ್ತಿಯ ಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಆರ್ಥಿಕ ಬದಲಾವಣೆಯಾಗಬೇಕಾದರೆ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉನ್ನತಮಟ್ಟದ ಶಿಕ್ಷಣ ಬಹಳ ಪರಿಣಾಮಕಾರಿಯಾದ ಸಾಧನವಾಗುತ್ತದೆ. ಈ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿ ಸಾಧ್ಯವೆಂಬುದನ್ನು ಹಿಂದಿನ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ. ಈ ಮುನ್ನ ಪ್ರಸ್ತಾಪಿಸಿದ ವಿಷಯಗಳಲ್ಲಿ ಶಿಕ್ಷಣದ ಮಹತ್ವ, ಚಿಂತಕರ ಅಭಿಪ್ರಾಯಗಳು, ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಶಿಕ್ಷಣ ನಡೆದು ಬಂದ ದಾರಿ, ಅದರ ಗತಿಯ ಬದಲಾವಣೆಯ ಸ್ವರೂಪ ಇತ್ಯಾದಿ ಕಂಲಾಗಿದೆ. ಈ ದೇಶದ ಪಂಚ ವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕೆ ನೀಡಿದ ಮಹತ್ವ, ಶಿಕ್ಷಣ ಅಭಿವೃದ್ಧಿಗಾಗಿ ನಿಗದಿಪಡಿಸಿದ ಹಣ ಇತ್ಯಾದಿ ವಿವರಿಸಲಾಗಿದೆ. ಕರ್ನಾಟಕ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಶಿಕ್ಷಣದಲ್ಲಾದ ಬದಲಾವಣೆ ಹಾಗೂ ಪ್ರಗತಿ ನೋಟವನ್ನು ನೋಡಲಾಗಿದೆ. ಜನ ಸಂಖ್ಯೆಯ ಬೆಳವಣಿಗೆಯಿಂದ ಶಿಕ್ಷಣದ ಮೇಲಾದ ಪರಿಣಾಮವನ್ನು ಸಹ ಗಮನಿಸಿದೆ.

ಶೈಕ್ಷಣಿಕ ಕಾರ್ಯ ಅಭಿವೃದ್ಧಿಗೊಳ್ಳಬೇಕಾದರೆ, ಕೆಳಮಟ್ಟದಲ್ಲಿ ವಿಕೇಂದ್ರಿಕೃತ ವ್ಯವಸ್ಥೆ ಗಟ್ಟಿಗೊಳ್ಳ ಬೇಕು. ವಿಕೇಂದ್ರೀಕೃತ ವ್ಯವಸ್ಥೆಯ ಗಟ್ಟಿತನಕ್ಕೆ ಎಲ್ಲರ ಭಾಗಿತ್ವ ಅಗತ್ಯವಾಗುತ್ತದೆ. ಎಲ್ಲರೂ ಭಾಗವಹಿಸುವುದೆಂದರೆ; ಗ್ರಾಮದ ಎಲ್ಲರೂ ಎಂದು ಅರ್ಥ. ಗ್ರಾಮಾಭಿವೃದ್ಧಿಗೆ ಶ್ರಮಿಸಬೇಕಾದವರು ಗ್ರಾಮದವರೇ. ಅಂದರೆ ಸಮುದಾಯ. ಗ್ರಾಮಾಭಿವೃದ್ಧಿಗಾಗಿ ಕೈಗೊಳ್ಳುವ ಕಾರ್ಯಕ್ರಮಗಳಲ್ಲಿ ಶಿಕ್ಷಣಾ, ಬಿವೃದ್ಧಿಯೂ ಒಂದು. ಶಿಕ್ಷಣದ ಅಭಿವೃದ್ಧಿಗಾಗಿ ಸಮುದಾಯವು ತನ್ನನ್ನು ತಾನು ತೊಡಗಿಸಿಕೊಳ್ಳ ಬೇಕು. ಸಮುದಾಯವೇ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಸಮುದಾಯದ ಪರಿಕಲ್ಪನೆ, ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಶಿಕ್ಷಣ, ಶೈಕ್ಷಣಿಕ ಯೋಜನೆ ಗಳು, ಗ್ರಾಮ ಮಟ್ಟದ ಶೈಕ್ಷಣಿಕ ಯೋಜನೆಗಳು, ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳು ಇವೆಲ್ಲಾ ಶಿಕ್ಷಣಾಭಿವೃದ್ಧಿಗೆ ಹೇಗೆ ಪೂರಕವಾಗಿವೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

3.1. ಸಮುದಾಯ ಮತ್ತು ಶಿಕ್ಷಣ :

ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಗ್ರಾಮೀಣ ಸಮುದಾಯವು ತೃಪ್ತ ಜೀವನ ನಡೆಸಲಿಕ್ಕೆ ಆಡಳಿತ ಸುಧಾರಣೆ ಅಗತ್ಯ. ಜನ ಜೀವನ ಸುಧಾರಣೆಗೆ ಶಿಕ್ಷಣ ಬಹುಮುಖ್ಯ ಅಂಗ. ''ಶಿಕ್ಷಣವು ಒಂದು ದ್ವೀಪವಾಗಬಾರದು, ಅದು ಸಮುದಾಯದ ಅವಿಭಾಜ್ಯ ಅಂಗವಾಗಿರಬೇಕು ಎಂದು ಇತ್ತೀಚಿಗೆ ಪ್ರತಿಪಾದಿಸ ಲಾಗುತ್ತಿದೆ. ಇದಕ್ಕಾಗಿ ಹೆತ್ತವರು, ಬಾಲಕರು ಶಾಲಾ ಕಾಲೇಜುಗಳ ಆಡಳಿತದಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಬೇಕೆಂದು ಶಾಲಾ ವ್ಯವಸ್ಥೆಯನ್ನು ಸಮುದಾಯಕ್ಕೆ ತೀರಾ ಹತ್ತಿರ ತರಲಾಗುತ್ತಿದೆ. ಇದರಿಂದ ಶೈಕ್ಷಣಿಕ ಕ್ಷೇತ್ರದ ಬಗೆಗೆ ಸಾರ್ವಜನಿಕರಲ್ಲಿ ಆಸಕ್ತಿ ಮೂಡಲು ನೆರವಾಗುತ್ತದೆ ಎಂದು ಆಶಿಸಲಾಗಿದೆ'' (ಹೆಚ್. ಎಂ. ಮರುಳಸಿದ್ಧಯ್ಯ, 1993,ಪು.57). ಶಿಕ್ಷಣ ಜನರ ಸರ್ವತೋಮುಖ ಅಭಿವೃದ್ಧಿಗೆ ಬಹುಮುಖ್ಯ

ಪಾತ್ರವಹಿಸುತ್ತದೆ. ಸಮುದಾಯವು ಸ್ಥಳೀಯ ಶಿಕ್ಷಣದ ಬಗ್ಗೆ ಹೆಚ್ಚು ಗಮನಹರಿಸುವ ನಿಟ್ಟಿನಲ್ಲಿ ಭಾಗಿತ್ವ ಹೊಂದಬೇಕಾಗಿದೆ. ''ಪುರಾತನ ಕಾಲದಿಂದಲೂ ಶಾಲೆಯು ಸಮುದಾಯದ ಅವಿಭಾಜ್ಯ ಅಂಗವೆಂದು ಅರಿತಿದ್ದರೂ, ಅನೇಕ ವೇಳೆ ಶಾಲೆಯು ಸಮುದಾಯಕ್ಕೆ ಏನೇನೂ ಸಂಬಂಧವಿಲ್ಲವೇನೋ ಎಂಬಂತೆ ನಿರ್ಲಕ್ಷತೆಯಿಂದ ನಡೆದುಕೊಂಡ, ನಡೆದುಕೊಳ್ಳುತ್ತಿರುವ ಸಂದರ್ಭಗಳಿಗೇನೂ ಕೊರತೆ ಇಲ್ಲ. ಆದರೂ ಸಮುದಾಯದ ಮೇಲೆ ಶಾಲೆಯ ಪ್ರಭಾವ ಮುದ್ರೆ ಒತ್ತುವುದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ''(ಹೆಚ್. ಎಂ. ಮರುಳಸಿದ್ಧಯ್ಯ, 1993, ಪು.66).

ಈ ಹಿಂದಿನ ಪರಿಸ್ಥಿತಿಯಲ್ಲಿ ಜನರು ಶಾಲೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿರಲಿಲ್ಲವೆಂಬ ಮಾತು ನಿಜ. ಅದಕ್ಕೆ ಕಾರಣವಿಲ್ಲದಿಲ್ಲ. ಶಿಕ್ಷಣದ ಮಹತ್ವ ಕುರಿತು ಜನರಿಗೆ ಹೆಚ್ಚಿನ ಅರಿವಿಲ್ಲದಾಗ ಶಾಲೆಯ ಬಗೆಗಿನ ಪ್ರೀತಿ ಕಾಳಜಿಯು ಕಡಿಮೆಯಾಗಿದ್ದುದು ಸಹಜ. ಜನ ವಸತಿ ಪ್ರದೇಶಗಳಲ್ಲಿ ಜನರಿಗೆ ಸಾಕಷ್ಟು ಅಭಿವೃದ್ಧಿಪರ ಅವಕಾಶಗಳು ಹೆಚ್ಚು ಒದಗುತ್ತಿದ್ದು, ಸಮುದಾಯ 'ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದಾಗಿದೆ' ಹಾಗಾದರೆ, ಸಮುದಾಯ ಎಂದರೆ ಏನೆಂದು ನೋಡುವ:

'ಸಮುದಾಯ'ದ ಅರ್ಥ:

ಸಮುದಾಯದ ಅರ್ಥ ವಿಶಾಲವಾಗಿದ್ದರೂ, ಅದನ್ನು ಸಂಕುಚಿತಾರ್ಥದಲ್ಲಿ ನೋಡಲು ಬರುವುದಿಲ್ಲ. ''ನಾವೆಲ್ಲಾ ಜೀವಿಸುವುದು ಸಮುದಾಯಗಳಲ್ಲಿ , ಕೇರಿ-ಓಣಿ, ವಠಾರಗಳಲ್ಲಿ, ಕೊಂಪೆ-ಕೊಳೆಗೇರಿಗಳಲ್ಲಿ, ಹಳ್ಳಿ- ಪಟ್ಟಣ, ನಗರಗಳಲ್ಲಿ ವಾಸಿಸುವ ಸಮುದಾಯವು ನಾಲ್ಕಾರು ಮನೆಗಳಿರುವ ಮಲೆನಾಡಿನಲ್ಲಿರುವಂಥ ಚಿಕ್ಕ ಚಿಕ್ಕ ಹಳ್ಳಿಯಾಗಿರಬಹುದು. ಅಥವಾ ಲಕ್ಷಾಂತರ ಮನೆಗಳಿರುವ ಬೆಂಗಳೂರಿನಂತಹ ಬೃಹತ್ ನಗರವಿರಬಹುದು. ಹತ್ತಿರದ ಚಿಕ್ಕ ಹಳ್ಳಿಗಳು ಒಂದುಗೂಡಿದಂತೆ ವೃಂದ-ಸಮುದಾಯಗಳಿರುತ್ತವೆ. ಸುತ್ತಮುತ್ತಲ ಹಳ್ಳಿಗಳನ್ನು ಕ್ರಮೇಣ ತನ್ನೊಳಗೆ ಸೇರಿಸಿಕೊಳ್ಳುತ್ತಾ, ವಿವಿಧ ದಿಕ್ಕುಗಳಲ್ಲಿ ಬಡಾವಣೆಗಳನ್ನು ಸ್ಥಾಪಿಸುತ್ತಾ, ನಗರಗಳು ಹಿಗ್ಗಿ ಬೆಳೆದು, ಬೃಹತ್ ನಗರಗಳಾಗುತ್ತವೆ. ಹಳ್ಳಿ, ನಗರಗಳಂತೆ ಪ್ರಾದೇಶಿಕ ಸಮುದಾಯಗಳಾದ ತಾಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಕೊನೆಯ ಇಡೀ ಜಗತ್ತೇ ನಮ್ಮ ವಾಸದ ನೆಲೆಗಳಾಗಿವೆ, ಸಮುದಾಯಗಳಾಗಿವೆ''(ಹೆಚ್.ಎಂ. ಮರುಳಸಿದ್ಧಯ್ಯ, 1993, ಪು.178).

ಯಾವೊಬ್ಬ ಮಾನವನೂ ದ್ವೀಪವಲ್ಲ ಎಂಬ ಮಾತನ್ನು ಆಂಗ್ಲ ಕವಿ ಜಾನ್ ಡನ್ ಕೆಲವು ಶತಮಾನಗಳ ಹಿಂದೆಯೇ ಹೇಳಿದ್ದಾನೆ. ' ಮಾನವನು ಮೂಲಭೂತವಾಗಿ ಸಮಾಜ ಜೀವಿಯಾಗಿದ್ದಾನೆ' ಎಂಬ ಮಾತನ್ನು ಅರಿಸ್ಟಾಟಲ್ ಹೇಳಿದ್ದನು. '' ಇಬ್ಬರು ಅಥವಾ ಅದಕ್ಕೂ ಹೆಚ್ಚು ಜನರ ನಡುವೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಪರ್ಕ-ಸಂಬಂಧಗಳು ಏರ್ಪಟ್ಟಾಗ ಅವರುಗಳ ನಡುವೆ ಕ್ರಮಬದ್ಧವಾದ ಅಂತಃಕ್ರಿಯೆ ಅಥವಾ ಒಡನಾಟ ಆರಂಭವಾದಾಗ ಮಾತ್ರ 'ಸಮೂಹ' ಸ್ಥಾಪನೆಗೆ ವೇದಿಕೆ ಸನ್ನದ್ಧವಾಗುವುದು''(ಚ.ನ. ಶಂಕರರಾವ್, 1992, ಪು.303).

ಸಮೂಹ ಒಟ್ಟಾಗಿ ಒಂದೆಡೆ ಸೇರಿ, ಬದುಕನ್ನು ರೂಪಿಸಿಕೊಂಡು, ಜೀವನ ಕ್ರಮಿಸುವುದೇ '**ಸಮುದಾಯ**'.ಅಂತಹ ಸಮುದಾಯವು ಎರಡು ವಿಧಗಳಲ್ಲಿವೆ. 1) ಭೌಗೋಳಿಕ ಸಮುದಾಯ, 2) ಕ್ರಿಯಾತ್ಮಕ ಸಮುದಾಯ. ''ಭೌಗೋಳಿಕ ಸಮುದಾಯಗಳು ಸಮರ್ಪಕ ಸಮುದಾಯಗಳು. ಕ್ರಿಯಾತ್ಮಕ ಸಮುದಾಯಗಳು ಭೌಗೋಳಿಕ ಸಮುದಾಯಗಳಲ್ಲಿ ಸಮಾವೇಶಗೊಳ್ಳುತ್ತವೆ. (ಉದಾ:- ಮಕ್ಕಳು, ಮಹಿಳೆಯರು, ಯುವಕರು, ವೃದ್ಧರು, ಶಿಕ್ಷಕರು, ವೈದ್ಯರು, ವ್ಯಾಪಾರಸ್ಥರು, ವಿದ್ಯಾರ್ಥಿಗಳು) ಕ್ರಿಯಾತ್ಮಕ ಸಮುದಾಯಗಳು ಭೌಗೋಳಿಕ ಸಮುದಾಯಗಳಲ್ಲಿ ಹಂಚಿ ಹೋಗಿರುವುದನ್ನು ಕಾಣಬಹುದು. ಉದಾ:- ಒಂದು ಧರ್ಮಕ್ಕೆ ಅಥವಾ ಒಂದು ಜಾತಿಗೆ ಸೇರಿದವರು ಕೆಲವು ನಿರ್ಧಿಷ್ಟ ಪ್ರದೇಶದಲ್ಲಿ ವಾಸಿಸುತ್ತಿರಬಹುದು, ಹಲವಾರು ಸಮುದಾಯಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರು ತಾವೆಲ್ಲಾ ಒಂದು ಕ್ರಿಯಾತ್ಮಕ ಸಮುದಾಯಕ್ಕೆ ಸೇರಿದವರೆಂದು ಭಾವಿಸಿ, ಅದರಂತೆ ನಡೆದುಕೊಳ್ಳಬಹುದು''(ಹೆಚ್. ಎಂ. ಮರುಳಸಿದ್ಧಯ್ಯ, 1993,ಪು.178).

''ಭೌಗೋಳಿಕ ಸಮುದಾಯವು ಏಕೀಕೃತ ಆಡಳಿತಕ್ಕೆ ಒಳಗಾಗಿರುತ್ತದೆ. ಉದಾ:- ಗ್ರಾಮವು ಒಂದು ಪಂಚಾಯ್ತಿ ಸಮಿತಿಯ ಆಡಳಿತಕ್ಕೆ , ನಗರವು ನಗರಸಭೆ ಆಡಳಿತಕ್ಕೆ ಒಳಪಟ್ಟಿರುತ್ತದೆ. ಅಲ್ಲಿ ನೆಲೆಸಿರುವ ಜನರಿಗೆ ಬೇಕಾದಂತಹ ಪ್ರಮುಖ ಅವಶ್ಯಕತೆಗಳಾದ ವಸತಿ, ನೀರು, ಆಹಾರ, ಶಿಕ್ಷಣ, ಉದ್ಯೋಗ, ಮನೋರಂಜನೆ ಇತ್ಯಾದಿಗಳು ಆ ಸಮುದಾಯದಲ್ಲಿ ಲಭ್ಯವಾಗುತ್ತವೆ''(ಹೆಚ್. ಎಂ. ಮರುಳಸಿದ್ಧಯ್ಯ, 1993,ಪು.179).

ಸಮುದಾಯವು ಮಾನವ ನಿರ್ಮಿತಿಗೆ ಅಡಿಗಲ್ಲು. ಮಾನವ ಸಂಪನ್ಮೂಲ ಅಭಿವೃದ್ಧಿಯಾಗ ಬೇಕಾದರೆ, ತನ್ನದೇ ಆದ ಯೋಜನೆಗಳನ್ನು ರೂಢಿಸಿಕೊಳ್ಳಬೇಕು. ವೈಜ್ಞಾನಿಕವಾಗಿ ನಮ್ಮ ಗುರಿಯನ್ನು ಪೂರೈಸಿಕೊಳ್ಳುವ ವಿಧಾನವೇ ಯೋಜನಾ ಬದ್ಧ ಕ್ರಮ. ಯೋಜನೆಯನ್ನು ಸಿದ್ಧಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು ಸಮುದಾಯ.

ಯೋಜನೆಯನ್ನು ಸಿದ್ಧಗೊಳಿಸುವಾಗ ಸಮಸ್ಯೆಗಳನ್ನು ಹಾಗೂ ಸಂಪನ್ಮೂಲಗಳನ್ನು ಗಮನದಲ್ಲಿರಿಸಿ ಕೊಳ್ಳಬೇಕಾದುದು ಮುಖ್ಯವಾದರೂ ಯಾವ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಪರಿಹರಿಸಬೇಕು ಎಂಬುದನ್ನು ಸಮುದಾಯ ನಿರ್ಣಯಿಸಬೇಕಾಗುತ್ತದೆ. ಸಮುದಾಯ ನಿರ್ಣಯಿಸುವ ಅಧಿಕಾರವನ್ನು ಈಗಾಗಲೇ ಕೇಂದ್ರೀಕೃತ ವ್ಯವಸ್ಥೆಯಿಂದ ವಿಕೇಂದ್ರೀಕರಿಸಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಸಮುದಾಯವು ಹೆಚ್ಚು ಸಬಲಗೊಳ್ಳಲು ಅನೇಕ ಕಾಯ್ದೆಗಳನ್ನು ಜಾರಿಗೊಳಿಸಲಾಗಿದೆ. ಅವು ಯಾವ ಯಾವ ಹಂತದಲ್ಲಿ ಜಾರಿಯಾದವು ಎನ್ನುವ ಬಗ್ಗೆ ಮುಂದೆ ವಿವರಿಸಲಾಗಿದೆ.

3.2. ತಳಮಟ್ಟದಲ್ಲಿ ವಿಕೇಂದ್ರೀಕರಣ :

ಯಾವುದೇ ಯೋಜನೆಗಳು ರೂಪುಗೊಳ್ಳಲು ಸಮಗ್ರ ದೃಷ್ಟಿಕೋನ ಅಗತ್ಯ. ಭವಿಷ್ಯದ ಅನಂತತೆಯನ್ನು ಮುಖ್ಯ ವಾಗಿಟ್ಟುಕೊಂಡು ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಈ ಹಿಂದಿನ ಭಾಗದಲ್ಲಿ ಚರ್ಚಿಸಿದಂತೆ ಯಾವುದೇ ವ್ಯಾಪ್ತಿಯ ಅಭಿವೃದ್ಧಿಗೆ ಕೇಂದ್ರೀಕೃತ ವ್ಯವಸ್ಥೆ ಅಡ್ಡಿಯಾಗಬಾರದು. ಮಾನವನ, ಸಮಾಜದ ಅಥವಾ ಸಮುದಾಯದ ಸರ್ವ ಅಭಿವೃದ್ಧಿಯಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ಇರಬೇಕು. ಆಗ ಮಾತ್ರ ಮಾನವನ ಸರ್ವತೋಮುಖ ಅಭಿವೃದ್ಧಿ ಸಾಧ್ಯ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಅವಧಿಯಲ್ಲಿ ರಾಷ್ಟ್ರಪಿತನು ಕಂಡ ಕನಸು 'ರಾಮರಾಜ್ಯ'. ಆ ಕನಸು ನನಸಾಗದೇ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಸಾರಿದ್ದರು. ಅವರ ಕನಸಿನ ಮುಂದಿನ ಹೆಜ್ಜೆಯೇ ವಿಕೇಂದ್ರೀಕರಣ. ಗ್ರಾಮೋದ್ಧಾರ, ಸ್ವದೇಶಿ ತತ್ವ, ಹರಿಜನೋದ್ಧಾರ, ಪಾನ ನಿರೋಧ, ಪರಧರ್ಮ ಸಹಿಷ್ಣುತೆ, ಸ್ತ್ರೀಯರಿಗೆ ಸಮಾನ ಸ್ಥಾನ ಹಾಗೂ ಅವಕಾಶ, ಸಾಕ್ಷರತಾ ಆಂದೋಲನ, ಮಕ್ಕಳ ಶಿಕ್ಷಣ, ಯೋಗ ಕ್ಷೇಮ ಇವೇ ಮೊದಲಾದ ರಚನಾತ್ಮಕ ಕಾರ್ಯಕ್ರಮಗಳನ್ನು ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿಯೇ ಜಾರಿಗೊಳಿಸದ್ದರು. ಜನಹಿತಕ್ಕಾಗಿ ಜನ ಕಲ್ಯಾಣ ಕಾರ್ಯಕ್ರಮದ ಕನಸು ಅವರ 'ಪ್ರಜಾರಾಜ್ಯ'ದ ಕನಸು. ಜವಾಹರಲಾಲ್ ನೆಹರೂ ಕೂಡ ಗಾಂಧೀಜಿಯವರ ಕನಸನ್ನು ನನಸು ಮಾಡಲು ದೃಢ ನಿರ್ಧಾರ ತಾಳಿದ್ದರು. ಅಧಿಕಾರವನ್ನು ಕೇಂದ್ರೀಕರಿಸಿ, ಜನರಿಗೆ ಅಧಿಕಾರ, ಹಣವನ್ನು ನೀಡದೇ ಕೇಂದ್ರ ಸರಕಾರದಿಂದ ಬಂದ ನಿರ್ದೇಶನದಂತೆ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಮೂಕ ಕುರಿಗಳಂತೆ ಪಾಲ್ಗೊಳ್ಳಲು ಹೇಳುವುದು ಸರಿಯಾದ ಮಾರ್ಗವಲ್ಲವೆಂದು ''ಅಧಿಕಾರದ ವಿಕೇಂದ್ರೀಕರಣ''ದ ತತ್ವವನ್ನು ಪ್ರತಿಪಾದಿಸಿ, ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾದರು.

ಯಾವುದೇ ಅಭಿವೃದ್ಧಿಕಾರ್ಯಗಳು ಸಫಲವಾಗಬೇಕಾದರೆ ಅಭಿವೃದ್ಧಿಗೆ ಬೇಕಾದ ಮೂಲಗಳು ವಿಕೇಂದ್ರೀಕೃತಗೊಂಡಾಗ ಇತರರಿಗೆ ಸುಲಭವಾಗಿ ಪ್ರತಿಫಲ ದೊರಕುತ್ತವೆ. ಅದು ಸಹಕಾರ ತತ್ವದ ಮೂಲಕ ವಾಗಿರಬಹುದು ಅಥವಾ ಜನಹಿತಕ್ಕಾಗಿ ವಿಕೇಂದ್ರೀಕರಣದ ಮೂಲಕವಾಗಿರಬಹುದು. ಸಮಾಜ ಅಭಿವೃದ್ಧಿಗಾಗಿ ವಿಕೇಂದ್ರೀಕರಣ ಅಗತ್ಯ ಎಂಬುದನ್ನು ಸಾಬೀತುಗೊಳಿಸಿವೆ.

ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ ಪೂರ್ವದಲ್ಲಿಯೇ ಗ್ರಾಮ ಸ್ವರಾಜ್ಯದ ಕನಸು ಹೊತ್ತಿದ್ದರು. 'ಪಂಚಾಯತಿರಾಜ್ಯ' ಅವರ ಕನಸಿನ ಕೂಸು. ''ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ರಾಷ್ಟ್ರವನ್ನು ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ಪುನರ್‌ರಚಿಸಲು ಗ್ರಾಮ ಸಮುದಾಯಗಳ ರಚನೆಯೊಂದೇ ರಾಜಮಾರ್ಗ''(ಪ್ರೊ. ಎಸ್. ಆರ್. ರೊಹಿಡೇಕರ್, ಪು.4-5) ಎಂದು ನಂಬಿದ್ದರು.

''ನನ್ನ ಕನಸು ಕೈಗೂಡಿದರೆ ಭಾರತದ ಲಕ್ಷಾಂತರ ಹಳ್ಳಿಗಳಲ್ಲಿ ಒಂದೊಂದೂ ಹಳ್ಳಿಯೂ ಉತ್ತಮ ಗಣರಾಜ್ಯವಾದೀತು. ಅಲ್ಲಿ ಅನಕ್ಷರಸ್ಥರಾಗಲೀ, ಸೋಮಾರಿಗಳಾಗಲೀ ಇರಲಾರರು. ಉಪಯುಕ್ತ ಉದ್ಯೋಗಗಳಲ್ಲಿ ತೊಡಗಿ ಪುಷ್ಟಿಯಾದ ಆಹಾರ, ಧಾರಾಳವಾಗಿ ಬೆಳಕು ಗಾಳಿ ಬರುವ ಮನೆ, ಉಡಲು ಸಾಕಷ್ಟು ಖಾದಿ ಬಟ್ಟೆ, ಎಲ್ಲರಿಗೂ ಸಿಗುವಂತಿದ್ದೀತು. ಗ್ರಾಮಸ್ಥರೆಲ್ಲರೂ ಸ್ವಚ್ಛತೆ ಮತ್ತು ಆರೋಗ್ಯ ನಿಯಮಗಳನ್ನು ತಾವೇ ಅರಿತು ಪಾಲಿಸುತ್ತಾರೆ. ಇಂಥ ಗ್ರಾಮರಾಜ್ಯ ಬೆಳೆಯುತ್ತಾ ಹೊಸ ಅಗತ್ಯ ವಸ್ತುಗಳ ಪೂರೈಕೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮರೆತು ಕೊಳೆತೀತು''(ಕೆ. ಎನ್.ನಾರಾಯಣಸ್ವಾಮಿ, 'ಪಂಚಾಯಿತಿ ರಾಜ್ಯ', ಪು.7-3) ಗಾಂಧೀಜಿಯವರ ಈ ಮೇಲಿನ ಹೇಳಿಕೆಗಳು ಅಧಿಕಾರ ವಿಕೇಂದ್ರೀಕರಣಕ್ಕೆ ಮೂಲವಾಗಿದ್ದವು. ಗ್ರಾಮಾಭಿವೃದ್ಧಿ ಆಗಬೇಕಾದರೆ, ಅಧಿಕಾರದ ವಿಕೇಂದ್ರೀಕರಣ ಅಗತ್ಯ ಎಂಬ ಅವರ ಮಾತು ಪ್ರಸ್ತುತ ವಿಕೇಂದ್ರೀಕೃತ ವ್ಯವಸ್ಥೆಗೆ ಕನ್ನಡಿಯಾಗಿದೆ.

ಅಧಿಕಾರ ವಿಕೇಂದ್ರೀಕರಣ ಅಭಿವೃದ್ಧಿಗೆ ಮೂಲವಾಗುತ್ತದೆ. ಭಾರತದ ಸಮಗ್ರ ಅಭಿವೃದ್ಧಿಗೆ ದೇಶದ ನಾಯಕರು ತಮ್ಮ ಚಿಂತನೆಗಳ ಮೂಲಕ ತಳಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣವಾದಾಗ ಮಾತ್ರ ದೇಶದ ಸಂಪೂರ್ಣ ಅಭಿವೃದ್ಧಿ ಸಾಧ್ಯ ಎಂದು ತಿಳಿಸುತ್ತಾ ಬಂದಿದ್ದಾರೆ. ಬ್ರಿಟೀಷ್ ಆಡಳಿತದಲ್ಲಿಯೂ ಸಹ ವಿಕೇಂದ್ರೀಕೃತ ಆಡಳಿತದ ಬಗ್ಗೆ ಚಿಂತನೆಗಳು ನಡೆದಿರುವುದು ಕಂಡು ಬಂದಿದೆ. ''ವಿಕೇಂದ್ರೀಕೃತ ಆಡಳಿತ ಮತ್ತು ಸಶಕ್ತೀಕರಣ ಬಹು ಚರ್ಚಿತ ವಿಚಾರಗಳು. ಇವುಗಳ ಪ್ರಾಮುಖ್ಯತೆಗೆ ಎರಡು ಕಾರಣಗಳಿವೆ. ಇವು ತಳಮಟ್ಟದ ಅಧಿಕಾರದ ವಿತರಣೆಯಲ್ಲಿ ಬದಲಾವಣೆ ತಂದು, ಸಾಂಪ್ರದಾಯಿಕ ಯಜಮಾನಿಕೆಯನ್ನು ಬುಡಮೇಲು ಮಾಡುತ್ತವೆ ಎನ್ನುವುದು ಮೊದಲನೆಯ ಕಾರಣವಾದರೆ, ಈ ರಾಜಕಿಯ ಪ್ರಕ್ರಿಯೆಯಿಂದ ಕೆಳ ವರ್ಗದ ಜನರು ಸಶಕ್ತೀಕರಣ ಗೊಳ್ಳುತ್ತಾರೆ ಎನ್ನುವುದು ಎರಡನೆಯ ಕಾರಣ''(ರಜನಿ ಕೊಠಾರಿ, 1996, ಪು.34-41).

ಅಭಿವೃದ್ಧಿ ವಿಚಾರ ಬಂದಾಗಲೆಲ್ಲಾ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ ಎಂಬ ಮಾತು ಕೇಳಿ ಬರುತ್ತಿದೆ. ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅಭಿವೃದ್ಧಿಕಾರ್ಯಗಳು ಗಟ್ಟಿಗೊಳ್ಳುತ್ತವೆ ಮತ್ತು ಜನ ಬೇಡಿಕೆಗೆ ತಕ್ಕಂತೆ ಫಲ ನೀಡುತ್ತವೆ ಎಂಬ ಮಾತು ಸಹ ಕೇಳಿಬರುತ್ತಿದೆ. '' ವಿಕೇಂದ್ರೀಕರಣವನ್ನು ಆಡಳಿತದ ರಚನೆಗಳಲ್ಲಿ ಆಗುವ ಹೆಚ್ಚಳವೆಂದು ನಿರ್ವಚಿಸಲಾಗಿದೆ. ಹಾಗೆಂದ ಮಾತ್ರಕ್ಕೆ ಅದನ್ನು ಒಂದು ಗುರಿ ಎನ್ನುವ ಅರ್ಥದಲ್ಲಿ ಪರಿಗಣಿಸಿಲ್ಲ. ಬದಲಿಗೆ ನಿರ್ಧಿಷ್ಟ ಉದ್ದೇಶ ಈಡೇರಿಕೆಗೆ ಅಗತ್ಯವಾದ ಮಾರ್ಗವೆಂದು ವಿಕೇಂದ್ರೀಕರಣವನ್ನು ಅರ್ಥೈಯಿಸಿಕೊಳ್ಳಲಾಗಿದೆ. ಸ್ವಲ್ಪ ವಿಸ್ತಾರವಾಗಿ ಹೇಳುವುದಾದರೆ, ಕೇಂದ್ರೀಕೃತ ವ್ಯವಸ್ಥೆ ಗ್ರಾಮೀಣ ಮಟ್ಟದ ಜನರ ಅವಶ್ಯಕತೆಗಳಿಗೆ ಸ್ಪಂಧಿಸಲು ವಿಫಲವಾಗಿದೆ. ಆದುದರಿಂದ ಆಡಳಿತದ ರಚನೆಗಳನ್ನು ಹೆಚ್ಚಿಸಿ, ತಳಮಟ್ಟಕ್ಕೂ ತಲುಪಿಸಬೇಕು. ಹಾಗೆ ಆದಾಗ ಮಾತ್ರ ಜನರ ಸಮಸ್ಯೆಗಳಿಗೆ ಆಡಳಿತ ಸ್ಪಂಧಿಸಲು ಸಾಧ್ಯ ಎನ್ನುವ ಗೃಹಿತದಿಂದ ಪಂಚಾಯತ್ ಸಂಸ್ಥೆಗಳಿಗೆ ಪ್ರಾಮುಖ್ಯತೆ ಬಂದಿದೆ''.(ಡಾ. ಚಂದ್ರಪೂಜಾರಿ, 2000, ಪು.13) ವಿಕೇಂದ್ರೀಕರಣವು ಜನವಸತಿ ಪ್ರದೇಶಗಳಲ್ಲಿ ಜನರ ಬೇಡಿಕೆಗೆ ತೀವ್ರ ಸ್ಪಂಧಿಸಲು ಹತ್ತಿರವಾಗುತ್ತದೆ.

3.3. ಏಕೀಕೃತ ಕರ್ನಾಟಕದಲ್ಲಿ ವಿಕೇಂದ್ರೀಕರಣ ಮತ್ತು ಪಂಚಾಯತ್ ರಾಜ್ :

ಕರ್ನಾಟಕವು ಏಕೀಕರಣವಾಗುವ ಪೂರ್ವದಲ್ಲಿ ನಾಲ್ಕು ಪ್ರದೇಶಗಳಲ್ಲಿ ಪ್ರತ್ಯೇಕವಾದ ಸ್ಥಳೀಯ ಸರ್ಕಾರ ಕಾಯ್ದೆಗಳು ಅನುಷ್ಠಾನದಲ್ಲಿದ್ದವು. ಅವುಗಳು 1923ರ ಬಾಂಬೆ ಜಿಲ್ಲಾ ಸ್ಥಳೀಯ ಬೋರ್ಡ್‌ಗಳ ಕಾಯ್ದೆ ಮತ್ತು 1933ರ ಬಾಂಬೆ ಗ್ರಾಮ ಪಂಚಾಯತ್ ಕಾಯ್ದೆ, 1920ರ ಮದ್ರಾಸ್ ಬೋರ್ಡ್‌ಗಳ ಕಾಯ್ದೆ ಮತ್ತು 1950 ಮದ್ರಾಸ್ ಗ್ರಾಮ ಪಂಚಾಯತ್ ಕಾಯ್ದೆ, 1956ರ ಹೈದ್ರಾಬಾದ್ ಜಿಲ್ಲಾ ಬೋರ್ಡ್‌ಗಳ ಕಾಯ್ದೆ ಮತ್ತು 1951ರ ಹೈದ್ರಾಬಾದ್ ಗ್ರಾಮ ಪಂಚಾಯತ್ ಕಾಯ್ದೆ ಮತ್ತು 1956ರ ಕೂರ್ಗ್ ಗ್ರಾಮ ಪಂಚಾಯತ್ ಕಾಯ್ದೆ. ಪ್ರಾದೇಶಿಕವಾಗಿ ಆಡಳಿತವನ್ನು ಸುಲಲಿತವಾಗಿ ಅನುಷ್ಠಾನಗೊಳಿಸಲು ಈ ಮೇಲಿನ ಕಾಯ್ದೆಗಳನ್ನು ಆಯಾ ಪ್ರದೇಶ ಗಳಲ್ಲಿ ಜಾರಿಗೊಳಿಸಲಾಗಿತ್ತು.

ರಾಜ್ಯದಲ್ಲಿ ಏಕರೂಪದ ಒಂದು ಸರ್ಕಾರದ ಕಾಯ್ದೆಯನ್ನು ಜಾರಿಗೊಳಿಸುವ ಅಗತ್ಯತೆ ಕಂಡು ಬಂದಿತು. ಕೇಂದ್ರ ಸರ್ಕಾರವೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಏಕ ರೂಪವಾದ ಸ್ಥಳೀಯ ಸರ್ಕಾದ ವ್ಯವಸ್ಥೆಯನ್ನು ಜಾರಿ ಗೊಳಿಸುವ ಉದ್ದೇಶ ಹೊಂದಿತ್ತು. ಆ ಕಾರಣಕ್ಕಾಗಿಯೇ ಕೇಂದ್ರ ಸರ್ಕಾರವು ಬಲವಂತರಾಯ್ ಮೆಸ್ತ ಸಮಿತಿಯನ್ನು ನೇಮಿಸಿತು.

'' 1956ರಿಂದ 1956-60ರವರೆಗೆ ಬೆಳಗಾವಿ, ಬಿಜಾಪುರ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾ ಬೋರ್ಡುಗಳು ಚುನಾಯಿತ ಅಧ್ಯಕ್ಷರ ಅಧೀನದಲ್ಲೂ, ಉಳಿದ ಜಿಲ್ಲೆಗಳಲ್ಲಿ ವಿಶೇಷಾಧಿಕಾರಿಗಳ ಅಥವಾ ಜಿಲ್ಲಾಧಿಕಾರಿಗಳ ಅಧೀನದಲ್ಲಿದ್ದವು. 1954-55ರಲ್ಲಿ ಗ್ರಾಮ ಪಂಚಾಯತಿಗಳಿಗೆ ಚುನಾವಣೆ ನಡೆದವು. 1956ರಲ್ಲಿ 12,500 ಗ್ರಾಮ ಪಂಚಾಯಿತಿಗಳು ಮೈಸೂರು ರಾಜ್ಯದಲ್ಲಿದ್ದವು. 1959ರಲ್ಲಿ ಇವುಗಳ ಸಂಖ್ಯೆ 15,000ಕ್ಕೆ ಏರಿತು. ಹಾಗೆಯೇ ನವ ಮೈಸೂರು ರಾಜ್ಯದ ಕೆಲವೆಡೆ ಪಂಚಾಯಿತಿಗಳು ಅಸ್ತಿತ್ವದಲ್ಲಿರಲಿಲ್ಲ. 1956-57ರಲ್ಲಿ ಗುಲ್ಬರ್ಗಾ ವಿಭಾಗದ 3,238 ಗ್ರಾಮಗಳ ಪೈಕಿ 600 ಗ್ರಾಮಗಳಲ್ಲಿ ಮಾತ್ರ ಇದ್ದವು. ಮತ್ತು ಅವುಗಳು ಪ್ರಾರಂಭಿಕ ಹಂತದಲ್ಲಿದ್ದವು. ಬೆಳಗಾವಿ ವಿಭಾಗದಲ್ಲಿ 1953ರ ಬಾಂಬೆ ಗ್ರಾಮ ಪಂಚಾಯತ್ ಕಾಯ್ದೆ ಅನ್ವಯ ನ್ಯಾಯ ಪಂಚಾಯತ್‌ಗಳು ಅಸ್ಥಿತ್ವದಲ್ಲಿದ್ದವು. ಈ ನ್ಯಾಯ ಪಂಚಾಯತ್‌ಗಳನ್ನು ಗ್ರಾಮ ಪಂಚಾಯತ್‌ಗಳ ಪ್ರಥಮ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತಿತ್ತು. ಚಂದ್ರಶೇಖರಯ್ಯ ಸಮಿತಿಯು ಕೇಂದ್ರದ ಮೆಹತ ಸಮಿತಿಗಿಂತ ಮುಂಚಿತವಾಗಿ ನೇಮಕಗೊಂಡರೂ, ಮೆಹತ ಸಮಿತಿಯ ಹೆಚ್ಚಿನ ಲಕ್ಷಣಗಳನ್ನು ಒಳಗೊಂಡಿತ್ತು. ಹೀಗೆ ಚಂದ್ರಶೇಖರಯ್ಯ ಸಮಿತಿ 1956ರಲ್ಲಿ ನಡೆದ ರಾಜ್ಯ ಪುನರರ್ವಿಂಗಡಣೆ ಮತ್ತು ಬಲವಂತ ರಾಯ್ ಮೆಹತ ಸಮಿತಿ ಇವೆಲ್ಲಾ ನವ ಮೈಸೂರು ರಾಜ್ಯದಲ್ಲಿ ಗ್ರಾಮೀಣ ಸ್ಥಳೀಯ ಸರ್ಕಾರ ವ್ಯವಸ್ಥೆಗೆ ಒಂದು ಉತ್ತಮ ಬುನಾದಿಯನ್ನು ಹಾಕಿದವು''.(ಟಿ. ಆರ್. ಚಂದ್ರಶೇಖರ್, 2000, ಪು.35-36) ಹೀಗೆ 1923ರಿಂದ ಸ್ಥಳೀಯ ಪ್ರದೇಶಾಭಿವೃದ್ಧಿಗೆ ನಾಲ್ಕು ಪ್ರದೇಶಗಳಲ್ಲಿ ಪ್ರತ್ಯೇಕವಾದ ಸ್ಥಳೀಯ ಸರ್ಕಾರ ಕಾಯ್ದೆಗಳು ಜಾರಿಗೊಂಡಿದ್ದು, ಅಧಿಕಾರವನ್ನು

ವಿಕೇಂದ್ರೀಕರಣಗೊಳಿಸಲು ಯತ್ನಿಸಿದವು. 1956ರ ಬಲವಂತರಾಯ್ ಮೆಹ್ತಾ ಸಮಿತಿ ಮಾತ್ರ ಮೈಸೂರು ರಾಜ್ಯದಲ್ಲಿ ಸ್ಥಳೀಯ ಸರ್ಕಾರಕ್ಕೆ ಉತ್ತಮ ಬುನಾದಿಯನ್ನು ಹಾಕಿತು. 1960ರಲ್ಲಿ ಗ್ರಾಮ ಪಂಚಾಯತಿ, ತಾಲುಕು ಅಭಿವೃದ್ಧಿ ಬೋರ್ಡ್ ಮತ್ತು ಜಿಲ್ಲಾ ಅಭಿವೃದ್ಧಿ ಪರಿಷತ್‌ಗಳೆಂದು ಮೂರು ಸ್ತರಗಳಿದ್ದವು. 1962ರಲ್ಲಿ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಕೊಂಡಜ್ಜಿ ಬಸಪ್ಪನವರ ನೇತೃತ್ವದಲ್ಲಿ ಸಮಿತಿ ರಚನೆಯಾಯಿತು. 1964 ರಲ್ಲಿ ಮೈಸೂರು ಪಂಚಾಯತ್ ರಾಜ್ ಮಸೂದೆಯನ್ನು ರೂಪಿಸಲಾಯಿತು. ಅದು ಅನುಷ್ಠಾನಗೊಳ್ಳಲಿಲ್ಲ. 1959 ರ ಕಾಯ್ದೆಗೆ ತಿದ್ದುಪಡಿ ತಂದು ಬದಲಾವಣೆಗಳನ್ನು ಮಾಡಲಾಯಿತು.

ನಂತರವೇ ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರಿಕರಣದ ಹೊಸ ಆಯಾಮ ಸೃಷ್ಟಿಯಾಯಿತು. 1983ರಲ್ಲಿ ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲೂಕು ಪಂಚಾಯತ್ ಸಮಿತಿಗಳು, ಮಂಡಲ್‌ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತ್‌ಗಳ ಕಾಯ್ದೆಯು 1987ರಲ್ಲಿ ಜಾರಿಗೆ ಬಂದಿತು. ಈ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಿಗೆ ಚುನಾಯಿತ ಸದಸ್ಯರು ಇದ್ದರೆ, ತಾಲೂಕು ಪಂಚಾಯತ್ ಸಮಿತಿಯು ನಾಮ ನಿರ್ದೇಶಿತ ಸಂಸ್ಥೆಯಾಗಿತ್ತು. 1992 ರಲ್ಲಿ ಸಂವಿಧಾನಾತ್ಮಕ 73 ನೇ ತಿದ್ದುಪಡಿ ಆಧಾರದ ಮೇಲೆ 1993 ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯು ಜಾರಿಗೆ ಬಂದಿತು.

ಜಿಲ್ಲಾ ಪರಿಷತ್ ಮತ್ತು ಜಿಲ್ಲಾ ಪಂಚಾಯತ್‌ಗಳು ಶಿಕ್ಷಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕಾಯ್ದೆಗಳಲ್ಲಿ ರೂಪಿಸಿದವು. ಅವುಗಳನ್ನು ಗಮನಿಸೋಣ:-

ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದಲ್ಲಿ ಅಭಿವೃದ್ಧಿಪರ ಯೋಚನೆಗಳು ಮತ್ತು ಯೋಜನೆಗಳು ರೂಪಿತಗೊಳ್ಳುತ್ತ ಬಂದಿವೆ. ಸ್ವಾತಂತ್ರ್ಯನಂತರವೂ ವಿವಿಧ ರಾಜ್ಯಗಳು ವಿಕೇಂದ್ರೀಕರಣದ ಸುಳಿವು ನೀಡಿದರೂ ದೇಶದಲ್ಲೇ ಪ್ರಪ್ರಥಮವಾಗಿ ಕರ್ನಾಟಕರಾಜ್ಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿದ ಹೆಗ್ಗಳಿಕೆಗೆ ಪಾತ್ರವಾಯಿತು.

ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವ ನಿಟ್ಟಿನಲ್ಲಿ ''ಪಂಚಾಯತ್ ರಾಜ್'' ಕಾಯ್ದೆಯನ್ನು 1985ರ ಕರ್ನಾಟಕ ಕಾಯ್ದೆ ನಂ. 20 ಎಂದು ಹೆಸರಿಸಲಾಗಿದೆ. ಈ ಕಾಯ್ದೆಯನ್ನು 15 ಅಧ್ಯಾಯಗಳಲ್ಲಿ ವಿಭಾಗಿಸಲಾಗಿದೆ. ಬಟ್ಟು ಅಡಕವಾದ ಕಲಮುಗಳ ಸಂಖ್ಯೆ 319. ಇವುಗಳಿಗೆ 5 ಪರಿಶಿಷ್ಟಗಳನ್ನು ಜೋಡಿಸಲಾಗಿದೆ.

ಈ ಕಾಯ್ದೆಯಲ್ಲಿ ಅಂತಿಮ ಅಧಿಕಾರ ಸರಕಾರದ್ದೇ. ಅದರ ಕೆಳಗೆ ನಾಲ್ಕು ಮಜಲುಗಳಿವೆ : (1) ಜಿಲ್ಲಾ ಪರಿಷತ್ತು (2) ತಾಲೂಕು ಪಂಚಾಯಿತಿ (3) ಮಂಡಲ ಪಂಚಾಯಿತಿ ಮತ್ತು (4) ಗ್ರಾಮ ಸಭೆ. ಇವುಗಳಲ್ಲದೆ ನ್ಯಾಯ ಪಂಚಾಯಿತಿ ಪ್ರತ್ಯೇಕವಾಗಿದೆ. 319 ಕಲಮುಗಳಲ್ಲಿ ಗ್ರಾಮಸಭೆಗೆ ಒಂದೇ ಒಂದು

ಕಲಮು. ತಾಲೂಕು ಪಂಚಾಯಿತ ಸಮಿತಿಗೆ ಮೂರೇ ಕಲಮುಗಳು, ಜಿಲ್ಲಾ ಪರಿಷತ್ತು ಈ ಕಾಯ್ದೆಯ ಜೀವನಾಡಿ ಆದಾಗ್ಯೂ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಮಂಡಲ ಪಂಚಾಯಿತಿಗೆ ಸಾಕಷ್ಟು ಅಧಿಕಾರ ಮತ್ತು ಕಾರ್ಯ ವ್ಯಾಪ್ತಿಗಳಿವೆ. ಇವುಗಳ ನಡುವಿನ ತಾಲೂಕು ಪಂಚಾಯಿತಿ ಸಮಿತಿಗೆ ಕೇವಲ ಮೇಲ್ವಿಚಾರಕ ಹಾಗೂ ಕೆಲವು ಮಾರ್ಗದರ್ಶಕ ಕಾರ್ಯಗಳಿವೆ. ಗ್ರಾಮ ಮಟ್ಟದಲ್ಲಿ 'ಗ್ರಾಮಸಭೆ' ಸೇರಿ ತಮ್ಮ ಗ್ರಾಮಕ್ಕೆ ಬೇಕಾದ ವ್ಯವಸ್ಥೆ ಹಾಗೂ ಯೋಜನೆಗಳನ್ನು ಕುರಿತು ಅಭಿಪ್ರಾಯ ನೀಡುವರು. ಅವುಗಳಿಗೆ ತಕ್ಕ ಮನ್ನಣೆಕೊಡುವುದು ಮಂಡಲ ಪಂಚಾಯಿತಿಯ ಹೊಣೆಯಾಗಿದ್ದಿತು.

ಈ ಕಾಯ್ದೆಯ 319ಒಟ್ಟು ಕಲಮುಗಳಲ್ಲಿ ನೇರವಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಕಲಮುಗಳನ್ನು ಗಮನಿಸಬಹುದು.

(1) ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿ ಕಲವು 177ರಲ್ಲಿ ಪರಿಷತ್ತು ಒಟ್ಟು 9 ಸ್ಥಾಯಿ ಸಮಿತಿಗಳನ್ನು ನಿರ್ಮಿಸಬೇಕು. ಇವುಗಳಲ್ಲಿ ಸ್ಥಾಯಿ ಶಿಕ್ಷಣ-ಸಮೀತಿಯು ಒಂದು. ಇದರಲ್ಲಿ ಸದಸ್ಯರ ಸಂಖ್ಯೆ 6. ಈ ಸದಸ್ಯರಯ ತಮ್ಮ ಸಮಿತಿಯ ಚೇರ್‌ಮನ್‌ರನ್ನು ಆಯ್ಕೆ ಮಾಡುತ್ತಾರೆ. ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯು ಪ್ರತಿಯೊಂದು ಸ್ಥಾಯಿ ಸಮಿತಿಯ ಕಾರ್ಯದರ್ಶಿಯಾಗಿರುತ್ತಾರೆ.

(2) ಕಲಮು 178 ಮುಖ್ಯವಾದುದು. ಇದರಲ್ಲಿ ಶಿಕ್ಷಣ ಸಮೀತಿಯ ಕಾರ್ಯಗಳನ್ನು ವಿವರಿಸಲಾಗಿದೆ. ಅವು ಈ ಕೆಳಗಿನಂತಿವೆ:

 (ಅ) ಜಿಲ್ಲಾ ಪರಿಷತ್ತಿನ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆ (ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ, ವಯಸ್ಕರ ಶಿಕ್ಷಣ).

 (ಬ) ರಾಷ್ಟ್ರೀಯ ಧೋರಣೆಯ ವಾಸ್ತು, ರಾಷ್ಟ್ರ ಮಟ್ಟದ ಹಾಗೂ ರಾಜ್ಯ ಮಟ್ಟದ ಯೋಜನೆಗಳ ಚೌಕಟ್ಟಿನಲ್ಲಿ ಜಿಲ್ಲೆಯ ಶಿಕ್ಷಣ ಯೋಜನೆಗಳನ್ನು ಕೈಗೊಳ್ಳುವುದು.

 (ಕ) ಜಿಲ್ಲಾ ಪರಿಷತ್ತಿನ ಕಕ್ಷೆಯಲ್ಲಿನಡೆಯುವ ಶೈಕ್ಷಣಿಕ ಚಟುವಟಿಕೆಗಳ ಸಮೀಕ್ಷೆ ನಡೆಸುವುದು ಮತ್ತು ಅವುಗಳ ಮೌಲ್ಯಮಾಪನ ಮಾಡುವುದು.

 (ಡ) ಜಿಲ್ಲೆಯಲ್ಲಿ ಪರಿಷತ್ತು ನಿರ್ಧರಿಸಿದಂತೆ ವಯಸ್ಕರ ಸಾಕ್ಷರತೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ಇತರೆ ಕರ್ತವ್ಯಗಳು.

ಅಧ್ಯಾಯ 9 ರಲ್ಲಿ ಕಲಮು 182 ರಡಿ ಜಿಲ್ಲಾ ಪರಿಷತ್ತಿನ ಕರ್ತವ್ಯಗಳನ್ನು ನಮೂದಿಸಿದೆ. ಆ 15 ಕರ್ತವ್ಯಗಳಲ್ಲಿ 11ನೇಯದು ಶಿಕ್ಷಣ ಮತ್ತು ಸಾಮಾಜಿಕ ಶಿಕ್ಷಣ ಇಲ್ಲಿ 6 ಉಪ ಕರ್ತವ್ಯಗಳಿವೆ. ಅವು ಯಾವುವೆಂದರೆ:

(ಅ) ಇತರೆ ಸಂಸ್ಥೆಗಳು ಕೈಗೊಂಡ ವಯಸ್ಕರ ಸಾಕ್ಷರತಾ ಯೋಜನೆಗಳನ್ನುಮಂಡಲ ಪಂಚಾಯಿತಿಗಳ ಸಹಕಾರದಿಂದ ಕಾರ್ಯಗತಗೊಳಿಸುವುದು.

(ಬ) ಶೈಕ್ಷಣಿಕ ಚಟುವಟಿಕೆಗಳ ಸಮೀಕ್ಷೆ ಹಾಗೂ ಮೌಲ್ಯಮಾಪನ.

(ಕ) ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಸ್ಥಾಪನೆ ಹಾಗೂ ನಡೆಸಿಕೊಂಡು ಹೋಗುವುದು, ಇವುಗಳನ್ನೊಳಗೊಂಡ ಯಾವುದೇ ಶೈಕ್ಷಣಿಕ ಚಟುವಟಿಕೆಗಳ ಉತ್ತೇಜನ ಹಾಗೂ ಸಹಾಯ ನೀಡುವುದು ಮತ್ತು ಮಾರ್ಗದರ್ಶನ ಮಾಡುವುದು.

(ಡ) ಸರ್ವ ಮುಕ್ತ ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆಗಳು ಮತ್ತು ಅನಾಥಾಲಯಗಳು ಇವುಗಳನ್ನು ಸ್ಥಾಪಿಸಿ ನಡೆಸುವುದು.

ಈ ಮೇಲೆ ವಿವರಿಸಿದ ಕಲಮುಗಳು ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಿವೆ.

1985ರ ಕಾಯ್ದೆಯನ್ನು ಪುನರ್ರಚಿಸಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲು ಸರ್ಕಾವು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಸಂವಿಧಾನದ ತಿದ್ದುಪಡಿ 73ರಂತೆ ರಾಜ್ಯದಲ್ಲಿ ಕರ್ನಾಟಕ ಪಂಚಯತ್ ರಾಜ್ ಅಧಿನಿಯಮವು 1993 ದಿನಾಂಕ 10-15-1993ರಿಂದ ಜಾರಿಗೊಳಿಸಲಾಯಿತು. ಈ ಹಿಂದೆ ತಿಳಿಸಿದಂತೆ ಸದ್ರಿ ನಿಯಮದ ಪ್ರಕಾರ ರಾಜ್ಯಾದ್ಯಂತ ಮೂರು ಹಂತದ ಪಂಚಯತ್ ರಾಜ್ ವ್ಯವಸ್ಥೆ ಜಾರಿಗೆಬಂದಿರುತ್ತದೆ. ನಾಡಿನ ಪ್ರತಿಯೊಬ್ಬ ಪ್ರಜೆಯೂ ದೇಶದ ಅಭಿವೃದ್ಧಿ ಮತ್ತು ಆಡಳಿತದಲ್ಲಿ ಭಾಗಿಯಾಗುವ ಅವಕಾಶ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಲ್ಪಿಸಲಾಗಿದೆ. ಯೋಜನೆಗಳು ಸ್ಥಳೀಯ ಜನರ ಬೇಡಿಕೆ ಹಾಗೂ ಸಂಪನ್ಮೂಲಗಳ ಲಭ್ಯತೆ ಇವುಗಳ ಆಧಾರದ ಮೇಲೆ ರೂಪುಗೊಳ್ಳಬೇಕು. ಒಟ್ಟಾರೆ ಗ್ರಾಮೀಣ ಜನರ ಆರ್ಥಿಕ ಹಾಗೂ ಸಾಮಾಜಿಕ ಮಟ್ಟದಲ್ಲಿ ಸುಧಾರಣೆ ತರುವುದು ಯೋಜನೆಗಳ ಗುರಿಯಾಗಿರಬೇಕು. ಅಧಿಕಾರದ ವಿಕೇಂದ್ರೀಕರಣದ ಜೊತೆಗೆ ಯೋಜನೆಗಳನ್ನು ಸಹ ಮೂರು ಹಂತಗಳಲ್ಲಿ ಅನುಷ್ಠಾನ ಗೊಳಿಸಲು ಜಾರಿಗೆ ಬಂದಿರುತ್ತದೆ. ಎಲ್ಲಾ ಯೋಜನೆಗಳನ್ನು ಮೂರು ಭಾಗಗಳಾಗಿ ವರ್ಗೀಕರಣ ಮಾಡಿ, ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಕೆಳ ಮಟ್ಟದಿಂದ ಯೋಜನೆಗಳನ್ನು ರೂಪಿಸುವುದರಿಂದ ಜನರನ್ನು ಇದರಲ್ಲಿ ತೊಡಗಿಸುವುದು ಸುಲಭವಾಗಿರುತ್ತದೆ. ಅಲ್ಲದೆ, ಜನರು ತಮ್ಮ ಕ್ಷೇತ್ರಗಳಿಗೆ ಬೇಕಾಗಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅವರೇ ರೂಪಿಸುವುದರಿಂದ ಅಭಿವೃದ್ಧಿ ಕಾರ್ಯ ಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ.

ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯಿತಿ-ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸುವುದು ಈ ಪಂಚಾಯ್ತಿ ವ್ಯವಸ್ಥೆಯ ಒಟ್ಟು ಜವಾಬ್ದಾರಿ ಆಗಿರುತ್ತದೆ. ಅದರಲ್ಲಿ ಮುಖ್ಯವಾಗಿ ಗ್ರಾಮ ಪಂಚಾಯಿತಿಯ ಸೌಕರ್ಯ ಸಮಿತಿ ಶಿಕ್ಷಣದ ಉಸ್ತುವಾರಿಯನ್ನು ನಿರ್ವಹಿಸುವುದು.

3.4. ಸೂಕ್ಷ್ಮ ಯೋಜನೆ :

ಪ್ರಾಂತಮಟ್ಟದಿಂದ ಪಂಚಾಯಿತಿ ಮಟ್ಟದವರೆಗಿನ ಯೋಜನೆಗಳು ಒಂದಿಲ್ಲ ಒಂದು ರೀತಿಯಲ್ಲಿ ಶೈಕ್ಷಣಿಕ ಅಭಿವೃದ್ಧಿಪರ ಯೋಜಿಸುವಂತ ಕಾರ್ಯಕ್ರಮಗಳನ್ನು ರೂಪಿಸುತ್ತವೆ. ಅವುಗಳ ಅನುಷ್ಠಾನದಲ್ಲಿ ಆಗುವಂತಹ ಕಾಲ ವಿಳಂಬಕ್ಕೆ ತಕ್ಷಣ ಪರಿಹಾರ ಸಿಗುವುದು ಕಷ್ಟ. ಕಾರಣ ಜಿಲ್ಲಾ ಮಟ್ಟದಿಂದ ತಾಲೂಕು ಮಟ್ಟ ತಾಲೂಕು ಮಟ್ಟದಿಂದ ಗ್ರಾಮ ಪಂಚಾಯಿತಿ ಮಟ್ಟದ ವರೆಗಿನ ವಿಕೇಂದ್ರೀಕರಣದ ವ್ಯವಸ್ಥೆ ಸ್ತುತ್ಯಾರ್ಹವಾಗಿದ್ದರೂ ಜನಪರ ಮತ್ತು ಜನಮುಖಿ ಅಭಿವೃದ್ಧಿಯತ್ತ ತಕ್ಷಣ ಸ್ಪಂದಿಸುವಂತಹ ಯೋಜನೆಗಳು ಆಗಬೇಕಾಗಿದೆ. ತಕ್ಷಣದ ಯೋಜನೆಗಳು ಮತ್ತು ಗ್ರಾಮ ಮಟ್ಟದ ಯೋಜನೆಗಳು ರೂಪುಗೊಳ್ಳಬೇಕು. ಗ್ರಾಮದ ಯಾವುದೇ ಸಮಸ್ಯೆಯ ಜೊತೆಗೆ ಸಾಮಾಜಿಕ, ಆರ್ಥಿಕಾಭಿವೃದ್ಧಿಯ ಅನುಸರಣೆಯಲ್ಲಿ ಆಗುವ ವಿಳಂಬಕ್ಕೆ ಗ್ರಾಮಸ್ಥರೇ ಪರಿಹಾರ ಕಂಡುಕೊಳ್ಳಬೇಕು. ಶೈಕ್ಷಣಿಕ ಸಮಸ್ಯೆಗಳಿಗೆ ಅವರೇ ಪರಿಹಾರ ಹುಡುಕಿಕೊಳ್ಳಬೇಕು. ಅಂತಹ ಪರಿಹಾರಗಳಿಗೆ ಪ್ರತಿ ಜನ ವಸತಿ ಪ್ರದೇಶಗಳಲ್ಲಿ 'ಸೂಕ್ಷ್ಮ ಯೋಜನೆ' ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಈ ಯೋಜನೆಯು ವಿಕೇಂದ್ರೀಕೃತ ಯೋಜನೆಗಿಂತಲೂ ಭಿನ್ನವಾಗಿ ಜನರ ಮೂಸೆಯಿಂದಲೇ ರೂಪಗೊಳ್ಳುವಂತಹದು. ಸಮುದಾಯವೇ ಭಾಗವಹಿಸುವಂತಹ ಕಾರ್ಯಕ್ರಮಗಳು ಗ್ರಾಮಮಟ್ಟದಲ್ಲಿ ಆಗಬೇಕು. ಸಮುದಾಯವನ್ನು ತೊಡಗಿಸಿಕೊಂಡು ಅಭಿವೃದ್ಧಿ ಮಾಡುವಂತಹ ಕಾರ್ಯಕ್ರಮಗಳಲ್ಲಿ ಸೂಕ್ಷ್ಮ ಯೋಜನೆಯೂ ಒಂದು. ಅಂತಹ ಸೂಕ್ಷ್ಮ ಯೋಜನೆ ಕಾರ್ಯಕ್ರಮ ಕುರಿತು ಮುಂದೆ ವಿವರ ನೀಡಲಾಗಿದೆ.

ಜನವಸತಿ ಪ್ರದೇಶಗಳಲ್ಲಿ ರೂಪುಗೊಳ್ಳುವ ಯೋಜನೆಗಳು ಆಯಾ ಪ್ರದೇಶಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ತಕ್ಕಂತೆ ರೂಪುಗೊಳ್ಳುತ್ತವೆ. ಶೈಕ್ಷಣಿಕ ಯೋಜನೆಗಳು ಗ್ರಾಮ ಮಟ್ಟದಲ್ಲಿ ಅತ್ಯಂತ ಕೆಳಸ್ತರದಲ್ಲಿ ಯೋಜಿಸುವಂತಹವು. ಅಂದರೆ, ಜನರ ಭಾಗಿತ್ವವನ್ನು ಒಳಗೊಂಡು ಸಿದ್ಧಗೊಳ್ಳುತ್ತವೆ. ''ಒಂದು ದೇಶದ ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಆ ದೇಶದ ರಾಜಕೀಯ ಮತ್ತು ಆರ್ಥಿಕ ವಾಸ್ತವಗಳನ್ನು ಗೌರವಿಸುತ್ತಾ, ಶಿಕ್ಷಣ ವ್ಯವಸ್ಥೆಯ ನೀತಿ ನಿರ್ಧಾರ ಮಾಡುವ , ಆದ್ಯತೆಗಳನ್ನು ಗುರುತಿಸುವ ಮತ್ತು ವೆಚ್ಚವನ್ನು ನಿಗದಿ ಮಾಡುವ ದೂರದರ್ಶಿತ್ವವೇ ಶೈಕ್ಷಣಿಕ ಯೋಜನೆ''(ಮಹಬಲೇಶ್ವರ ರಾವ್, 1999, ಪು.41).

''ಯೋಜನೆಯನ್ನು ಸಿದ್ಧಗೊಳಿಸುವಾಗ ವಿದ್ಯಾರ್ಥಿಗಳ ಮತ್ತು ಸ್ಥಳೀಯರ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಆಗ ಮಾತ್ರ ಪರಿಣಾಮಕಾರಿ ಶೈಕ್ಷಣಿಕ ಯೋಜನೆ ರೂಪಿತವಾಗುತ್ತದೆ ಎಂಬ ಶಿಕ್ಷಣ ತಜ್ಞರ ಹೇಳಿಕೆ ಉತ್ತಮ ಯೋಜನೆಯ ಸಿದ್ಧತೆಗೆ ಪೂರಕವಾಗಿದೆ'' (ಎನ್.ವಿ.ವರ್ಗೀಸ್, ಪು.3).

"ಜನರು ಭಾಗವಹಿಸುವ ಮೂಲಕ ರೂಪಿಸುವ ಯೋಜನೆ ಸೂಕ್ಷ್ಮ ಯೋಜನೆ. ಜನಪ್ರತಿನಿಧಿಗಳು ಶಿಕ್ಷಕರು, ಆಸಕ್ತಿ ಹಿರಿಯರು, ಯುವಕರನ್ನು ಒಳಗೊಂಡ ಒಂದು ತಂಡ ರಚನೆಯಾಗುತ್ತದೆ. ಸೂಕ್ಷ್ಮ ಯೋಜನೆಯು ಶಾಲೆ ಬಿಟ್ಟ ಮಕ್ಕಳ ಸಮಸ್ಯೆಯನ್ನು ಗುರುತಿಸಿ, ಅವರನ್ನು ಶಾಲೆಗೆ ಕರೆತರುವ ಪ್ರಯತ್ನ ಮಾಡುತ್ತದೆ(ಎನ್.ವಿ. ವರ್ಗೀಸ್,ಪು.4).

ಪ್ರಾಥಮಿಕ ಶಿಕ್ಷಣ ಅತ್ಯಂತ ಪ್ರಮುಖವೆಂದು ಪರಿಗಣಿಸಲಾಗಿದ್ದರೂ, ನಮ್ಮ ದೇಶದ ಶಿಕ್ಷಣ ರಂಗದಲ್ಲಿ ನಿರೀಕ್ಷಿಸಿದ ಪ್ರಗತಿಯನ್ನು ಇನ್ನೂ ಸಾಧಿಸಬೇಕಾಗಿದೆ. ಅನೇಕ ಶಾಲೆಗಳಲ್ಲಿಸಾಕಷ್ಟು ಶಿಕ್ಷಕರು, ಪಾಠೋಪಕರಣ, ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಕರ್ಯಗಳ ಕೊರತೆಯನ್ನು ನೀಗಿಸಬೇಕಾಗಿದೆ. ಆಯಾ ಗ್ರಾಮದ ಶೈಕ್ಷಣಿಕ ಸಮಸ್ಯೆಗಳನ್ನು ಅರಿಯಲು ಮಕ್ಕಳು ಶಾಲೆ ಬಿಡುವ ಪರಿಸ್ಥಿತಿ,ಹಾಜರಾತಿ ಕೊರತೆ ನೀಗಿಸುವುದು ಮತ್ತು ಮಕ್ಕಳು ಶಾಲೆಯಲ್ಲಿ ಉಳಿಯುವಂತೆ ಮಾಡುವುದು. ಮೊದಲಾದ ವಿಷಯಗಳನ್ನು ಅರ್ಥಮಾಡಿಕೊಂಡು ಗ್ರಾಮ ಶಿಕ್ಷಣ ಯೋಜನೆ ತಯಾರಿಸಲು ಸೂಕ್ಷ್ಮಯೋಜನೆಯು ಗ್ರಾಮದ ಶಿಕ್ಷಣ ಕ್ಕಿರುವ ಅಡೆತಡೆಗಳಿಗೆ ಪರಿಹಾರ ಕಂಡು ಹಿಡಿಯಲು ಗ್ರಾಮದ ಜನರನ್ನು ಸಂಘಟಿಸುವ ಪ್ರಕ್ರಿಯೆಯಾಗಿದೆ.

3.4.1. ಪ್ರಕ್ರಿಯೆಯ ಉದ್ದೇಶಗಳು :

- ಸೂಕ್ಷ್ಮ ಯೋಜನೆಯು ಜನರು ಗ್ರಾಮ ಮಟ್ಟದಲ್ಲಿ ಶೈಕ್ಷಣಿಕ ಯೋಜನೆಯನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಸದ್ರಿ ಗ್ರಾಮಕ್ಕೆ ತಕ್ಕ ಶೈಕ್ಷಣಿಕ ಅಗತ್ಯಗಳ ಆಧಾರದ ಮೇಲೆ ರೂಪಿಸುವ ಒಂದು ಯೋಜನೆಯಾಗಿರುತ್ತದೆ. ಆದ್ದರಿಂದ ಶಿಕ್ಷಣದ ಬಗ್ಗೆ ಜನಜಾಗೃತಿ ಮೂಡಿಸುವ ಉದ್ದೇಶ ಮತ್ತು ಜನರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುವ ಚಟುವಟಿಕೆಗಳು ಸಹ ಈ ಪ್ರಕ್ರಿಯೆಯಲ್ಲಿ ಹಮ್ಮಿಕೊಂಡಿರುವುದರಿಂದ ಶಿಕ್ಷಣದ ಬಗ್ಗೆ ಅರಿವು ಮತ್ತು ಜನ ಜಾಗೃತಿಯನ್ನು ಮೂಡಿಸುವ ಉದ್ದೇಶವನ್ನೊಳಗೊಂಡಿರುತ್ತದೆ.
- ಈ ಕಾರ್ಯಕ್ರಮದಡಿಯಲ್ಲಿ ಜನರು ಭಾಗವಹಿಸಿ ಯೋಜನೆ ರೂಪಿಸುವುದರಿಂದ ಸ್ಥಳೀಯ ಸ್ಥಿತಿಗತಿ ಗಳಿಗನುಗುಣವಾಗಿರುವ, 6ರಿಂದ 14ವರ್ಷದ ವಯೋಮಿತಿಯಲ್ಲಿರುವ ಎಲ್ಲಾ ಮಕ್ಕಳನ್ನು ಶಿಕ್ಷಣ ವ್ಯಾಪ್ತಿಗೆ ತರುವುದು ಮತ್ತೊಂದು ಉದ್ದೇಶ.
- ಉತ್ತಮ ಗುಣಮಟ್ಟದ ಶಿಕ್ಷಣ ಕೊಡುವುದು ಶಿಕ್ಷಣ ರಂಗದಲ್ಲಿ ಒಂದು ಪ್ರಮುಖ ಉದ್ದೇಶವಾಗಿ ರುತ್ತದೆ. ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಬೇಕಾದ ಕಾರ್ಯತಂತ್ರಗಳ ರೂಪಣೆಯಲ್ಲಿ, ಶಿಕ್ಷಣ ಇಲಾಖೆಯ ನೆರವಿನಿಂದ, ಸಮುದಾಯವು ಇಂತಹ ಪ್ರಕ್ರಿಯೆಗಳನ್ನು ಹೊರತರಲು ಪ್ರಯತ್ನಿಸುವುದಕ್ಕೆ ಸೂಕ್ಷ್ಮ ಯೋಜನೆ ಕಾರ್ಯಕ್ರಮ ಒಂದು ಬುನಾದಿಯಾಗಿರುತ್ತದೆ.
- ಗ್ರಾಮದ ಶೈಕ್ಷಣಿಕ ಅವಶ್ಯಕತೆಗಳನ್ನು ಗುರುತಿಸುವ ಮೂಲಕ, ತಳಮಟ್ಟದಲ್ಲಿರುವ ಗ್ರಾಮ ಶಿಕ್ಷಣ ಸಮಿತಿಗಳು ಇಂತಹ ಯೋಜನೆಯಲ್ಲಿ ಭಾಗವಹಿಸುವುದರ ಮೂಲಕ ಅವುಗಳನ್ನು ಕ್ರಿಯಾಶೀಲಗೊಳಿ ಸುವುದು ಸಾಧ್ಯವಾಗುತ್ತದೆ.

- ಶಿಕ್ಷಣ ರಂಗದಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗ ಮತ್ತು ಮಹಿಳೆಯರು ಭಾಗವಹಿಸುವಿಕೆಗೆ ಸೂಕ್ಷ್ಮ ಯೋಜನೆಯು ಪೂರಕವಾಗಿರುತ್ತದೆ.

''ಮಕ್ಕಳು ಶಾಲೆಗೆ ಗೈರು ಹಾಜರಾಗಲು ಹಲವು ಕಾರಣಗಳಿವೆ : ಬಡತನ, ಆರ್ಥಿಕ ಮುಗ್ಗಟ್ಟು, ಮಕ್ಕಳನ್ನು ದುಡಿಯಲು ಕಳಿಸುವುದು, ಮೇಲಾಗಿ ಪೋಷಕರಲ್ಲಿರುವ ಅನಾಸಕ್ತಿ, ಶಾಲಾ ವಾತಾವರಣ ಆಕರ್ಷಕವಾಗಿಲ್ಲದಿರುವುದು, ಶಿಕ್ಷಕರ ಕೊರತೆ, ತರಗತಿಯಲ್ಲಿ ವಯಸ್ಸು ಹಾಗೂ ಕಲಿಕೆಯಲ್ಲಿನ ಅಂತರ, ಹರ್ಷದಾಯಕವಲ್ಲದ ಬೋಧನೆ, ಶಿಕ್ಷಕರಲ್ಲಿ ಅನ್ವೇಷಣಾ ಮನೋಭಾವದ ಕೊರತೆ, ಆರ್ಥಿಕ ಕಾರಣಗಳಿಂದಾಗಿ ಶೈಕ್ಷಣಿಕವಲ್ಲದ ವ್ಯವಸ್ಥಿತ ಮೇಲ್ವಿಚಾರಣೆಯ ಕೊರತೆ- ಮೇಲಾಧಿಕಾರಿಗಳಿಂದ ಅನಾದರ, ಅವರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಿ ಪ್ರೋತ್ಸಾಹ ನೀಡದಿರುವುದು ಈ ಕಾರಣದಿಂದ ಅವರು ಬೋಧನೆಯಲ್ಲಿ ಉತ್ಸಾಹ ಕಳೆದುಕೊಳ್ಳುವುದು. ಇವಲ್ಲದೆ ಸಮುದಾಯವು ಶೈಕ್ಷಣಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳದಿರುವುದು, ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ಸಹಕರಿಸದಿರುವುದು ಇವೆಲ್ಲ ಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಕಲಿಕೆಯ ಮೇಲೆ ಪರಿಣಾಮ ಬೀರುತ್ತವೆ. ಈ ಪರಿಣಾಮಕ್ಕೆ ತುತ್ತಾಗುವವರು ಬಡವರು, ಹಿಂದುಳಿದವರು, ವಿಶೇಷವಾಗಿ ಹೆಣ್ಣುಮಕ್ಕಳು'' ಎಂಬುದು ಹಲವಾರು ಶೈಕ್ಷಣಿಕ ಅಂಕಿ-ಅಂಶಗಳು ಮತ್ತು ಅಧ್ಯಯನದಿಂದ ತಿಳಿದುಬಂದಿದೆ (ಸೂಕ್ಷ್ಮ ಯೋಜನೆ ತರಬೇತಿ ಕೈಪಿಡಿ,1997,ಪು.3).

3.4.2. ಶೈಕ್ಷಣಿಕ ಅಭಿವೃದ್ಧಿಗಾಗಿ ಸೂಕ್ಷ್ಮ ಯೋಜನೆಯನ್ನು ಅಳವಡಿಸಿಕೊಳ್ಳುವ ವಿಧಾನ ಮತ್ತು ಪ್ರಕ್ರಿಯೆಯಲ್ಲಿ ಜನರು ಭಾಗವಹಿಸುವಿಕೆ :

ವಾತಾವರಣ ನಿರ್ಮಾಣ :

ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದರೆ, ತನ್ನದೇ ಆದ ವಾತಾವರಣವನ್ನು ನಿರ್ಮಾಣ ಮಾಡಬೇಕಾಗುತ್ತದೆ. ವಾತಾವರಣ ನಿರ್ಮಾಣವು ಜನರ ಭಾಗವಹಿಸುವಿಕೆಯನ್ನು ಹೆಚ್ಚುಗೊಳಿಸುವುದು. ಜನ ಜಾಗೃತಿ ಕಾರ್ಯಕ್ರಮಗಳು ಜನರ ಮಟ್ಟಕ್ಕೆ ಮುಟ್ಟಬೇಕಾದರೆ; ಪೂರ್ವ ತಯಾರಿ ಅಗತ್ಯವಾಗುತ್ತದೆ. ಅಂತಹ ತಯಾರಿಕೆಗೆ ವಾತಾವರಣ ನಿರ್ಮಾಣದ ಅಗತ್ಯವಿದೆ.

ವಾತಾವರಣ ನಿರ್ಮಾಣ ಕಾರ್ಯಕ್ರಮವು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವಾಗಿರುತ್ತದೆ. ಸಮುದಾಯವು ಇಂತಹ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಯಾವುದೇ ಗುರಿಯನ್ನು ಮುಟ್ಟಲು ಪೂರ್ವ ತಯಾರಿ ಅಗತ್ಯವಾಗಿರುತ್ತದೆ. ಪೂರ್ವ ಸಿದ್ಧತೆಯೇ ಜನರಲ್ಲಿ ವಾತಾವರಣ ನಿರ್ಮಾಣ ಮಾಡುವ ಕಾರ್ಯಕ್ರಮವಾಗಿರುತ್ತದೆ.

ವಾತಾವರಣ ನಿರ್ಮಾಣ ಚಟುವಟಿಕೆಗೆ ಕಾರಣ :

ಜನರು ಸೂಕ್ಷ್ಮ ಯೋಜನಾ ಕಾರ್ಯಕ್ರಮದಲ್ಲಿ ಹೆಚ್ಚು ಭಾಗವಹಿಸಬೇಕಾಗಿರುವುದರಿಂದ, ಎಲ್ಲಾ ಜನ ವರ್ಗದ ಸಮುದಾಯವನ್ನು ಒಟ್ಟು ಮಾಡಲು, ಪ್ರಾಥಮಿಕ ಶಿಕ್ಷಣ ಪ್ರಾಮುಖ್ಯತೆಯ ಅರಿವನ್ನು ಮೂಡಿಸಲು, ಈ ಕಾರ್ಯಕ್ರಮದ ಬಗ್ಗೆ ಜನರಲ್ಲಿ ನಂಬಿಕೆ ಹಾಗೂ ತಿಳುವಳಿಕೆ ಕುರಿತು ಜಾಗೃತಿ ಮೂಡಿಸಲು, ಸಾಮಾಜಿಕ ನಂಬಿಕೆಗಳು, ಮೌಲ್ಯಗಳ ಕುರಿತು ವಿಶ್ಲೇಷಣೆ ಮಾಡಲು. ಈ ಎಲ್ಲಾ ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಾತಾವರಣ ನಿರ್ಮಾಣದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಸೂಕ್ಷ್ಮ ಯೋಜನೆ ತಂಡವು ಗ್ರಾಮಕ್ಕೆ ಮುಂಚಿತವಾಗಿ ಭೇಟಿ ನೀಡುವುದು :

ಈ ತಂಡವು ಸೂಕ್ಷ್ಮ ಯೋಜನೆ ಕಾರ್ಯಕ್ರಮ ನಡೆಸಲು ನಿಗದಿಯಾದ ದಿನಕ್ಕಿಂತ ಮೊದಲೇ ಗ್ರಾಮಕ್ಕೆ ತೆರಳುತ್ತದೆ. ಕಾರಣ:-

ಪಂಚಾಯತಿ ಅಧ್ಯಕ್ಷರು, ಗ್ರಾಮ ಶಿಕ್ಷಣ ಸಮಿತಿ ಸದಸ್ಯರು, ಊರಿನ ಹಿರಿಯರು, ಯುವಕರು, ಸಂಘ-ಸಂಸ್ಥೆಗಳನ್ನು ಸಂಪರ್ಕಿಸಿ ಚರ್ಚಿಸುವ ಸಲುವಾಗಿ. ಗ್ರಾಮದಲ್ಲಿರುವ ಶಿಕ್ಷಕರು, ಶಾಲಾಮುಖ್ಯೋಪಾಧ್ಯಾಯರು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತರು, ಗ್ರಾಮ ಲೆಕ್ಕಾಧಿಕಾರಿ ಇವರೆಲ್ಲರನ್ನು ಸಂಪರ್ಕಿಸಿ ಗ್ರಾಮದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ಸಂಪನ್ಮೂಲ ವ್ಯಕ್ತಿಗಳ ತಂಡವು ಮುಂಚಿತವಾಗಿಯೇ ಗ್ರಾಮಕ್ಕೆ ಭೇಟಿ ನೀಡುತ್ತದೆ.

ಸೂಕ್ಷ್ಮ ಯೋಜನೆ ತಂಡವು ಗ್ರಾಮವನ್ನು ಪ್ರವೇಶಿಸಿದ ಮೇಲೆ ಗ್ರಾಮ ಶಿಕ್ಷಣ ಸಮಿತಿಯ ಸಭೆಯನ್ನು ನಡೆಸುವ ಸಲುವಾಗಿ ಸೂಕ್ಷ್ಮ ಯೋಜನೆಯ ಬಗ್ಗೆ ಪರಿಚಯಿಸಿ, ಅಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಗ್ರಾಮಸ್ಥರಿಗೆ ಮನವರಿಕೆ ಮಾಡಿಕೊಟ್ಟು, ಅವರು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತದೆ. ಮಕ್ಕಳೊಂದಿಗೆ ಆಟಗಳನ್ನು ಏರ್ಪಡಿಸಿ, ಜಾಥ, ಮೆರವಣಿಗೆ ಹಾಡು, ಬೀದಿ ನಾಟಕಗಳನ್ನು ಏರ್ಪಡಿಸಲಾಗುತ್ತದೆ. ಶಿಕ್ಷಕಿಯರು, ಅಂಗನವಾಡಿ ಕಾರ್ಯಕರ್ತೆಯರು, ಚುನಾಯಿತ ಮಹಿಳಾ ಸದಸ್ಯರ ಸಹಕಾರದೊಂದಿಗೆ ಮಹಿಳೆಯರ ಸಭೆಯನ್ನು ಏರ್ಪಡಿಸಲಾಗುತ್ತದೆ. ಹಳ್ಳಿಯಲ್ಲಿ ವಿಶೇಷವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿ, ಜನರನ್ನು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರಚೋದಿಸಲಾಗುತ್ತದೆ. ಗ್ರಾಮ ಶಿಕ್ಷಣ ಸಮಿತಿಯ ಸಭೆ ನಡೆಸಿ, ಸೂಕ್ಷ್ಮ ಯೋಜನೆಯ ಅವಶ್ಯಕತೆಯನ್ನು ತಿಳಿಸಿ, ಅವರಿಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಬಗ್ಗೆ ತಿಳುವಳಿಕೆಯನ್ನು ಮೂಡಿಸಲಾಗುತ್ತದೆ.

ಗ್ರಾಮದಲ್ಲಿ ಪರಿಣಾಮಕಾರಿ ವಾತಾವರಣವನ್ನುಂಟು ಮಾಡಲು ಸೂಕ್ಷ್ಮ ಯೋಜನಾ ತಂಡವು ಸ್ಥಳೀಯರ ಸಹಕಾರದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಇದರಲ್ಲಿ ಬೀದಿ ನಾಟಕ, ಹಾಡುಗಳು, ಸಾಮೂಹಿಕ ಆಟಗಳು, ಬಿತ್ತಿಪತ್ರ, ಕರಪತ್ರಗಳು, ಸಾಧ್ಯವಾದಲ್ಲಿ ತೊಗಲುಗೊಂಬೆ ಯಾಟ, ಮಕ್ಕಳ ಚಟುವಟಿಕೆ ಇತ್ಯಾದಿಯನ್ನು ರೂಪಿಸಲಾಗುತ್ತದೆ.

ವಾತಾವರಣ ನಿರ್ಮಾಣ ಮಾಡಲು ಬಹಳ ಮುಖ್ಯವಾಗಿ ಹಾಕಿಕೊಳ್ಳುವ ಕಾರ್ಯಕ್ರಮಗಳ ಬಗ್ಗೆ ಗ್ರಾಮದವರಿಗೆ ಮೊದಲೇ ತಿಳಿಸಲಾಗುತ್ತದೆ. ಈ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕಲಾವಿದರಿಗೆ ಮೊದಲೇ ತರಬೇತಿ ನೀಡಲಾಗಿರುತ್ತದೆ. ಜನರೊಡನೆ ಮುಕ್ತವಾಗಿ ಚರ್ಚಿಸಿದ ನಂತರವೇ ಪ್ರದರ್ಶನಕ್ಕೆ ಅನುಕೂಲವಾದ ಸ್ಥಳವನ್ನು ನಿಗದಿಪಡಿಸಲಾಗುತ್ತದೆ. ಪ್ರದರ್ಶನಗೊಳ್ಳುವ ಪ್ರತಿ ಕಾರ್ಯಕ್ರಮಗಳು ಜನರಿಗೆ ನೇರವಾಗಿ ಸಂದೇಶವನ್ನು ತಲುಪಿಸುವಂತಹವುಗಳಾಗಿರುತ್ತವೆ.

ವಾತಾವರಣ ನಿರ್ಮಾಣದಂತಹ ಕಾರ್ಯಕ್ರಮಗಳಲ್ಲಿ ನಾಟಕಗಳು, ಜನ ಜಾಗೃತಿ ಹಾಡುಗಳು ಪ್ರಮುಖ ಪಾತ್ರವಹಿಸುತ್ತವೆ. ನಾಟಕ ಮತ್ತು ಹಾಡುಗಳ ಪ್ರೇರಣೆಯಿಂದ ಜನರು ಸೂಕ್ಷ್ಮ ಯೋಜನಾ ಕಾರ್ಯಕ್ರಮದುದ್ದಕ್ಕೂ ನಿರಂತರವಾಗಿ ಭಾಗವಹಿಸಲು ಆಕರ್ಷಿತರಾಗುತ್ತಾರೆ. ಇದರಿಂದ ಜನರನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಲು ಅನುಕೂಲವಾಗುತ್ತದೆ. ಈ ಚಟುವಟಿಕೆಗಳು ಜನರಲ್ಲಿ ಹೊಸ ಹೊಸ ಯೋಚನೆ ಗಳನ್ನು, ಯೋಜನೆಗಳನ್ನು ರೂಪಿಸಿಕೊಳ್ಳಲು ಆಲೋಚಿಸುವಂತೆ ಮಾಡುತ್ತವೆ. ಚಟುವಟಿಕೆಗಳ ಮೂಲಕ ಸಾರುವ ಸಂದೇಶಗಳಲ್ಲಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು, ಶಾಲೆಬಿಟ್ಟ ಮಕ್ಕಳನ್ನು ಮರಳಿ ಕಳುಹಿಸುವಂತೆ ಪಾಲಕ/ಪೋಷಕರನ್ನು ಪ್ರೇರೇಪಿಸುವುದು, ಸಮುದಾಯವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ಪ್ರಮುಖವಾಗಿರುತ್ತದೆ. ಈ ಚಟುವಟಿಕೆಗಳು ಜನರ ಮಧ್ಯೆಯೇ ನಡೆಯುವುದರಿಂದ ಜನರು ಹೆಚ್ಚು ಆಕರ್ಷಿತರಾಗಿ ಕಾರ್ಯಕ್ರಮದಲ್ಲಿ ನಿರಂತರವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ.

ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸುವವರು :

ಸೂಕ್ಷ್ಮ ಯೋಜನಾ ಕಾರ್ಯಕ್ರಮವು ನಡೆಯುವ ಸಂದರ್ಭದಲ್ಲಿ ಅಗತ್ಯವಾದ ಸಮೂಹವನ್ನು ತೊಡಗಿಸಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ಉದ್ದೇಶಿತ ಕಾರ್ಯಕ್ರಮವು ಪರಿಣಾಮಕಾರಿಯಾಗಲು ಸಾಧ್ಯ ವಾಗುತ್ತದೆ. ಆ ಕಾರಣಕ್ಕಾಗಿ ಸೂಕ್ಷ್ಮ ಯೋಜನಾ ಕಾರ್ಯಕ್ರಮದಲ್ಲಿ ಈ ಕೆಳಗಿನವರನ್ನು ಪಾಲ್ಗೊಳ್ಳುವಂತೆ ಪ್ರೇರೇಪಿಸಲಾಗುವುದು :-

ಗ್ರಾಮದಲ್ಲಿರುವ ಶಿಕ್ಷಕ-ಶಿಕ್ಷಕಿಯರನ್ನು , ಯುವ ಸಂಘಟನೆಗಳನ್ನು, ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳ ಪಾಲಕ/ಪೋಷಕರನ್ನು,ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಉತ್ತೇಜಿಸಲಾಗುವುದು. ಶಾಲೆ ಬಿಡುವ ಮಕ್ಕಳಲ್ಲಿ ಹೆಣ್ಣು ಮಕ್ಕಳೇ ಅಧಿಕವಾಗಿರುತ್ತಾರೆ. ಆದ್ದರಿಂದ ಹೆಣ್ಣುಮಕ್ಕಳ ಶಿಕ್ಷಣದ ಅಗತ್ಯತೆ ಕುರಿತು ಅರಿವನ್ನು ಮೂಡಿಸಲು ಮಹಿಳೆಯರು ಮತ್ತು ಮಹಿಳಾ ಸಂಘಟನೆ ಗಳನ್ನು ತೊಡಗಿಸಿಕೊಳ್ಳಲಾಗುವುದು.'ಸಮುದಾಯ'ವನ್ನು ಜಾಗೃತ ಗೊಳಿಸುವುದಕ್ಕಾಗಿ ಜನ ಪ್ರತಿನಿಧಿಗಳನ್ನು, ಕಾರ್ಯಕ್ರಮದಲ್ಲಿ ಸಂಪೂರ್ಣ ಸಹಕಾರ ನೀಡಿ, ಸಮುದಾಯವನ್ನು ಸಂಘಟಿಸಲು ಯುವ ಸಂಘಟನೆಗಳನ್ನು ತೊಡಗಿಸಿಕೊಳ್ಳಲಾಗುವುದು. ಈ ಮೇಲೆ ತಿಳಿಸಿದ ವ್ಯಕ್ತಿಗಳು ಭಾಗವಹಿಸುವುದರಿಂದ ಸೂಕ್ಷ್ಮ ಯೋಜನಾ ಕಾರ್ಯಕ್ರಮವು ಪರಿಣಾಮಕಾರಿಯಾಗುತ್ತದೆ.

ವಾತಾವರಣ ನಿರ್ಮಾಣವನ್ನುಂಟು ಮಾಡಲು ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ರೀತಿ :

ಗ್ರಾಮದಲ್ಲಿರುವ ಮಹಿಳೆಯರನ್ನು ಸಂಪರ್ಕಿಸಿ ಕಾರ್ಯಕ್ರಮದ ಮಹತ್ವ ಕುರಿತು ಅವರೊಂದಿಗೆ ನೇರವಾಗಿ ಚರ್ಚಿಸಲಾಗುತ್ತದೆ. ಸಾಮೂಹಿಕ ಆಟ ಹಾಗೂ ಗುಂಪು ಹಾಡುಗಳನ್ನು ಆಡಿಸುವುದರ ಮುಖಾಂತರ ಭಾಗವಹಿಸುವಂತೆ ಮಾಡಲಾಗುತ್ತದೆ. ಬೀದಿ ನಾಟಕ ಮತ್ತು ಹಾಡುಗಳಲ್ಲಿ ಮಹಿಳಾ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಬೇಕಾದ ವಿಷಯಗಳನ್ನು ಅಳವಡಿಸುವುದರ ಮೂಲಕ ತೊಡಗಿಸಿಕೊಳ್ಳಲಾಗುವುದು. ಆಯಾ ಗ್ರಾಮದ ಮಹಿಳೆಯರು ಸಂಘಟಿಸಬಹುದಾದ ಚಟುವಟಿಕೆಗಳಿಗೆ ಪ್ರಾತಿನಿಧ್ಯನೀಡಿ, ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸುವಂತೆ ಮಾಡಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮಹಿಳೆಯರಲ್ಲಿರುವ ಸಂಕುಚಿತ ಸ್ವಭಾವವನ್ನು ದೂರ ಮಾಡಲು ಅವರಿಗೆ ಅನುಕೂಲವಾಗುವ ಸ್ಥಳ ಮತ್ತು ಸಮಯವನ್ನು ಗೊತ್ತುಪಡಿಸುವುದರ ಮೂಲಕ ಭಾಗವಹಿಸುವಿಕೆಯನ್ನು ಹೆಚ್ಚು ಗೊಳಿಸಲಾಗುತ್ತದೆ. ಇಷ್ಟೆಲ್ಲಾ ಮುಕ್ತ ವಾತಾವರಣವನ್ನು ನಿರ್ಮಾಣ ಮಾಡಿದರೂ ಸಹ ಕೆಲವು ಸಂದರ್ಭಗಳಲ್ಲಿ ಮಹಿಳೆಯರು ಮನೆಯನ್ನು ಬಿಟ್ಟು ಬರಲು ಒಪ್ಪುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಗ್ರಾಮದ ಮಹಿಳಾ ಸಂಘಟನೆಗಳು, ಶಿಕ್ಷಕಿಯರು, ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಅಭಿಪ್ರೇರೇಪಿಸಲಾಗುವುದು. ಇವರೆಲ್ಲರ ಸಹಕಾರದಿಂದ ಮಹಿಳೆಯರು ಭಾಗವಹಿಸುವಂತೆ ಸೂಕ್ಷ್ಮ ಯೋಜನೆ ಕಾರ್ಯಕ್ರಮವು ಯತ್ನಿಸುತ್ತದೆ. ಇಲ್ಲಿ ಮಹಿಳೆಯರನ್ನೇ ಹೆಚ್ಚಿಗೆ ಏಕೆ ತೊಡಗಿಸಿಕೊಳ್ಳಬೇಕು ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ಶಾಲೆಯನ್ನು ತೊರೆಯುವವರಲ್ಲಿ ಹೆಣ್ಣುಮಕ್ಕಳೇ ಅಧಿಕವಿರುವುದರಿಂದ ತಾಯಂದಿರ ಮಾತನ್ನೇ ಮಕ್ಕಳು ಹೆಚ್ಚು ಕೇಳುವುದರಿಂದ ಶಿಕ್ಷಣದ ಸಾರ್ವತ್ರೀಕರಣದ ಸಫಲತೆಗಾಗಿ ಮಹಿಳೆಯರನ್ನು ಹೆಚ್ಚು ತೊಡಗಿಸುವ ಅಗತ್ಯ ಕಂಡುಬಂದಿದೆ.

ವಾತಾವರಣ ನಿರ್ಮಾಣದಲ್ಲಿ ಮಕ್ಕಳ ಚಟುವಟಿಕೆ ಮತ್ತು ಅವುಗಳ ಪ್ರಯೋಜನೆಗಳು :

ಊರಿನಲ್ಲಿ ಆಯೋಜಿಸುವ ಯಾವುದೇ ಕಾರ್ಯಕ್ರಮಗಳು ಮಕ್ಕಳಿಲ್ಲದೇ ನಡೆಯಲು ಸಾಧ್ಯವಿಲ್ಲ. ಎಂತಹ ಕಾರ್ಯಕ್ರಮಗಳೇ ಆಗಿರಲಿ ಕುತೂಹಲಕ್ಕಾದರೂ ಮಕ್ಕಳು ಭಾಗವಹಿಸುತ್ತಾರೆ. ಅವರಿಂದ ಊರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಪ್ರಚಾರದೊರಕಿದಂತಾಗುತ್ತದೆ. ಮಕ್ಕಳ ಭಾಗವಹಿಸುವಿಕೆಯಿಂದ ಈ ಕೆಳಗಿನ ಪ್ರಯೋಜನೆಗಳು ಲಭಿಸುತ್ತವೆ.

- ಊರಿನ ತುಂಬಾ ಇರುವ ಮಕ್ಕಳು ಸುದ್ದಿ ಮೂಲವಾಗಿರುವುದರಿಂದ ಸುದ್ಧಿಸಂಗ್ರಹಿಸುವುದರಲ್ಲಿ ಅವರು ಮುಖ್ಯ ಸಾಧನವಾಗಿರುತ್ತಾರೆ.
- ಪ್ರತಿ ಮನೆಗಳಲ್ಲಿಯೂ ಮಕ್ಕಳು ಆದಿನ ಶಾಲೆಯಲ್ಲಿ ನಡೆಯುವ ಚಟುವಟಿಕೆಗಳನ್ನು, ಊರಿಗೆ ಸಂಬಂಧಿಸಿದ ವಿಶೇಷಗಳನ್ನು ಮಾತನಾಡಿ ವಾತಾವರಣ ನಿರ್ಮಿಸುತ್ತಾರೆ. ಇದರಿಂದ ಗ್ರಾಮದಲ್ಲಿಯ ಪ್ರತಿ ಮನೆಯ ಸದಸ್ಯರಿಗೂ ಸೂಕ್ಷ್ಮ ಯೋಜನೆ ಕಾರ್ಯಕ್ರಮ ನಡೆಯುವ ಬಗ್ಗೆ ಗೊತ್ತಾಗುತ್ತದೆ
- ಮಕ್ಕಳು ಸೂಕ್ಷ್ಮ ಯೋಜನೆಯ ಸಂಪನ್ಮೂಲ ವ್ಯಕ್ತಿಗಳಿಗೆ, ಕಾರ್ಯಕರ್ತರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದಕ್ಕೆ ಇದು ಅನುಕೂಲವಾಗಿರುತ್ತದೆ.
- ಊರಿನಲ್ಲಿ ಮಕ್ಕಳ ಚಟುವಟಿಕೆಗಳಿಂದ ಹಬ್ಬದ ವಾತಾವರಣ ನಿರ್ಮಾಣವಾಗಿ, ಜನರಿಗೆ ಕಾರ್ಯಕ್ರಮದ ಬಗ್ಗೆ ತಿಳುವಳಿಕೆ ಮೂಡುತ್ತದೆ.

3.4.3. ಹಳ್ಳಿಯ ಸಂಪನ್ಮೂಲಗಳ ಬಳಕೆ :

ಸೂಕ್ಷ್ಮ ಯೋಜನೆ ಕಾರ್ಯಕ್ರಮಕ್ಕೆ ವಾತಾವರಣದ ಮೂಲಕ ಜನರಲ್ಲಿ ಜಾಗೃತಿ ಮೂಡಿ ಜನರು ಭಾಗವಹಿಸಲು ಅಣಿಯಾಗುತ್ತಾರೆ. ಸೂಕ್ಷ್ಮ ಯೋಜನೆ ಕಾರ್ಯಕ್ರಮವನ್ನು ಆಯೋಜಿಸಲು ಹಳ್ಳಿಯ ಸಂಪನ್ಮೂಲಗಳ ಬಳಕೆ ಅಗತ್ಯ. ಅಂತಹ ಸಂಪನ್ಮೂಲಗಳು ಯಾವುವು ಮತ್ತು ಅವು ಸೂಕ್ಷ್ಮ ಯೋಜನೆಯ ವಿವಿಧ ಘಟಕಗಳಲ್ಲಿ ಹೇಗೆ ಬಳಕೆಯಾಗುತ್ತವೆ ಎಂಬ ಬಗ್ಗೆ ಈ ಕೆಳಗೆ ವಿವರಿಸಲಾಗಿದೆ.

3.5. ಜನರ ಭಾಗವಹಿಸುವಿಕೆಗೆ ಬೇಕಾದ ತಂತ್ರಗಳು :

3.5.1. ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ:

ಈ ನಕ್ಷೆಯು ಹಳ್ಳಿಯ ಚಿತ್ರಣವನ್ನೊಳಗೊಂಡಿರುತ್ತದೆ. ಇದರ ಮೂಲಕ ಹಳ್ಳಿಯಲ್ಲಿರುವ ಸೌಲಭ್ಯಗಳು, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ -ಗತಿಗಳು ಗೊತ್ತಾಗುತ್ತವೆ. ಜನರೇ ಈ ನಕ್ಷೆಯನ್ನು ಹಾಕುವುದರ ಮೂಲಕ ಗುರುತಿಸುತ್ತಾರೆ. ಇದರಿಂದ ಇಡೀ ಗ್ರಾಮವನ್ನು ಒಂದು ಚಿತ್ರಣದ ಮುಖಾಂತರ ನೋಡಲು ಗ್ರಾಮಸ್ಥರೆಲ್ಲರಿಗೂ ಮತ್ತು ತಂಡದ ಸದಸ್ಯರಿಗೆ ಸಾಧ್ಯವಾಗುತ್ತದೆ. ಗ್ರಾಮದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಒಂದು ಸ್ಥೂಲ ನೋಟವನ್ನು ಅರ್ಥಮಾಡಿಕೊಳ್ಳಬಹುದು. ಈ ತಂತ್ರದ ಉಪಯೋಗವನ್ನು ವಿವರಿಸುತ್ತಾ ಡಿ.ಪಿ.ಇ.ಪಿ.ಯ ಸೂಕ್ಷ್ಮ ಯೋಜನಾ ತರಬೇತಿ ಕೈಪಿಡಿಯಲ್ಲಿ ಈ ರೀತಿ ಹೇಳಲಾಗಿದೆ.

''ಸಾಮಾಜಿಕ ನಕ್ಷೆಯೆಂದರೆ: ಹಳ್ಳಿಯ ಭೌತಿಕ ನಕ್ಷೆ, ಹಳ್ಳಿಯಗಡಿ, ಹಳ್ಳಿಯೊಳಗಿರುವ ನೀರಿನ ಟ್ಯಾಂಕ್, ನಲ್ಲಿ, ರಸ್ತೆ, ದೇವಸ್ಥಾನ, ಆಸ್ಪತ್ರೆ, ಶಾಲೆ ಮನೆಗಳು ಇತ್ಯಾದಿ ಗುರುತಿಸಲಾಗುವುದು. ಇದು ಹಳ್ಳಿಯ ಸಂಪನ್ಮೂಲಗಳನ್ನು ಒಳಗೊಂಡಿರುತ್ತದೆ. ಸಂಪನ್ಮೂಲ ನಕ್ಷೆ, ಸಾಮಾಜಿಕ ನಕ್ಷೆಯ ವಿಸ್ತರಣೆಯಾಗಿದೆ. ಇದರಲ್ಲಿ ವ್ಯವಸಾಯ ಭೂಮಿ, ಗೋಮಾಳ, ತೋಪು, ಕಾರ್ಖಾನೆ, ನಾಲೆಗಳು, ಕೆರೆಗಳು ಮುಂತಾದವುಗಳನ್ನು ಗುರುತಿಸಲಾಗುವುದು. ಸಂಪನ್ಮೂಲ ನಕ್ಷೆಯಲ್ಲಿ ಹಳ್ಳಿಯ ಮಕ್ಕಳು ದನ-ಕುರಿ ಮೇಯಿಸಲು ಹೋಗುವ, ದೂರದ ಕಾರ್ಖಾನೆಗಳಿದ್ದಲ್ಲಿ ಆಕಡೆ 2-3 ಕಿ.ಮೀ. ದೂರ ಕೆಲಸಕ್ಕೆ ಹೋಗುವ ಸಂದರ್ಭದಲ್ಲಿ ಶಾಲೆಗಳಿಗೆ ಹಾಜರಾಗಲು ಸಮಸ್ಯೆ ಇರುವ ಮಕ್ಕಳ ಬಗ್ಗೆ ತಿಳಿಸುತ್ತದೆ. ಇದಲ್ಲದೆ ಗೃಹ ಕೈಗಾರಿಕೆಗಳಲ್ಲಿ ತೊಡಗಿರಬಹುದಾದ ಮಕ್ಕಳ ವಿವರವನ್ನೂ ಸಹ ನೀಡುತ್ತದೆ. ಇಂತಹ ಸಮಸ್ಯೆಗೆ ಪರಿಹಾರವನ್ನು ಕಂಡು ಕೊಳ್ಳಬಹುದಾಗಿದೆ.

ಸೂಕ್ಷ್ಮ ಯೋಜನೆಯ ಚಟುವಟಿಕೆಯ ವೇಳೆ ಹಳ್ಳಿಯ ಜನರು ರಂಗೋಲಿ, ಇದ್ದಿಲು, ಕೆಮ್ಮಣ್ಣು ಇತರೆ ಸಾಮಾಗ್ರಿಗಳನ್ನು ಬಳಸಿ ನೆಲದ ಮೇಲೆಯೇ ಸಾಮಾಜಿಕ ನಕ್ಷೆ ಬಿಡಿಸುತ್ತಾರೆ. ಈ ನಕ್ಷೆ ಬಿಡಿಸುವುದು ಹಾಗೂ-ಮಾಹಿತಿಗಳನ್ನು ಪಟ್ಟಿಮಾಡುವುದರಿಂದ ಹಳ್ಳಿಯಲ್ಲಿರುವ ಸೌಲಭ್ಯಗಳು ಹಾಗೂ ವಿವಿಧ ಜಾತಿ ಮತ್ತು ವರ್ಗಗಳಿಗೆ ಅವು ಹೇಗೆ ಲಭ್ಯವಾಗಿತ್ತಿವೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ''(ಸೂಕ್ಷ್ಮ ಯೋಜನಾ ತರಬೇತಿ ಕೈಪಿಡಿ 1997, ಪುಟ.17-19).

ಸಾಮಾಜಿಕ ಹಾಗೂ ಸಂಪನ್ಮೂಲ ನಕ್ಷೆಯಲ್ಲಿ ಒಳಗೊಂಡಿರುವ ಅಂಶಗಳು :

ಈ ನಕ್ಷೆಯಿಂದ ಗ್ರಾಮದಲ್ಲಿಯ ಮನೆಗಳ ಸಂಖ್ಯೆ ಅದರಲ್ಲಿ ಪಕ್ಕ ಮನೆಗಳು, ಕಚ್ಚಾ ಮನೆಗಳು ಎಷ್ಟೆಷ್ಟಿವೆ ಎಂಬ ವಿವರ ತಿಳಿಯುತ್ತದೆ. ಗ್ರಾಮದಲ್ಲಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರ ಮನೆಗಳೆಷ್ಟು, ಶಾಲೆಗೆ ಹೋಗುತ್ತಿರುವ 6 ರಿಂದ 14 ವರ್ಷ ವಯಸ್ಸಿನ ಗಂಡು ಮತ್ತು ಹೆಣ್ಣುಮಕ್ಕಳು ಎಷ್ಟು ಇದ್ದಾರೆ? 6 ರಿಂದ 14 ವರ್ಷ ವಯಸ್ಸಿನ ಶಾಲೆಗೆ ದಾಖಲಾಗದ ಗಂಡು ಮತ್ತು ಹೆಣ್ಣು ಮಕ್ಕಳೆಷ್ಟು ಇದ್ದಾರೆ? 6 ರಿಂದ 14 ವರ್ಷ ವಯಸ್ಸಿನ ಶಾಲೆಬಿಟ್ಟ ಗಂಡು ಮತ್ತು ಹೆಣ್ಣು ಮಕ್ಕಳೆಷ್ಟಿದ್ದಾರೆ ಎಂಬ ವಿವರವನ್ನು ಈ ನಕ್ಷೆಯಿಂದ ಕಂಡು ಬರುತ್ತದೆ.

- **ಗ್ರಾಮದ ಸೌಲಭ್ಯಗಳು :**

ಈ ನಕ್ಷೆಯಿಂದ ಗ್ರಾಮದಲ್ಲಿ ಯಾವ ಯಾವ ಸೌಲಭ್ಯಗಳಿವೆ? ಗ್ರಾಮಸ್ಥರು ಗ್ರಾಮದಲ್ಲಿ ಹೊಂದಿರುವ ಮೂಲಭೂತ ಸೌಕರ್ಯಗಳು ಯಾವುವು ? ಎಂಬುದನ್ನು ಸೂಕ್ಷ್ಮಯೋಜನೆ ಕಾರ್ಯಕ್ರಮದಲ್ಲಿ ನಕ್ಷೆಯ ಮೂಲಕ ಈ ಕೆಳಗಿನ ಸೌಲಭ್ಯಗಳನ್ನು ಗುರುತಿಸುತ್ತಾರೆ.

ಶಾಲೆ, ಅಂಗನವಾಡಿ, ಪ್ರಾಥಮಿಕ ಆರೋಗ್ಯಕೇಂದ್ರ, ರಸ್ತೆಗಳು, ಅಂಗಡಿಗಳು, ಅಂಚೆಕಛೇರಿ, ಗ್ರಾಮ ಪಂಚಾಯಿತಿ ಕಛೇರಿ, ಗ್ರಾಮಲೆಕ್ಕಾಧಿಕಾರಿಯ ಕಛೇರಿ, ಬ್ಯಾಂಕ್, ಹಾಲಿನ ಡೈರಿ, ಗ್ರಂಥಾಲಯ, ಮಹಿಳಾ ಮಂಡಳಿಗಳು ಬೀದಿ ದೀಪ, ದೇವಸ್ಥಾನಗಳು, ನ್ಯಾಯಬೆಲೆ ಅಂಗಡಿ ಇತರ ಜಮೀನಿಲ್ಲದ ಕುಟುಂಬಗಳು, ಗ್ರಾಮದ ಒಟ್ಟುಭೂಮಿ (ಎಕರೆಗಳಲ್ಲಿ) ನೀರಾವರಿ ಭೂಮಿ(ತರಿ) ಒಣಭೂಮಿ(ಖುಷ್ಕಿ) ತೋಟ(ಬಾಗಾಯ್ತು) ಸರ್ಕಾರಿ ಭೂಮಿ, ಕಾಡು, ತೋಪು, ಗೋಮಾಳ.

ಗ್ರಾಮದಲ್ಲಿ ಕೃಷಿಗೆ, ಮನೆಯ ಬಳಕೆಗೆ ಕೆರೆ, ನಾಲೆ, ಬಾವಿ, ಕೈಪಂಪು ಮತ್ತು ನಲ್ಲಿ ಈ ಮೂಲಗಳಿಂದ ನೀರಿನ ಸೌಲಭ್ಯವನ್ನು ಪಡೆಯುವ ಬಗ್ಗೆ ಈ ನಕ್ಷೆಯಿಂದ ತಿಳಿದು ಬರುತ್ತದೆ. ಗ್ರಾಮದಲ್ಲಿ ಮುಖ್ಯವಾಗಿ ಬೆಳೆಯುವ ರಾಗಿ, ಜೋಳ, ಭತ್ತ, ಕಬ್ಬು, ತೆಂಗು ಇತರೆ ಬೆಳೆಗಳ ಬಗ್ಗೆ ಮಾಹಿತಿಯನ್ನು ಈ ನಕ್ಷೆಯಿಂದ ಪಡೆಯಬಹುದಾಗಿದೆ.

3.5.2. ಋತುಮಾನ ನಕ್ಷೆ:

ಹಳ್ಳಿಯ ವ್ಯವಸಾಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳಲು ಋತುಮಾನ ನಕ್ಷೆಯು ಸಹಾಯವಾಗುತ್ತದೆ. ಜನರು ಹೆಚ್ಚಾಗಿ ಯಾವ ಯಾವ ಸಮಯದಲ್ಲಿ ಯಾವ ಯಾವ ಕೆಲಸದಲ್ಲಿ ತೊಡಗಿರುತ್ತಾರೆ ಎಂಬ ಮಾಹಿತಿಯನ್ನು ಒದಗಿಸುತ್ತದೆ. ಹಳ್ಳಿಯಲ್ಲಿ ಎಲ್ಲಾ ವರ್ಗದವರು ಸ್ಥಿತಿವಂತರಾಗಿರುವುದಿಲ್ಲ. ಆರ್ಥಿಕವಾಗಿ ಹಿಂದುಳಿದಿರುವವರು ತಮ್ಮ ಕುಟುಂಬವನ್ನು ಸಾಕಲು ಸಾಧ್ಯವಾಗದೆ, ಕೆಲಸವನ್ನು ಹುಡುಕಿಕೊಂಡು ಬೇರೆ ಕಡೆ ವಲಸೆಹೋಗುತ್ತಾರೆ. ಆ ಹಳ್ಳಿಯಲ್ಲಿ ಯಾವ ಕುಟುಂಬದವರು, ಯಾವ ತಿಂಗಳಲ್ಲಿ ಹೆಚ್ಚು ವಲಸೆಹೋಗುತ್ತಾರೆ? ಆ ಕುಟುಂಬದ ಎಲ್ಲಾ ಸದಸ್ಯರು ವಲಸೆ ಹೋಗುತ್ತಾರೆಯೇ?, ಇಲ್ಲ ತಂದೆ ತಾಯಂದಿರು ಮಾತ್ರ ಹೋಗುತ್ತಾರೆಯೇ?, ಇಲ್ಲವೆ ಎಲ್ಲಾ ಮಕ್ಕಳನ್ನು ಜೊತೆಗೆ ಕರೆದುಕೊಂಡೇ ವಲಸೆ ಹೋಗುತ್ತಾರೆಯೇ? ಎಂಬ ಮಾಹಿತಿಯನ್ನು ಋತುಮಾನ ನಕ್ಷೆ ಒದಗಿಸುತ್ತದೆ. ಋತುಮಾನ ನಕ್ಷೆಯನ್ನು ರಚಿಸುವಾಗ ಈ ಕೆಳಗಿನ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಗಂಡಸರು, ಹೆಂಗಸರು ಮತ್ತು ಗಂಡು-ಹೆಣ್ಣು ಮಕ್ಕಳು ಮಾಡುವ ಕೆಲಸಗಳು, ವಿವಿಧ ಕಾಲಗಳಲ್ಲಿ ಬೆಳೆಯುವ ಬೆಳೆಗಳು, ಮಳೆ ಬೀಳುವ ಕಾಲ ಮಕ್ಕಳು ಕೆಲಸದಲ್ಲಿ ಹೆಚ್ಚು ತೊಡಗುವ ಕಾಲ, ಕೊಯ್ಲು ಮಾಡುವ ಕಾಲ, ವಲಸೆ ಹೋಗುವ ಕಾಲ, ವಿವಿಧ ಕಾಲಗಳಲ್ಲಿ ಪ್ರಕೃತಿ ವೈಪರೀತ್ಯ, ಸಾಮಾನ್ಯವಾಗಿ ಖಾಯಿಲೆಗಳು ಬರುವ ಕಾಲ, ಹಬ್ಬಗಳ ಜಾತ್ರೆಗಳ ಸಮಯ ಈ ಎಲ್ಲಾ ಅಂಶಗಳನ್ನು ಋತುಮಾನ ನಕ್ಷೆಯಲ್ಲಿ ಅಳವಡಿಸಿ ಕೊಳ್ಳುತ್ತಾರೆ. ಇದರಿಂದ ಹಳ್ಳಿಯ ಭೌಗೋಳಿಕ ಮಾಹಿತಿಯನ್ನು ಪಡೆಯಲು ಅನುಕೂಲವಾಗುತ್ತದೆ.

3.5.3. ಶಾಲೆಯ ಮಕ್ಕಳ ಕೆಲಸದ ವಿವರಗಳು : (ಜವಾಬ್ದಾರಿ ನಕ್ಷೆ).

ಶಾಲೆಗೆ ದಾಖಲಾಗಿ ಶಾಲೆಗೆ ಹಾಜರಾಗುತ್ತಿರುವ ಮತ್ತು ಶಾಲೆಗೆ ಹಾಜರಾಗದೇ ಇರುವ ಗಂಡು ಮತ್ತು ಹೆಣ್ಣು ಮಕ್ಕಳು ಯಾವ ಯಾವ ಕೆಲಸವನ್ನು ಎಷ್ಟು ಎಷ್ಟು ಸಮಯದಲ್ಲಿ ನಿರ್ವಹಿಸುತ್ತಿದ್ದಾರೆ ಎಂಬ ಅಂಶವನ್ನು 'ಜವಾಬ್ದಾರಿ ನಕ್ಷೆ' ಯಿಂದ ಕಂಡುಕೊಳ್ಳಬಹುದಾಗಿದೆ.

ಮಕ್ಕಳನ್ನು ನಾಲ್ಕು ಗುಂಪುಗಳಾಗಿಸಲಾಗುವುದು.

ಶಾಲಾ ಚಟುವಟಿಕೆಗಳ ಸಂದರ್ಭದಲ್ಲಿ ಮಕ್ಕಳ ಜವಾಬ್ದಾರಿಯನ್ನು ಗುರುತಿಸುವ ಸಲುವಾಗಿ ಸಂಪನ್ಮೂಲ ವ್ಯಕ್ತಿಗಳನ್ನು ನಾಲ್ಕು ಗುಂಪುಗಳನ್ನಾಗಿ ಮಾಡಿಕೊಂಡು, ಪ್ರತಿ ಗುಂಪಿನ ಮಕ್ಕಳು ತಾವು ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಮಾಡುವ ಕೆಲಸ ಹಾಗೂ ಕೆಲಸಕ್ಕೆ ತೆಗೆದುಕೊಳ್ಳುವ ಕಾಲವನ್ನು ಮಕ್ಕಳಿಂದಲೇ ಬರೆಯಿಸುತ್ತಾರೆ. ಈ ಚಟುವಟಿಕೆಯು ಮಕ್ಕಳು ಶಾಲೆಗೆ ಬರಲು ಅಡ್ಡಿಯಾಗುವ ಕೆಲಸದ ಒತ್ತಡ ಹಾಗೂ ಹೆಣ್ಣು ಮತ್ತು ಗಂಡು ಮಗುವಿನ ನಡುವೆ ಇರುವ ತಾರತಮ್ಯವನ್ನು ತಿಳಿಸುತ್ತದೆ. ಮಕ್ಕಳ ದೈನಂದಿನ ಚಟುವಟಿಕೆಗಳನ್ನು ಗುರುತಿಸಲು ಈ ಕೆಳಗಿನ ಮಾನದಂಡವನ್ನು ಅಳವಡಿಸಿ ಕೊಳ್ಳಲಾಗುತ್ತದೆ.

ಮಕ್ಕಳ ದೈನಂದಿನ ಚಟುವಟಿಕೆಗಳು :

ಮಕ್ಕಳು ಪೂರ್ಣದಿನ ಸಮಯವನ್ನು ವಿವಿಧ ಚಟುವಟಿಕೆಗಳಿಗೆ ಉಪಯೋಗಿಸುವ ಬಗ್ಗೆ ಪ್ರತ್ಯೇಕವಾದ ಪಟ್ಟಿಯನ್ನು ತಯಾರಿಸಲಾಗುತ್ತದೆ.

- ಶಾಲೆಗೆ ಹೋಗುವ ಹಾಗೂ ಹೋಗದಿರುವ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಪಟ್ಟಿಯನ್ನು ಸಿದ್ಧಪಡಿಸಿ ಹೊರಬಂದ ಅಂಶಗಳನ್ನು ಚಾರ್ಟ್ ಪೇಪರ್‌ನಲ್ಲಿ ಬರೆಯುತ್ತಾರೆ.
- ಪ್ರತಿ ಮಗುವೂ ಬರೆದಿರುವ ಅಂಶಗಳನ್ನು ಮೊದಲು ಓದಿ ಸ್ವಷ್ಟಪಡಿಸಿಕೊಳ್ಳುತ್ತಾರೆ. ನಂತರ ಪ್ರತಿ ಮಗುವೂ ಇಡೀ ದಿನ ವಿವಿಧ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳುವ ಸಮಯವನ್ನು ಪಟ್ಟಿ ಮಾಡುತ್ತಾರೆ.
- ಶಾಲೆಗೆ ಹೋಗುವ ಗಂಡು ಮಗು, ಹೆಣ್ಣು ಮಗು ಹಾಗೂ ಶಾಲೆಗೆ ಹೋಗದ ಗಂಡು, ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಪಟ್ಟಿಯನ್ನು ಸಿದ್ಧಪಡಿಸುತ್ತಾರೆ. ಯಾವ ಯಾವ ಕೆಲಸಗಳಿಗೆ ಮಕ್ಕಳು ಎಷ್ಟು ಸಮಯವನ್ನು ಬಳಸಿಕೊಂಡರು ಎಂಬ ವಿವರ ಪಡೆಯುತ್ತಾರೆ.

ಉದಾ:- ಮುಖ ತೊಳೆಯುವುದು	:	10 ನಿಮಿಷ
ತಿಂಡಿ ತಿನ್ನುವುದು	:	20 ನಿಮಿಷ
ಮನೆ ಓದು	:	01 ಗಂಟೆ
ಶಾಲೆ	:	06 ಗಂಟೆ ಇತ್ಯಾದಿ.

- ಎಲ್ಲವನ್ನೂ ಪಟ್ಟಿ ಮಾಡಿದ ನಂತರ ಒಂದೇ ರೀತಿಯ ಕೆಲಸಗಳು ಹಾಗೂ ಅದಕ್ಕಾಗಿ ಬಳಸುವ ಸಮಯವನ್ನು ಪಟ್ಟಿಮಾಡುತ್ತಾರೆ.

  ಉದಾಹರಣೆಗೆ; ಮುಖ ತೊಳೆಯುವುದು, ಸ್ನಾನ ಮಾಡುವುದು ಇವುಗಳನ್ನು ''ವೈಯಕ್ತಿಕ ಸ್ವಚ್ಛತೆ'' ಎಂದು ಬರೆಯಲಾಗುತ್ತದೆ.
- ಮನೆ ಓದು, ಶಾಲೆ ಓದು ಎಲ್ಲವನ್ನೂ ಕೂಡಿಸಿ 'ಓದಿಗಾಗಿ' ಎಂದು ನಮೂದಿಸುತ್ತಾರೆ.
- ಕಾಫಿ, ತಿಂಡಿ, ಮಧ್ಯಾಹ್ನದ ಊಟ ಎಲ್ಲವನ್ನೂ ಸೇರಿಸಿ '' ಆಹಾರ ಸೇವನೆ'' ಎಂದು ಬರೆದು ಸಮಯವನ್ನು ಗುರುತಿಸುತ್ತಾರೆ.
- ಬಂದಂತಹ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು ''ವೃತ್ತಖಂಡ '' ಅಥವಾ ''ಸ್ಥಂಭ'' ಲೇಖನ ರಚಿಸಲಾಗುತ್ತದೆ.

3.5.4. ಗೃಹ ಸಮೀಕ್ಷೆ :

ಗೃಹ ಸಮೀಕ್ಷೆಯನ್ನು ೩ರಿಂದ ೪ ಜನರ ತಂಡದಲ್ಲಿ ನಡೆಸಲಾಗುತ್ತದೆ. ಈ ತಂಡಗಳನ್ನು ಸ್ಥಳೀಯ ಶಿಕ್ಷಕರು ಹಾಗೂ ಯುವಜನರನ್ನು ಸೇರಿಸಿಕೊಂಡು ರಚಿಸಲಾಗಿರುತ್ತದೆ. ಸಮೀಕ್ಷೆಯು ಬರೀ ಹೆಸರು, ವಯಸ್ಸು, ವಿದ್ಯಾಭ್ಯಾಸದ ಮಟ್ಟ ಸಂಗ್ರಹಿಸುವ ಪ್ರಕ್ರಿಯೆಯಾಗಿರುವುದಿಲ್ಲ. ಪ್ರತಿ ಮನೆಯ ಮಂದಿಯೊಂದಿಗೆ, ಮಕ್ಕಳೊಂದಿಗೆ ವಿಶೇಷವಾಗಿ ಮಹಿಳೆಯರೊಂದಿಗೆ ಸಂವಾದ ನಡೆಸಲಾಗುತ್ತದೆ. ಈ ಸಂವಾದದಲ್ಲಿ ಶಿಕ್ಷಣದ ಬಗ್ಗೆ ಅದರಲ್ಲೂ ಮಹಿಳಾ ಶಿಕ್ಷಣದ ಬಗ್ಗೆ ವಿಶೇಷ ಒತ್ತು ನೀಡಲಾಗುತ್ತದೆ. ಪ್ರತಿ ಕುಟುಂಬದವರೊಂದಿಗೆ ಮುಖಾಮುಖಿ ಚರ್ಚಿಸುವುದರಿಂದ ಅವರ ಸಮಸ್ಯೆಯನ್ನು ಅರಿಯಲು ಈ ಸಮೀಕ್ಷೆ ಸಹಾಯಕವಾಗುತ್ತದೆ. ಗ್ರಾಮದಲ್ಲಿ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡಲು ಸಹ ಇದು ಉಪಯೋಗವಾಗುತ್ತದೆ. ಮುಂದೆ ಇದರಿಂದ 'ಗ್ರಾಮದ ಶೈಕ್ಷಣಿಕ ವಹಿ'ಯನ್ನು ತೆರೆಯಲು ಅನುಕೂಲವಾಗುತ್ತದೆ.

3.5.5. ಅಂಕಿ-ಅಂಶಗಳ ಕ್ರೋಢೀಕರಣ :

ಈ ಕೆಳಗಿನ ಅಂಶಗಳನ್ನು ಆಧರಿಸಿ ಸಮೀಕ್ಷೆಯಿಂದ ಹೊರ ಬಂದ ಅಂಕಿ-ಅಂಶಗಳನ್ನು ಕ್ರೋಢೀಕರಿಸಲಾಗುತ್ತದೆ.

1. ಗ್ರಾಮದ ಒಟ್ಟು ಮನೆಗಳ ಸಂಖ್ಯೆ.
2. ಗ್ರಾಮದಲ್ಲಿರುವ ಒಟ್ಟು ಕುಟುಂಬಗಳ ಸಂಖ್ಯೆ,ಪ.ಜಾ.,ಪ.ಪಂ., ಹಿಂ.ವರ್ಗ ಹಾಗೂ ಇತರೆ.
3. ಗ್ರಾಮದ ಒಟ್ಟು ಜಮೀನು (ಎಕರೆಗಳಲ್ಲಿ) ತರಿ, ಖುಷ್ಕಿ, ಬಾಗಾಯ್ತು.
4. ಭೂ ಹಿಡುವಳಿ : ಹತ್ತು ಎಕರೆಗಿಂತ ಹೆಚ್ಚು, ಹತ್ತು ಎಕರೆಗಿಂತ ಕಡಿಮೆ, ಐದು ಎಕರೆಗಿಂತ ಕಡಿಮೆ-ಭೂರಹಿತರು.
5. ಶಾಲೆಗೆ ಹೋಗುತ್ತಿರುವ ಮಕ್ಕಳ ಸಂಖ್ಯೆ (6-14ವರ್ಷ) ಗಂಡು,ಹೆಣ್ಣು, ಒಟ್ಟು.

6. ಮಧ್ಯದಲ್ಲಿ ಶಾಲೆ ತೊರೆದ ಮಕ್ಕಳ ಸಂಖ್ಯೆ (6-14ವರ್ಷ) ಗಂಡು, ಹೆಣ್ಣು, ಒಟ್ಟು.
7. ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆ (6-14ವರ್ಷ) ಗಂಡು, ಹೆಣ್ಣು, ಒಟ್ಟು.
8. ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆ : ಗಂಡು, ಹೆಣ್ಣು, ಒಟ್ಟು.
9. ಕಸುಬು: ರೈತರು, ಕುಶಲ ಕರ್ಮಿಗಳು, ಕೃಷಿ ಕಾರ್ಮಿಕರು, ಇತರೆ.
10. 5 ರಿಂದ 14 ವರ್ಷದ ಮಕ್ಕಳ ದೈನಂದಿನ ಚಟುವಟಿಕೆ, ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವ ಮಕ್ಕಳ ಸಂಖ್ಯೆ, ಅನುತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವ ಮಕ್ಕಳ ಸಂಖ್ಯೆ.

ಈ ಮೇಲಿನ ನಮೂನೆಯ ಆಧಾರದ ಮೇಲೆ ಅಂಕಿ ಅಂಶಗಳನ್ನು ಸಂಗ್ರಹಿಸಲಾಗುತ್ತದೆ.

3.5.6. ಗ್ರಾಮ ಶಿಕ್ಷಣ ವಹಿಯಲ್ಲಿ ಅಳವಡಿಸಿಕೊಳ್ಳುವ ಮುಖ್ಯ ಅಂಶಗಳು :

ಸಾಮಾಜಿಕ, ಸಂಪನ್ಮೂಲ ನಕ್ಷೆ ಮತ್ತು ಋತುಮಾನ ನಕ್ಷೆಗಳಿಂದ ಹೊರಬರುವ ಅಂಶಗಳಿಗೆ ಪೂರಕವಾಗಲು ಸಮೀಕ್ಷೆ ಮಾಡಲಾಗುತ್ತದೆ. ಸಮೀಕ್ಷೆಯ ನಂತರ ಗ್ರಾಮ ಶಿಕ್ಷಣ ವಹಿಯನ್ನು ಸಿದ್ಧಪಡಿಸಲಾಗುತ್ತದೆ. ಗ್ರಾಮ ಶಿಕ್ಷಣ ವಹಿಯನ್ನು ಸಮೀಕ್ಷೆಯಿಂದ ಹೊರಬಂದ ಅಂಕಿ-ಅಂಶಗಳ ಆಧಾರದ ಮೇಲೆ ತಯಾರಿಸಲಾಗುತ್ತದೆ.

ಗ್ರಾಮ ಶಿಕ್ಷಣ ವಹಿಯ ಮುಖ್ಯ ಅಂಶಗಳು :

- ಶಾಲೆಗೆ ಹೋಗುವ ಹಾಗೂ ಹೋಗದ ಮಕ್ಕಳ ವಿವಿರ.
- ಪೋಷಕರ ವಿದ್ಯಾಭ್ಯಾಸದ ಮಟ್ಟ.
- ಮನೆಯಲ್ಲಿನ ಮಕ್ಕಳ ಸಂಖ್ಯೆ: ಗಂಡು, ಹೆಣ್ಣು, ಅವರ ವಯಸ್ಸು ಮತ್ತು ಪ್ರಸ್ತುತ ಸ್ಥಿತಿ.
- ಶಾಲೆ ಬಿಟ್ಟಿದ್ದಕ್ಕೆ ಅಥವಾ ಗೈರು ಹಾಜರಿಗೆ ಕಾರಣಗಳು.

ಈ ಮೇಲಿನ ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮ ಶಿಕ್ಷಣ ವಹಿಯನ್ನು ಸಿದ್ಧಪಡಿಸಿದ ನಂತರ ಅದನ್ನು ಶಾಲೆಗೆ ನೀಡಲಾಗುತ್ತದೆ. ಗ್ರಾಮ ಶಿಕ್ಷಣ ಸಮಿತಿಯವರು, ಶಾಲಾ ಶಿಕ್ಷಣ ಅಭಿವೃದ್ಧಿಗಾಗಿ, ಚಟುವಟಿಕೆಗಳ ಮೇಲ್ವಿಚಾರಣಾಜವಾಬ್ದಾರಿವಹಿಸಿಕೊಳ್ಳಲು ತಿಳಿಸಲಾಗುತ್ತದೆ. ಗ್ರಾಮ ಶಿಕ್ಷಣ ಸಮಿತಿಯ ಮಾಸಿಕ ಸಭೆಗಳಲ್ಲಿ ಈ ವಹಿಯನ್ನು ಬಳಸಲು ಅವಕಾಶವಿದೆ. ಈ ವಹಿಯ ಆಧಾರದ ಮೇಲೆ ಶಾಲೆಯಿಂದ ಹೊರಗಿರುವ ಅರ್ಹ ಮಕ್ಕಳನ್ನು ಶಾಲೆಗೆ ಕರೆತರಲು ಸಮಿತಿಯ ಎಲ್ಲಾ ಸದಸ್ಯರಿಗೆ ಜವಾಬ್ದಾರಿಯನ್ನು ಹಂಚಲಾಗುತ್ತದೆ. ಕಾಲಮಿತಿಯ ಕಾರ್ಯಕ್ರಮ ಹಾಕಿಕೊಂಡು ಶಾಲೆಬಿಟ್ಟ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗುವಂತೆ ಪಾಲಕ/ ಪೋಷಕರನ್ನು ಪ್ರೇರೇಪಿಸಲು ಸಾಧ್ಯವಾಗುತ್ತದೆ.

3.5.7. ಸಮುದಾಯವೇ ರೂಪಿಸುವ ಗ್ರಾಮ ಶಿಕ್ಷಣ ಯೋಜನೆ :

ಸೂಕ್ಷ್ಮಯೋಜನೆ ನಡೆಸಿದ ದಿನಗಳಲ್ಲಿ ಹಮ್ಮಿಕೊಂಡಿದ್ದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಕೊನೆಯದಿನ (ನಾಲ್ಕನೇ ದಿನ) ಪ್ರದರ್ಶನಕ್ಕಿಡಲಾಗುತ್ತದೆ. ಗ್ರಾಮದ ಎಲ್ಲಾ ಜನರು ಗ್ರಾಮ ಶಿಕ್ಷಣ ಸಮಿತಿ ಸದಸ್ಯರು, ಮಹಿಳೆಯರು, ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ.

ಈ ಸಂದರ್ಭದಲ್ಲಿ ಜವಾಬ್ದಾರಿ ನಕ್ಷೆ, ಸಾಮಾಜಿಕ ಹಾಗೂ ಸಂಪನ್ಮೂಲ ನಕ್ಷೆ ಋತುಮಾನ ನಕ್ಷೆಗಳನ್ನು ಪ್ರದರ್ಶಿಸಿರುತ್ತಾರೆ. ಅವುಗಳಿಂದ ಹೊರಬಂದ ಅಂಶಗಳನ್ನು ಗ್ರಾಮದ ಜನರಿಗೆ ಅಲ್ಲದೆ ಗ್ರಾಮ ಶಿಕ್ಷಣ ಸಮಿತಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಶಿಕ್ಷಣಾಸಕ್ತರಿಗೆ ವಿವರಿಸಲಾಗುತ್ತದೆ. ಇವುಗಳ ಆಧಾರದಿಂದ ಸಮಸ್ಯೆಗಳ ಪರಿಹಾರಕ್ಕಾಗಿ ಸೂಕ್ತವಾದ ಕ್ರಿಯಾ ಯೋಜನೆಯನ್ನು ರೂಪಿಸಲಾಗುತ್ತದೆ. ಸಭೆಯಲ್ಲಿ ಈ ಕೆಳಕಂಡ ಅಂಶಗಳ ಮೇಲೆ ಚರ್ಚೆ ನಡೆಯುತ್ತದೆ.

3.6. ಹಳ್ಳಿಯಲ್ಲಿಯ ಶೈಕ್ಷಣಿಕ ಸಮಸ್ಯೆಗಳು :

ಗ್ರಾಮದ ಶಾಲೆಯ ಕುರಿತು ಗ್ರಾಮ ಸಭೆಯಲ್ಲಿ ಕೆಲವು ಮುಖ್ಯ ಅಂಶಗಳು ಚರ್ಚೆಯಾಗುತ್ತವೆ. ಈ ಚರ್ಚೆಯಲ್ಲಿ ಭಾಗವಹಿಸುವ ಎಲ್ಲಾ ಸದಸ್ಯರಿಂದ ಮಕ್ಕಳು ಶಾಲೆಯನ್ನು ಏಕೆ ಬಿಡುತ್ತಿದ್ದಾರೆ ?, ಕಾಲಮಿತಿ ಗೈರು ಹಾಜರಿ ಏಕೆ ಆಗುತ್ತಿದ್ದಾರೆ ?, ಶಾಲೆಯ ಅಭಿವೃದ್ಧಿಗಾಗಿ ಗ್ರಾಮ ಪಂಚಾಯತಿ ಸದಸ್ಯರ ಜವಾಬ್ದಾರಿಗಳೇನು ?, ಶಾಲೆ ಮಕ್ಕಳ ಪಾಲಕ/ಪೋಷಕರ ಜವಾಬ್ದಾರಿ ಏನು? ಇತ್ಯಾದಿ ಸಮಸ್ಯೆಗಳ ಮೇಲೆ ಚರ್ಚೆ ನಡೆಯುತ್ತವೆ.

3.7. ಸಾಮಾನ್ಯವಾಗಿ ಚರ್ಚಿತವಾಗುವ ಅಂಶಗಳು :

ಶಾಲೆಗೆ ಮಕ್ಕಳು ನಿರಂತರ ಹಾಜರಾಗಲು ಕ್ರಮಕೈಗೊಳ್ಳಬೇಕು. ಸಮುದಾಯವು ಶಾಲೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಹಕರಿಸಬೇಕು. ಶಾಲೆಗೆ ಶಿಕ್ಷಕರು ನಿರಂತರವಾಗಿ ಹಾಜರಾಗಬೇಕು. ಶಾಲೆಗೆ ಮತ್ತೊಂದು ಕೊಠಡಿ ಬೇಕು. ಕೆಲವು ಸಂದರ್ಭದಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಣೆಯಾಗಬೇಕು ಎಂಬ ಅಂಶಗಳೂ ಸಹ ಚರ್ಚೆಯಲ್ಲಿ ಬರುವ ಸಾಧ್ಯತೆ ಇದೆ.

3.8. ಶೈಕ್ಷಣಿಕ ಅಭಿವೃದ್ಧಿ :

ಸಮುದಾಯ ಭಾಗವಹಿಸುವಿಕೆಯಿಂದ ಹಳ್ಳಿಯ ಮಟ್ಟದ ಸಮಸ್ಯೆಗಳಲ್ಲೊಂದಾದ ಶಿಕ್ಷಣ, ಈ ಮೂಲಕ ಗುರುತಿಸಲ್ಪಟ್ಟು ಅದರ ಅಭಿವೃದ್ಧಿಯತ್ತ ಜನರೇ ಯೋಚಿಸುವಂತಾಗುತ್ತದೆ. ಶಿಕ್ಷಣ ಮಹತ್ವದ ಅರಿವುಂಟಾದ ಜನರಲ್ಲಿ ತನ್ನೂರಿನ ಮಕ್ಕಳ ಶಿಕ್ಷಣ ಪ್ರಗತಿ, ಅದಕ್ಕಾಗಿ ಇರುವ ಶಾಲೆ ಮತ್ತು ಅದರ ಅಭಿವೃದ್ಧಿಗಾಗಿ ಮನಸ್ಸು ಮಾಡುವ ಕೆಲಸ ಆರಂಭವಾಗುತ್ತದೆ.

3.9. ಸೂಕ್ಷ್ಮ ಯೋಜನೆ ಪ್ರಕ್ರಿಯೆಯ ಪ್ರಯೋಜನಗಳು :

ಗ್ರಾಮ ಮಟ್ಟದಲ್ಲಿ ಶಿಕ್ಷಣ ಪ್ರಕ್ರಿಯೆಗಾಗಿ ಒಂದು ತಂಡರಚನೆಯಾಗುವ ಬಗ್ಗೆ :

ಸೂಕ್ಷ್ಮ ಯೋಜನೆ ಪ್ರಕ್ರಿಯೆ ನಂತರ ಶೈಕ್ಷಣಿಕ ಅಭಿವೃದ್ಧಿಗಾಗಿ ಸದಾ ಕಾಳಜಿವಹಿಸುವಂತಹ ಒಂದು ತಂಡದ ಅಗತ್ಯವಿದೆ. ಈ ಪ್ರಕ್ರಿಯೆಯಿಂದ ಗ್ರಾಮದ ಅಭಿವೃದ್ಧಿಯ ಜೊತೆಗೆ ಶಿಕ್ಷಣದ ಅಭಿವೃದ್ಧಿಯೂ ಆಗಬೇಕಾಗಿದೆ 'ಶಿಕ್ಷಣ' ಅಭಿವೃದ್ಧಿಯೆಂದರೆ ಗ್ರಾಮದ ಅಭಿವೃದ್ಧಿ ಎಂದು ಅರ್ಥ. ಗ್ರಾಮದಲ್ಲಿಯ 'ಗ್ರಾಮಶಿಕ್ಷಣ ಸಮಿತಿ' ಅಧ್ಯಕ್ಷರು, ಸದಸ್ಯರು, ಯುವಕರು, ಯುವತಿ ಮಂಡಳಿಗಳು, ಸಂಘ ಸಂಸ್ಥೆಗಳು, ಗ್ರಾಮ ಪಂಚಾಯಿತಿ ಸದಸ್ಯರು ಒಂದು ತಂಡವನ್ನು ರಚಿಸಿ ಈ ತಂಡದ ಮೂಲಕ 'ಶಿಕ್ಷಣಪರ' ಕಾರ್ಯನಿರ್ವಹಿಸಲು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಪ್ರಕ್ರಿಯೆಯ ಮೂಲಕ ರೂಪಿಸಿದ 'ಕ್ರಿಯಾಯೋಜನೆ'ಯಂತೆ ಆಗಾಗ ಸಭೆ ಸೇರಿ ಕಾರ್ಯ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಲಾಗುತ್ತದೆ.

3.10. ಸ್ಥಳೀಯ ಗ್ರಾಮ ಶಿಕ್ಷಣ ಸಮಿತಿ ಬಲಗೊಳ್ಳುವಿಕೆ :

ಸೂಕ್ಷ್ಮ ಯೋಜನೆಯ ಪ್ರಕ್ರಿಯೆಯ ನಂತರ 'ಗ್ರಾಮ ಶಿಕ್ಷಣ' ಸಮಿತಿಯ ಜವಾಬ್ದಾರಿ ಹೆಚ್ಚುವುದರಿಂದ ತಾನಾಗಿಯೇ ಅದು ಬಲವರ್ಧನೆ ಗೊಳ್ಳುತ್ತದೆ. ಸೂಕ್ಷ್ಮ ಯೋಜನೆಗೆ ಪೂರ್ವದಲ್ಲಿ 'ಗ್ರಾಮ ಶಿಕ್ಷಣ' ಸಮಿತಿ ಸದಸ್ಯರು ಜವಾಬ್ದಾರಿಯನ್ನರಿತು ಕೆಲಸ ಮಾಡುವ ಮನಸ್ಸಿನ ಕೊರತೆಯನ್ನು ಅನುಭವಿಸಬಹುದಾಗಿತ್ತು. ಆದರೆ ಈ ಪ್ರಕ್ರಿಯೆಯು ಜನರಲ್ಲಿ ಜಾಗೃತಿ ಮೂಡಿ 'ನನ್ನಶಾಲೆ' ನನ್ನ ಮಕ್ಕಳು , 'ನನ್ನೂರಿನ ಶಿಕ್ಷಣ' ಎಂಬ ಕಡೆ ಮನಸ್ಸು ಯೋಚಿಸುವಂತಾಗುವುದರಿಂದ ಕಡ್ಡಾಯವಾಗಿ ಪ್ರತಿ ತಿಂಗಳು ಕರೆಯುವ ಗ್ರಾಮ ಶಿಕ್ಷಣ ಸಮಿತಿ ಸಭೆಯಲ್ಲಿ ಭಾಗವಹಿಸುವಂತಾಗುತ್ತದೆ. ಶಾಲೆಗೆ ಅವಶ್ಯಕವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮತ್ತು ಎದುರಾಗುವ ಶೈಕ್ಷಣಿಕ ಸಮಸ್ಯೆಗಳತ್ತ ಪರಿಹಾರ ಕಂಡುಕೊಳ್ಳಲು ಮುಂದಾಗಬಹುದಾಗಿದೆ. ಹಾಗಾಗಿ ಸ್ಥಳೀಯವಾಗಿ ಗ್ರಾಮ ಶಿಕ್ಷಣ ಸಮಿತಿ ಬಲಗೊಂಡಂತಾಗುತ್ತದೆ. ಗ್ರಾಮ ಶಿಕ್ಷಣ ಸಮಿತಿಯಲ್ಲಿ ವಿಕೇಂದ್ರೀಕೃತ ವ್ಯವಸ್ಥೆ ಇದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೊಳಿಸಿದ ಬಗ್ಗೆ ಈಗಾಗಲೇ ಹೇಳಿದಂತೆ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸುವುದು ಈ ಪಂಚಾಯಿತಿ ವ್ಯವಸ್ಥೆಯ ಒಟ್ಟು ಜವಾಬ್ದಾರಿ ಆಗಿದೆ.ಗ್ರಾಮ ಶಿಕ್ಷಣ ಸಮಿತಿಗಳು ಪ್ರತಿ ಗ್ರಾಮದಲ್ಲಿಯೂ ಇರುವುದರಿಂದ ಸೂಕ್ಷ್ಮ ಯೋಜನೆಯಂತಹ ಕಾರ್ಯಕ್ರಮಗಳು ಸಮುದಾಯವನ್ನು ಭಾಗವಹಿಸುವಂತೆಮಾಡಿ ಅದನ್ನು

ಬಲಗೊಳಿಸುತ್ತವೆ. ಮತ್ತು ಶಿಕ್ಷಣದ ಕಾರ್ಯಕೈಗೊಳ್ಳಲು ತೊಡಗಿಸುತ್ತವೆ. ಸ್ಥಳೀಯ ಸಮುದಾಯ ಭಾಗವಹಿಸಲು ಅವಕಾಶವಿರುತ್ತದೆ.

ಸೂಕ್ಷ್ಮಯೋಜನೆ ಪ್ರಕ್ರಿಯೆಯಿಂದ ಸ್ಥಳೀಯ ಜನರು ಭಾಗವಹಿಸುವಂತಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಜನರು ಖುದ್ದು ಭಾಗವಹಿಸುವುದರಿಂದ ಶೈಕ್ಷಣಿಕವಾಗಿರುವ ಅನೇಕ ಚಟುವಟಿಕೆಗಳಿಗೆ ಬೆಂಬಲ ದೊರಕುತ್ತದೆ. ಮಕ್ಕಳಿಂದ ಹಿಡಿದು ಹಿರಿಯರವರೆಗೂ, ಮಹಿಳೆಯರು, ಯುವಕರು, ಸಂಘಟನೆಗಳೂ ಶಿಕ್ಷಣದಪರ ಕಾರ್ಯನಿರ್ವಹಿಸಲು ಮುಂದೆ ಬರುವುದರಿಂದ ಇಡೀ ಸಮುದಾಯವೇ ಪ್ರಾಥಮಿಕ ಶಿಕ್ಷಣ ಕುರಿತು ಭಾಗವಹಿಸಿದಂತಾಗುತ್ತದೆ. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಅವಕಾಶವಿರುತ್ತದೆ. ಈ ಪ್ರಕ್ರಿಯೆಯಿಂದ ಹಳ್ಳಿಯ ಮಟ್ಟದಲ್ಲಿಯೇ ಲಭ್ಯವಿರುವ ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗ ಮಾಡಿಕೊಳ್ಳಬಹುದಾಗಿದೆ.

ಉದಾ:-

1. ಶಾಲೆಯ ಭೌತಿಕ ಸೌಕರ್ಯಗಳಲ್ಲೊಂದಾದ ಶಾಲಾಕಟ್ಟಡ. ಚಿಕ್ಕ ಪುಟ್ಟ ದುರಸ್ತಿಗೊಳಪಡಬೇಕಾಗುತ್ತದೆ. ಬಾಗಿಲು ಕಿಟಕಿ ಮುರಿದಿವೆ. ಇಂಥವುಗಳನ್ನು ಸ್ಥಳೀಯರೇ ದುರಸ್ತಿಗೊಳಿಸಿಕೊಳ್ಳಬಹುದು.
2. ಶಾಲೆಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಸ್ಥಳೀಯವಾಗಿ ಲಭ್ಯವಿರುವ ಯುವಕ - ಯುವತಿಯರ ಮನವೊಲಿಸಿ ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗಲು ಅವರ ತಂದೆ - ತಾಯಿಯರ ಮನವೊಲಿಸಬಹುದು.
3. ಸ್ಥಳೀಯವಾಗಿ ಲಭ್ಯವಿರುವ ಕುಡಿಯುವ ನೀರನ್ನು ಶಾಲೆಗೆ ಬಳಸಿಕೊಳ್ಳಬಹುದು.
4. ಮಕ್ಕಳ ದೈಹಿಕ ಚಟುವಟಿಕೆಗಳನ್ನು ಚುರುಕುಗೊಳಿಸಲು ಆಟದ ಮೈದಾನ ಅಭಿವೃದ್ಧಿಪಡಿಸಬಹುದು.
5. ಸ್ಥಳೀಯವಾಗಿ ಲಭ್ಯವಿರುವ ಅರ್ಹ ವಿದ್ಯಾವಂತ ನಿರುದ್ಯೋಗಿಗಳನ್ನು ಬಳಸಿಕೊಂಡು ಶಿಕ್ಷಕರ ಕೊರತೆಯನ್ನು ನೀಗಿಸಿಕೊಳ್ಳಬಹುದು.
6. ಪ್ರತಿ ಶಾಲೆಗೆ ಡಿ.ಪಿ. ಇ.ಪಿ. ವತಿಯಿಂದ ರೂ. 2000/- ಅನುದಾನವನ್ನು ನೀಡಲಾಗುತ್ತದೆ. ಇದರ ಸಹಕಾರದೊಂದಿಗೆ ಸ್ಥಳೀಯ ಸಂಪನ್ಮೂಲ ಕ್ರೋಢಿಕರಿಸಿಕೊಂಡು ಶಿಕ್ಷಣ ಅಭಿವೃದ್ಧಿಗಾಗಿ ಬಳಸಿಕೊಳ್ಳಬಹುದು.
7. ಗ್ರಾಮದಲ್ಲಿ ದಾನಿಗಳು ಇದ್ದೇ ಇರುತ್ತಾರೆ. ಈ ಪ್ರಕ್ರಿಯೆಯಿಂದ ಅಂತಹ ಜನರಲ್ಲಿ ಜಾಗೃತಿಮೂಡಿ ಶಾಲೆಗಾಗಿ ದೇಣಿಗೆ ಕೊಡಲು ಮುಂದೆ ಬರುತ್ತಾರೆ.
8. ಶಾಲೆಗೆ 5-10 ಎಕೆರೆಯಷ್ಟು ಜಮೀನನ್ನು ದಾನ ನೀಡಿ ಅದರ ಅಭಿವೃದ್ಧಿಗಾಗಿ ಕಾಳಜಿ ವಹಿಸುವವರು ಇದ್ದಾರೆ.
9. ಮಕ್ಕಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ನೀಡುವವರಿದ್ದಾರೆ.
10. ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲು 'ವಿದ್ಯಾರ್ಥಿವೇತನ' 'ಬಹುಮಾನ'ವನ್ನು ನೀಡಲು ಮುಂದಾಗು ವವರಿದ್ದಾರೆ.

ಈ ಮೇಲಿನ ಎಲ್ಲಾ ಹರವುಗಳಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಬಳಸಿಕೊಳ್ಳಬಹುದಾಗಿದೆ.

ಈ ಮೇಲಿನ ಎಲ್ಲಾ ಕ್ರಿಯೆಗಳ ಮೂಲಕ ಶಿಕ್ಷಣವು ಸಾರ್ವತ್ರೀಕರಣಗೊಳ್ಳುತ್ತದೆ. ಶಿಕ್ಷಣ ಸಾರ್ವತ್ರೀಕರಣವೇ ಶಿಕ್ಷಣದ ಅಭಿವೃದ್ಧಿಗೆ ಮೂಲವಾಗುತ್ತದೆ. ಸಮುದಾಯ ಹೆಚ್ಚು ಹೆಚ್ಚು ಜಾಗೃತಿಗೊಂಡಾಗಲೆಲ್ಲಾ ಶಿಕ್ಷಣವು ಹೆಚ್ಚು ಪ್ರಗತಿಯಾಗಲು ಸಾಧ್ಯವಾಗುತ್ತದೆ. ಈ ಸಾಧ್ಯತೆಗೆ ಸೂಕ್ಷ್ಮ ಯೋಜನೆಯಂತಹ ಪ್ರಕ್ರಿಯೆಯೇ ಮೂಲವಾಗಿರುತ್ತದೆ. ಇಂತಹ ಮಹತ್ವ ಇರುವ ಸೂಕ್ಷ್ಮ ಯೋಜನೆ ಕಾರ್ಯಕ್ರಮವು ಜನರ ಭಾಗವಹಿಸುವಿಕೆಯ ಮುಖಾಂತರ ಇಡೀ ಸಮುದಾಯವೇ ಜಾಗೃತವಾಗುವಂತೆ ಮಾಡುತ್ತದೆ. ಈ ಕಾರ್ಯಕ್ರಮಗಳನ್ನು ಜನವಸತಿ ಪ್ರದೇಶಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ಅನುಷ್ಠಾನಗೊಳಿಸಿದರೆ ಫಲಿತಾಂಶ ನಿರೀಕ್ಷಿತ ಮಟ್ಟದಲ್ಲಿ ಸಿಗುವ ಅವಕಾಶವಿರುತ್ತದೆ. ಡಿ.ಪಿ.ಇ.ಪಿ. ಯೋಜನೆಯಡಿಯಲ್ಲಿ ಸೂಕ್ಷ್ಮ ಯೋಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಲ್ಲಿ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಅದರ ವಿಶ್ಲೇಷಣೆಯನ್ನು ಮುಂದಿನ ನಾಲ್ಕನೆಯ ಅಧ್ಯಾಯದಲ್ಲಿ ನೀಡಲಾಗಿದೆ.

ಅಧ್ಯಾಯ - 4

ವಿವಿಧ ಮೂಲಗಳಿಂದ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆ.

ಪೀಠಿಕೆ.

4.1. ಭಾಗ-1 ಕೌಟುಂಬಿಕ ವಿವರ.

4.2. ಭಾಗ -2 ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಾಥಮಿಕ ದತ್ತಾಂಶದ ವಿಶ್ಲೇಷಣೆ.

4.3. ಭಾಗ - 3 ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ (ಗ್ರಾಮ ಶಿಕ್ಷಣ ಸಮಿತಿ-ಸದಸ್ಯರೊಂದಿಗೆ).

4.4. ಭಾಗ - 4 ಪರ್ಯಾಯ ಶಾಲೆಗೆ ಹಾಜರಾಗುವ ಮಕ್ಕಳ ಪಾಲಕ/ ಪೋಷಕರಿಂದ ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆ.

4.5. ಭಾಗ - 5 ಶಾಲಾ ಮಾಹಿತಿ.

ಪೀಠಿಕೆ :

ಹಿಂದಿನ ಅಧ್ಯಾಯದಲ್ಲಿ ಸೂಕ್ಷ್ಮ ಯೋಜನೆ ಕಾರ್ಯಕ್ರಮ ಹಾಗೂ ವಿಕೇಂದ್ರೀಕರಣ ಪ್ರಕ್ರಿಯೆಗಳ ಸ್ಥೂಲ ಪರಿಚಯ ಮಾಡಿಕೊಳ್ಳಲಾಯಿತು. ಸೂಕ್ಷ್ಮ ಯೋಜನೆಯು ಗ್ರಾಮದ ಸಂಪನ್ಮೂಲ ವ್ಯವಸ್ಥೆಗೆ ಸರಿ ಹೊಂದುವ ಯೋಜನೆಯನ್ನು ರೂಪಿಸುತ್ತದೆ ಎಂದು ವ್ಯಕ್ತವಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಯೋಜನಾ ಪ್ರಕ್ರಿಯೆಯು ಸರಿಯಾಗಿದ್ದರೆ ಮಾತ್ರ ಅನುಷ್ಠಾನಗೊಳಿಸುವುದು ಸುಲಭವಾಗುತ್ತದೆ. ಹಾಗೆಯೆ ಯೋಜನೆಯ ಅನುಷ್ಠಾನವೂ ಸಮುದಾಯದ ಪಾಲ್ಗೊಳ್ಳುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಸ್ಥಳೀಯ ಸಮುದಾಯವನ್ನು ತೊಡಗಿಸಿಕೊಂಡು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಕ್ರಿಯೆಯಾಗಿದೆ ಎಂಬ ಕುರಿತು ಚಿಂತನೆಯನ್ನು ನಡೆಸಿ, ಗ್ರಾಮದ ಸಂಪನ್ಮೂಲ ವ್ಯವಸ್ಥೆಗೆ ಸರಿ ಹೊಂದುವ ಶೈಕ್ಷಣಿಕ ಯೋಜನೆಯನ್ನು ರೂಪಿಸುತ್ತದೆ. ಯೋಜನಾ ಪ್ರಕ್ರಿಯೆಯು ಸರಿಯಾಗಿದ್ದರೆ ಮಾತ್ರ ಅನುಷ್ಠಾನಗೊಳಿ ಸುವುದು ಸುಲಭವಾಗುತ್ತದೆ. ಯೋಜನೆಯ ಅನುಷ್ಠಾನವು ಸಮುದಾಯ ಪಾಲ್ಗೊಳ್ಳುವಿ ಕೆಯ ಮೇಲೆ ಅವಲಂಬಿತವಾಗಿರುತ್ತದೆ.

ಸೂಕ್ಷ್ಮ ಯೋಜನಾ ಕಾರ್ಯಕ್ರಮವನ್ನು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ ಮೂಲಕ ಅನುಷ್ಠಾನಗೊಳಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಹೊಸಪೇಟೆ ಮತ್ತು ಸಂಡೂರು ತಾಲೂಕುಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಈ ಅಧ್ಯಯನಕ್ಕಾಗಿ ಕೂಡ್ಲಿಗಿ ತಾಲೂಕಿನ ಮೂರು ಸಮೂಹ ಸಂಪನ್ಮೂಲ ಕೇಂದ್ರಗಳಲ್ಲಿ ತಲಾ ಒಂದು ಗ್ರಾಮವನ್ನು ಹೊಸಪೇಟೆ ತಾಲೂಕಿನ ಎರಡು ಸಮೂಹ ಸಂಪನ್ಮೂಲ ಕೇಂದ್ರಗಳಲ್ಲಿ ತಲಾ ಒಂದರಂತೆ ಒಟ್ಟು ಐದು ಗ್ರಾಮಗಳಲ್ಲಿ ದತ್ತಾಂಶ ಮತ್ತು ಮಾಹಿತಿ ಸಂಗ್ರಹಣೆ ಮಾಡಲಾಗಿದೆ. ಈ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಈ ಕೆಳಗಿನ ಮಾನದಂಡಗಳನ್ನು ಇಟ್ಟುಕೊಳ್ಳಲಾಗಿತ್ತು.

- ಶಿಕ್ಷಣದ ಅಭಿವೃದ್ಧಿಯ ಬಗ್ಗೆ ಸಮುದಾಯ ವ್ಯಕ್ತಪಡಿಸಿರುವ ಕಾಳಜಿ.
- ಕಾರ್ಯಕ್ರಮಕ್ಕೆ ಸಮುದಾಯ ನೀಡಿರುವ ಬೆಂಬಲ.
- ಶಿಕ್ಷಣದ ಅಭಿವೃದ್ಧಿಗೆ ಸಮುದಾಯವು ಸ್ಪಂದಿಸಿರುವ ರೀತಿ.


ಈ ಮೇಲಿನ ಮೂರು ಬಗೆಗಳ ಮಾದರಿಯನ್ನು ಮಾನದಂಡವನ್ನಾಗಿ ಅಳವಡಿಸಿಕೊಳ್ಳಲಾಗಿತ್ತು.

ಕರ್ನಾಟಕ ನಕಾಶೆಯಲ್ಲಿ ಬಳ್ಳಾರಿ ಜಿಲ್ಲೆ.

ಆಯ್ದುಕೊಂಡ ಮಾದರಿ ತಾಲೂಕುಗಳು :- 114

ಹಳದಿ : ಹೊಸಪೇಟೆ

ನೀಲಿ : ಕೂಡ್ಲಿಗಿ



ಆಯ್ದ ಗ್ರಾಮಗಳ ವಿವರ:

ಕ್ರ. ಸಂ.	ತಾಲೂಕಿನ ಹೆಸರು	ಸಮೂಹ ಸಂಪನ್ಮೂಲ ಕೇಂದ್ರ	ಕೇಂದ್ರಗಳ ಹೆಸರು
1.	ಕೂಡ್ಲಿಗಿ	ಗಜಾಪುರ	ಗಜಾಪುರ
2.	ಕೂಡ್ಲಿಗಿ	ಬಾಲಕಿಯರ ಹಿ.ಪ್ರಾ.ಶಾಲೆ, ಕೂಡ್ಲಿಗಿ	ಜಂಗಮಸೋವೇನಹಳ್ಳಿ
3.	ಕೂಡ್ಲಿಗಿ	ಬಾಲಕರ ಹಿ.ಪ್ರಾ.ಶಾಲೆ, ಕೂಡ್ಲಿಗಿ	ಮರಬಾನಹಳ್ಳಿ
4.	ಹೊಸಪೇಟೆ	ಮರಿಯಮ್ಮನಹಳ್ಳಿ	ನಂದಿಬಂಡಿ
5.	ಹೊಸಪೇಟೆ	ನಾಗಲಾಪುರ	ದೇವಲಾಪುರ

ಈ ಐದು ಗ್ರಾಮಗಳಿಗೆ ಪೂರ್ವಭಾವಿಯಾಗಿ ಭೇಟಿ ನೀಡಿ, ಕ್ಷೇತ್ರಾಧ್ಯಾಯನದ ಮೂಲಕ ಸಮೀಕ್ಷೆ ಮಾಡಿ ಮಾಹಿತಿ ಮತ್ತು ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಪ್ರತಿ ಗ್ರಾಮದಲ್ಲೂ ಹೋದಾಗ ಆಯಾ ಶಾಲೆಯ ಮುಖ್ಯೋಪಾಧ್ಯಾಯರುಗಳನ್ನು, ಅನೌಪಚಾರಿಕ ಶಿಕ್ಷಣ ಕೇಂದ್ರದ (ಪರ್ಯಾಯ ಶಾಲೆ) ಬೋಧಕರು, ಶಾಲಾ ಶಿಕ್ಷಕರು , ಕೆಲವು ಕಡೆ ಗ್ರಾಮದ ಯುವಕರನ್ನು ಸಂಪರ್ಕಿಸಿ ದತ್ತಾಂಶ ಸಂಗ್ರಹಿಸಲಾಗಿದೆ. ಆಯ್ಕೆ ಮಾಡಿಕೊಂಡ ಗ್ರಾಮಗಳಲ್ಲಿ ಕೆಲವು ಸಂದರ್ಭಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು, ಮಹಿಳೆಯರನ್ನು, ಅಂಗನವಾಡಿ ಕಾರ್ಯಕರ್ತೆಯರ ನೆರವಿನಿಂದ ಸಂದರ್ಶಿಸಿ, ಅವಶ್ಯಕವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ದತ್ತಾಂಶ ಸಂಗ್ರಹಣೆಗಾಗಿ ವಿವಿಧ ಸಾಧನ-ಸಾಮಗ್ರಿಗಳನ್ನು ಬಳಸಿಕೊಂಡು ಪ್ರತ್ಯೇಕವಾದ ನಮೂನೆಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ನಮೂನೆಗಳಲ್ಲಿ ಪ್ರಶ್ನಾವಳಿ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ನಮೂನೆಗಳು ಹಾಗೂ ಪ್ರಶ್ನೆಗಳನ್ನು ಸಿದ್ಧಪಡಿಸಿದ ನಂತರ ಈ ಕ್ಷೇತ್ರದಲ್ಲಿ ಅನುಭವವಿರುವ ಪರಿಣಿತರ ಗಮನಕ್ಕೆ ತರಲಾಗಿದೆ. ಅವರ ಅಭಿಪ್ರಾಯಗಳನ್ನು ಪಡೆದು, ಅವರ ಅನುಮೋದನೆಯ ನಂತರ ಕ್ಷೇತ್ರ ಕಾರ್ಯದಲ್ಲಿ ಅಳವಡಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹಣೆಗಾಗಿ ಸಂಶೋಧನೆಯ ವಿಷಯವನ್ನು ಒಟ್ಟು ಐದು ಭಾಗಗಳನ್ನಾಗಿ ಮಾಡಿಕೊಂಡು ನಮೂನೆಗಳನ್ನು ಸಿದ್ಧಪಡಿಸಲಾಗಿದೆ. ಭಾಗ -1ರಲ್ಲಿ ಗ್ರಾಮದ ಹೆಸರು , ಸಮೂಹ ಸಂಪನ್ಮೂಲ ಕೇಂದ್ರದ ಹೆಸರು, ಶಾಲೆಯ ಹೆಸರು, ಕುಟುಂಬದ ಮುಖ್ಯಸ್ಥರ ಹೆಸರು, ಕುಟುಂಬದ ವರ್ಗ (ಜಾತಿ), ಕುಟುಂಬದ ವಿವರದ ಬಗ್ಗೆ ನಮೂದಿಸಿ ವಿವರ ಪಡೆಯಲಾಗಿದೆ. ಅಲ್ಲದೆ, ಕುಟುಂಬದ ವಿವರ ಸಂಗ್ರಹಿಸುವಾಗ ವಿಭಕ್ತ ಕುಟುಂಬ, ಅವಿಭಕ್ತ ಕುಟುಂಬ, ವಿಸ್ತೃತ ಕುಟುಂಬಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಜೊತೆಗೆ ಕುಟುಂಬದಲ್ಲಿಯ ಮುಖ್ಯಸ್ಥನೊಂದಿಗಿರುವ ಸಂಬಂಧ, ಲಿಂಗ, ವಯಸ್ಸು, ಶಿಕ್ಷಣ, ವೃತ್ತಿ, ಆದಾಯ ಇತ್ಯಾದಿ ವಿವರವನ್ನು ಪಡೆಯಲಾಗಿದೆ. ಮಾಹಿತಿ ಸಂಗ್ರಹಣೆಯನ್ನು ಸುಲಭಗೊಳಿಸಲು ಕೆಲವು ಕಡೆ ಸಂಕೇತಗಳನ್ನು ಬಳಸಿಕೊಳ್ಳಲಾಗಿದೆ. (ಉದಾ: ಲಿಂಗ : ಗಂಡು -1, ಹೆಣ್ಣು - 2, ಶಿಕ್ಷಣ : ಅನಕ್ಷರಸ್ಥರು - 1, ಪ್ರಾಥಮಿಕ ಶಿಕ್ಷಣ - 2, ಹಿರಿಯ ಪ್ರಾಥಮಿಕ ಶಿಕ್ಷಣ - 3, ಪ್ರೌಢ ಶಿಕ್ಷಣ - 4 ಇತ್ಯಾದಿ ವಿವರ ನಮೂನೆಯಲ್ಲಿ ದಾಖಲಾಗಿದೆ).

ಭಾಗ -2 ರಲ್ಲಿ ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಸಿದ್ಧಪಡಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾಹಿತಿಯನ್ನು ಗ್ರಾಮದ ಎಲ್ಲಾ ಕುಟುಂಬದವರಿಂದ ಪಡೆಯಲಾಗಿದೆ. ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಎಷ್ಟು ಪರಿಣಾಮಕಾರಿಯಾಗಿದೆ ಎಂದು ತಿಳಿಯಲು ಭಾಗ-3ರಲ್ಲಿ ಆಯಾ ಗ್ರಾಮದ ಗ್ರಾಮ ಶಿಕ್ಷಣ ಸಮಿತಿ ಸದಸ್ಯರಿಂದ ವಿವರವನ್ನು ಪಡೆಯಲಾಗಿದೆ. ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ನೇರವಾಗಿ ಸಂಪರ್ಕಿಸಲಾಗಿದೆ. ಕೆಲವು ಕಡೆ ಅವರೊಂದಿಗೆ ಸಂದರ್ಶನ ಮಾಡಲಾಗಿದೆ. ಇನ್ನೂ ಕೆಲವು ಕಡೆ ಗುಂಪಾಗಿ ಚರ್ಚಿಸಿ, ವಿವರವನ್ನು ಸಂಗ್ರಹಿಸಲಾಗಿದೆ. ಭಾಗ-4ರಲ್ಲಿಯ ಮಾಹಿತಿಯನ್ನು ಗ್ರಾಮದಲ್ಲಿಯ ಪರ್ಯಾಯ ಶಾಲೆಯ (ಅನೌಪಚಾರಿಕ ಶಿಕ್ಷಣ) ಮಕ್ಕಳ ಪಾಲಕ/ಪೋಷಕರಿಂದ ಪಡೆಯಲಾಗಿದೆ. ಭಾಗ - 5ರ ಮಾಹಿತಿಯನ್ನು ಆಯಾ ಗ್ರಾಮದ ಶಾಲೆಯ ಮುಖ್ಯ ಗುರುಗುಗಳಿಂದ ಸಂಗ್ರಹಿಸಲಾಗಿದೆ.

ದತ್ತಾಂಶ ಸಂಗ್ರಹಣೆಗಾಗಿ ವಿಶೇಷ ವಿನ್ಯಾಸವನ್ನು ಸಿದ್ಧಪಡಿಸಲಾಗಿದ್ದು, ಪ್ರತಿ ಮನೆಗಳಿಗೆ ಭೇಟಿ ನೀಡಿ ಪ್ರಶ್ನಾವಳಿಗಳ ಮೂಲಕ ಸಂಬಂಧಿಸಿದವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಭೇಟಿಯ ಸಮಯದಲ್ಲಿ ಕುಟುಂಬದ ಹಿರಿಯರಲ್ಲಿ ಯಾರು ಲಭ್ಯವಿರುತ್ತಾರೋ ಅವರಿಂದ ಮಾಹಿತಿಯನ್ನು ಪಡೆಯಲಾಗಿದೆ. ಭಾಗ -3 ಮತ್ತು ಭಾಗ - 4ಕ್ಕೆ ಸಂಬಂಧಿಸಿದಂತೆ ಕಡ್ಡಾಯವಾಗಿ ಪಾಲಕ/ಪೋಷಕರು ಹಾಗೂ ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನೇ ನೇರವಾಗಿ ಸಂಪರ್ಕಿಸಲಾಗಿದೆ.

ನಮೂನೆಯಲ್ಲಿ ಮೂರು ಪ್ರಕಾರದ ಪ್ರಶ್ನಾವಳಿಗಳನ್ನು ಸಿದ್ಧಪಡಿಲಾಗಿತ್ತು. 1 ಹೌದು/ ಇಲ್ಲ. 2 ಹೌದಾದರೆ ಏನೇನು ಆಗಿದೆ? ಇದಕ್ಕೆ ಸಂಭಾವನೀಯ ಉಪ ಉತ್ತರಗಳನ್ನು ವಿನ್ಯಾಸಗೊಳಿಸಿ, ಮಾಹಿತಿಯನ್ನು ಪಡೆಯಲಾಗಿದೆ. 3-ಹೌದಾದರೆ ಕ್ರಮ ಕೈಗೊಂಡ ಬಗ್ಗೆ ವಿವರಿಸಿ ಎಂದಿರುವ ಕಡೆಯಲ್ಲಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡು ಕ್ರೋಢೀಕರಿಸಲಾಗಿದೆ. ಭಾಗ-5ಕ್ಕೆ ಸಂಬಂಧಿಸಿದಂತೆ ಶಾಲೆಯಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಕಳೆದ ಮೂರು ವರ್ಷಗಳ (1998-99, 1999-2000, 2000-2001) ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಲಾದ ಎಲ್ಲಾ ನಮೂನೆಗಳ ದತ್ತಾಂಶವನ್ನು ಗುಣಾತ್ಮಕ ವಿಶ್ಲೇಷಣೆಗಾಗಿ ಮತ್ತು ಸುಲಭವಾಗಿ ವಿಶ್ಲೇಷಿಸಲು ಎರಡೂ ತಾಲೂಕಿನ (ಕೂಡ್ಲಿಗಿ, ಹೊಸಪೇಟೆ) ಒಟ್ಟು ಐದು ಗ್ರಾಮಗಳನ್ನು ಆಯಾ ಕೋಷ್ಟಕಗಳ ಅಡಿಯಲ್ಲಿ ಕ್ರೋಢೀಕರಿಸಿ ವಿಶ್ಲೇಷಣೆ ಮಾಡಲಾಗಿದೆ. ಭಾಗ-1ಕ್ಕೆ ಸಂಬಂಧಿಸಿದಂತೆ ಐದೂ ಗ್ರಾಮಗಳ ಕುಟುಂಬಗಳ ವಿವರಗಳನ್ನು ಒಂದೇ ಕೋಷ್ಟಕದಡಿ ಕ್ರೋಢೀಕರಿಸಿ ವಿಶ್ಲೇಷಿಸಲಾಗಿದೆ. ಮೇಲಿನ ಎಲ್ಲಾ ಭಾಗಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕಗಳಲ್ಲಿ ಭಾಗಾವಾರು, ಕೋಷ್ಟಕವಾರು ವಿಶ್ಲೇಷಣೆ ಮಾಡಲಾಗಿದೆ. ವಿಶ್ಲೇಷಿಸಿದ ಕೋಷ್ಟಕದ ದತ್ತಾಂಶದ ವಿವರಗಳಲ್ಲಿ ಆವರಣದಲ್ಲಿ ನೀಡಿದ ಸಂಖ್ಯೆಗಳು ಕುಟುಂಬಗಳ ಸಂಖ್ಯೆಗಳಾಗಿರುತ್ತವೆ.

4.1. ಕೌಟುಂಬಿಕ ಹಿನ್ನೆಲೆ:

ಆಯ್ದುಕೊಂಡ ಐದು ಗ್ರಾಮಗಳಲ್ಲಿ ಒಟ್ಟು 867 ಗ್ರಾಮಗಳನ್ನು ಸಮೀಕ್ಷೆ ಮಾಡಲಾಯಿತು. ಐದು ಗ್ರಾಮಗಳ ಪೈಕಿ ಹೊಸಪೇಟೆ ತಾಲೂಕಿನ ದೇವಲಾಪುರ ಗ್ರಾಮದ ಒಟ್ಟು 277 ಕುಟುಂಬಗಳನ್ನು ಹೊಂದಿದೆ. ಅತ್ಯಂತ ಕಡಿಮೆ ಕುಟುಂಬಗಳನ್ನು ಹೊಂದಿದ ಗ್ರಾಮ ಕೂಡ್ಲಿಗಿ ತಾಲೂಕಿನ ಜಂಗಮ ಸೋವೇನಹಳ್ಳಿ 126 ಕುಟುಂಬಗಳನ್ನು ಹೊಂದಿದೆ.


ವಿವಿಧ ವರ್ಗಗಳಿಗೆ ಸೇರಿದ ಕುಟುಂಬಗಳ ಕುರಿತು ಶೇಕಡವಾರು ವಿಶ್ಲೇಷಿಸಿದಾಗ ಐದು ಗ್ರಾಮಗಳನ್ನು ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳು ಶೇ. 25ರಷ್ಟು ಇರುವುದು ಕಂಡು ಬಂದಿದೆ. ಹೊಸಪೇಟೆ ತಾಲೂಕಿನ ನಂದಿಬಂಡಿ ಗ್ರಾಮವು ಅತ್ಯಂತ ಹೆಚ್ಚು ಅಂದರೆ, ಶೇ. 41 (75)ರಷ್ಟು ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳನ್ನು ಹೊಂದಿದೆ. ಅತ್ಯಂತ ಕಡಿಮೆ ಶೇ. 2 ಕುಟುಂಬಗಳನ್ನು ಕೂಡ್ಲಿಗಿ ತಾಲೂಕಿನ ಜಂಗಮಸೋವೇನಹಳ್ಳಿ ಹೊಂದಿದೆ.

ಕೋಷ್ಟಕ - 1 : ವಿವಿಧ ವರ್ಗಗಳ ಕುಟುಂಬದ ವಿವರ:

ಕ್ರ. ಸಂ	ಗ್ರಾಮದ ಹೆಸರು	*ಸ.ಸಂ. ಕೇಂದ್ರ	ಕುಟುಂಬಗಳ ಸಂಖ್ಯೆ	ಕುಟುಂಬದ ವರ್ಗ							
				ಪ.ಜಾ	ಶೇ.	ಪ.ಪಂ	ಶೇ.	ಹಿಂ.ವ	ಶೇ.	ಇತರೆ	ಶೇ.
1	ಗಜಾಪುರ	ಗಜಾಪುರ	189	48	25	65	34	72	38	4	2
2	ಜಂಗಮ ಸೋವೇನಹಳ್ಳಿ	ಬಾಲಕಿಯರ ಹಿ.ಪ್ರಾ.ಶಾ. ಕೂಡ್ಲಿಗಿ	126	2	2	0	0	0	0	124	98
3	ಮರಬಾನಹಳ್ಳಿ	ಮೇನ್ ಬಾಯ್ಸ್ ಹಿ.ಪ್ರಾ.ಶಾ. ಕೂಡ್ಲಿಗಿ	140	32	23	70	50	19	14	19	14
4	ನಂದಿಬಂಡಿ	ಮರಿಯಮ್ಮನಹಳ್ಳಿ	185	75	41	9	5	97	52	4	2
5	ದೇವಲಾಪುರ	ನಾಗಲಾಪುರ	227	57	25	55	24	5	02	110	48
	ಒಟ್ಟು :		**867**	**214**	**25**	**199**	**23**	**193**	**22**	**261**	**30**

***ಸ.ಸಂ. ಕೇಂದ್ರ :** ಸಮೂಹ ಸಂಪನ್ಮೂಲ ಕೇಂದ್ರ - 15 ರಿಂದ 20 ಶಾಲೆಗಳನ್ನು ಒಂದು ಕೇಂದ್ರಕ್ಕೆ ಮಾಡಿ

ರೇಖಾ ಚಿತ್ರ-1



ರೇಖಾ ಚಿತ್ರ -1 ಕೊಷ್ಟಕ-1 ರಲ್ಲಿಯ 4.1.1ರ ಕುಟುಂಬದ ವಿವಿಧ ವರ್ಗಗಳ ದತ್ತಾಂಶ ವಿವರವು ರೇಖಾ ಚಿತ್ರದಲ್ಲಿ ಈ ಮೇಲಿನಂತೆ ಕಂಡುಬಂದಿದೆ.

ಅಲ್ಲಿ ತಿಂಗಳಿಗೆ ಒಂದು ಬಾರಿ ಶಿಕ್ಷಕರ ಮಾಸಿಕ ಸಮಾವೇಶವನ್ನು ನಡೆಸಲಾಗುತ್ತಿದೆ. ಇಂತಹ ಕೇಂದ್ರವೇ ಸಂಪನ್ಮೂಲ ಕೇಂದ್ರ. ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಐದು ಗ್ರಾಮಗಳಲ್ಲಿ ಒಟ್ಟು 199 ಕುಟುಂಬಗಳಿದ್ದು, ಶೇ. 23ರಷ್ಟಿದೆ. ಅತ್ಯಂತ ಹೆಚ್ಚು ಪರಿಶಿಷ್ಟ ಪಂಗಡಗಳನ್ನು ಹೊಂದಿದ ಗ್ರಾಮ ಕೂಡ್ಲಿಗಿಯ ಮರಬಾನಹಳ್ಳಿ. ಈ ಗ್ರಾಮದಲ್ಲಿ ಶೇ. 50ರಷ್ಟು (70) ಕುಟುಂಬಗಳು ಪರಿಶಿಷ್ಟ ಪಂಗಡಕ್ಕೆ ಸೇರಿವೆ. ಪರಿಶಿಷ್ಟ ಪಂಗಡ ಕುಟುಂಬಗಳಿಲ್ಲದ ಗ್ರಾಮವೆಂದರೆ ಕೂಡ್ಲಿಗಿ ತಾಲೂಕಿನ ಜಂಗಮಸೋವೇನಹಳ್ಳಿ.

ಅಧ್ಯಯನ ನಡೆಸಿದ ಒಟ್ಟು ಐದು ಗ್ರಾಮಗಳಲ್ಲಿ ಸುಮಾರು 193 ಹಿಂದುಳಿದ ವರ್ಗಕ್ಕೆ ಸೇರಿದ ಕುಟುಂಬಗಳಿವೆ. ಹಿಂದುಳಿದ ವರ್ಗಕ್ಕೆ ಸೇರಿದ ಕುಟುಂಬಗಳನ್ನು ಹೆಚ್ಚು ಹೊಂದಿದ ಗ್ರಾಮ ಹೊಸಪೇಟೆ ತಾಲೂಕಿನ ನಂದಿಬಂಡಿ. ಈ ಗ್ರಾಮದಲ್ಲಿ ಶೇ. 52 (97)ರಷ್ಟಿದೆ. ಅದೇರೀತಿ ಜಂಗಮಸೋವೇನಹಳ್ಳಿ ಗ್ರಾಮದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಕುಟುಂಬಗಳು ಇಲ್ಲದಿರುವುದು ಕಂಡುಬಂದಿದೆ. ಈ ಗ್ರಾಮದಲ್ಲಿ ಶೇ. 98 ರಷ್ಟು ಮೇಲ್ವರ್ಗಕ್ಕೆ ಸೇರಿದ ಅಂದರೆ, ಲಿಂಗಾಯತ ಕೋಮಿಗೆ ಸೇರಿದ ಕುಟುಂಬದವರಿದ್ದಾರೆ.

ಪರಿಶಿಷ್ಟ ಜಾತಿ , ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಪಂಗಡಗಳ ಕುಟುಂಬಗಳಿಗೆ ಹೋಲಿಸಿದರೆ, ಇತರೆ ವರ್ಗಕ್ಕೆ ಸೇರಿದ ಒಟ್ಟು ಕುಟುಂಬಗಳು ಶೇ.30 (261)ರಷ್ಟಿದೆ. ಇದರಲ್ಲಿ ಇತರೆ ವರ್ಗಕ್ಕೆ ಸೇರಿದ ಅತೀ ಹೆಚ್ಚಿನ ಕುಟುಂಬಗಳನ್ನು ಹೊಂದಿದ ಗ್ರಾಮವೆಂದರೆ, ಕೂಡ್ಲಿಗಿ ತಾಲೂಕಿನ ಜಂಗಮಸೋವೇನಹಳ್ಳಿ ಶೇ.98(124)ರಷ್ಟಿದೆ. ಕೂಡ್ಲಿಗಿ ತಾಲೂಕಿನ ಗಜಾಪುರ, ಹೊಸಪೇಟೆ ತಾಲೂಕಿನ ನಂದಿಬಂಡಿ ಗ್ರಾಮಗಳೆರಡೂ ತಲಾ ನಾಲ್ಕು ಕುಟುಂಬಗಳನ್ನು ಹೊಂದಿದ್ದು, ಶೇ. 2ರಷ್ಟಿದ್ದು, ಸಮಾನಸ್ಥಾನ ಪಡೆದಿವೆ.

ಈ ವಿಶ್ಲೇಷಣೆ ಮುಂದೆ ವಿಶ್ಲೇಷಿಸುವ ಶೈಕ್ಷಣಿಕ ಪ್ರಗತಿಗೆ ಕೊಂಡಿಯಾಗುವುದರಿಂದ ಈ ಅಂಕಿ-ಅಂಶಗಳನ್ನು ನೀಡಲಾಗಿದೆ.

ಸಮೀಕ್ಷೆಯ ಮೂಲಕ ಗ್ರಾಮಗಳಲ್ಲಿಯ ಒಟ್ಟು ಕುಟುಂಬಗಳ ಸದಸ್ಯರ ವಿವರವನ್ನು ಸಂಗ್ರಹಿಸಲಾಗಿದ್ದು, ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ದತ್ತಾಂಶವನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.

4.2. ಕೋಷ್ಟಕ -2 : ಕುಟುಂಬದಲ್ಲಿಯ ಸದಸ್ಯರ ಮಾಹಿತಿ.


ಕ್ರ. ಸಂ	ಗ್ರಾಮದ ಹೆಸರು	ಸ.ಸಂ. ಕೇಂದ್ರ	ಕುಟುಂಬಗಳ ಸಂಖ್ಯೆ	ಒಟ್ಟು ಕುಟುಂಬದಲ್ಲಿನ ಸದಸ್ಯರ ಸಂಖ್ಯೆ				
				ಗಂಡಸರು	ಶೇ.	ಹೆಂಗಸರು	ಶೇ.	ಒಟ್ಟು
1	ಗಜಾಪುರ	ಗಜಾಪುರ	189	232	52	211	48	443
2	ಜಂಗಮಸೋವೇನಹಳ್ಳಿ	ಬಾಲಕಿಯರ ಹಿ.ಪ್ರಾ.ಶಾ. ಕೂಡ್ಲಿಗಿ	126	364	52	340	48	704
3	ಮರಬಾನಹಳ್ಳಿ	ಮೇನ್ ಬಾಯ್ಸ್ ಹಿ.ಪ್ರಾ.ಶಾ. ಕೂಡ್ಲಿಗಿ	140	481	49	497	51	978
4	ನಂದಿಬಂಡಿ	ಮರಿಯಮ್ಮನಹಳ್ಳಿ	185	673	52	630	48	1303
5	ದೇವಲಾಪುರ	ನಾಗಲಾಪುರ	227	620	50	625	50	1245
	ಒಟ್ಟು		**867**	**2370**	**49**	**2303**	**49**	**4673**

ಪ್ರಾಥಮಿಕ ಮೂಲಗಳ ಪ್ರಕಾರ ಐದು ಗ್ರಾಮಗಳ ಒಟ್ಟು 867 ಕುಟುಂಬಗಳಲ್ಲಿ ಗಂಡಸರು 2370, ಹೆಂಗಸರು 2303 ಒಟ್ಟು 4673 ಕುಟುಂಬದ ಸದಸ್ಯರಿದ್ದಾರೆ. ಅತಿ ಹೆಚ್ಚಿನ ಸದಸ್ಯರನ್ನು ಹೊಂದಿದ ಗ್ರಾಮ ನಂದಿಬಂಡಿ. ಅಲ್ಲಿ ಒಟ್ಟು 185 ಕುಟುಂಬಗಳಿದ್ದು, 1303 ಮಂದಿ ಸದಸ್ಯರಿದ್ದಾರೆ. ಇದರಲ್ಲಿ ಗಂಡಸರು 673, ಹೆಂಗಸರು 630 ಕ್ರಮವಾಗಿ ಶೇ. 52 ಹಾಗೂ ಶೇ. 48 ರಷ್ಟಿದ್ದಾರೆ.

ಅತ್ಯಂತ ಕಡಿಮೆ ಸಂಖ್ಯೆಯನ್ನು ಹೊಂದಿದ ಗ್ರಾಮ ಕೂಡ್ಲಿಗಿ ತಾಲೂಕಿನ ಗಜಾಪುರ. ಈ ಗ್ರಾಮದ ಕುಟುಂಬಗಳ ಸಂಖ್ಯೆ 189 (ಅವುಗಳಲ್ಲಿ ಒಟ್ಟು ಸದಸ್ಯರು 443). ಇದರಲ್ಲಿ ಗಂಡಸರು 232, ಹೆಂಗಸರು 211 ಕ್ರಮವಾಗಿ ಶೇ. 52 ಹಾಗೂ ಶೇ. 48 ರಷ್ಟಿದ್ದಾರೆ.

ಗಂಡಸರು ಹಾಗೂ ಮಹಿಳಾ ಸದಸ್ಯರ ಸಂಖ್ಯೆ ಗ್ರಾಮದಿಂದ ಗ್ರಾಮಕ್ಕೆ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಕೂಡ್ಲಿಗಿ ತಾಲೂಕಿನ ಜಂಗಮಸೋವೇನಹಳ್ಳಿ, ಮರಬಾನಹಳ್ಳಿ ಹಾಗೂ ಹೊಸಪೇಟೆ ತಾಲೂಕಿನ ದೇವಲಾಪುರ ಗ್ರಾಮಗಳಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚಳ ಕಂಡುಬಂದಿದೆ. ಒಟ್ಟಾರೆ ಐದೂ ಗ್ರಾಮಗಳ ಕುಟುಂಬದ ಸದಸ್ಯರ ಸಂಖ್ಯೆಯನ್ನು ಗಮನಿಸಲಾಗಿ ಶೇ.3ರಷ್ಟು ಹೆಂಗಸರ ಸಂಖ್ಯೆ ಅಧಿಕ ವಾಗಿರುವುದು ಕಂಡುಬರುತ್ತದೆ. ಕೂಡ್ಲಿಗಿ ತಾಲೂಕಿನ ಗಜಾಪುರ ಹಾಗೂ ಹೊಸಪೇಟೆ ತಾಲೂಕಿನ ನಂದಿಬಂಡಿ ಗ್ರಾಮಗಳಲ್ಲಿ ಕ್ರಮವಾಗಿ ಶೇ. 11 ಹಾಗೂ 27ರಷ್ಟು ಹೆಚ್ಚು ಗಂಡಸರು ಇರುವುದು ಕಂಡುಬರುತ್ತದೆ.

ರೇಖಾ ಚಿತ್ರ-2



ರೇಖಾ ಚಿತ್ರ 2 ಲಿಂಗವಾರು ವಿವಿಧ ಗ್ರಾಮಗಳಲ್ಲಿಯ ಕುಟುಂಬಗಳ ಸದಸ್ಯರ ಶೇಕಡವಾರು ಮಾಹಿತಿಯನ್ನು ಕೋಷ್ಟಕ -2ರ 4.1.2ರ ದತ್ತಾಂಶ ದಂತೆ ಮೇಲಿನ ರೇಖಾ ಚಿತ್ರದಲ್ಲಿ ಈ ರೀತಿ ಕಂಡುಬಂದಿದೆ.



ಈ ವಿಶ್ಲೇಷಣೆಯಿಂದ ತಿಳಿದುಬರುವ ಅಂಶವೇನೆಂದರೆ, ಕೆಲವು ಗ್ರಾಮಗಳಲ್ಲಿ ಹೆಂಗಸರು ಹೆಚ್ಚು ಇದ್ದು, ಇನ್ನೂ ಕೆಲವು ಗ್ರಾಮಗಳಲ್ಲಿ ಗಂಡಸರು ಹೆಚ್ಚು ಇರುವುದು ಕಂಡುಬರುತ್ತದೆ. ಶಾಲೆಗೆ ದಾಖಲಾಗಿರುವ ಹಾಗೂ ದಾಖಲಾಗದೇ ಇರುವ ಬಾಲಕ-ಬಾಲಕಿಯರ ಪರಿಮಾಣದ ಬಗ್ಗೆ ವಿಶ್ಲೇಷಿಸಲು ಇದು ನೆರವಾಗುತ್ತದೆ.

ಎರಡೂ ತಾಲೂಕಿನ ಕುಟುಂಬಗಳ ವಿವರಕ್ಕೆ ಸಂಬಂಧಿಸಿದಂತೆ ಮತ್ತು ಅವು ಯಾವ ಯಾವ ಗುಂಪುಗಳಾಗಿ ಜೀವನ ನಿರ್ವಹಿಸುತ್ತಿವೆ ಎಂದು ದತ್ತಾಂಶದಿಂದ ತಿಳಿಯಬಹುದಾಗಿದೆ.

ಕುಟುಂಬದ ಪರಿಕಲ್ಪನೆ :

ಅಧ್ಯಯನ ಮಾಡಿದ ಹಳ್ಳಿಗಳ ಸಾಮಾಜಿಕ ಚಿತ್ರಣ ಪಡೆಯಲು ಅಲ್ಲಿನ ಕುಟುಂಬಗಳ ಲಕ್ಷಣದ ಅರಿವು ಅಗತ್ಯ. ಅಲ್ಲದೆ ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲೆ ಕುಟುಂಬದ ರಚನೆ ಪ್ರಭಾವವಿರುತ್ತದೆ. ಈ ಹಿನ್ನೆಲೆಯಲ್ಲಿ ಕುಟುಂಬಗಳ ವಿಶ್ಲೇಷಣೆ ಮಾಡಲಾಗಿದೆ.

ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆ ಎಂಬುದು ಎಲ್ಲರೂ ತಿಳಿದ ಸಂಗತಿ. ಸಮಾಜವು ಕುಟುಂಬದ ಅವಿಭಾಜ್ಯ ಅಂಗ. ಕುಟುಂಬವಿಲ್ಲದೆ ಸಮಾಜವಿಲ್ಲ. ಮಾನವ ಜೀವನದ ತಳಹದಿಯೂ ಕೂಡ ಕುಟುಂಬವೇ. ಮಗುವಿನ ಪ್ರಪ್ರಥಮ ಸಾಮಾಜಿಕ ಪರಿಸರ ಹಾಗೂ ಸಮೂಹ, ನವಜಾತ ಶಿಶು ವಿಗೆ ಸಂಸ್ಕಾರ ನೀಡುವುದು, ಶಿಕ್ಷಣ ಕೊಡುವುದು, ಅವನನ್ನು ಸಮಾಜದ ಜವಾಬ್ದಾರಿಯುತ ಪ್ರಜೆಯನ್ನಾಗಿ ಮಾಡುವುದು ಕುಟುಂಬವೇ ಆಗಿದೆ.

'' ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ಕೊಡುವುದು ಕುಟುಂಬವೇ'' ಉಳಿದೆಲ್ಲಾ ಸಂಸ್ಥೆಗಳಿಗಿಂತಲೂ ಅದು ಹೆಚ್ಚು ಶಾಶ್ವತವೂ ಪ್ರಭಾವಿಯೂ ಆಗಿದೆ. ಅದು ನಮ್ಮ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ್ದು ನಾವೆಲ್ಲರೂ ಒಂದಲ್ಲಾ ಒಂದು ಕುಟುಂಬಕ್ಕೆ ಸೇರಿದವರಾಗಿದ್ದು, ನಮ್ಮ ಜೀವಿತದ ಬಹುಪಾಲು ಜೀವನವನ್ನು ಕುಟುಂಬಗಳಲ್ಲಿಯೇ ಕಳೆಯುವವರಿದ್ದೇವೆ'' ಎಂಬ ಸಮಾಜ ತಜ್ಞರು ವ್ಯಾಖ್ಯಾನಿಸಿದ ವ್ಯಾಖ್ಯಾನವು ಕುಟುಂಬದ ಪರಿಕಲ್ಪನೆಯನ್ನು ಪರಿಚಯಿಸುತ್ತದೆ. ಕುಟುಂಬದ ಅರ್ಥವನ್ನು ವಿವಿಧ ಸಮಾಜಶಾಸ್ತ್ರಜ್ಞರು ತಮ್ಮದೇ ಆದ ವ್ಯಾಖ್ಯಾನದ ಮೂಲಕ ವಿವರಿಸಿದ್ದಾರೆ.

1) '' ರಕ್ತ ಸಂಬಂಧಿಗಳಿಂದ ಕೂಡಿದ ಮತ್ತು ಕನಿಷ್ಠ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತೀ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ''(ಸಮ್ನರ್ ಮತ್ತು ಕೆಲ್ಸರ್).

2) '' ಗಂಡ/ಹೆಂಡತಿ ಮತ್ತು ಮಕ್ಕಳುಗಳನ್ನೊಳಗೊಂಡಿರುವ ಜೈವಿಕ-ಸಾಮಾಜಿಕ ಘಟಕವೇ ಕುಟುಂಬ'' (ಇಲಿಯೆಟ್ ಮತ್ತು ಮೆರಿಲ್).

ಮೇಲಿನ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಸಮೀಕ್ಷಿಸದ ಕುಟುಂಬಗಳ ರಚನೆ ಹಾಗೂ ಲಕ್ಷಣಗಳನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ (ಕೋಷ್ಠಕ - 3).

4.1.3. ಕೋಷ್ಠಕ - 3 : ವಿವಿಧ ಕುಟುಂಬದ ವಿವರ.


ಕ್ರ. ಸಂ	ಗ್ರಾಮದ ಹೆಸರು	ಸ.ಸಂ. ಕೇಂದ್ರ	ಕುಟುಂಬಗಳ ಸಂಖ್ಯೆ	ಕುಟುಂಬದ ವಿವರ					
				ವಿಭಕ್ತ ಕುಟುಂಬ	ಶೇ.	ಅವಿಭಕ್ತ ಕುಟುಂಬ	ಶೇ	ವಿಸ್ತೃತ ಕುಟುಂಬ **	ಶೇ
1	ಗಜಾಪುರ	ಗಜಾಪುರ	189	167	88	7	4	0	0
2	ಜಂಗಮಸೋವೇನ ಹಳ್ಳಿ	ಬಾಲಕಿಯರ ಹಿ.ಪ್ರಾ.ಶಾಲೆ, ಕೂಡ್ಲಿಗಿ	126	113	90	13	10	0	0
3	ಮರಬಾನಹಳ್ಳಿ	ಮೇನ್ ಬಾಯ್ಸ್ ಹಿ.ಪ್ರಾ.ಶಾಲೆ, ಕೂಡ್ಲಿಗಿ	140	132	94	7	5	1	1
4	ನಂದಿ ಬಂಡಿ	ಮರಿಯಮ್ಮನ ಹಳ್ಳಿ	185	81	44	104	56	0	0
5	ದೇವಲಾಪುರ	ನಾಗಲಾಪುರ	227	191	84	35	15	1	0
	ಒಟ್ಟು		**867**	**684**	**79**	**166**	**19**	**2**	**0**

** ವಿಸ್ತೃತ ಕುಟುಂಬ : ಕುಟುಂಬದ ರಚನೆ, ಅದರಲ್ಲಿ ವಾಸಿಸುವ ಪೀಳಿಗೆಗಳ ಸಂಖ್ಯೆಯ ಆಧಾರದ ಮೇಲೆ ಕುಟುಂಬಗಳನ್ನು 'ಮೂಲ ಕುಟುಂಬ ಹಾಗೂ ವಿಸ್ತೃತ ಕುಟುಂಬ'(Nuclear family and Extended family) ಎಂದು ವರ್ಗೀಕರಿಸಲಾಗಿದೆ.

ಗಂಡ- ಹೆಂಡತಿ : ತಮ್ಮ ಅವಿವಾಹಿತ ಮಕ್ಕಳೊಂದಿಗೆ ವಾಸಿಸುವ ಕುಟುಂಬವನ್ನು ಮರ್ಡಕ್ (Murdock) ಎಂಬುವವರು 'ಮೂಲ ಕುಟುಂಬ ಎಂದು ಕರೆದಿದ್ದಾರೆ'. ಗಂಡ-ಹೆಂಡತಿ ಒಂದು ತಲೆಮಾರಿಗೆ ಸೇರಿದವರಾದರೆ, ಅವರ ಮಕ್ಕಳು ಎರಡನೇ ತಲೆಮಾರಿಗೆ ಸೇರುತ್ತಾರೆ. ಈ ರೀತಿ ಅಸ್ತಿತ್ವದಲ್ಲಿರುವ ಕುಟುಂಬವು ಅದರಲ್ಲಿ ಹುಟ್ಟಿದ ಮಕ್ಕಳಿಗೆ 'ಕೇಂದ್ರ' ಕುಟುಂಬವಾಗುವುದು. ಆದರೆ ಕುಟುಂಬದಲ್ಲಿ ಮೂರು ನಾಲ್ಕು ತಲೆಮಾರುಗಳಿಗೆ ಸಂಬಂಧಿಸಿದವರಿದ್ದರೆ ಅದು ವಿಸ್ತೃತ ಅಥವ ಅವಿಭಕ್ತ ಕುಟುಂಬವೆನಿಸುತ್ತದೆ.

ಒಟ್ಟು ಐದು ಗ್ರಾಮಗಳ 867 ಕುಟುಂಬಗಳಲ್ಲಿ ವಿಭಕ್ತ ಕುಟುಂಬಗಳು ಶೇ. 79 (689)ರಷ್ಟಿದೆ. ಅವಿಭಕ್ತ ಕುಟುಂಬಗಳು ಶೇ. 19 (166)ರಷ್ಟಿದೆ. ಹೊಸಪೇಟೆ ತಾಲೂಕಿನ ದೇವಲಾಪುರ ಮತ್ತು ಕೂಡ್ಲಿಗಿ ತಾಲೂಕಿನ ಮರಬಾನಹಳ್ಳಿಯಲ್ಲಿ ತಲಾ ಒಂದು ವಿತ್ತೃತ ಕುಟುಂಬವಿದ್ದು, ವಿಭಕ್ತ ಕುಟುಂಬಗಳೇ ಈ ಗ್ರಾಮಗಳಲ್ಲಿ ಹೆಚ್ಚು ಕಂಡುಬಂದಿವೆ.

ರೇಖಾ ಚಿತ್ರ-3



ರೇಖಾ ಚಿತ್ರ-3 ವಿವಿಧ ಕುಟುಂಬಗಳ ಶೇಕಡವಾರು ವಿವರವನ್ನು ಕೋಷ್ಟಕ -3ರ 4.1.3 ರಲ್ಲಿಯ ದತ್ತಾಂಶದ ವಿವರದಂತೆ ಮೇಲಿನ ರೇಖಾ ಚಿತ್ರದಲ್ಲಿ ಈ ರೀತಿ ಬಿಂಬಿತವಾಗಿದೆ.



ಶೈಕ್ಷಣಿಕ ವಿವರ

4.1.4. ಕೋಷ್ಟಕ -4 : ಗ್ರಾಮಸ್ಥರ ಶೈಕ್ಷಣಿಕ ಅರ್ಹತೆ :

ಕ್ರಮ ಸಂಖ್ಯೆ		1	2	3	4	5	6
ಗ್ರಾಮದ ಹೆಸರು		ಗಜಾಪುರ	ಜಂಗಮಸೋವೇನಹಳ್ಳಿ	ಮರಬಾನಹಳ್ಳಿ	ನಂದಿಬಂಡಿ	ದೇವಲಾಪುರ	ಒಟ್ಟು
ಅನಕ್ಷರಸ್ಥರು	ಗಂಡು	70	53	214	350	164	**851**
	ಹೆಣ್ಣು	100	125	292	275	270	**1062**
	ಒಟ್ಟು	170	178	506	625	434	**1913**
ಪ್ರಾ. ಶಿಕ್ಷಣ	ಗಂಡು	110	192	184	225	304	**1015**
	ಹೆಣ್ಣು	72	144	97	195	252	**760**
	ಒಟ್ಟು	182	336	281	420	556	**1775**
ಹಿ.ಪ್ರಾ. ಶಿಕ್ಷಣ	ಗಂಡು	34	65	82	80	95	**356**
	ಹೆಣ್ಣು	18	32	36	60	67	**213**
	ಒಟ್ಟು	52	97	118	140	162	**569**
ಮಾ. ಶಿಕ್ಷಣ	ಗಂಡು	15	44	27	35	45	**166**
	ಹೆಣ್ಣು	15	24	19	25	15	**98**
	ಒಟ್ಟು	30	68	46	60	60	**264**
ಎಸ್‌ಎಸ್‌ಎಲ್‌ಸಿ.	ಗಂಡು	4	1	11	25	7	**48**
	ಹೆಣ್ಣು	3	0	0	15	2	**20**
	ಒಟ್ಟು	7	1	11	40	9	**68**
ಪಿಯುಸಿ.	ಗಂಡು	1	13	2	5	13	**34**
	ಹೆಣ್ಣು	0	6	7	7	4	**24**
	ಒಟ್ಟು	1	19	9	12	17	**58**
ಪದವಿ	ಗಂಡು	1	3	6	4	7	**21**
	ಹೆಣ್ಣು	0	1	0	2	0	**3**
	ಒಟ್ಟು	1	2	6	6	7	**22**
ಪಿಹೆಚ್.ಡಿ.	ಗಂಡು	0	2	0	0	0	**2**
	ಹೆಣ್ಣು	0	0	0	0	0	**0**
	ಒಟ್ಟು	0	2	0	0	0	**2**
ಇತರೆ	ಗಂಡು	0	0	0	0	0	**0**
	ಹೆಣ್ಣು	0	0	1	0	1	**2**
	ಒಟ್ಟು	0	0	1	0	1	**2**
ಒಟ್ಟು ಸಂಖ್ಯೆ		**443**	**704**	**978**	**1303**	**1245**	**4673**

ವಿವರಣೆ:- **ಪ್ರಾ.ಶಿಕ್ಷಣ :** ಪ್ರಾಥಮಿಕ ಶಿಕ್ಷಣ. **ಹಿ.ಪ್ರಾ. ಶಿಕ್ಷಣ :** ಹಿರಿಯ ಪ್ರಾಥಮಿಕ ಶಿಕ್ಷಣ. **ಮಾ.ಶಿಕ್ಷಣ :** ಮಾಧ್ಯಮಿಕ ಶಿಕ್ಷಣ.

ಅನಕ್ಷರಸ್ಥರ ವಿವರವನ್ನು **ಕೋಷ್ಟಕ 4.1.4** ಎ ದಲ್ಲಿ ವಿಶ್ಲೇಷಿಸಲಾಗಿದೆ.


4.1.4ಅ. ಕೋಷ್ಟಕ - 4ಅ: ಅನಕ್ಷರಸ್ಥರು:

ಕ್ರ. ಸಂ.	ಗ್ರಾಮದ ಹೆಸರು	ಕುಟುಂಬದ ಸದಸ್ಯರು			ಅನಕ್ಷರಸ್ಥರು					
		ಗಂಡು	ಹೆಣ್ಣು	ಒಟ್ಟು	ಗಂಡು	ಶೇ.	ಹೆಣ್ಣು	ಶೇ.	ಒಟ್ಟು	ಶೇ.
1	ಗಜಾಪುರ	232	211	443	70	30	100	47	170	38
2	ಜಂಗಮಸೋವೇನಹಳ್ಳಿ	364	340	704	53	20	125	37	178	25
3	ಮರಬಾನಹಳ್ಳಿ	481	497	978	214	44	292	59	506	52
4	ನಂದಿಬಂಡಿ	673	630	1303	350	52	275	44	625	48
5	ದೇವಲಾಪುರ	620	625	1245	164	26	270	43	434	35
	ಒಟ್ಟು	**2370**	**2303**	**4673**	**851**	**37**	**1062**	**46**	**1913**	**41**

ಈ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನದ ನಂತರ ಸಾಕ್ಷರತಾ ಪ್ರಮಾಣದ ಬಗೆಗಿನ ವಿವರವನ್ನು ಅಧ್ಯಯ-2ರಲ್ಲಿಯೇ ವಿವರಿಸಲಾಗಿದೆ. ಆಯ್ದ ಐದು ಗ್ರಾಮಗಳಲ್ಲಿ ಅಲ್ಲಿಯ ಎಲ್ಲಾ ಕುಟುಂಬದ ಸದಸ್ಯರ (ಶಾಲೆಗೆ ಹೋಗುವ ಮಕ್ಕಳನ್ನು ಸೇರಿಸಿಕೊಂಡು) ಶೈಕ್ಷಣಿಕ ವಿವರವನ್ನು ಸಂಗ್ರಹಿಸಲಾಗಿದೆ. ಆ ಪ್ರಕಾರ ಎರಡು ತಾಲೂಕಿನ ಐದು ಗ್ರಾಮಗಳಲ್ಲಿ ಗಂಡಸರು ಹಾಗೂ ಹೆಂಗಸರಲ್ಲಿ ಅಕ್ಷರಸ್ಥರ ಮತ್ತು ಅನಕ್ಷರಸ್ಥರ ವಿವರ ಸಂಗ್ರಹಿಸಲಾಗಿದೆ. ಲಭ್ಯವಿರುವ ದತ್ತಾಂಶದ ಪ್ರಕಾರ ಒಟ್ಟು 867 ಕುಟುಂಬಗಳಲ್ಲಿ 4673 ಸದಸ್ಯರಿದ್ದಾರೆ. ಇದರಲ್ಲಿ 851 ಗಂಡಸರು, 1062 ಹೆಂಗಸರು. ಒಟ್ಟು 1913 ಅನಕ್ಷರಸ್ಥರಿದ್ದಾರೆ. ಒಟ್ಟಾರೆ ಈ ಪ್ರಮಾಣ ಶೇ.41ರಷ್ಟಿದೆ. ಇದರಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣ ಗಂಡಸರಿಗಿಂತಲೂ ಕಡಿಮೆ ಇರುವುದು ಕಂಡುಬರುತ್ತದೆ. ಉಳಿದಂತೆ 1640 ಗಂಡಸರು, 1120 ಹೆಂಗಸರು ಒಟ್ಟು 2760 ಅಕ್ಷರಸ್ಥರು ಇರುವುದು ಕಂಡುಬಂದಿದೆ. ಅಕ್ಷರಸ್ಥರು ವಿವಿಧ ಹಂತದಲ್ಲಿ ಶಿಕ್ಷಣ ಪಡೆದವರಾಗಿದ್ದಾರೆ (ಪ್ರಾಥಮಿಕ ಶಿಕ್ಷಣದದಿಂದ ಉನ್ನತ ಶಿಕ್ಷಣದವರೆಗೆ).

ಯಾವ ಗ್ರಾಮದಲ್ಲಿ ಅಕ್ಷರಸ್ಥರು ಅಥವಾ ಶಿಕ್ಷಣ ಪಡೆದವರ ಸಂಖ್ಯೆ ಅಧಿಕವಿರುತ್ತದೆಯೋ ಅಂತಹ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳ ಕುರಿತು, ಯೋಜನೆಗಳ ಕುರಿತು ತಿಳುವಳಿಕೆ ಹೆಚ್ಚು ಇರುತ್ತದೆ ಎಂಬ ಮಾತುಗಳು ಕೇಳಿಬರುವ ಹಿನ್ನೆಲೆಯಲ್ಲಿ ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸುಲಭ ಮಾರ್ಗ ಹುಡುಕಿಕೊಳ್ಳಬಹುದಾಗಿದೆ. ಎಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು ಹೆಚ್ಚು ಇದೆಯೋ ಅಲ್ಲೆಲ್ಲಾ ಶಿಕ್ಷಣದ ಬಗ್ಗೆ ಒಲವು ಹೆಚ್ಚಿರುತ್ತದೆ. ಅಂತಹ ಕಡೆ ಮಹಿಳೆಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುವ ಆಸಕ್ತಿಯನ್ನು ಹೊಂದಿದವರಾಗಿರುತ್ತಾರೆ. ಎಲ್ಲಿ ಮಹಿಳೆಯರಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಇದೆಯೋ ಅಂತಹ ಕಡೆ ಶಿಕ್ಷಣದ ಮಹತ್ವದ ಅರಿವು ಕಡಿಮೆ ಇರುತ್ತದೆಂಬ ಅಂಶವನ್ನು ಅಧ್ಯಾಯ-2ರಲ್ಲಿ ಕಂಡುಕೊಳ್ಳಲಾಗಿದೆ. ಮೇಲಿನ ಕುಟುಂಬಗಳ ಸದಸ್ಯರ ಶಿಕ್ಷಣ ಪಡೆದ ಮಾಹಿತಿಯ ವಿಶ್ಲೇಷಣೆಯು ಮುಂದಿನ ವಿಷಯಗಳ ವಿಶ್ಲೇಷಣೆಗೆ ಕೊಂಡಿಯಾಗಿರುತ್ತದೆ.

ರೇಖಾ ಚಿತ್ರ-4



ರೇಖಾ ಚಿತ್ರ -4 ಕೋಷ್ಟಕ -4ರ 4.1.4ಕ್ಕೆ ಸಂಬಂಧಿಸಿದ 5 ಗ್ರಾಮಗಳ ಶೈಕ್ಷಣಿಕ ವಿವರ ಶೇಕಡವಾರು ಅನಕ್ಷರಸ್ಥರ ದತ್ತಾಂಶ ವಿವರ ಮೇಲಿನ ರೇಖಾ ಚಿತ್ರದಲ್ಲಿ ಈ ರೀತಿ ಕಂಡುಬಂದಿದೆ.



4.1.5. ಕೋಷ್ಟಕ - 5:ವೃತ್ತಿಯ ವಿವರ :


ಕ್ರ.ಸಂ.	1	2	3	4	5	6
ಗ್ರಾಮದ ಹೆಸರುಗಳು	**ಗಜಾಪುರ**	**ಜಂಗಮಸೋವೇನಹಳ್ಳಿ**	**ಮರಬಾನ ಹಳ್ಳಿ**	**ನಂದಿಬಂಡಿ**	**ದೇವಲಾಪುರ**	**ಒಟ್ಟು**
ಕೂಲಿ	15	158	180	625	515	**1493**
ಶೇಕಡವಾರು	3	22	18	48	41	**32**
ವ್ಯವಸಾಯ	54	108	53	125	102	**442**
ಶೇಕಡವಾರು	12	15	05	10	08	**09**
ಬೇಲ್ದಾರರು	03	01	00	04	14	**22**
ವ್ಯಾಪಾರ	07	02	07	05	16	**37**
ಸೇವೆ	03	02	06	03	02	**16**
ಸಿಂಪಿಗ	02	00	00	02	03	**07**
ಬಡಿಗ	00	00	04	03	03	**10**
ನೇಕಾರ	00	00	04	02	01	**07**
ಅಕ್ಕಸಾಲಿ	00	00	00	00	00	**00**
ಪೋರ್ಟರ್	00	00	00	00	00	**00**
ಗುತ್ತಿಗೆದಾರ	00	00	00	00	02	**02**
ಇತರೆ	359	433	724	534	587	**2637**
ಶೇಕಡವಾರು	81	62	74	41	47	**56**
ಒಟ್ಟು	**443**	**704**	**978**	**1303**	**1245**	**4673**

ಅಧ್ಯಯನದ ದೃಷ್ಟಿಯಿಂದ ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಕುಟುಂಬಗಳು ಯಾವ ಯಾವ ವೃತ್ತಿಯನ್ನು ಅವಲಂಬಿಸಿವೆ ಎನ್ನುವ ಕುರಿತು ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಸಮೀಕ್ಷೆಯ ಸಂದರ್ಭದಲ್ಲಿಯೇ ಪ್ರತಿ ಕುಟುಂಬದ ಮುಖ್ಯಸ್ಥರಿಂದ ಇಲ್ಲವೆ, ಮನೆಯಲ್ಲಿ ಲಭ್ಯವಿದ್ದ ಇತರೆ ಹಿರಿಯ ಸದಸ್ಯರಿಂದ ಮಾಹಿತಿಯನ್ನು ಪಡೆಯಲಾಗಿದೆ.

ಈ ಮಾಹಿತಿಯಿಂದ ಸಮುದಾಯವು ಸ್ಥಳೀಯ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಲ್ಲಿ, ಮಕ್ಕಳನ್ನು ಶಾಲೆಗೆ ಕಳುಹಿಸುವ ಆಸಕ್ತಿ ತಾಳಿರುವ ಅಥವಾ ನಕಾರಾತ್ಮಕ ಧೋರಣೆ ಹೊಂದಿರುವ ಕುರಿತು ಕಾರಣಗಳನ್ನು ಕುಟುಂಬದ ವಿವಿಧ ವೃತ್ತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಈ ವಿವರ ಪೂರಕವಾಗಿದೆ.

ಎರಡು ತಾಲೂಕಿನ ಐದು ಗ್ರಾಮಗಳಿಗೆ ಅನ್ವಯಿಸಿ ಒಟ್ಟು 867 ಕುಟುಂಬಗಳ 4673 ಸದಸ್ಯರಲ್ಲಿ (ಮಕ್ಕಳು ಮತ್ತು ವೃದ್ಧರನ್ನು ಒಳಗೊಂಡು) ಒಟ್ಟು 1493 ಸದಸ್ಯರು ಕೂಲಿಯನ್ನೇ ಅವಲಂಬಿಸಿದ್ದು, ಇವರ

ರೇಖಾ ಚಿತ್ರ-5



ರೇಖಾ ಚಿತ್ರ-5 ಕೋಷ್ಟಕ -5 ರ 4.1.5ಕ್ಕೆ ಸಂಬಂಧಿಸಿದಂತೆ ದತ್ತಾಂಶದ ವಿವರ ರೇಖಾ ಚಿತ್ರದಲ್ಲಿ ಈ ರೀತಿ ಕಂಡುಬಂದಿದೆ.



ಪ್ರಮಾಣ ಶೇ. 32ರಷ್ಟಿದೆ. ಒಟ್ಟು 442 ಸದಸ್ಯರು ವ್ಯವಸಾಯವನ್ನು ಮಾಡುತ್ತಿದ್ದು, ಅವರ ಸಂಖ್ಯೆ ಶೇ.9ರಷ್ಟಿದೆ. ಅದೇ ರೀತಿ ಒಟ್ಟು ಐದು ಗ್ರಾಮಗಳಲ್ಲಿ ಬೇಲ್ದಾರರು 22, ವ್ಯಾಪಾರಸ್ಥರು 37, ವಿವಿಧ ಸೇವೆಗಳಲ್ಲಿ 16, ಸಿಂಪಿಗ 7, ಬಡಿಗ 10, ನೇಕಾರರು 07ಜನ ಸದಸ್ಯರಿದ್ದು, ಗುತ್ತಿಗೆ ವೃತ್ತಿಯನ್ನು ಇಬ್ಬರು ಅವಲಂಬಿಸಿದ್ದಾರೆ. ಇತರರ ಸಂಖ್ಯೆಯೇ ಒಟ್ಟು 2637 ಇದ್ದು, ಶೇ. 56ರಷ್ಟಿದೆ. (ಇತರರಲ್ಲಿ ಆಶ್ರಿತರು, ವೃದ್ಧರು, ಚಿಕ್ಕ ಚಿಕ್ಕ ಮಕ್ಕಳು, ಶಾಲೆಗೆ ಹೋಗುವವರೂ ಸೇರಿದ್ದಾರೆ).

ಮೇಲಿನ ದತ್ತಾಂಶವನ್ನು ಗಮನಿಸಿದರೆ, ಕೂಲಿ ಮಾಡಿ ಬದುಕುವ ಸದಸ್ಯರ ಸಂಖ್ಯೆಯೇ ಅಧಿಕವಿರುವುದು ಕಂಡು ಬಂದಿದೆ. ಈ ಅಂಶವು ಶಾಲೆಗೆ ಹೋಗುವ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರಿದೆ ಎನ್ನಬಹುದು. ಹೊಸಪೇಟೆ ತಾಲೂಕಿನ ಎರಡೂ ಗ್ರಾಮಗಳಲ್ಲಿ ಸದಸ್ಯವಾರು ಗಮನಿಸಿದರೆ ನಂದಿಬಂಡಿಯಲ್ಲಿ ಶೇ.48, ದೇವಲಾಪುರದಲ್ಲಿ ಶೇ. 41 ಸದಸ್ಯರು ಕೂಲಿಯನ್ನು ಅವಲಂಬಿಸಿದ್ದು, ಅತ್ಯಂತ ಕಡಿಮೆ ಅಂದರೆ, ಶೇ. 3 ಸದಸ್ಯರು ಮಾತ್ರ ಕೂಡ್ಲಿಗಿ ತಾಲೂಕಿನ ಗಜಾಪುರ ಗ್ರಾಮದವರಾಗಿರುತ್ತಾರೆ. ಈ ಗ್ರಾಮದಲ್ಲಿ ವ್ಯವಸಾಯವನ್ನು ಶೇ. 54 ಸದಸ್ಯರು ಅವಲಂಬಿಸಿದ್ದು, ಇತರರ ಸಂಖ್ಯೆಯೇ ಅಧಿಕವಿರುತ್ತದೆ. ಅಕ್ಕಸಾಲಿ ಮತ್ತು ಪೋರ್ಟ್‌ರ್ ವೃತ್ತಿಯವರು ನಿಗದಿತ ಯಾವುದೇ ಗ್ರಾಮದಲ್ಲಿಯೂ ಇರುವುದಿಲ್ಲ. ಸಾಮಾನ್ಯವಾಗಿ ಅಕ್ಕಸಾಲಿಗರು ವಲಸೆ ಬಂದು ಒಂದು ವಾರ ಅಥವಾ ಹತ್ತು ದಿನಗಳಿದ್ದು ಹೋಗುವುದೇ ಹೆಚ್ಚು ಕಡೆ ಕಂಡು ಬರುತ್ತದೆ. ಗುತ್ತಿಗೆದಾರರು ಸಾಮಾನ್ಯವಾಗಿ ಗ್ರಾಮಗಳಲ್ಲಿ ಇರುವುದು ಕಡಿಮೆ. ಇತರರ ಸಂಖ್ಯೆಯು ಒಟ್ಟು ವೃತ್ತಿಯನ್ನು ಅವಲಂಬಿಸಿದವರ ಸಂಖ್ಯೆಯ ಶೇ. 56ರಷ್ಟು ಇದ್ದಾರೆ. ಅಧ್ಯಯನದ ದೃಷ್ಟಿಯಿಂದ ಈ ದತ್ತಾಂಶವನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಆದರೆ ವಿವಿಧ ವೃತ್ತಿಯನ್ನು ಅವಲಂಬಿಸಿದವರ ಆಶ್ರಿತರಾಗಿ ಇರುವುದು ಕಂಡುಬರುತ್ತದೆ. ಇದರಲ್ಲಿ ಶಾಲೆಗೆ ಹೋಗುವ ಮಕ್ಕಳೂ ಸೇರಿದ್ದಾರೆ. ವಿವಿಧ ವೃತ್ತಿಯನ್ನು ಅವಲಂಬಿಸಿದವರು ಕುಟುಂಬದ ಇತರೇ ಸದಸ್ಯರನ್ನು ಸಾಕುವ ಹೊಣೆಗಾರಿಕೆಯನ್ನು ಹೊತ್ತಿದ್ದಾರೆ. ಈ ವೃತ್ತಿಯು ಇವರ ಆದಾಯದ ಮೂಲವೂ ಆಗಿರುವುದರಿಂದ ಇವರ ಮಾಸಿಕ ಆದಾಯವು ಇವರ ಜೀವನವನ್ನು ರೂಪಿಸುತ್ತದೆ. ಈ ಹಿನ್ನೆಲೆಯಲ್ಲಿ ಕುಟುಂಬದ ಮಾಸಿಕ ಆದಾಯ ಎಷ್ಟಿದೆ ಎಂಬ ಬಗ್ಗೆ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಇದರ ವಿಶ್ಲೇಷಣೆಯನ್ನು ಮುಂದಿನ ಭಾಗದಲ್ಲಿ ನಿರೂಪಿಸಲಾಗಿದೆ.

4.1.6.- ಕೋಷ್ಟಕ - 6 :ಆದಾಯದ ವಿವರ

ಆದಾಯವೂ ಕೂಡ ಶಿಕ್ಷಣದ ಮೇಲೆ ಪರಿಣಾಮ ಬೀರುವುದರಿಂದ ಇಲ್ಲಿ ಮಾಸಿಕ ಆದಾಯವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯ ಆದಾಯವನ್ನು ತಲಾ ಆದಾಯ ಎನ್ನುತ್ತಾರೆ. ಇದು ಒಟ್ಟು ಜನ ಸಮುದಾಯದ ಸರಾಸರಿ ಆದಾಯವಾಗಿರುತ್ತದೆ. ತಲಾ ಆದಾಯವು ದೇಶದ ಜನರ ಜೀವನ ಮಟ್ಟವನ್ನು ಹೆಚ್ಚು ಸ್ಪಷ್ಟವಾಗಿ ಬಿಂಬಿಸುತ್ತದೆ. ಜನ ಸಮುದಾಯದ ಪ್ರತಿಯೊಬ್ಬನೂ ಒಂದು ವರ್ಷದಲ್ಲಿ ಗಳಿಸಿದ ಆದಾಯವೇ ತಲಾ ಆದಾಯವೆನ್ನಬಹುದು. ಇಲ್ಲಿ ಮುಖ್ಯವಾಗಿ ಸಾಮಾನ್ಯ ವ್ಯಕ್ತಿಯೊಬ್ಬನ ಆರ್ಥಿಕ ಜೀವನದ ವಿಸ್ತೃತ ಚಿತ್ರ ತಲಾ ಆದಾಯದಿಂದ ದೊರೆಯುತ್ತದೆ. ಕೌಟುಂಬಿಕ ಆದಾಯ ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲೆ ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಆಯ್ದ ಐದು ಗ್ರಾಮಗಳ ಕುಟುಂಬದ

ಆದಾಯದ ವಿವರ ವನ್ನು ಸಂಗ್ರಹಿಸಲಾಗಿದೆ. ಅಧ್ಯಯನದ ದೃಷ್ಟಿಯಿಂದ ಗ್ರಾಮೀಣ ಪ್ರದೇಶದಲ್ಲಿಯ ಪ್ರತಿ ಕುಟುಂಬದಲ್ಲಿಯ ಮಾಸಿಕ ವರಮಾನವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಸಮೀಕ್ಷೆಯ ಸಂದರ್ಭದಲ್ಲಿ ಆಯಾ ಗ್ರಾಮದಲ್ಲಿಯ ಕುಟುಂಬದ ಸದಸ್ಯರನ್ನು ಸಂಪರ್ಕಿಸಿ ಅವರು ಒಂದು ತಿಂಗಳಿಗೆ ಸಂಪಾದಿಸಬಹುದಾದ ದುಡಿಮೆಯ ಆದಾಯವನ್ನು ಪರಿಗಣಿಸಿ ದಾಖಲಿಸಲಾಗಿದೆ.

ಕೋಷ್ಟಕ-6 : ಆದಾಯದ ವಿವರ.

ಕ್ರ.ಸಂ.	1	2	3	4	5	6
ಗ್ರಾಮದ ಹೆಸರು	**ಗಜಾಪುರ**	**ಜಂಗಮಸೋವೇನಹಳ್ಳಿ**	**ಮರಬಾನಹಳ್ಳಿ**	**ನಂದಿಬಂಡಿ**	**ದೇವಲಾಪುರ**	**ಒಟ್ಟು**
ರೂ. 300	0	70	61	45	83	**259**
ರೂ. 400	0	05	58	48	63	**174**
ರೂ. 500	66	30	11	49	40	**196**
ರೂ. 600	56	0	07	0	06	**69**
ರೂ. 700	18	0	0	0	8	**26**
ರೂ. 800	25	0	3	0	4	**32**
ರೂ. 900	13	2	0	34	3	**52**
ರೂ. 1000	00	00	00	00	00	**00**
ರೂ. 2000	04	00	00	00	09	**13**
ರೂ. 3000	2	2	0	0	4	**8**
ರೂ. 5000	5	17	0	0	2	**24**
ರೂ. 8000	0	0	0	9	5	**14**

ಗ್ರಾಮೀಣ ಪ್ರದೇಶಗಳಲ್ಲಿ ಬಹು ಕುಟುಂಬಗಳು ಕೃಷಿಯನ್ನೇ ಅವಲಂಬಿಸಿವೆ. ಕೂಲಿಯಿಂದಲೂ ಬದುಕುತ್ತಿದ್ದಾರೆ. ಎಲ್ಲೋ ಕೆಲವು ಕುಟುಂಬಗಳು ಮಾತ್ರ ವ್ಯಾಪಾರವನ್ನು ಅವಲಂಬಿಸಿವೆ ಹಾಗಾಗಿ ಸಂಪಾದನೆಯ ಮೂಲದ ಪ್ರಕಾರ ಕನಿಷ್ಠ ರೂ. 300.00 ರಿಂದ ರೂ. 8000.00 ವರೆಗಿನ ಮಾಸಿಕ ಆದಾಯದ ವಿವರವನ್ನು ಪಡೆದು ಈ ಕೆಳಗೆ ವಿಶ್ಲೇಷಿಸಲಾಗಿದೆ.

ಐದೂ ಗ್ರಾಮಗಳಲ್ಲಿ ರೂ.300.00ರಂತೆ ಮಾಸಿಕ ಆದಾಯವನ್ನು 259 ಕುಟುಂಬಗಳು ಪಡೆಯುತ್ತಿರುವುದು ಕಂಡುಬಂದಿದೆ. ಅದೇ ರೀತಿ ರೂ. 400.00ರಂತೆ 174 ಕುಟುಂಬಗಳು, ರೂ. 500.00ರಂತೆ 196 ಕುಟುಂಬಗಳು, ರೂ. 600.00ರಂತೆ 69 ಕುಟುಂಬಗಳು, ರೂ. 700.00ರಂತೆ 26 ಕುಟುಂಬಗಳು, ರೂ. 800.00ರಂತೆ 32 , ರೂ. 1000.00ರಂತೆ 52, ರೂ. 2000.00ರಂತೆ 13, ರೂ. 3000.00ರಂತೆ 8 , ರೂ. 5000.00ರಂತೆ 24, ರೂ. 8000.00ರಂತೆ 14ಕುಟುಂಬಗಳು ಮಾಸಿಕ ಆದಾಯವನ್ನು ಪಡೆಯುತ್ತಿವೆ.

ಹೆಚ್ಚು ಕುಟುಂಬಗಳು ಕನಿಷ್ಠ ರೂ. 300.00 ಮಾಸಿಕ ಆದಾಯವನ್ನು ಹೊಂದಿವೆ. ಉಳಿದಂತೆ ಎಲ್ಲಾ ಐದು ಗ್ರಾಮಗಳಲ್ಲಿಯೂ ರೂ. 1000.00 ಒಳಗೆ ಮಾಸಿಕ ಆದಾಯ ಪಡೆಯುವುದರಿಂದ ಇದು ಗ್ರಾಮಗಳಲ್ಲಿ ಬಡತನ ಇರುವುದನ್ನು ಸೂಚಿಸುತ್ತದೆ. ಅಲ್ಲದೆ ಆರ್ಥಿಕ ಪ್ರಗತಿಯ ಒಂದು ಹಿನ್ನೆಡೆಯೂ ಆಗಿದೆ ಎನ್ನಬಹುದು. ರೂ. 3000.00ಗಳಿಂದ ರೂ. 8000.00ದವರೆಗೂ ಆದಾಯ ಹೊಂದಿದವರು ಗ್ರಾಮದ ವ್ಯಾಪಾರಸ್ಥರು, ದೊಡ್ಡ ಹಿಡುವಳಿದಾರರು ಹಾಗೂ ನೌಕರಸ್ಥರು ಮಾತ್ರ ಆಗಿರುತ್ತಾರೆ.

ಭಾಗ - 2

4.2.1. ಕೋಷ್ಟಕ - 7 :ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳಿಗೆ ಸಂಬಂಧಿಸಿದ ದತ್ತಾಂಶ ವಿಶ್ಲೇಷಣೆ :

ಗ್ರಾಮಗಳಲ್ಲಿ ನಡೆದ ಸೂಕ್ಷ್ಮ ಯೋಜನೆ ಕಾರ್ಯಕ್ರಮದಲ್ಲಿ ಸಮುದಾಯವು ಯಾವ ರೀತಿ ಭಾಗಿತ್ವ ಹೊಂದಿತ್ತು ಎನ್ನುವ ಕುರಿತು ಎರಡು ತಾಲೂಕಿನ ಐದು ಗ್ರಾಮಗಳಿಗೆ ಸಂಬಂಧಿಸಿದಂತೆ ಪ್ರಶ್ನಾವಳಿಗಳ ಮೂಲಕ ಕುಟುಂಬದ ಸಮೀಕ್ಷೆಯ ಸಂದರ್ಭದಲ್ಲಿಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದರ ವಿಶ್ಲೇಷಣೆಯನ್ನು ಈ ಕೆಳಗೆ ಮಾಡಲಾಗಿದೆ.

ಸೂಕ್ಷ್ಮ ಯೋಜನೆಯ ಕಾರ್ಯಕ್ರಮದ ಕುರಿತು ಅಧ್ಯಾಯ ಮೂರರಲ್ಲಿ ವಿವರಿಸಲಾಗಿದೆ. ಆ ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸಿದವರು ಬಹಳ ಸುಲಭವಾಗಿ ಉತ್ತರ ನೀಡಿದ್ದಾರೆ. ಕೆಲವರು ಗ್ರಾಮದಲ್ಲಿ ಉಂಟಾದ ವಾತಾವರಣದ ಮೂಲಕ ಮಾಹಿತಿಯನ್ನು ಪಡೆದುಕೊಂಡು ಕಾರ್ಯಕ್ರಮ ನಡೆದ ಬಗ್ಗೆ ನೆನಪಿಸಿಕೊಂಡಿದ್ದಾರೆ. ಕಾರ್ಯಕ್ರಮ ಕುರಿತು ಏನನ್ನೂ ತಿಳಿಯದವರು ಪ್ರತಿಕ್ರಿಯೆ ನೀಡದೆ ಇರುವ ಸಂದರ್ಭದಲ್ಲಿ ಅನ್ವಯಿಸುವುದಿಲ್ಲ ಎನ್ನುವ ಕಡೆ ನಮೂದಿಸಲಾಗಿದೆ. ಈ ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ಒಟ್ಟು ಹನ್ನೆರಡು ಪ್ರಶ್ನೆಗಳನ್ನು ಕೇಳಲಾಗಿತ್ತು. ಕೆಲವು ಪ್ರಶ್ನೆಗಳು ಹೌದು/ ಇಲ್ಲ ಎಂದು ಕೇಳಲಾಗಿದೆ. ವಿಶ್ಲೇಷಣಾ ಸಂದರ್ಭದಲ್ಲಿ ಬಳಸಿದ ಎಲ್ಲಾ ದತ್ತಾಂಶವನ್ನು 'ಹೌದು' ಎನ್ನುವ ಆಧಾರದ ಮೇಲೆ ನಮೂದಿಸಿ, ವಿಶ್ಲೇಷಿಸಲಾಗಿದೆ. 'ಇಲ್ಲ' ಎಂದು ಪ್ರತಿಕ್ರಿಯಿಸಿರುವುದು ತುಂಬಾ ಕಡಿಮೆ. ಇಲ್ಲವೇ ಇಲ್ಲ ಎನ್ನಬಹುದು. ಕೆಲವು ಪ್ರಶ್ನೆಗಳಿಗೆ ಉಪ ಪ್ರಶ್ನೆಗಳನ್ನು ಕೇಳುವುದರ ಮೂಲಕ ಉತ್ತರವನ್ನು ಪಡೆಯಲಾಗಿದೆ. ಕೆಲವು ಪ್ರಶ್ನೆಗಳಿಗೆ ಕುಟುಂಬದವರು ನೀಡಿದ ಹೇಳಿಕೆಗಳನ್ನೇ ಯಥಾವತ್ತಾಗಿ ದಾಖಲಿಸಲಾಗಿದೆ. ವಿಶ್ಲೇಷಣೆಯ ದೃಷ್ಟಿಯಿಂದ ಐದೂ ಗ್ರಾಮಗಳಲ್ಲಿಯ ಏಕ ರೂಪದ ಹೇಳಿಕೆಗಳನ್ನು ಕ್ರೋಢೀಕರಿಸಿ, ದಾಖಲಿಸಿ ಒಟ್ಟು ಪ್ರತಿಕ್ರಿಯೆಯನ್ನು ವಿಶ್ಲೇಷಿಸಲಾಗಿದೆ. ನಮೂನೆ 2.1ರ ಪ್ರಶ್ನೆಗೆ ಐದೂ ಗ್ರಾಮಗಳನ್ನು ಗಣನೆಗೆ ತೆಗೆದುಕೊಂಡಾಗ ಶೇ.4 ಕುಟುಂಬದವರಿಗೆ (38) ಆ ಬಗ್ಗೆ ಅರಿವು ಇಲ್ಲದಿರುವುದು ತಿಳಿದುಬರುತ್ತದೆ. ಉಳಿದಂತೆ 829 ಕುಟುಂಬಗಳು ಈ ಕೆಳಗಿನ ಪ್ರಶ್ನೆಗೆ ಸಕಾರಾತ್ಮಕ ಪ್ರತಿ ಕ್ರಿಯೆಯನ್ನು ನೀಡಿರುತ್ತಾರೆ.

ಕೋಷ್ಟಕ 7ರಲ್ಲಿ ಕಂಡುಬರುವ ದತ್ತಾಂಶವನ್ನು ಅನುಸರಿಸಿ ಈ ಕೆಳಗೆ ವಿಶ್ಲೇಷಣೆ ಮಾಡಲಾಗಿದೆ.


ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಮಾದರಿ ಗ್ರಾಮಗಳು ಸ್ಪಂದಿಸಿರುವ ರೀತಿ:

ಸೂಕ್ಷ್ಮ ಯೋಜನೆಯ ಬಗ್ಗೆ ಮಾದರಿ ಗ್ರಾಮಗಳ ಜನತೆ ಸ್ಪಂದಿಸಿರುವ ರೀತಿಯನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಸಮುದಾಯಗಳ ಕುಟುಂಬದ ಹಿರಿಯರಿಗೆ ಹಾಗೂ ಮನೆಯಲ್ಲಿ ಲಭ್ಯವಿದ್ದ ಹಿರಿಯ ಸದಸ್ಯರಿಗೆ ಕೆಲವು ನೇರ ಪ್ರಶ್ನೆಗಳನ್ನು ಕೇಳಲಾಯಿತು. ಸಂಗ್ರಹಿಸಿದ ದತ್ತಾಂಶವನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

4.2.1. ಕೋಷ್ಠಕ - 7 : ಸೂಕ್ಷ್ಮ ಯೋಜನೆ ಕಾರ್ಯಕ್ರಮದ ಬಗೆಗಿನ ಪ್ರತಿಕ್ರಿಯೆ :

ಕ್ರ.ಸಂ.	1	2	3	4	5	6
ಗ್ರಾಮದ ಹೆಸರು	**ಗಜಾಪುರ**	**ಜಂಗಮಸೋವೇನಹಳ್ಳಿ**	**ಮರಬಾನಹಳ್ಳಿ**	**ನಂದಿಬಂಡಿ**	**ದೇವಲಾಪುರ**	**ಒಟ್ಟು**
ಗ್ರಾಮಸ್ಥರು ಗ್ರಾಮದ ನಕ್ಷೆಯನ್ನು ಹಾಕಿದರು	78	32	99	154	43	**406**
ಶೇಕಡವಾರು	41	25	71	83	19	**47**
ಸಂಪನ್ಮೂಲ ವ್ಯಕ್ತಿಗಳು ಸಭೆಯಲ್ಲಿ ಸೂಚನೆಯನ್ನು ನೀಡಿದರು	32	19	03	21	44	**119**
ಶೇಕಡವಾರು	17	15	02	11	19	**14**
ಮಕ್ಕಳಿಗೆ ಆಟದ ಚಟುವಟಿಕೆಗಳನ್ನು ನಡೆಸಿದರು	25	46	00	06	67	**144**
ಶೇಕಡವಾರು	13	37	00	03	30	**17**
ಮನೆ ಮನೆ ಸಮೀಕ್ಷೆಯನ್ನು ಸಂಘಟಿಸಲಾಗಿತ್ತು	52	25	03	01	50	**131**
ಶೇಕಡವಾರು	28	20	02	01	22	**15**
ಇತರೆ	02	02	24	00	01	**29**
ಶೇಕಡವಾರು	01	02	17	00	00	**03**
ಅನ್ವಯಿಸುವುದಿಲ್ಲ	00	02	11	03	22	**38**
ಶೇಕಡವಾರು	00	02	08	02	10	**04**
ಒಟ್ಟು	**189**	**126**	**140**	**185**	**227**	**867**

ರೇಖಾ ಚಿತ್ರ-6



ಕೋಷ್ಟಕ 7ರ ದತ್ತಾಂಶದ ವಿವರವು ರೇಖಾ ಚಿತ್ರ 6ರಲ್ಲಿ ಈ ರೀತಿ ಕಂಡುಬಂದಿದೆ.



ನಮೂನೆ 2.1ಅ ಗೆ ಸಂಬಂಧಿಸಿದಂತೆ ಶೇ. 47 (406)ರಷ್ಟು ಗ್ರಾಮಗಳಲ್ಲಿ ಗ್ರಾಮಸ್ಥರು ಗ್ರಾಮದ ನಕ್ಷೆಯನ್ನು ಅವರೇ ಹಾಕಿರುವ ಕುರಿತು ತಿಳಿಸಿದ್ದಾರೆ. ಶೇ.14 (119)ರಷ್ಟು ಸಂಪನ್ಮೂಲ ವ್ಯಕ್ತಿಗಳು ಗ್ರಾಮ ಸಭೆಯಲ್ಲಿ ಸೂಚನೆಯನ್ನು ನೀಡಿದರು ಎಂದು ಪ್ರತಿಕ್ರಿಯಿಸಿದರೆ, ಮಕ್ಕಳಿಗೆ ಆಟದ ಚಟುವಟಿಕೆಗಳನ್ನು ನಡೆಸಿದರು ಎಂದು ಶೇ. 17 (144)ರಷ್ಟು ಉತ್ತರಿಸಿದ್ದಾರೆ. ಮನೆ ಮನೆ ಸಮೀಕ್ಷೆಯನ್ನು ಸಂಘಟಿಸಲಾಗಿತ್ತು ಎಂದು ಶೇ. 15 (151)ರಷ್ಟು ತಿಳಿಸಿದ್ದಾರೆ. ಇತರೆ ಕುರಿತು ಶೇ. 03 (29)ರಷ್ಟು ಉತ್ತರ ನೀಡಿದ್ದಾರೆ. ಸಾಮಾನ್ಯವಾಗಿ ಇಲ್ಲಿ ಕಂಡು ಬರುವ ಅಂಶವೆಂದರೆ, ಸೂಕ್ಷ್ಮ ಯೋಜನೆ ಕಾರ್ಯಕ್ರಮ ನಡೆದ ಸಂದರ್ಭದಲ್ಲಿ ಮುಂಚೂಣಿಯಲ್ಲಿ ಭಾಗವಹಿಸಿ, ಕಾರ್ಯಕ್ರಮದ ಯಶಸ್ವಿಗೆ ಸಂಪನ್ಮೂಲ ವ್ಯಕ್ತಿಗಳು ಯಾವ ಯಾವ ಕಡೆ ಶ್ರಮಿಸಿದ್ದಾರೆಯೋ ಅಲ್ಲೆಲ್ಲಾ ಜನರ ಭಾಗವಹಿಸುವಿಕೆ ಹೆಚ್ಚಾಗಿರುವುದು ಕಂಡುಬರುತ್ತಿದೆ. ಗ್ರಾಮವಾರು ದತ್ತಾಂಶವನ್ನು ಗಮನಿಸಿದಾಗ ಗ್ರಾಮದ ನಕ್ಷೆಯನ್ನು ಹಾಕಿದ ಬಗ್ಗೆ ಹೊಸಪೇಟೆಯ ನಂದಿಬಂಡಿಯಲ್ಲಿ ಶೇ. 83ರಷ್ಟು ಅರಿವಿದ್ದರೆ, ಅದೇ ತಾಲೂಕಿನ ದೇವಲಾಪುರದಲ್ಲಿ ಶೇ. 19ರಷ್ಟು ಅರಿವಿರುವುದು ಕಂಡುಬರುತ್ತದೆ. ಸಂಪನ್ಮೂಲ ವ್ಯಕ್ತಿಗಳು ಗ್ರಾಮ ಸಭೆಯಲ್ಲಿ ಸೂಚನೆ ನೀಡಿದ ಕುರಿತು ದೇವ ಲಾಪುರದಲ್ಲಿ ಶೇ. 19ರಷ್ಟು ಅರಿವಿದ್ದರೆ, ಅತ್ಯಂತ ಕಡಿಮೆ ತಿಳುವಳಿಕೆ ಅಂದರೆ ಶೇ. 3ರಷ್ಟು ಇರುವ ಗ್ರಾಮ ಕೂಡ್ಲಿಗಿಯ ಮರಬಾನಹಳ್ಳಿ. ಮಕ್ಕಳಿಗೆ ನಡೆಸಿದ ಆಟದ ಚಟುವಟಿಕೆ ಕುರಿತು ಕೂಡ್ಲಿಗಿ ತಾಲೂಕಿನ ಜಂಗಮ ಸೋವೇನಹಳ್ಳಿಯಲ್ಲಿ ಶೇ. 37ರಷ್ಟು ತಿಳುವಳಿಕೆ ಇದ್ದರೆ, ಈ ಬಗ್ಗೆ ಅದೇ ತಾಲೂಕಿನ ಮರಬಾನಹಳ್ಳಿಯಲ್ಲಿ ಮಾಹಿತಿಯೇ ಇಲ್ಲದಿರುವುದು ಕಂಡುಬರುತ್ತದೆ. ಮನೆಮನೆ ಸಮೀಕ್ಷೆಯನ್ನು ಸಂಘಟಿಸಲಾಗಿತ್ತು ಎಂಬ ಬಗ್ಗೆ ಶೇ. 28ರಷ್ಟು ಕೂಡ್ಲಿಗಿ ತಾಲೂಕಿನ ಗಜಾಪುರದಲ್ಲಿ ಪ್ರತಿಕ್ರಿಯಿಸಿದ್ದರೆ, ಶೇ. 1 ಮಾತ್ರ ನಂದಿಬಂಡಿಯಲ್ಲಿ ಪ್ರತಿಕ್ರಿಯೆ ದೊರೆತಿದೆ. ಇತರೆ ಕುರಿತು ಮರಬಾನಹಳ್ಳಿಯಲ್ಲಿ ಶೇ. 17ರಷ್ಟು ಸ್ಪಂದಿಸಿದ್ದರೆ, ನಂದಿಬಂಡಿ ಮತ್ತು ದೇವಲಾಪುರದಲ್ಲಿ ಈ ಕುರಿತು ಪ್ರತಿಕ್ರಿಯೆಯೇ ದೊರೆತಿಲ್ಲ.

ಒಟ್ಟಾರೆ ಸೂಕ್ಷ್ಮ ಯೋಜನಾ ಕಾರ್ಯಕ್ರಮ, ಗ್ರಾಮಗಳಲ್ಲಿ ನಡೆದಾಗ ಜನರ ಭಾಗವಹಿಸುವಿಕೆ ಅತ್ಯಂತ ಮಹತ್ವವಾಗಿರುತ್ತದೆ. ಆದ್ದರಿಂದ ಈ ವಿಶ್ಲೇಷಣೆಯಿಂದ ಕಂಡು ಬರುವ ಅಂಶವೆಂದರೆ, ಮೇಲಿನ ಗ್ರಾಮಗಳಲ್ಲಿ ನಡೆದ ಸೂಕ್ಷ್ಮ ಯೋಜನಾ ಕಾರ್ಯಕ್ರಮಗಳಲ್ಲಿ ಜನರ ಭಾಗವಹಿಸುವಿಕೆ ನೇತ್ಯಾತ್ಮಕವಾಗಿರದೇ, ಇತ್ಯಾತ್ಮಕವಾಗಿರುವುದು ತಿಳಿದುಬರುತ್ತದೆ.

4.2.2. ಶೈಕ್ಷಣಿಕ ಅಭಿವೃದ್ಧಿಗೆ ಸ್ಥಳೀಯ ಬೆಂಬಲ :


ಸೂಕ್ಷ್ಮ ಯೋಜನಾ ಕಾರ್ಯಕ್ರಮವು ಸಮುದಾಯದ ಜಾಗೃತಿ ಮೂಡಿಸಲು ಬಹು ಮುಖ್ಯ ಪಾತ್ರವಹಿಸುತ್ತದೆ ಎಂದು ಈ ಹಿಂದಿನ ಅಧ್ಯಾಯದಲ್ಲಿ ತಿಳಿಸಲಾಗಿದೆ. ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಶೈಕ್ಷಣಿಕ ಅಭಿವೃದ್ಧಿಗೆ ಸಮುದಾಯ ಬೆಂಬಲ ನೀಡುವುದರೊಂದಿಗೆ ಯಾವ ಯಾವ ನಿಟ್ಟಿನಲ್ಲಿ ಅದು ಭಾಗಿಯಾಗಿದೆ ಎನ್ನುವ ಕುರಿತು ಸಮೀಕ್ಷೆಯಲ್ಲಿ ಕೇಳಲಾದ ಪ್ರಶ್ನೆಗೆ ಅನೇಕರು ತಮ್ಮ ಅಭಿಪ್ರಾಯವನ್ನು ನೀಡಿರುತ್ತಾರೆ. ಅವರ ಅಭಿಪ್ರಾಯವನ್ನು ಸಂಗ್ರಹಿಸಿ, ಕೋಷ್ಟಕ -8ರಲ್ಲಿ ನಮೂದಿಸಲಾಗಿದೆ. ಅದರ ವಿಶ್ಲೇಷಣೆಯನ್ನು ಈ ಕೆಳಗೆ ನೀಡಿದೆ.

ಕೋಷ್ಟಕ - 8

ಕ್ರ.ಸಂ.	1	2	3	4	5	6
ಗ್ರಾಮದ ಹೆಸರು	**ಗಜಾಪುರ**	**ಜಂಗಮು ಸೋವೇನಹಳ್ಳಿ**	**ಮರಬಾನ ಹಳ್ಳಿ**	**ನಂದಿಬಂಡಿ**	**ದೇವಲಾಪುರ**	**ಒಟ್ಟು**
ಮಕ್ಕಳನ್ನು ಶಾಲೆಗೆ ದಾಖಲಿಸಲಾಯಿತು	68	42	47	8	22	**187**
ಶೇಕಡವಾರು	36	33	34	04	10	**22**
ಸಮುದಾಯ ಭಾಗವಹಿಸುವಿಕೆಯಿಂದ ಶಾಲೆ ಅಭಿವೃದ್ಧಿಗೊಂಡಿದೆ	47	23	10	115	37	**232**
ಶೇಕಡವಾರು	25	18	07	62	16	**27**
ಸೂಕ್ಷ್ಮ ಯೋಜನೆ ಕಾರ್ಯಕ್ರಮದ ನಂತರ ಸಮುದಾಯ ಪ್ರೇರಣೆ ಗೊಂಡಿದೆ	27	26	04	07	127	**191**
ಶೇಕಡವಾರು	14	21	03	04	56	**22**
ಈ ಕಾರ್ಯಕ್ರಮದ ನಂತರ ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಪ್ರೇರಣೆ ಹೊಂದಿ ಶಾಲೆಯ ಅಭಿವೃದ್ಧಿಗೆ ಆಸಕ್ತಿ ಹೊಂದಿದ್ದಾರೆ.	18	15	04	06	14	**57**
ಶೇಕಡವಾರು	10	12	03	03	06	**07**
ಸೂಕ್ಷ್ಮ ಯೋಜನೆ ನಂತರ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ಹೊಂದಿದ್ದಾರೆ.	27	17	08	45	07	**104**
ಶೇಕಡವಾರು	14	13	06	24	03	**12**
ಇತರೆ	02	03	67	04	20	**96**
ಶೇಕಡವಾರು	01	02	48	02	09	**11**
ಒಟ್ಟು	**189**	**126**	**140**	**185**	**227**	**867**

ಮಕ್ಕಳನ್ನು ದಾಖಲಿಸಲಾಯಿತೆಂದು ಶೇ. 22 (187)ರಷ್ಟು, ಸಮುದಾಯ ಭಾಗವಹಿಸುವಿಕೆಯಿಂದ ಶಾಲೆ ಅಭಿವೃದ್ಧಿಗೊಂಡಿದೆ ಎಂದು ಶೇ. 27 (232)ರಷ್ಟು, ಸೂಕ್ಷ್ಮ ಯೋಜನೆಯ ಕಾರ್ಯಕ್ರಮದ ನಂತರ ಸಮುದಾಯ ಪ್ರೇರಣೆಗೊಂಡಿದೆ ಎಂಬ ಬಗ್ಗೆ ಶೇ. 22(191)ರಷ್ಟು, ಈ ಕಾರ್ಯಕ್ರಮದ ನಂತರ ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಪ್ರೇರಣೆ ಹೊಂದಿ, ಶಾಲೆಯ ಅಭಿವೃದ್ಧಿಗೆ ಆಸಕ್ತಿ ಹೊಂದಿದ್ದಾರೆಂದು ಶೇ.7(57)ರಷ್ಟು ಸೂಕ್ಷ್ಮ ಯೋಜನೆ ನಂತರ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ಹೊಂದಿರುವ ಕುರಿತು ಶೇ. 12(104)ರಷ್ಟು, ಇತರೆ ಶೇ. 11 (96)ರಷ್ಟು ಪ್ರತಿಕ್ರಿಯೆ ನೀಡಿರುತ್ತಾರೆ.

ರೇಖಾ ಚಿತ್ರ-7




ಕೋಷ್ಟಕ 4.2.2ರ ದತ್ತಾಂಶದ ವಿವರ ರೇಖಾ ಚಿತ್ರದಲ್ಲಿ ಈ ಮೇಲಿನಂತೆ ಕಂಡುಬಂದಿದೆ.

4.2.3. ಕೋಷ್ಟಕ - 9 : ಗ್ರಾಮಸಭೆಯಲ್ಲಿ ಪಾಲ್ಗೊಳ್ಳುವಿಕೆ :

ಗ್ರಾಮದ ಅಭಿವೃದ್ಧಿಯಲ್ಲಿ ಗ್ರಾಮ ಸಭೆಗಳು ಮಹತ್ವಪೂರ್ಣ ಪಾತ್ರ ವಹಿಸುತ್ತವೆ. ಈ ಸಭೆಗಳು ಯಶಸ್ವಿಯಾಗಿ ಉತ್ತಮ ಫಲ ನೀಡಬೇಕಾದರೆ,ಗ್ರಾಮ ಸಮುದಾಯದ ಪ್ರತಿ ಕುಟುಂಬದಿಂದ ಒಬ್ಬ ಹಿರಿಯ ಸದಸ್ಯನಾದರೂ ಗ್ರಾಮ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇಂತಹ ಪಾಲ್ಗೊಳ್ಳುವಿಕೆ ಗ್ರಾಮಸ್ಥರ ಆಸಕ್ತಿಯನ್ನು ವ್ಯಕ್ತಪಡಿಸುವುದೇ ಅಲ್ಲದೆ, ಸಮುದಾಯದ ನಾಯಕರುಗಳಿಗೂ ಸ್ಪೂರ್ತಿ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಯೋಜನೆಗೆ ಸಂಬಂಧಿಸಿದಂತೆ ಗ್ರಾಮಸ್ಥರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಕ್ರ.ಸಂ.	1	2	3	4	5	6
ಗ್ರಾಮದ ಹೆಸರು	**ಗಜಾಪುರ**	**ಜಂಗಮ ಸೋವೇನಹಳ್ಳಿ**	**ಮರಬಾನ ಹಳ್ಳಿ**	**ನಂದಿಬಂಡಿ**	**ದೇವಲಾಪುರ**	**ಒಟ್ಟು**
ಶಾಲೆಗೆ ದಾಖಲಾದ ಮಕ್ಕಳು	52	49	11	1	23	**136**
ಶೇಕಡವಾರು	28	39	08	1	10	**16**
ಬಾಲ ಕಾರ್ಮಿಕರ ಮಕ್ಕಳ ಬಗ್ಗೆ ಪಾಲಕ ಪೋಷಕರಿಗೆ ಅರಿವು ಮೂಡಿಸಲಾಯಿತು.	47	09	06	11	20	**93**
ಶೇಕಡವಾರು	25	7	4	6	9	**11**
ಗ್ರಾಮ ಶಿಕ್ಷಣ ಸಮಿತಿಯನ್ನು ಬಲ ಪಡಿಸುವುದು/ಅವರ ಜವಾಬ್ದಾರಿ ಯನ್ನು ತಿಳಿಸುವುದು	8	9	1	3	68	**89**
ಶೇಕಡವಾರು	4	7	1	2	30	**10**
ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು.	33	47	8	3	17	**108**
ಶೇಕಡವಾರು	17	37	6	2	7	**12**
ಮಕ್ಕಳಿಗೆ ಕೆಲಸದ ಹೊರೆ ಹೆಚ್ಚಿಸು ವುದನ್ನು ತಗ್ಗಿಸುವ ಬಗ್ಗೆ (ಅದರಲ್ಲೂ ಹೆಣ್ಣು ಮಕ್ಕಳು)	27	7	0	4	43	**81**
ಶೇಕಡವಾರು	14	6	0	2	19	**9**
ಗ್ರಾಮ ಶಿಕ್ಷಣ ಯೋಜನೆಯನ್ನು ಗ್ರಾಮ ಸಭೆಯಲ್ಲಿ ರೂಪಿಸಲಾಯಿತು	14	1	1	13	33	**62**
ಶೇಕಡವಾರು	7	1	1	7	15	**7**
ಮೇಲಿನ ಎಲ್ಲಾ	5	1	0	71	1	**78**
ಶೇಕಡವಾರು	3	1	0	38	0	**9**
ಇತರೆ	3	3	113	79	22	**220**
ಶೇಕಡವಾರು	2	2	81	43	10	**25**
ಒಟ್ಟು	**189**	**126**	**140**	**185**	**227**	**867**

ರೇಖಾ ಚಿತ್ರ-8



ಕೋಷ್ಟಕ 9ರ ದತ್ತಾಂಶ ವಿವರವು ರೇಖಾ ಚಿತ್ರದಲ್ಲಿ ಮೇಲಿನಂತೆ ಕಂಡುಬಂದಿದೆ.

ಗ್ರಾಮ ಸಭೆಯಲ್ಲಿ ಚರ್ಚಿಸಿದ ವಿಷಯಗಳನ್ನು ಕುರಿತು ಪ್ರಶ್ನೆಗಳನ್ನು ಕೇಳಲಾಗಿತ್ತು. ಸೂಕ್ಷ್ಮ ಯೋಜನೆಗಳು ನಡೆದ ಸಂದರ್ಭದಲ್ಲಿ ಜನಜಾಗೃತಿಗಾಗಿ ಮತ್ತು ಆ ಗ್ರಾಮದ ಶೈಕ್ಷಣಿಕ ಯೋಜನೆ ರೂಪಿಸುವವುದಕ್ಕಾಗಿ ಗ್ರಾಮ ಸಭೆಯನ್ನು ಏರ್ಪಡಿಸಲಾಗುತ್ತದೆ. ಅಲ್ಲಿ ಊರಿನ ಯುವಕರು, ಗ್ರಾಮ ಶಿಕ್ಷಣಸಮಿತಿ ಸದಸ್ಯರು , ಊರಿನ ಪ್ರಮುಖರು , ಮಹಿಳೆಯರು, ಸಂಘ-ಸಂಸ್ಥೆಗಳು ಭಾಗವಹಿಸುತ್ತವೆ. ಈ ಸಭೆಯಲ್ಲಿ ಯಾವ ಯಾವ ಚರ್ಚೆಯಾಗಿದೆ ಎಂಬ ಬಗ್ಗೆ ಸಂಗ್ರಹಿಸಲಾದ ಮಾಹಿತಿಯನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ. ಗ್ರಾಮ ಸಭೆಯಲ್ಲಿ ಚರ್ಚಿಸಿದ ವಿಷಯಗಳು ನಿಮಗೆ ನೆನಪಿದೆಯೇ ? ಎನ್ನುವ ಕುರಿತು 'ಹೌದು' ಎಂದು ಪ್ರತಿಕ್ರಿಯಿಸಿದವರೆಲ್ಲಾ ಈ ಕೆಳಗಿನ ವಿಷಯಗಳ ಕುರಿತು ಚರ್ಚಿಸಿದ ಬಗ್ಗೆ ಉತ್ತರಿಸಿದ್ದಾರೆ. ಗಮನಕ್ಕೆ ತಂದ ವಿಷಯಗಳಲ್ಲಿ ಒಟ್ಟಾರೆ ಐದು ಗ್ರಾಮಗಳಲ್ಲಿ ಶಾಲೆಯಲ್ಲಿ ದಾಖಲಾದ ಮಕ್ಕಳ ಬಗ್ಗೆ ಶೇ.16 (136). ಬಾಲ ಕಾರ್ಮಿಕ ಮಕ್ಕಳ ಬಗ್ಗೆ ಪಾಲಕರಿಗೆ ಅರಿವನ್ನು ಮೂಡಿಸಲಾದ ಕುರಿತು ಶೇ. 11 (93). ಗ್ರಾಮ ಶಿಕ್ಷಣ ಸಮಿತಿಯನ್ನು ಬಲಪಡಿಸಿ, ಅದರ ಜವಾಬ್ದಾರಿಯನ್ನು ತಿಳಿಸಿದ ಬಗ್ಗೆ ಆದ ಚರ್ಚೆ ಕುರಿತು ಶೇ.12 (108). ಮಕ್ಕಳಿಗೆ ಹೊರೆ ಹೆಚ್ಚಿಸುವುದನ್ನು ಕಡಿಮೆ ಮಾಡುವ ಬಗ್ಗೆ ಅದರಲ್ಲೂ ಹೆಣ್ಣು ಮಕ್ಕಳ ಕುರಿತು ಶೇ.9(81). ಗ್ರಾಮ ಶಿಕ್ಷಣ ಯೋಜನೆಯನ್ನು ಗ್ರಾಮ ಸಭೆಯಲ್ಲಿಯೇ ರೂಪಿಸಲಾಯಿತು ಎನ್ನುವ ಕುರಿತು ಶೇ.7 (62)ರಷ್ಟು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೇಲಿನ ಎಲ್ಲಾ ಅಂಶಗಳ ಮೇಲೆ ಚರ್ಚೆ ಆಗಿರುವ ಕುರಿತು ಶೇ. 9(78)ರಷ್ಟು , ಇತರೆ ಕುರಿತು ಶೇ. 25 (220) ಜನರು ತಮ್ಮ ಪ್ರತಿಕ್ರಿಯೆ ನೀಡಿದ್ದಾರೆ. ಗ್ರಾಮವಾರು ಗಮನಿಸಿದಾಗ ಶಾಲೆಯಲ್ಲಿ ದಾಖಲಾದ ಮಕ್ಕಳ ಕುರಿತು ಜಂಗಮಸೋವೇನಹಳ್ಳಿ ಶೇ.39(49)ರಷ್ಟು. ಅತ್ಯಂತ ಕಡಿಮೆ ಸ್ಪಂದಿಸಿದ ಗ್ರಾಮ ನಂದಿಬಂಡಿ ಶೇ.1 ಮಾತ್ರ. ಬಾಲ ಕಾರ್ಮಿಕ ಮಕ್ಕಳ ಪಾಲಕ-ಪೋಷಕರಿಗೆ ಅರಿವನ್ನು ಮೂಡಿಸಿದ ಕುರಿತು ಗಜಾಪುರದಲ್ಲಿ ಶೇ. 25(47)ರಷ್ಟು ಸ್ಪಂದಿಸಿದ್ದರೆ, ಮರಬಾನಹಳ್ಳಿಯಲ್ಲಿ ಶೇ. 4(6) ಮಾತ್ರ ಪ್ರತಿಕ್ರಿಯಿಸಿದ್ದಾರೆ. ಗ್ರಾಮ ಶಿಕ್ಷಣ ಸಮಿತಿ ಬಲಪಡಿಸುವುದು/ ಸದಸ್ಯರ ಜವಾಬ್ದಾರಿಯನ್ನು ತಿಳಿಸುವ ಕುರಿತು ದೇವಲಾಪುರ ಗ್ರಾಮದಲ್ಲಿ ಶೇ. 30(68)ರಷ್ಟು ಚರ್ಚಿಸಿದ್ದರೆ, ಮರಬಾನಹಳ್ಳಿ, ನಂದಿಬಂಡಿಯಲ್ಲಿ ಕ್ರಮವಾಗಿ ಶೇ.1 (1), 2 (3) ಮಾತ್ರ ಪ್ರತಿಕ್ರಿಯಿಸಿದ್ದಾರೆ. ಹೆಣ್ಣು ಮಕ್ಕಳ ಶಿಕ್ಷಣ ಜಾಗೃತಿ ಕುರಿತು ಜಂಗಮಸೋವೇನಹಳ್ಳಿಯಲ್ಲಿ ಶೇ.37 (47). ಕಡಿಮೆ ಅಂದರೆ ನಂದಿಬಂಡಿ ಶೇ.2(3) ಮಾತ್ರ ಸ್ಪಂದನೆ ನೀಡಿದ್ದಾರೆ. ಮಕ್ಕಳಿಗೆ ಕೆಲಸದ ಹೊರೆ ಹೆಚ್ಚಿಸುವುದನ್ನು ಕಡಿಮೆ ಮಾಡುವ ಕುರಿತು , (ಅದರಲ್ಲೂ ಹೆಣ್ಣು ಮಕ್ಕಳು) ದೇವಲಾಪುರದಲ್ಲಿ ಶೇ. 19 (43)ರಷ್ಟು ಈ ಕುರಿತು ಅಭಿಪ್ರಾಯವನ್ನೇ ವ್ಯಕ್ತಪಡಿಸಿದ ಗ್ರಾಮ ಮರಬಾನಹಳ್ಳಿ. ಗ್ರಾಮ ಶಿಕ್ಷಣ ಯೋಜನೆಯನ್ನು ಗ್ರಾಮ ಶಿಕ್ಷಣ ಸಭೆಯಲ್ಲಿ ರೂಪಿಸಲಾಯಿತು ಎನ್ನುವ ಕುರಿತು ದೇವಲಾಪುರದವರು ಶೇ.15 (33) ಬೆಂಬಲ ನೀಡಿದ್ದರೆ, ಅತ್ಯಂತ ಕಡಿಮೆ ಅಂದರೆ, ಒಬ್ಬರು ಮಾತ್ರ ಕ್ರಮವಾಗಿ ಜಂಗಮಸೋವೇನಹಳ್ಳಿ ಮತ್ತು ಮರಬಾನಹಳ್ಳಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಮೇಲಿನ ಎಲ್ಲಾ ವಿಷಯಗಳನ್ನು ಗ್ರಾಮ ಸಭೆಯಲ್ಲಿ ಚರ್ಚಿಸಲಾಗಿದೆ ಎನ್ನುವ ಬಗ್ಗೆ ಹೆಚ್ಚಿನ ರೀತಿಯಲ್ಲಿ ಪ್ರತಿಕ್ರಿಯಿಸಿದ ಗ್ರಾಮ ನಂದಿಬಂಡಿ ಶೇ. 38(71). ಅತ್ಯಂತ ಕಡಿಮೆ ಪ್ರತಿಕ್ರಿಯೆ ನೀಡಿದ ಗ್ರಾಮ ಜಂಗಮಸೋವೇನಹಳ್ಳಿ. ಮರಬಾನಹಳ್ಳಿ ಮತ್ತು ದೇವಲಾಪುರ ಕ್ರಮವಾಗಿ ತಲಾ ಶೇ.1, ಇಲ್ಲವೇ ಇಲ್ಲ, ಕೇವಲ ಒಬ್ಬರು ಮಾತ್ರ. ಇತರೆ ಕುರಿತು ಮರಬಾನಹಳ್ಳಿ ಗ್ರಾಮದವರು ಶೇ. 81(113)

ಪ್ರತಿಕ್ರಿಯಿಸಿದ್ದರೆ, ಗಜಾಪುರ ಮತ್ತು ಜಂಗಮಸೋವೇನಹಳ್ಳಿಯಲ್ಲಿ ಕ್ರಮವಾಗಿ ಶೇ.2(3)ರಷ್ಟು ಸಮಸಮ ಸ್ಪಂದಿಸಿದ್ದಾರೆ. ಬಹಳಷ್ಟು ಕುಟುಂಬಗಳಲ್ಲಿಯ ಸದಸ್ಯರು ಮೇಲಿನ ಎಲ್ಲಾ ಅಂಶಗಳಿಗೆ ವಿವಿಧ ಪ್ರತಿಕ್ರಿಯೆ ನೀಡಲಾಗಿದ್ದು, ಗ್ರಾಮದಿಂದ ಗ್ರಾಮಕ್ಕೆ ಅಂಶದಿಂದ ಅಂಶಕ್ಕೆ ಭಿನ್ನಭಿನ್ನವಾಗಿರುವುದು ಕಂಡುಬರುತ್ತದೆ.

4.2.3. ಕೋಷ್ಟಕ - 10: ಗ್ರಾಮ ಸಭೆಯ ಚರ್ಚೆಯ ಪ್ರಭಾವಗಳು.

ಕ್ರ.ಸಂ.	1	2	3	4	5	6
ಗ್ರಾಮದ ಹೆಸರು	**ಗಜಾಪುರ**	**ಜಂಗಮ ಸೋವೇನಹಳ್ಳಿ**	**ಮರಬಾನ ಹಳ್ಳಿ**	**ನಂದಿಬಂಡಿ**	**ದೇವಲಾ ಪುರ**	**ಒಟ್ಟು**
ಶಾಲೆಬಿಟ್ಟ ಮಕ್ಕಳ ಪಾಲಕ/ ಪೋಷಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಕ್ರಮ ಕೈಗೊಳ್ಳಲಾಗಿದೆ.	72	118	01	65	98	**354**
ಶೇಕಡವಾರು	38	94	1	35	43	**41**
ಹಿಂದುಳಿದ ಮಕ್ಕಳಿಗೆ ಪ್ರೋತ್ಸಾಹ ದಾಯಕ ಕಾರ್ಯಕ್ರಮ ವಿವರಿಸ ಲಾಯಿತು	63	0	8	44	28	**143**
ಶೇಕಡವಾರು	33	0	6	24	12	**16**
ಮಕ್ಕಳ ಶೈಕ್ಷಣಿಕ ಪ್ರಗತಿ ಬಗ್ಗೆ ಪಾಲಕರಿಗೆ ತಿಳಿಸಲಾಯಿತು	0	4	0	4	0	**8**
ಶೇಕಡವಾರು	0	3	0	2	0	**1**
ಅನೌಪಚಾರಿಕ ಶಿಕ್ಷಣ ಕೇಂದ್ರ ಪ್ರಾರಂಭಿಸಲಾಗಿದೆ ಮತ್ತು ಬೋಧಕರನ್ನು ನೇಮಿಸಲಾಗಿದೆ.	28	0	0	10	26	**64**
ಶೇಕಡವಾರು	15	0	0	5	11	**7**
ಹೆಣ್ಣು ಮಕ್ಕಳ ಮೇಲಿನ ಹೊರೆ ತಪ್ಪಿಸಿ, ಶಾಲೆಗೆ ಕರೆತರಲಾಗುತ್ತಿದೆ.	4	0	1	0	0	**5**
ಶೇಕಡವಾರು	2	0	1	0	0	**1**
ಸಮವಸ್ತ್ರದೊಂದಿಗೆ ಶಾಲಾ ವೇಳೆಗೆ ಸರಿಹಾಗಿ ಮಕ್ಕಳನ್ನು ಕಳುಹಿಸಲು ಪಾಲಕರಿಗೆ ಮನ ಒಲಿಸಲಾಗಿದೆ.	3	0	122	11	72	**208**
ಶೇಕಡವಾರು	2	0	87	6	32	**24**
ರಾತ್ರಿಶಾಲೆಯನ್ನು ತೆರೆಯಲು ಚರ್ಚಿಸಲಾಯಿತು	4	0	8	0	0	**12**
ಶೇಕಡವಾರು	2	0	6	0	0	**1**
ಶಾಲಾ ಪರಿಸರವನ್ನು ಸ್ವಚ್ಛಗೊಳಿ ಸಲಾಗಿದೆ.	7	0	0	0	3	**10**
ಶೇಕಡವಾರು	4	0	0	0	1	**1**
ಇತರೆ	8	4	0	51	0	**63**
ಶೇಕಡವಾರು	4	3	0	28	0	**7**
ಒಟ್ಟು	**189**	**125**	**140**	**185**	**227**	**867**

4.2.4. ಕೋಷ್ಟಕ - 10 : ಗ್ರಾಮ ಸಭೆಯ ಚರ್ಚೆಗಳ ಪ್ರಭಾವ.

ಗ್ರಾಮ ಸಭೆಗಳು ಗ್ರಾಮದ ಶಿಕ್ಷಣಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಗ್ರಾಮ ಸಭೆಯಲ್ಲಿ ಗ್ರಾಮದ ಆಸಕ್ತರೆಲ್ಲರೂ ಸೇರಿ ಶಾಲೆಯ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಅವುಗಳಿಗೆ ಪರಿಹಾರವನ್ನು ಕಂಡು ಕೊಳ್ಳಲು ತೀರ್ಮಾನಿಸಲಾಗುತ್ತದೆ. ತೀರ್ಮಾನಗಳ ನಂತರ ಅನುಸರಣೆ ತುಂಬಾ ಅಗತ್ಯವಾದುದು. ಗ್ರಾಮ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಅನುಸರಣಾ ಕಾರ್ಯ ಎಷ್ಟರ ಮಟ್ಟಿಗೆ ಫಲಪ್ರದವಾಗಿದೆ ಎಂಬುದನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.

ಗ್ರಾಮ ಸಭೆಯಲ್ಲಿ ಚರ್ಚೆಯೇನೋ ಆಗುತ್ತದೆ. ವಿಷಯ ವಿಮರ್ಶೆ ಕೂಡ ಆಗುತ್ತದೆ. ಆದರೆ ಚರ್ಚಿಸಿದಂತೆ ಗ್ರಾಮದಲ್ಲಿ ಅದರ ಅನುಷ್ಠಾನವಾಗುವುದು ಅತ್ಯಂತ ಮಹತ್ವದ್ದು. ತೆಗೆದುಕೊಂಡ ನಿರ್ಣಯದಂತೆ ಕಾರ್ಯಾನುಷ್ಠಾನಗೊಂಡ ಕುರಿತು ಗ್ರಾಮದವರು ಯಾವ ಯಾವ ಕ್ರಮ ಅನುಸರಿಸಿದ್ದಾರೆ ಎಂಬ ಬಗ್ಗೆ ಅವಲೋಕಿಸಲಾಗಿ, ಒಟ್ಟು ಐದು ಗ್ರಾಮಗಳಲ್ಲಿ ಶೇ. 24 (208) ರಷ್ಟು ಕುಟುಂಬದವರು ಮಕ್ಕಳನ್ನು ಶಾಲೆಗೆ ಸಮವಸ್ತ್ರದೊಂದಿಗೆ ಶಾಲಾ ವೇಳೆಗೆ ಸರಿಯಾಗಿ ಕಳುಹಿಸುವ ಕುರಿತು ಕ್ರಮ ಅನುಸರಿಸಿದ ಬಗ್ಗೆ ತಿಳಿಸಿದ್ದಾರೆ. ಇದು ಎರಡನೆಯ ಪ್ರಾಧಾನ್ಯತೆಯಾಗಿದೆ. ಶೇ. 41 (354) ರಷ್ಟು ಕುಟುಂಬಗಳು ಶಾಲೆ ಬಿಟ್ಟ ಮಕ್ಕಳ ಪಾಲಕ/ಪೋಷಕರ ಮನ ಒಲಿಸಿ, ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಕ್ರಮ ಕೈಗೊಂಡ ಕುರಿತು ಪ್ರಥಮ ಆದ್ಯತೆ ನೀಡಿ ಪ್ರತಿಕ್ರಿಯಿಸಿದ್ದಾರೆ. ಅಂದರೆ ಸೂಕ್ಷ್ಮ ಯೋಜನೆ ನಂತರ ಜನ ಪ್ರೇರಣೆಗೊಂಡ ಬಗ್ಗೆ ಈ ಅಂಶ ಸ್ಪಷ್ಟಪಡಿಸುತ್ತದೆ. ಕ್ರಮವಾಗಿ ಮೂರನೆ ಆದ್ಯತೆಯಲ್ಲಿ ಶೇ. 16 (143) ರಷ್ಟು ಕುಟುಂಬಗಳು ಹಿಂದುಳಿದ ಮಕ್ಕಳ ಬಗ್ಗೆ ನೀಡುವ ಪ್ರೋತ್ಸಹದಾಯಕ ಕಾರ್ಯಕ್ರಮಗಳ ಕುರಿತು ವಿವರಿಸಿದ್ದಾರೆ (ಉಚಿತ ಬಟ್ಟೆ, ಪುಸ್ತಕ, ವಿದ್ಯಾರ್ಥಿ ವೇತನ ಇತ್ಯಾದಿ). ಸೂಕ್ಷ್ಮ ಯೋಜನಾ ಕಾರ್ಯಕ್ರಮದ ನಂತರ ಶಾಲೆ ಬಿಟ್ಟ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣ ಕೇಂದ್ರ ತೆರೆದು ಬೋಧಕರನ್ನು ನೇಮಿಸಲಾಗಿದೆಯೆಂದು ಶೇ. 7(64) ರಷ್ಟು ಕುಟುಂಬಗಳು ಉತ್ತರಿಸಿದ್ದಾರೆ. ಕ್ರಮವಾಗಿ ಮಕ್ಕಳ ಶೈಕ್ಷಣಿಕ ಪ್ರಗತಿ ಕುರಿತು ಹೆಣ್ಣು ಮಕ್ಕಳ ಹೊರೆ ತಗ್ಗಿಸಿ ಶಾಲೆಗೆ ಕರೆತರಲಾದ ಬಗ್ಗೆ ರಾತ್ರಿ ಶಾಲೆ ತೆರೆಯಲು ಪ್ರಯತ್ನಿಸಿದ ಶಾಲಾ ಪರಿಸರವನ್ನು ಸ್ವಚ್ಛ ವಾಗಿಟ್ಟುಕೊಳ್ಳುವುದರ ಕುರಿತು ಶೇ.1ರಷ್ಟು ಕುಟುಂಬಗಳು ಪ್ರತಿಕ್ರಿಯಿಸಿದ್ದಾರೆ. ಇತರೆ ಶೇಕಡ 7(63) ರಷ್ಟು ಅಭಿಪ್ರಾಯಿಸಿದ್ದಾರೆ.

ಅದೇ ರೀತಿ ಗ್ರಾಮವಾರು ವಿವರ ಗಮನಿಸದಾಗ ಶಾಲೆ ಬಿಟ್ಟ ಮಕ್ಕಳ ಪಾಲಕ/ಪೋಷಕರ ಮನವೊಲಿಸಿದ ಕುರಿತು ಜಂಗಸೋವೇನಹಳ್ಳಿ ಶೇ. 94(118) ಕ್ರಮ ಅನುಸರಿಸಿದ್ದರೆ, ಮರಬಾನಹಳ್ಳಿಯಲ್ಲಿ ಕೇವಲ ಒಬ್ಬರು ಮಾತ್ರ. ಈ ಕುರಿತು ದೇವಲಾಪುರದಲ್ಲಿ ಶೇ. 43 (98) ರಷ್ಟು ಸ್ಪಂದನೆ ದೊರಕಿದೆ. ಹಾಗೆಯೇ ಹಿಂದುಳಿದ ಮಕ್ಕಳ ಪ್ರೋತ್ಸಾಹದಾಯಕ ಕಾರ್ಯಕ್ರಮ ಕುರಿತು ವಿವರಿಸಿದ ಬಗ್ಗೆ ಗಜಾಪುರ ಶೇ. 33(63). ಜಂಗಮಸೋವೇನಹಳ್ಳಿಯಲ್ಲಿ ಶೂನ್ಯ. ನಂದಿಬಂಡಿಯಲ್ಲಿ ಶೇ. 24(44) ರಷ್ಟು, ಜಂಗಮಸೋವೇನಹಳ್ಳಿ ಮತ್ತು ನಂದಿಬಂಡಿಯಲ್ಲಿ ತಲಾ ಶೇ. 3(4), 2(4) ರಷ್ಟು ಮಾತ್ರ ಮಕ್ಕಳ ಶೈಕ್ಷಣಿಕ ಪ್ರಗತಿ ಕುರಿತು ಪಾಲಕರಿಗೆ

ತಿಳಿಸಿದ ಗ್ರಾಮಗಳಾಗಿವೆ. ಉಳಿದ ಯಾವ ಗ್ರಾಮಗಳಲ್ಲಿ ಇದಕ್ಕೆ ಕ್ರಮ ಅನುಸರಿಸಿರುವುದಿಲ್ಲ. ಅನೌಪಚಾರಿಕ ಶಿಕ್ಷಣ ಕೇಂದ್ರ ಪ್ರಾರಂಭಿಸಿ ಬೋಧಕರನ್ನು ನೇಮಿಸಿದ ಕುರಿತು ಗಜಾಪುರದಲ್ಲಿ ಶೇ. 15 (28) ಕ್ರಮ ಅನುಸರಿಸಿದ್ದು, ಜಂಗಮಸೋವೇನಹಳ್ಳಿ ಮತ್ತು ಮರಬಾನಹಳ್ಳಿಯಲ್ಲಿ ಈ ಕುರಿತು ಕ್ರಮ ಅನುಸರಿಸಿರುವುದಿಲ್ಲ. ಹೆಣ್ಣು ಮಕ್ಕಳ ಮೇಲಿನ ಹೊರೆ ತಪ್ಪಿಸಿ, ಶಾಲೆಗೆ ಕರೆತರಲಾಗುತ್ತಿರುವ ಕುರಿತು ಗಜಾಪುರ ಶೇ.2(4), ಮರಬಾನಹಳ್ಳಿ ಕೇವಲ ಒಂದು ಕುಟುಂಬ ಮಾತ್ರ ಪ್ರತಿಕ್ರಿಯಿಸಿದೆ. ಹಾಗೆಯೇ ಸಮವಸ್ತ್ರದೊಂದಿಗೆ, ಶಾಲಾವೇಳೆಗೆ ಸರಿಯಾಗಿ ಮಕ್ಕಳನ್ನು ಕಳುಹಿಸಲು ಪಾಲಕರಿಗೆ ಮನವೊಲಿಸಿದ ಕುರಿತು ಹೆಚ್ಚಿನ ಕ್ರಮ ಅನುಸರಿಸದ ಗ್ರಾಮ ಮರಬಾನಹಳ್ಳಿ ಶೇ. 87(122)ರಷ್ಟು. ಜಂಗಮಸೋವೇನಹಳ್ಳಿಯಲ್ಲಿ ಶೂನ್ಯ. ರಾತ್ರಿ ಶಾಲೆಯನ್ನು ತೆರೆಯಲು ಚರ್ಚಿಸಿದ ಕುರಿತು ಮತ್ತು ಶಾಲಾ ಪರಿಸರವನ್ನು ಸ್ವಚ್ಛಗೊಳಿಸಿದ ಬಗ್ಗೆ ಗಜಾಪುರ ಗ್ರಾಮದಲ್ಲಿ ಮಾತ್ರ ಶೇ. 2(4) ಮತ್ತು ಶೇ. 4(7)ರಷ್ಟು ಕ್ರಮಕೈಗೊಳ್ಳಲಾಗಿದ್ದು, ಉಳಿದ ಗ್ರಾಮಗಳು ಕ್ರಮ ಕೈಗೊಳ್ಳದೇ ಇರುವುದು ಕಂಡುಬರುತ್ತದೆ. ಇತರೆಗೆ ಸಂಬಂಧಿಸಿದಂತೆ ನಂದಿಬಂಡಿ ಗ್ರಾಮದಲ್ಲಿ ಮಾತ್ರ ಶೇ. 23(51)ರಷ್ಟು ಪ್ರತಿಕ್ರಿಯಿಸಿ, ಮೇಲಿನ ಅಂಶಗಳಿಗಿಂತ ಭಿನ್ನವಾದ ಅಭಿಪ್ರಾಯವನ್ನು ನೀಡಿದ್ದಾರೆ.

ಒಟ್ಟಾರೆ ಈ ಮೇಲಿನ ದತ್ತಾಂಶಗಳ ವಿಶೇಷಣೆಯಿಂದ ಕಂಡುಬರುವ ಅಂಶವೆಂದರೆ; ಗ್ರಾಮ ಸಭೆಯಲ್ಲಿ ಚರ್ಚಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಅನುಸರಣೆಯು ಹೆಚ್ಚಾಗಿ ಶಾಲೆ ಬಿಟ್ಟ ಮಕ್ಕಳ ಪಾಲಕ/ಪೋಷಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಒತ್ತಾಯಿಸಲಾಗಿದೆ. ಇದೊಂದು ಆರೋಗ್ಯಕರ ಅಂಶವಾಗಿದ್ದು, ಜನರಲ್ಲಿ ಶಿಕ್ಷಣದ ಬಗ್ಗೆ ಹೆಚ್ಚುತ್ತಿರುವ ಕಾಳಜಿಯನ್ನು ತೋರಿಸುತ್ತದೆ. ಮಕ್ಕಳು ಸಮವಸ್ತ್ರದೊಂದಿಗೆ ಶಾಲೆಯ ಸರಿಯಾದ ವೇಳೆಗೆ ಹಾಜರಾಗುವ ಬಗ್ಗೆಯೂ ಕೂಡ ಸಭೆಯಲ್ಲಿ ಚರ್ಚಿಸಿರುವುದು ಉತ್ತಮ ಅಂಶ ಎನ್ನಬಹುದು. ಜೊತೆಗೆ ಶಾಲೆಗೆ ಬರುವ ಹಿಂದುಳಿದ ಮಕ್ಕಳಿಗೆ ಪ್ರೋತ್ಸಾಹ ದಾಯಕ ಸೌಲಭ್ಯಗಳು ಸಿಗುವ ಬಗ್ಗೆ ಅರಿವನ್ನು ಮೂಡಿಸಿರುವುದು ಸಹ ಒಳ್ಳೆಯ ಬೆಳವಣಿಗೆ ಎನ್ನುವ ಅಂಶ ಇದರಿಂದ ತಿಳಿದುಬರುತ್ತದೆ.

ಒಟ್ಟಾರೆಯಾಗಿ ಸಮುದಾಯದ ಈ ಪ್ರಕ್ರಿಯೆಯು ಇತರೆ ಜನರಿಗೆ ಶಿಕ್ಷಣದ ಸಾರ್ವತ್ರೀಕರಣ ಕುರಿತು ಅಭಿಪ್ರೇರಣೆ ಮೂಡಿಸುವಲ್ಲಿ ಸಹಕಾರಿಯಾಗಿದೆ.


4.2.5. ಕೋಷ್ಟಕ - 11: ಗ್ರಾಮ ಶಿಕ್ಷಣ ಸಮಿತಿ.

ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸ್ಥಳೀಯಮಟ್ಟದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಗ್ರಾಮದ ಜನರೇ ಸಮಿತಿಗಳನ್ನು ರಚಿಸಿಕೊಳ್ಳಲು ಪ್ರಜಾಪ್ರಭುತ್ವ ವ್ಯವಸ್ಥೆ ಅವಕಾಶ ಮಾಡಿಕೊಟ್ಟಿದೆ. ಶಿಕ್ಷಣಾಭಿವೃದ್ಧಿಗಾಗಿ ಗ್ರಾಮ ಶಿಕ್ಷಣ ಸಮಿತಿಯನ್ನು ರಚಿಸಲಾಗಿದೆ. ಈ ಬಗ್ಗೆ ಆಯ್ದ ಗ್ರಾಮಗಳಲ್ಲಿ ಎಷ್ಟು ಜನರಿಗೆ ಮಾಹಿತಿ ಇದೆ ಎನ್ನುವ ಬಗ್ಗೆ ದತ್ತಾಂಶ ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಅಂಶಗಳನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ.


4.2.6. ಕೋಷ್ಟಕ - 11 : ಗ್ರಾಮ ಶಿಕ್ಷಣ ಸಮಿತಿ ಬಗ್ಗೆ ಜನರಿಗಿರುವ ಅರಿವು :

ಕ್ರ.ಸಂ.	1	2	3	4	5	6
ಗ್ರಾಮದ ಹೆಸರು	**ಗಜಾಪುರ**	**ಜಂಗಮ ಸೋವೇನಹಳ್ಳಿ**	**ಮರಬಾನ ಹಳ್ಳಿ**	**ನಂದಿಬಂಡಿ**	**ದೇವಲಾಪುರ**	**ಒಟ್ಟು**
ಶಾಲೆಯ ಅಭಿವೃದ್ಧಿಗಾಗಿ ದೇಣಗೆ ಸಂಗ್ರಹಿಸುವುದು	86	98	22	55	40	**301**
ಶೇಕಡವಾರು	46	78	6	30	8	**35**
ಶಾಲಾ ಚಟುವಟಿಕೆಗಳಲ್ಲಿ ಜನರನ್ನು ಭಾಗವಹಿಸುವಂತೆ ಮಾಡುವುದು	28	6	1	86	18	**139**
ಶೇಕಡವಾರು	15	5	1	46	8	**16**
ಶಾಲೆಗೆ ಕಾಂಪೌಂಡ್ ನಿರ್ಮಾಣ ಮತ್ತು ಗಿಡಗಳನ್ನು ನೆಡುವುದು	12	4	0	3	32	**51**
ಶೇಕಡವಾರು	6	3	0	2	14	**6**
ಶಾಲೆಗೆ ಸರಿಯಾದ ಸಮಯಕ್ಕೆ ಶಿಕ್ಷಕರು ಹಾಗೂ ಮಕ್ಕಳು ಹಾಜರಾಗುವಂತೆ ತಿಳಿಸುವುದು	7	0	0	10	8	**25**
ಶೇಕಡವಾರು	4	0	0	5	4	**3**
ಹೆಣ್ಣು ಮಕ್ಕಳ ಶಿಕ್ಷಣ ಕುರಿತು ಗ್ರಾಮಸ್ಥರನ್ನು ಉತ್ತೇಜಿಸುವುದು	6	5	0	3	19	**33**
ಶೇಕಡವಾರು	3	4	0	2	8	**4**
ಶಾಲಾ ಸುತ್ತಲೂ ಇರುವ ತಿಪ್ಪೆಗಳನ್ನು ತೆಗೆಸುವುದು	14	0	98	3	9	**124**
ಶೇಕಡವಾರು	7	0	70	2	4	**4**
ಶಾಲಾ ಅವಶ್ಯಕತೆಗಳ ಬಗ್ಗೆ ಅಧಿಕಾರಿಗಳ ಗಮನಕ್ಕೆ ತರುವುದು	24	2	0	0	52	**78**
ಶೇಕಡವಾರು	13	2	0	0	23	**9**
ಅನ್ವಯಿಸುವುದಿಲ್ಲ	12	11	19	25	49	**116**
ಶೇಕಡವಾರು	6	9	14	14	22	**13**
ಒಟ್ಟು	**189**	**126**	**140**	**185**	**227**	**867**

ರೇಖಾ ಚಿತ್ರ-9



ಕೋಷ್ಟಕ-11ರ ದತ್ತಾಂಶದ ವಿವರ ಮೇಲಿನ ರೇಖಾ ಚಿತ್ರದಲ್ಲಿ ಈ ರೀತಿ ಕಂಡುಬಂದಿದೆ.



ಎಲ್ಲಾ ಗ್ರಾಮದವರು ನೀಡಿದ ಒಟ್ಟು ಅಂಶಗಳನ್ನು ಕ್ರೋಢೀಕರಿಸಿ, ಬಹು ಸಂಖ್ಯೆಯಲ್ಲಿ ಯಾವ ಅಂಶಗಳಿಗೆ ಉತ್ತರ ನೀಡಿದ್ದಾರೋ ಆ ಅಂಶಗಳನ್ನು ದತ್ತಾಂಶಕ್ಕೆ ಕ್ರೋಢೀಕರಿಸಲಾಗಿದೆ. ಈ ಕೆಳಗಿನ ಕೋಷ್ಟಕ - 11ರಲ್ಲಿ ತೋರಿಸಿದಂತೆ ಒಟ್ಟು ಎಂಟೂ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಲಭ್ಯವಾದ ದತ್ತಾಂಶದ ಆಧಾರದ ಮೇಲೆ 'ಗ್ರಾಮ ಶಿಕ್ಷಣ ಸಮಿತಿ'ಯ ಕುರಿತು ಜನರಿಗಿರುವ ಅರಿವು ಮತ್ತು ಅದರ ಕಾರ್ಯನಿರ್ವಹಣೆ ಮೂಲಕ ಶಿಕ್ಷಣದ ಅಭಿವೃದ್ಧಿಗೆ ಯಾವ ಸಹಕಾರ ದೊರೆಕಿದೆ ಎಂಬ ಅಂಶವನ್ನು ವಿಶ್ಲೇಷಿಸಲಾಗಿದೆ.

ಐದು ಗ್ರಾಮಗಳ ಒಟ್ಟು ಎಂಟು ಅಂಶಗಳಲ್ಲಿ ಶೇ. 35(301) ಕುಟುಂಬದವರು ಶಾಲೆಯ ಅಭಿವೃದ್ಧಿಗಾಗಿ ದೇಣಿಗೆ ಸಂಗ್ರಹಿಸುವ ಕುರಿತು ಅಭಿಪ್ರಾಯ ತಿಳಿಸಿದ್ದಾರೆ. ಶಾಲೆಯು ಅಭಿವೃದ್ಧಿಯಾಗ ಬೇಕಾದರೆ ಕೇವಲ ಇಲಾಖೆಯೊಂದರಿಂದಲೇ ಸಾಧ್ಯವಾಗದು. ಇದರಲ್ಲಿ ಸ್ಥಳೀಯರ ಭಾಗಿತ್ವ ಬಹುಮುಖ್ಯ ಪಾತ್ರ ವಹಿಸುತ್ತದೆ. ಗ್ರಾಮ ಶಿಕ್ಷಣ ಸಮಿತಿ ರಚನೆಯಾದ ಮೇಲೆ ಜನರಲ್ಲಿ ಜಾಗೃತಿ ಮೂಡಿದೆ. ಶಾಲೆಗೆ ಹಣ ಅಥವಾ ವಸ್ತುಗಳ ರೂಪದಲ್ಲಿ, ಜಮೀನಿನ ರೂಪದಲ್ಲಿ ದೇಣಿಗೆ ನೀಡಿದ ಉದಾಹರಣೆಗಳಿವೆ. ಶಾಲೆಯ ಅಭಿವೃದ್ಧಿಗಾಗಿ ದೇಣಿಗೆ ಸಂಗ್ರಹಿಸುವುದು ಗ್ರಾಮ ಶಿಕ್ಷಣ ಸಮಿತಿಗಳ ಜವಾಬ್ದಾರಿಯಾಗಿದೆ. ಹಾಗೆಯೇ ಶಾಲಾ ಚಟುವಟಿಕೆಗಳಲ್ಲಿ ಜನರನ್ನು ಭಾಗವಹಿಸುವಂತೆ ಕೈಗೊಂಡ ಕಾರ್ಯಗಳಲ್ಲಿ ಶೇ.16(139)ರಷ್ಟು ಪ್ರತಿಕ್ರಿಯಿಸಿದ್ದು, ಜನರು ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲಾಗಿದೆ. ಉಳಿದಂತೆ ಶೇ.14(124)ರಷ್ಟು ಜನರು ಶಾಲಾ ಪರಿಸರವನ್ನು ಶುದ್ಧವಾಗಿಟ್ಟುಕೊಳ್ಳುವ ಕುರಿತು ಆಧ್ಯತೆ ನೀಡಿದ್ದಾರೆ. ಮಕ್ಕಳು ಆರೋಗ್ಯಪೂರ್ಣ ವಾತಾವರಣದಲ್ಲಿ ಕಲಿಯಬೇಕು. ಶುದ್ಧವಾದ ಗಾಳಿ, ಬೆಳಕು ಅಗತ್ಯ. ಅದಕ್ಕಾಗಿ ಶಾಲೆಯ ಸುತ್ತಲೂ ಇರುವ ತಿಪ್ಪೆಗಳನ್ನು ತೆಗೆಯಬೇಕು ಎಂಬ ಚಿಂತನೆ ನಡೆದಿರುವುದು ಈ ಅಂಶಗಳಿಂದ ತಿಳಿದುಬರುತ್ತದೆ. ಇದೊಂದು ಆರೋಗ್ಯ ಪೂರ್ಣ ಬೆಳವಣಿಗೆ. ಕ್ರಮವಾಗಿ ಶಾಲೆಗೆ ಆವರಣ ನಿರ್ಮಾಣ ಕುರಿತು ಶೇ.6(51)ರಷ್ಟು ಸ್ಪಂದಿಸಿದ್ದಾರೆ. ಶಿಕ್ಷಕರು ಮತ್ತು ಮಕ್ಕಳು ಸರಿಯಾದ ಸಮಯಕ್ಕೆ ಶಾಲೆಗೆ ಹಾಜರಾಗುವ ಬಗ್ಗೆ ಶೇ.3(25) ತಿಳಿಸಿರುವರು. ಹೆಣ್ಣು ಮಕ್ಕಳ ಶಿಕ್ಷಣ ಕುರಿತು ಗ್ರಾಮಸ್ಥರನ್ನು ಉತ್ತೇಜಿಸುವಲ್ಲಿ ಗ್ರಾಮ ಶಿಕ್ಷಣ ಸಮಿತಿ ಕ್ರಮಕೈಗೊಂಡ ಬಗ್ಗೆ ಶೇ.4(33)ರಷ್ಟು ಸ್ಪಂದಿಸಿದ್ದಾರೆ.ಹೆಣ್ಣು ಮಕ್ಕಳ ಶಿಕ್ಷಣ ಕುರಿತು ಇತ್ತೀಚಿಗೆ ಸಾಕಷ್ಟು ಚರ್ಚೆಗಳು, ಚಿಂತನೆಗಳು ನಡೆದಿವೆ. ಜಾಗತೀಕರಣಗೊಳ್ಳುವ ಈ ಸಮಯದಲ್ಲಿ ಶಿಕ್ಷಣ ಪ್ರಕ್ರಿಯೆಯಲ್ಲಿ ಶಾಲೆ ಬಿಡುವ ಹೆಣ್ಣು ಮಕ್ಕಳು ಶಾಲೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕಾರ್ಯಕ್ರಮಗಳನ್ನು ರೂಪಿಸುವುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ಈ ಕುರಿತು ಜನ ಸ್ಪಂದನೆ ತೀವ್ರಗೊಳ್ಳಬೇಕಾಗಿದೆ ಎಂಬ ಅಂಶವು ಈ ಮೇಲಿನ ದತ್ತಾಂಶದಿಂದ ತಿಳಿದುಬರುತ್ತದೆ. ಶಾಲೆಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವ ಕುರಿತು ಅಧಿಕಾರಿಗಳ ಗಮನಕ್ಕೆ ತರುವ ಬಗ್ಗೆ ಶೇ.9 (78) ಪ್ರತಿಕ್ರಿಯಿಸಿದ್ದಾರೆ, ಈ ಮೇಲಿನ ಯಾವ ಅಂಶಗಳನ್ನು ಕಾರ್ಯಾನುಷ್ಠಾಗೊಳಿಸಿರುವುದಿಲ್ಲ ಅಥವಾ ಏನೂ ಗೊತ್ತಿಲ್ಲ ಎಂಬ ಕುರಿತು ಶೇ.13 (116) ಕುಟಂಬಗಳು ಅಭಿಪ್ರಾಯಿಸಿವೆ.

ಗ್ರಾಮವಾರು ದತ್ತಾಂಶವನ್ನು ಗಮನಿಸಿದಾಗ ಶಾಲೆಯ ಅಭಿವೃದ್ಧಿಗಾಗಿ ದೇಣಿಗೆ ಸಂಗ್ರಹಿಸುವ ಕುರಿತು ಜಂಗಮಸೋವೇನಹಳ್ಳಿ ಶೇ.79(98) ಒಲವು ತೋರಿದ್ದಾರೆ. ಮರಬಾನಹಳ್ಳಿಯಲ್ಲಿ ಈ ವಿಷಯದ ಕಡೆಗೆ ಶೇ.16(26) ಮಾತ್ರ ಒಲವು ತೋರಿಸಲಾಗಿದೆ. ಶಾಲಾ ಚಟುವಟಿಕೆಗಳಲ್ಲಿ ಜನರು ಭಾಗವಹಿಸುವ ಕುರಿತು ನಂದಿಬಂಡಿಯಲ್ಲಿ ಶೇ.46(86) ಅತ್ಯಂತ ಕಡಿಮೆ ಅಂದರೆ, ಶೇ.1ರಷ್ಟು ಮರಬಾನಹಳ್ಳಿಯಲ್ಲಿ ಸ್ಪಂದಿಸಿದೆ. ಶಾಲೆಗೆ ಆವರಣ ಮತ್ತು ಗಿಡಗಳನ್ನು ನೆಡುವುದರ ಕುರಿತು ಹೆಚ್ಚು ಒಲವು ತೋರಿದ ಗ್ರಾಮ ದೇವಲಾಪುರ ಶೇ.14(32). ಮರಬಾನಹಳ್ಳಿ ಈ ಬಗ್ಗೆ ಶೂನ್ಯ. ಸಮಯಕ್ಕೆ ಸರಿಯಾಗಿ ಮಕ್ಕಳು ಮತ್ತು ಶಿಕ್ಷಕರು ಹಾಜರಾಗುವ ಕುರಿತು ಜಂಗಮಸೋವೇನಹಳ್ಳಿ ಮತ್ತುಮರಬಾನಹಳ್ಳಿಗಳು ಯಾವ ಪ್ರತಿಕ್ರಿಯೆಯನ್ನೂ ನೀಡಿ ರುವುದಿಲ್ಲ. ಈ ವಿಷಯದ ಬಗ್ಗೆ ಶೂನ್ಯವಿದ್ದು, ಉಳಿದ ಗ್ರಾಮಗಳು ಕ್ರಮವಾಗಿ ಶೇ. 3,4,5ರಷ್ಟು ಒಲವು ತೋರಿದ್ದಾರೆ. ಹೆಣ್ಣು ಮಕ್ಕಳ ಶಿಕ್ಷಣ ಕುರಿತು ಗ್ರಾಮಸ್ಥರನ್ನು ಉತ್ತೇಜಿಸಿದ ಗ್ರಾಮಗಳಲ್ಲಿ ಶೇ.8(19)ರಷ್ಟು ದೇವಲಾಪುರ ಗ್ರಾಮ ಮಾತ್ರ ಕ್ರಮ ಅನುಸರಿಸಿರುವುದು ಕಂಡುಬರುತ್ತದೆ. ಮರಬಾನಹಳ್ಳಿ ಶೂನ್ಯ ಉಳಿದ ಹಳ್ಳಿಗಳು ಕ್ರಮವಾಗಿ ಶೇ. 2,3,4ರಷ್ಟು ಮಾತ್ರ.

ಗ್ರಾಮ ಶಿಕ್ಷಣ ಸಮಿತಿಯು ಶಾಲಾ ಸುತ್ತಲಿನ ಪರಿಸರದ ಸ್ವಚ್ಛತೆಗೆ ಮರಬಾನಹಳ್ಳಿ ಗ್ರಾಮದಲ್ಲಿ ಹೆಚ್ಚಿನ ಆಧ್ಯತೆ ನೀಡಿರುವ ಬಗ್ಗೆ ಶೇ. 70-80ರಷ್ಟು ಕುಟುಂಬಗಳು ಪ್ರತಿಕ್ರಿಯಿಸಿವೆ. ಮರಬಾನಹಳ್ಳಿಯಲ್ಲಿ ಉಳಿದ ಅಂಶಗಳಿಗೆ ಆದ್ಯತೆ ನೀಡದಿದ್ದರೂ ಸಹ ಶಾಲೆಯ ಸುತ್ತಲಿನ ಪರಿಸರದ ಸ್ವಚ್ಛತೆಗೆ ಆದ್ಯ ಗಮನ ನೀಡಿರುವುದು ಕಂಡುಬರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಉಳಿದ ಗ್ರಾಮಗಳಲ್ಲಿ ಹೆಚ್ಚಿನ ಗಮನ ಹರಿಸದಿರುವುದು ಕಂಡುಬಂದಿದೆ. ಶಾಲೆಗೆ ಬೇಕಾದ ಅವಶ್ಯಕತೆಗಳ ಕುರಿತು ಶೇ. 23(52)ರಷ್ಟು ದೇವಲಾಪುರ ಗ್ರಾಮದಲ್ಲಿ ಆದ್ಯತೆಯನ್ನು ನೀಡಲಾಗಿದೆ. ಅದೇರೀತಿ ಗಜಾಪುರದಲ್ಲಿ ಶೇ.13(24) ಉಳಿದ ಗ್ರಾಮಗಳಲ್ಲಿ ಅಂದರೆ, ಜಂಗಮಸೋವೇನಹಳ್ಳಿ ಶೇ.2(2) ಉಳಿದವು ಶೂನ್ಯ. ಯಾವುದೂ ಅನ್ವಯಿಸುವುದಿಲ್ಲ ಎನ್ನುವ ಅಂಶಕ್ಕೆ ಸಂಬಂಧಿಸಿದಂತೆ ಗಜಾಪುರ ಗ್ರಾಮ ಮಾತ್ರ ಶೇ. 6(12)ರಷ್ಟು ಪ್ರತಿಕ್ರಿಯಿಸಿಲ್ಲ. ಒಟ್ಟಾರೆಯಾಗಿ ಗ್ರಾಮ ಶಿಕ್ಷಣ ಸಮಿತಿಗಳು ಶಾಲಾ ಅಭಿವೃದ್ಧಿಗಾಗಿ ಬೇರೆ ಬೇರೆ ಗ್ರಾಮಗಳಲ್ಲಿ ವಿವಿಧ ಕಾರ್ಯಗಳಿಗೆ ಸಂಬಂಧಿಸಿದಂತೆ ವಿವಿಧ ರೀತಿಯ ಆದ್ಯತೆಯನ್ನು ನೀಡಿರುವುದನ್ನು ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ. ಈ ಹಿಂದೆ ಕೋಷ್ಠಕ-3,4 ಮತ್ತು 5ರಲ್ಲಿ ವಿಶ್ಲೇಷಿಸಿದಂತೆ ಗ್ರಾಮೀಣ ಜನರಲ್ಲಿರುವ ಅನಕ್ಷರತೆ, ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ, ಸಾಮಾಜಿಕವಾಗಿ ಜಾತಿಗಳಲ್ಲಿಯ ಅಸಮಾನತೆ ಇವು ಕೋಷ್ಟಕ - 11ರ ಅಂಶಗಳ ಹಿನ್ನೆಲೆಯ ಮೇಲೆ ಪರಿಣಾಮ ಬೀರಿ, ಭಿನ್ನತೆಗೆ ಕಾರಣವಾಗಿವೆ ಎಂಬ ಅಂಶ ಕಂಡುಬರುತ್ತದೆ.


4.2.6. ಶಾಲಾ ಅಭಿವೃದ್ಧಿ ಮತ್ತು ಗ್ರಾಮ ಶಿಕ್ಷಣ ಸಮಿತಿ ಸದಸ್ಯರು :

ಶಾಲೆಯ ಅಭಿವೃದ್ಧಿಗಾಗಿ ಗ್ರಾಮ ಶಿಕ್ಷಣ ಸಮಿತಿ ರಚನೆಯಾಗಿದೆ. ಶಾಲೆಯ ಸಮಸ್ಯೆಗಳ ಪರಿಹಾರ ಒದಗಿಸಲು ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಜವಾಬ್ದಾರರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಕಂಡು ಬರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಗ್ರಾಮಗಳಲ್ಲಿಯ ಎಷ್ಟು ಜನರು ಸದಸ್ಯರನ್ನು ಸಂಪರ್ಕಿಸಿ, ಈ ಕುರಿತು ಪರಿಹಾರ ಕಂಡುಕೊಂಡಿದ್ದಾರೆ ಎಂಬ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗಿತ್ತು. ಕೋಷ್ಟಕ -12ರಲ್ಲಿಯ 4.2.6ರಲ್ಲಿಯ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ದತ್ತಾಂಶದ ಆಧಾರದ ಮೇಲೆ ಈ ಕೆಳಗಿನ ವಿಶ್ಲೇಷಣೆಯನ್ನು ಮಾಡಲಾಗಿದೆ.

ಕೋಷ್ಟಕ -12 : ಶಾಲಾ ಅಭಿವೃದ್ಧಿ ಮತ್ತು ಗ್ರಾಮ ಶಿಕ್ಷಣ ಸಮಿತಿ ಸದಸ್ಯರು :

ಕ್ರ.ಸಂ.	1	2	3	4	5	6
ಗ್ರಾಮದ ಹೆಸರು	**ಗಜಾಪುರ**	**ಜಂಗಮ ಸೋವೇನಹಳ್ಳಿ**	**ಮರಬಾನ ಹಳ್ಳಿ**	**ನಂದಿ ಬಂಡಿ**	**ದೇವಲಾ ಪುರ**	**ಒಟ್ಟು**
ಬಡ ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸುವುದು	26	68	1	37	17	**149**
ಶೇಕಡವಾರು	14	54	1	20	7	**17**
ಶಾಲಾ ಕೊಠಡಿ ಒಳಗೆ ಶಾಲಾ ನಕಾಶೆಗಳನ್ನು ಸುರಕ್ಷಿತವಾಗಿ ಇಡುವುದು	3	4	0	43	26	**76**
ಶೇಕಡವಾರು	2	3	0	23	11	**9**
ಮಕ್ಕಳ ಸುಳ್ಳು ಹಾಜರಾತಿಯನ್ನು ತಪ್ಪಿಸುವುದು	28	2	9	2	18	**59**
ಶೇಕಡವಾರು	15	2	6	1	8	**7**
ಶಾಲಾ ಶೌಚಾಲಯ ಮತ್ತು ನೀರು ಸರಬರಾಜು ಕುರಿತು ಚರ್ಚಿಸುವುದು	12	15	98	9	29	**163**
ಶೇಕಡವಾರು	6	12	70	5	13	**19**
ವಿದ್ಯಾರ್ಥಿಗಳಿಗೆ ಪ್ರಗತಿ ಪತ್ರಗಳನ್ನು ಹಂಚುವುದು.	7	0	13	4	10	**34**
ಶೇಕಡವಾರು	4	0	9	2	4	**4**
ಮಕ್ಕಳಿಗೆ ಕಡ್ಡಾಯವಾಗಿ ದೈಹಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು	19	8	2	2	34	**65**
ಶೇಕಡವಾರು	10	6	1	1	15	**7**
ಅನ್ವಯಿಸುವುದಿಲ್ಲ	94	29	17	88	93	**321**
ಶೇಕಡವಾರು	50	23	12	48	41	**37**
ಒಟ್ಟು	**189**	**126**	**140**	**185**	**227**	**867**

ರೇಖಾ ಚಿತ್ರ-10



ಕೋಷ್ಟಕ-12ರ ದತ್ತಾಂಶ ವಿವರ ಮೇಲಿನ ರೇಖಾ ಚಿತ್ರದಲ್ಲಿ ಈ ರೀತಿ ಕಂಡುಬಂದಿದೆ.



ಒಟ್ಟು ಐದು ಗ್ರಾಮಗಳಲ್ಲಿಯ 867 ಕುಟುಂಬಗಳ ಪೈಕಿ ಶೇ.37 (321) ಕುಟುಂಬಗಳವರು ನಕಾರಾತ್ಮಕ ಅಭಿಪ್ರಾಯ ನೀಡಿದ್ದಾರೆ. ಶೇ. 63(546)ರಷ್ಟು ಕುಟುಂಬಗಳು ಸಕಾರಾತ್ಮಕ ಅಭಿಪ್ರಾಯ ನೀಡಿವೆ. ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಭೇಟಿ ಮಾಡಿ, ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಭೇಟಿ ಮಾಡಿ, 'ಗ್ರಾಮ ಶಿಕ್ಷಣ ಸಮಿತಿ' ಮೂಲಕ ಶಾಲೆಗಳಲ್ಲಿ ನೀಡಿದ ಕೊಡುಗೆ ಮತ್ತು ಅಲ್ಲಿಯ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ಚರ್ಚೆಯ ಮೂಲಕ ವಿವಿಧ ಅಂಶಗಳ ಮೇಲೆ ಅಭಿಪ್ರಾಯಗಳು ಮೂಡಿ ಬಂದಿರುತ್ತವೆ. ಬಹು ಸಂಖ್ಯೆಯ ಅಭಿಪ್ರಾಯಗಳ ದತ್ತಾಂಶವನ್ನು ಕ್ರೋಢೀಕರಿಸಿ, ಅವುಗಳನ್ನು ವಿಶ್ಲೇಷಿಸಲಾಗಿದೆ.

ಒಟ್ಟು ಐದು ಗ್ರಾಮಗಳಿಗೆ ಅನ್ವಯಿಸಿ, ಬಡಮಕ್ಕಳಿಗೆ ವಿಶೇಷ ತರಗತಿಯನ್ನು ನಡೆಸಿರುವ ಕುರಿತು ಶೇ.17(149). ಶಾಲೆಯಲ್ಲಿ ನಕಾಶೆಗಳನ್ನು ಸುರಕ್ಷಿತವಾಗಿಡುವ ಕುರಿತು ಶೇ. 9(76). ಮಕ್ಕಳ ಸುಳ್ಳು ಹಾಜರಾತಿಯನ್ನು ತಪ್ಪಿಸುವ ಕುರಿತು ಶೇ. 7(59). ಶಾಲಾ ಶೌಚಾಲಯ ಮತ್ತು ನೀರು ಸರಬರಾಜು ಕುರಿತು ಶೇ.19(163). ವಿದ್ಯಾರ್ಥಿಗಳಿಗೆ ಪ್ರಗತಿ ಪತ್ರಗಳನ್ನು ನೀಡುವ ಕುರಿತು ಶೇ. 4(34). ಮಕ್ಕಳಿಗೆ ಕಡ್ಡಾಯವಾಗಿ ದೈಹಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಕುರಿತು ಶೇ. 7(65) ಕುಟುಂಬಗಳು ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಸಂಪರ್ಕಿಸಿ ಮೇಲಿನ ವಿಷಯಗಳ ಕುರಿತು ಚರ್ಚಿಸಿವೆ. ಮೇಲಿನ ಒಟ್ಟಾಂಶಗಳಲ್ಲಿ ಶಾಲೆಯ ಶೌಚಾಲಯ ಮತ್ತು ಕುಡಿಯುವ ನೀರು ಕುರಿತು ಪ್ರಥಮ ಆದ್ಯತೆ ನೀಡಿ ಸಂಪರ್ಕಿಸಲಾಗಿದ್ದು, ಬಡ ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸುವ ಕುರಿತು ದ್ವಿತಿಯ ಆದ್ಯತೆ ನೀಡಿ ಚರ್ಚಿಸಲಾಗಿದೆ. ವಿದ್ಯಾರ್ಥಿಗಳ ಪ್ರಗತಿ ಪತ್ರ ಹಂಚಿಕೆ ಕುರಿತು ಅತ್ಯಂತ ಕಡಿಮೆ ಸಂಖ್ಯೆ ಜನ ಸದಸ್ಯರನ್ನು ಸಂಪರ್ಕಿಸಿದ್ದಾರೆ. ಇದಕ್ಕೆ ಕಾರಣವೂ ಇದೆ. ಮಕ್ಕಳ ಪ್ರಗತಿ ಕುರಿತು, ಪ್ರತಿ ಪರೀಕ್ಷೆಗೂ ಪಡೆದ ಅಂಕಗಳನ್ನು ಪ್ರಗತಿ ಪತ್ರಗಳಲ್ಲಿ ದಾಖಲಿಸುವ ಕ್ರಮ ಖಾಸಗಿ ಶಾಲೆಗಳಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತದೆ. ಆದರೆ ಸರಕಾರಿ ಶಾಲೆಗಳಲ್ಲಿ ಈ ಕ್ರಮ ಅನುಸರಿಸುತ್ತಿರುವುದು ಕಡಿಮೆ. ಆದರೂ ಕಳೆದ ಎರಡು ವರ್ಷಗಳಿಂದೀಚೆಗೆ ಎಲ್ಲಾ ಸರಕಾರಿ ಶಾಲೆಗಳಲ್ಲಿ ಮಕ್ಕಳು ಪರೀಕ್ಷೆಯಲ್ಲಿ ಪಡೆದ ಅಂಕಗಳು ಮತ್ತು ಶ್ರೇಣಿಯನ್ನು ದಾಖಲಿಸಿ, ಪ್ರಗತಿ ಪತ್ರ ನೀಡಲಾಗುತ್ತಿದೆ. ಈ ಅಂಶ ಶಾಲೆಗಳಿಗೆ ಖುದ್ದಾಗಿ ಸಂದರ್ಶನ ನೀಡಿದಾಗ ಕಂಡುಬಂದಿದೆ. ಈ ಬಗ್ಗೆ ಸಮುದಾಯಕ್ಕೆ ಇನ್ನೂ ಹೆಚ್ಚಿನ ಜಾಗೃತಿ ಮೂಡುವ ಅಗತ್ಯವಿದೆ. ಆದ್ದರಿಂದ ಇದಕ್ಕಾಗಿ ಇತ್ತೀಚಿನ ಶಿಕ್ಷಣ ಇಲಾಖೆಯ ನೀತಿಯನ್ವಯ **'ಸಮುದಾಯದತ್ತ ಶಾಲೆ'** ಕಾರ್ಯಕ್ರಮಗಳ ಮೂಲಕ ಶಾಲಾ ಸಮಿತಿ ಸಭೆಗಳಲ್ಲಿ ಪ್ರಗತಿ ಪತ್ರಗಳನ್ನು ಪ್ರದರ್ಶಿಸಿ ಗ್ರಾಮಗಳಲ್ಲಿ ಪಾಲಕ/ಪೋಷಕರಿಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ರೂಪಿಸಿರುವುದು ಕಂಡುಬಂದಿದೆ. ಇದು ಜನರಲ್ಲಿ ಜಾಗೃತಿ ಮೂಡಿ , ಶಿಕ್ಷಣದ ಬಗ್ಗೆ ಆಸಕ್ತಿ ಮೂಡಲು ಸಹಾಯಕವಾಗುತ್ತದೆಂಬ ಅಂಶ ತಿಳಿದುಬರುತ್ತದೆ.

ಗ್ರಾಮವಾರು ದತ್ತಾಂಶ ಅವಲೋಕಿಸಿದಾಗ ಶೇ. 54(68)ರಷ್ಟು ಜಂಗಮಸೋವೇನಹಳ್ಳಿಯಲ್ಲಿ ವಿಶೇಷ ತರಗತಿ ನಡೆಸುವ ಕುರಿತು ಗ್ರಾಮ ಶಿಕ್ಷಣ ಸಮಿತಿಯ ಗಮನಕ್ಕೆ ತಂದಿದ್ದಾರೆ. ಮರಬಾನಹಳ್ಳಿ ಕೇವಲ ಶೇ.1ರಷ್ಟು ಮಾತ್ರ ಸ್ಪಂದಿಸಿದೆ. ಶೇ.23(43)ರಷ್ಟು ನಕಾಶೆಗಳನ್ನು ಸುರಕ್ಷಿತವಾಗಿಡುವ ಕುರಿತು

ನಂದಿಬಂಡಿಯಲ್ಲಿ ಪ್ರತಿಕ್ರಿಯಿಸಿದ್ದರೆ, ಮರಬಾನಹಳ್ಳಿ ಶೂನ್ಯ. ಮಕ್ಕಳ ಸುಳ್ಳು ಹಾಜರಾತಿಯನ್ನು ತಪ್ಪಿಸುವ ಕುರಿತು ಗಜಾಪುರದಲ್ಲಿ ಶೇ. 15(28) ಸ್ಪಂದಿಸಿದ್ದರೆ, ನಂದಿಬಂಡಿ ಶೇ.1 ಮಾತ್ರ. ಶಾಲಾ ಶೌಚಾಲಯ ಮತ್ತು ನೀರು ಸರಬರಾಜು ಕುರಿತು ಮರಬಾನಹಳ್ಳಿ ಶೇ. 70(98) ಸಮಿತಿ ಗಮನಕ್ಕೆ ತಂದಿದ್ದರೆ, ನಂದಿಬಂಡಿ ಶೇ.5(9) ಮಾತ್ರ. ವಿದ್ಯಾರ್ಥಿಗಳಿಗೆ ಪ್ರಗತಿಪತ್ರ ಹಂಚುವ ಕುರಿತು ಮರಬಾನಹಳ್ಳಿ ಶೇ. 9(13), ಜಂಗಮ ಸೋವೇನಹಳ್ಳಿ ಶೂನ್ಯ. ಮಕ್ಕಳಿಗೆ ದೈಹಿಕ ಚಟುವಟಿಕೆಗಳನ್ನು ಕಡ್ಡಾಯವಾಗಿ ಹಮ್ಮಿಕೊಳ್ಳುವ ಕುರಿತು ದೇವಲಾಪುರ ಶೇ. 15(34)ರಷ್ಟಿದ್ದರೆ, ಕ್ರಮವಾಗಿ ಮರಬಾನಹಳ್ಳಿ, ನಂದಿಬಂಡಿ ಶೇ. 1ರಷ್ಟು ಮಾತ್ರ ಸಂಪರ್ಕಿಸಿವೆ.

ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಸಂಪರ್ಕಿಸಿ, ಶಾಲಾ ಅಭಿವೃದ್ಧಿ ಕುರಿತು ಚರ್ಚಿಸಿದ ಬಗ್ಗೆ ಶೇ. 63ರಷ್ಟು ಜನ ಸ್ಪಂದಿಸಿರುವುದು ಕಂಡುಬರುತ್ತದೆ. ಒಟ್ಟಾರೆ ಮತ್ತು ಗ್ರಾಮವಾರು ದತ್ತಾಂಶವನ್ನು ಗಮನಿಸಿದಾಗ, ಶಾಲೆಯ ಅಭಿವೃದ್ಧಿಗಾಗಿ ಸಮುದಾಯ ಭಾಗವಹಿಸಿರುವುದು ಕಂಡುಬರುತ್ತದೆ. ಮರಬಾನಹಳ್ಳಿ ಗ್ರಾಮದಲ್ಲಿ ಶಾಲೆಯಲ್ಲಿಯ ಇತರೇ ವಿಷಯಗಳಿಗಿಂತಲೂ ಕುಡಿಯುವ ನೀರು ಮತ್ತು ಶೌಚಾಲಯದ ಬಗ್ಗೆ ಹೆಚ್ಚಿನ ಕಾಳಜಿ ಇರುವುದು ಕಂಡುಬರುತ್ತದೆ. ಶಾಲಾ ಅಭಿವೃದ್ಧಿಯಲ್ಲಿ ಈ ರೀತಿಯ ಸ್ಪಂದನೆ ಅಗತ್ಯವೂ ಇದೆ. ಉಳಿದ ಗ್ರಾಮಗಳಲ್ಲಿ ಇತರೆ ಅಂಶಗಳಿಗೆ ಒತ್ತುಕೊಟ್ಟು, ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಸಂಪರ್ಕಿಸಿ ಶಾಲಾ ಸಮಸ್ಯೆಗಳನ್ನು ಸ್ಥಳೀಯವಾಗಿಯೇ, ಇಲ್ಲವೇ ಮೇಲಿನ ಸಂಬಂಧಿಸಿದ ಅಧಿಕಾರಿಗಳಿಂದ ಪರಿಹರಿಸಿಕೊಳ್ಳಲು ಪ್ರಯತ್ನ ನಡೆದಿದೆ ಎಂಬ ಅಂಶ ಕಂಡುಬರುತ್ತದೆ.

ಭಾಗ - 3

ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ

ಗ್ರಾಮ ಶಿಕ್ಷಣ ಸಮಿತಿ: ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿರುವ ಕುರಿತು ಅಧ್ಯಾಯ ಮೂರರಲ್ಲಿ ವಿವರವಾದ ಮಾಹಿತಿಯನ್ನು ನೀಡಲಾಗಿದೆ. ಅದರಲ್ಲಿ ಮುಖ್ಯವಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸುವುದು ಈ ಪಂಚಾಯತ್ ವ್ಯವಸ್ಥೆಯ ಒಟ್ಟು ಜವಾಬ್ದಾರಿಯಾಗಿದೆ. ಮುಖ್ಯವಾಗಿ ಗ್ರಾಮ ಪಂಚಾಯತಿಯ ಸೌಕರ್ಯ ಸಮಿತಿ ಶಿಕ್ಷಣದ ಉಸ್ತುವಾರಿಯನ್ನು ನಿರ್ವಹಿಸುತ್ತದೆ.

ಈ ಮೇಲಿನ ಅಧಿನಿಯಮದಂತೆ ಪ್ರತಿ ಕಂದಾಯ ಗ್ರಾಮದಲ್ಲಿ ಗ್ರಾಮ ಶಿಕ್ಷಣ ಸಮಿತಿ ಇರಬೇಕು ಎಂಬ ಆದೇಶದನ್ವಯ 1997ರಿಂದಲೇ ಈ ಜಿಲ್ಲೆಯಲ್ಲಿ ಪ್ರತಿ ಗ್ರಾಮದಲ್ಲಿ ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸಲಾಗಿದೆ. ಇಲ್ಲಿ ಗ್ರಾಮವೆಂದರೆ ಕಂದಾಯ ಗ್ರಾಮ. ಜನ ವಸತಿ ಪ್ರದೇಶದಿಂದ ಒಬ್ಬರು ಅಥವಾ ಇಬ್ಬರು ಸಮಿತಿ ಸದಸ್ಯರಾಗಿ ನಾಮಕರಣಹೊಂದುತ್ತಾರೆ. ಗ್ರಾಮ ಶಿಕ್ಷಣ ಸಮಿತಿಯಲ್ಲಿ ಕನಿಷ್ಠ 7 ರಿಂದ 15 ಸದಸ್ಯರಿರುತ್ತಾರೆ. ಕನಿಷ್ಠ 1/3ರಷ್ಟು ಮಹಿಳೆಯರು ಕಡ್ಡಾಯವಾಗಿರಬೇಕು. ಕೆಲವು ಕಡೆ ಗರಿಷ್ಠ 20ರವರೆಗೆ ಸದಸ್ಯರಿರುವುದು ಕಂಡು ಬಂದಿದೆ.

ಗ್ರಾಮ ಶಿಕ್ಷಣ ಸಮಿತಿ ಕರ್ತವ್ಯಗಳು ಮತ್ತು ಜವಾಬ್ದಾರಿಗಳು :

1. 3-6 ವಯಸ್ಸಿನ ಎಲ್ಲಾ ವರ್ಗದ ಮಕ್ಕಳು ಶಿಶುವಿಹಾರ, ಅಂಗನವಾಡಿ ಕೇಂದ್ರ ಅಥವಾ ಪ್ರಾಥಮಿಕ ಶಾಲೆಗಳಿಗೆ ಬರುವಂತೆ ಮಾಡುವುದು.
2. ಈ ಶಿಶುವಿಹಾರಗಳನ್ನು ಪ್ರಾಥಮಿಕ ಶಾಲೆಗಳ ಸಮೀಪದಲ್ಲಿ ಸ್ಥಾಪಿಸುವುದು.
3. ಮಕ್ಕಳ ಆರೋಗ್ಯ ಶಿಕ್ಷಣದ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವುದು.
4. ಎಲ್ಲಾ ವರ್ಗದ ಮಕ್ಕಳು ಶಾಲೆಗೆ ಬರುವಂತೆ, ಗೈರು ಹಾಜರಾಗದಂತೆ ಇರಲು ಪೋಷಕರ ನೆರವು ಪಡೆಯುವುದು.
5. ಶಾಲೆ ಸೇರಿ ಕಾರಣಾಂತರಗಳಿಂದ ಮಧ್ಯ ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆ ತರುವುದು.
6. ಮಕ್ಕಳು ಕಲಿಯಲು ಶಾಲೆಯಲ್ಲಿ ಸೂಕ್ತ ಅವಕಾಶಗಳನ್ನು ಕಲ್ಪಿಸುವುದು.
7. ಮಕ್ಕಳ ಆರೋಗ್ಯ, ಆಟ, ಕಲಿಕೆ ಬಗ್ಗೆ ಸಮುದಾಯ ಪಾಲ್ಗೊಳ್ಳುವಂತೆ ಮಾಡುವುದು.
8. ಎಲ್ಲಾ ವರ್ಗದ ಜನರಿಗೆ ಶಿಕ್ಷಣ ಮಹತ್ವದ ಬಗ್ಗೆ ಹೇಳಲು ಆಗಾಗ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವುದು.
9. ಗ್ರಾಮವನ್ನು ಸಂಪೂರ್ಣ ಸಾಕ್ಷರತಾ ಗ್ರಾಮವನ್ನಾಗಿ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.
10. ಗ್ರಾಮದಲ್ಲಿ ಗ್ರಂಥಾಲಯ ನಿರ್ವಹಣೆಯನ್ನು ನಡೆಸುವುದು.
11. ಸ್ಥಳೀಯ ಸಂಪನ್ಮೂಲಗಳನ್ನು ಸಂಗ್ರಹಿಸಿ, ಮಕ್ಕಳಿಗೆ ಈ ಸೌಲಭ್ಯವನ್ನು ಒದಗಿಸುವುದು.
    - ಆಟದ ಸಾಮಾನು
    - ಆಟದ ಮೈದಾನ
    - ಶೌಚಾಲಯ
    - ಕುಡಿಯುವ ನೀರಿನ ವ್ಯವಸ್ಥೆ
    - ಶಾಲಾ ಕೈತೋಟ
    - ಸ್ವಚ್ಛವಾದ ಶಾಲಾ ಆವರಣ
    - ಶಾಲಾ ಕಟ್ಟಡ ನಿರ್ಮಾಣ, ದುರಸ್ಥಿ
    - ಕಲಿಕಾ ಸಾಮಗ್ರಿ.
12. ಸ್ಥಳೀಯ ವಿದ್ಯಾಂವತರ ಸೇವೆಯನ್ನು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಬಳಸುವುದು.
13. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವುದು ಹಾಗೂ ಗ್ರಾಮ ಪಂಚಾಯತಿಗೆ ಪ್ರಸ್ತಾವನೆ ಸಲ್ಲಿಸುವುದು.
14. ಅಭಿವೃದ್ಧಿ ಸೇವಾ ಇಲಾಖೆಗಳು, ಸಂಸ್ಥೆಗಳೊಡನೆ-ಶೈಕ್ಷಣಿಕ ಪ್ರಗತಿಗಾಗಿ ಸಮನ್ವಯ ಸಾಧಿಸುವುದು.

ಈ ಮೇಲಿನ ಮುಖ್ಯ ಕರ್ತವ್ಯಗಳು ಹಾಗೂ ಜವಾಬ್ದಾರಿ ಜೊತೆಗೆ ಈ ಸಮಿತಿಯು ಹಣಕಾಸಿನ ಅಧಿಕಾರವನ್ನು ನೀಡಲಾಗಿದೆ. ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣದಲ್ಲಿ ದೇಣಿಗೆಯಿಂದ ಬಂದ ಹಣ ಅಥವಾ ಇಲಾಖೆಯಿಂದ, ಡಿ.ಪಿ.ಇ.ಪಿ. ವತಿಯಿಂದ ಮಂಜೂರಾದ ರೂ. 2000-00ಗಳನ್ನು ಹಣವನ್ನು ಸದುಪಯೋಗಪಡಿಸಿಕೊಳ್ಳುವುದು. ಗ್ರಾಮ ಶಿಕ್ಷಣ ಸಮಿತಿ ಸಭೆಯಲ್ಲಿ ಶಾಲೆಯ ಅಭಿವೃದ್ಧಿಗಾಗಿ ಕೈಗೊಳ್ಳುವ ವಿವಿಧ ಚಟುವಟಿಕೆಗಳ ಕುರಿತು ನಿರ್ಣಯ ತೆಗೆದುಕೊಂಡು ಸಭೆಯ ನಿರ್ಣಯದಂತೆ ಅನುಮೋದಿತ ಆಯ-ವ್ಯಯವನ್ನು ಆಯಾ ವಾರ್ಷಿಕವಾರು ಬಳಸುವ ಅಧಿಕಾರವನ್ನು ಈ ಸಮಿತಿಯು ಹೊಂದಿರುತ್ತದೆ. ಶಾಲೆಗಳ ಮುಖ್ಯ ಗುರುಗಳು ಈ ಸಮಿತಿಯ ಕಾರ್ಯದರ್ಶಿಗಳು. ಎಲ್ಲಾ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಾರೆ. ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಹಣ ಜಮಾಗೊಳ್ಳುತ್ತದೆ. ಸಭೆಯ ತೀರ್ಮಾನದಂತೆ ಖರ್ಚನ್ನು ಭರಿಸಲಾಗುತ್ತದೆ.

ಶಿಕ್ಷಣ ಪ್ರಕ್ರಿಯೆಯಲ್ಲಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಯಾವ ರೀತಿಯಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡಿದ್ದಾರೆ. ಅವರ ಭಾಗಿತ್ವದಲ್ಲಿ ಶಾಲೆಯ ಅಭಿವೃದ್ಧಿಯಾಗಿ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಎನ್ನುವ ಕುರಿತು ಭಾಗ-3 ಕೋಷ್ಟಕಗಳಲ್ಲಿ ಐದು ಗ್ರಾಮಗಳಲ್ಲಿ ಸಂಗ್ರಹಿಸಿದ ದತ್ತಾಂಶವನ್ನು ಈ ಕೆಳಗೆ ವಿಶ್ಲೇಷಿಸಲಾಗಿದೆ. ಈ ಭಾಗಕ್ಕೆ ಅನ್ವಯಿಸಿ ಐದು ಗ್ರಾಮಗಳಿಂದ ಒಟ್ಟು 47 ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಖುದ್ದು ಭೇಟಿ ಮಾಡಿ, ಸಂದರ್ಶನದ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ. ಕೆಲವು ಕಡೆ ಶಾಲೆಗೆ ನೇರವಾಗಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಬರಮಾಡಿಕೊಂಡು, ಗುಂಪು ಚರ್ಚೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

4.3.1. ಕೋಷ್ಟಕ -13 : ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ.

(ಗ್ರಾಮ ಶಿಕ್ಷಣ ಸಮಿತಿ ಸದಸ್ಯರೊಂದಿಗೆ)

ಕ್ರ ಸಂ	ಗ್ರಾಮದ ಹೆಸರು	ಶಾಲೆಗಾಗಿ ಭೌತಿಕ ಸೌಕರ್ಯಗಳನ್ನು ಒದಗಿಸಲಾಗಿದೆ	ಗ್ರಾಮದ ಸಮುದಾಯ ಶೈಕ್ಷಣಿಕ ಪ್ರಕ್ರಿಯೆ ಯಲ್ಲಿ ಪಾಲ್ಗೊಳ್ಳಲು ಪ್ರೇರಣೆ ನೀಡಲಾಗಿದೆ.	ಅರ್ಹರಾದ ಎಲ್ಲಾ ಮಕ್ಕಳನ್ನು ಶಾಲೆಯಲ್ಲಿ ಸೇರಿಸಲಾಗಿದೆ	ಶಾಲೆಗೆ ಮೂಲಭೂತ ಸೌಲಭ್ಯ ಗಳನ್ನು ಒದಗಿಸಲು ಪ್ರಯತ್ನ ಮಾಡಲಾಗಿದೆ.	ಇತರೆ	ಒಟ್ಟು
01	ಗಜಾಪುರ	1	2	2	3	0	8
02	ಜಂಗಮಸೋವೇನಹಳ್ಳಿ	2	2	30	7	0	8
03	ಮರಬಾನಹಳ್ಳಿ	2	2	0	1	0	5
04	ನಂದಿಬಂಡಿ	4	2	2	2	0	10
05	ದೇವಲಾಪುರ	3	2	4	1	0	16
	ಒಟ್ಟು :-	**12**	**10**	**38**	**14**	**0**	**17**

ಈ ಕಾರ್ಯಕ್ರಮದಲ್ಲಿ, ಗಜಾಪುರದ 8 ಜನ ಗ್ರಾಮ ಶಿಕ್ಷಣ ಸಮಿತಿ ಸದಸ್ಯರಲ್ಲಿ ಪುರುಷರು 5 ಮಹಿಳೆಯರು 3, ಜಂಗಮಸೋವೆನಹಳ್ಳಿಯಲ್ಲಿ ಪುರುಷರು 6, ಮಹಿಳೆಯರು 2, ಮರಬಾನಹಳ್ಳಿ ಪುರುಷರು 5, ನಂದಿಬಂಡಿಯಲ್ಲಿ ಪುರುಷರು 8, ಮಹಿಳೆಯರು 2, ದೇವಲಾಪುರದಲ್ಲಿ ಪುರುಷರು 12, ಹಾಗೂ 4 ಜನ ಮಹಿಳೆಯರನ್ನು ತೊಡಗಿಸಲಾಗಿದೆ. ಅವರಿಂದ ಪಡೆದ ಮಾಹಿತಿಯನ್ನು, ಮೇಲಿನ ಕೋಷ್ಟಕದಲ್ಲಿಯ ದತ್ತಾಂಶದ ವಿವರವನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಭಾಗ-3ರ ನಮೂನೆಯಲ್ಲಿಯ ಪ್ರಶ್ನೆಗೆ ಎಲ್ಲರೂ ಪ್ರತಿಕ್ರಿಯಿಸಿದ್ದು, ಸಕಾರಾತ್ಮಕ ಉತ್ತರ ನೀಡಿದ್ದಾರೆ. ಆ ಪ್ರಕಾರ ಶಾಲೆಗಾಗಿ ಭೌತಿಕ ಸೌಕರ್ಯಗಳನ್ನು ಒದಗಿಸುವ ಕುರಿತು 12 ಸದಸ್ಯರು ಮತ್ತು ಗ್ರಾಮ ಸಮುದಾಯವನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಪ್ರೇರಣೆ ನೀಡಲಾಗಿದೆ ಎಂಬ ಬಗ್ಗೆ 10 ಸದಸ್ಯರು, ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ ಎನ್ನುವ ಕುರಿತು 11 ಸದಸ್ಯರು , ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಯತ್ನಿಸಲಾಗಿದೆ ಎಂಬ ಅಂಶದ ಕುರಿತು 14 ಸದಸ್ಯರು ಪ್ರತಿಕ್ರಿಯಿಸಿದ್ದಾರೆ. ಗ್ರಾಮ ಶಿಕ್ಷಣ ಸಮಿತಿಯ ಹೆಚ್ಚಿನ ಸದಸ್ಯರು ಮೇಲಿನ ಅಂಶ 1 ಮತ್ತು 2ಕ್ಕೆ ಹೆಚ್ಚಿನ ಕೊಡುಗೆ ನೀಡಿರುವುದು ಕಂಡು ಬರುತ್ತದೆ.

ಗ್ರಾಮವಾರು ಗಮನಿಸಿದಾಗ ದೇವಲಾಪುರ ಗ್ರಾಮದ ಸದಸ್ಯರು ಶಾಲೆಗಾಗಿ ಭೌತಿಕ ಸೌಕರ್ಯಗಳನ್ನು ಒದಗಿಸುವ ಕುರಿತು ಆದ್ಯತೆಯನ್ನು ನೀಡಿರುತ್ತಾರೆ. ಗಜಾಪುರದಲ್ಲಿ ಈ ಅಂಶಕ್ಕೆ ಕಡಿಮೆ ಆದ್ಯತೆಯನ್ನು ನೀಡಲಾಗಿದೆ. ಗ್ರಾಮದ ಸಮುದಾಯದ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಪ್ರೇರಣೆಗೆ ಎಲ್ಲಾ ಗ್ರಾಮದಿಂದ ತಲಾ ಇಬ್ಬರು ಸ್ಪಂದಿಸಿದ್ದಾರೆ. ಅರ್ಹರಾದ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸುವ ಕುರಿತು ದೇವಲಾಪುರದಲ್ಲಿ 4 ಸದಸ್ಯರು ಸ್ಪಂದಿಸಿದ್ದಾರೆ. ಉಳಿದ ಗ್ರಾಮಗಳಲ್ಲಿ ಕ್ರಮವಾಗಿ 2-3ರಂತೆ ಆದ್ಯತೆ ನೀಡಿದ್ದಾರೆ. ಅದೇ ರೀತಿ ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿದ ಕುರಿತು ದೇವಲಾಪುರದಲ್ಲಿ 7 ಸದಸ್ಯರು ಆದ್ಯತೆಯನ್ನು ನೀಡಲಾಗಿದ್ದು, ಜಂಗಮಸೋವೇನಹಳ್ಳಿ ಮತ್ತು ಮರಬಾನಹಳ್ಳಿಯಲ್ಲಿ ತಲಾ ಒಬ್ಬರು ಮಾತ್ರ ತಮ್ಮ ಕೊಡುಗೆ ನೀಡಿದ ಬಗ್ಗೆ ತಿಳಿಸಿದ್ದಾರೆ. ಒಟ್ಟಾರೆ ಈ ಮೇಲಿನ ದತ್ತಾಂಶವನ್ನು ಗಮನಿಸಿದಾಗ ಶಾಲೆಗೆ ಭೌತಿಕ ಸೌಕರ್ಯಗಳನ್ನು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಪ್ರಯತ್ನ ಮಾಡಲಾಗಿದೆ. ಭೌತಿಕ ಸೌಕರ್ಯಗಳಲ್ಲಿ ಶಾಲಾ ಕೊಠಡಿಗಳು, ಆವರಣ, ಮೂಲಭೂತ ಸೌಕರ್ಯಗಳಾದ ಶಾಲೆಯ ಮಕ್ಕಳಿಗೆ ಅಗತ್ಯವಿರುವ ಕುಡಿಯುವ ನೀರು ಮತ್ತು ಶೌಚಾಲಯ, ಬೋಧನೋಪಕರಣಗಳು ಮತ್ತು ಆಟದ ಸಾಮಾಗ್ರಿಗಳು ಸೇರುತ್ತವೆ. ಈ ವ್ಯವಸ್ಥೆಗೆ ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಪ್ರಯತ್ನಿಸಿರುವುದು ಕಂಡುಬರುತ್ತದೆ. ಸಮುದಾಯ ಶಿಕ್ಷಣ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಮತ್ತು ಅರ್ಹರಾದ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಲು ಆಸಕ್ತಿಯನ್ನು ತಾಳಿರುವುದು ಉತ್ತಮ ಪ್ರಯತ್ನದ ಬೆಳವಣಿಗೆ ಎಂಬ ಅಂಶ ಇದರಿಂದ ಕಂಡು ಬರುತ್ತದೆ.

4.3.2. ಕೋಷ್ಟಕ - 14 : ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಶಾಲಾ ಅಭಿವೃದ್ಧಿಗಾಗಿ ರೂಪಿಸಿಕೊಂಡ ಚಟುವಟಿಕೆಗಳು.

ಕ್ರಮ ಸಂಖ್ಯೆ	1	2	3	4	5	6
ಗ್ರಾಮದ ಹೆಸರು	ಗಜಾಪುರ	ಜಂಗಮ ಸೋವೇನಹಳ್ಳಿ	ಮರಬಾನ ಹಳ್ಳಿ	ನಂದಿ ಬಂಡಿ	ದೇವಲಾ ಪುರ	ಒಟ್ಟು
ಪ್ರತಿಭಾವಂತ ಮಕ್ಕಳಿಗೆ ಉತ್ತೇಜನ ನೀಡಲು ಶಾಲಾ ನಿಧಿಯನ್ನು ಸ್ಥಾಪಿಸುವುದು	0	0	1	2	2	**5**
ದೇಣಿಗೆ ಮೂಲಕ ರಾಷ್ಟ್ರ ನಾಯಕರ ಭಾವಚಿತ್ರ ಗಳನ್ನು ಸಂಗ್ರಹಿಸುವುದು	0	0	1	5	1	**7**
ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರುವುದು	1	0	1	2	4	**8**
ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು/ ಸ್ಪರ್ಧೆ ಗಳನ್ನು ಏರ್ಪಡಿಸುವುದು	0	0	0	0	2	**2**
ಪಾಲಕರ/ಪೋಷಕರ ಸಭೆಯನ್ನು ನಡೆಸುವುದು	1	0	0	1	0	**2**
ವಿದ್ಯಾರ್ಥಿಗಳಿಗೆ ಶೌಚಾಲಯ ನಿರ್ಮಿಸುವುದು	1	0	0	0	6	**7**
ಅನ್ವಯಿಸುವುದಿಲ್ಲ	5	0	2	0	1	**8**
ಒಟ್ಟು	**8**	**0**	**5**	**10**	**16**	**39**

ಈ ಕೋಷ್ಟಕದಲ್ಲಿಯ ದತ್ತಾಂಶಕ್ಕೆ ಸಂಬಂಧಿಸಿದಂತೆ ಎಂಟು ಸದಸ್ಯರು ಯಾವ ಪ್ರತಿಕ್ರಿಯೆಯನ್ನೂ ನೀಡಿರುವುದಿಲ್ಲ. ಉಳಿದ 39 ಸದಸ್ಯರು ಪ್ರತಿಕ್ರಿಯಿಸಿದ್ದಾರೆ. ಅವರು ನೀಡಿದ ಚಟುವಟಿಕೆಗಳನ್ನು ಕ್ರೋಢೀಕರಿಸಿ, ಇಲ್ಲಿ ವಿಶ್ಲೇಷಿಸಲಾಗಿದೆ. ಆ ಪ್ರಕಾರ ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರುವ ಕುರಿತು ಐದು ಗ್ರಾಮದ ಎಂಟು ಸದಸ್ಯರು ಒತ್ತು ನೀಡಿದ್ದಾರೆ. ದೇಣಿಗೆ ಮೂಲಕ ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಸಂಗ್ರಹಿಸುವ ಬಗ್ಗೆ ಮತ್ತು ವಿದ್ಯಾರ್ಥಿಗಳಿಗೆ ಶೌಚಾಲಯ ನಿರ್ಮಿಸುವ ಕುರಿತು ತಲಾ 7 ಸದಸ್ಯರು ತಮ್ಮ ಚಟುವಟಿಕೆಗಳ ವಿವರಗಳನ್ನು ನೀಡಿದ್ದಾರೆ. ಪ್ರತಿಭಾವಂತ ಮಕ್ಕಳಿಗೆ ಉತ್ತೇಜನ ನೀಡಲು ಶಾಲಾ ನಿಧಿಯನ್ನು ಸ್ಥಾಪಿಸುವ ಕುರಿತು ಐದು ಸದಸ್ಯರು ಪ್ರತಿಕ್ರಿಯಿಸಿದ್ದರೆ, ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮತ್ತು ಸ್ಪರ್ಧೆಯನ್ನು ಏರ್ಪಡಿಸುವ ಕುರಿತು, ಪಾಲಕ/ಪೋಷಕರ ಸಭೆಯನ್ನು ನಡೆಸುವ ಬಗ್ಗೆ ತಲಾ ಇಬ್ಬರು ಸದಸ್ಯರು ತಮ್ಮ ಅನಿಸಿಕೆ ಗಳನ್ನು ನೀಡಿದ್ದಾರೆ. ಒಟ್ಟಾರೆ ವಿದ್ಯಾರ್ಥಿಗಳಿಗೆ ಶೌಚಾಲಯ ನಿರ್ಮಿಸುವುದರ ಕುರಿತು, ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರುವುದರ ಬಗ್ಗೆ ಹೆಚ್ಚು ಕಾರ್ಯಚಟುವಟಿಕೆಗಳನ್ನು ರೂಪಿಸಿರುವುದು ಕಂಡುಬರುತ್ತದೆ. ಬಾಲ ಕಾರ್ಮಿಕ ಮಕ್ಕಳು ಯಾರು ಎನ್ನುವ ಕುರಿತು ಗ್ರಾಮದ ಸದಸ್ಯರಲ್ಲಿ ಸರಿಯಾದ ತಿಳುವಳಿಕೆಯ ಕೊರತೆ ಇದೆ ಎನ್ನುವ ಅಂಶ, ಚರ್ಚೆಯ ಸಂದರ್ಭದಲ್ಲಿ ಕಂಡುಬಂದಿದೆ. ಆದ್ದರಿಂದ ಬಾಲ ಕಾರ್ಮಿಕ ಮಕ್ಕಳ ಲಕ್ಷಣಗಳನ್ನು ಸದಸ್ಯರ ಅರಿವಿಗೆ ತರುವ ಅಗತ್ಯವಿದೆ. ಈ ಕೆಳಗಿನ ಕೋಷ್ಟಕದಲ್ಲಿಯ ದತ್ತಾಂಶದಿಂದ ಮೇಲಿನ ವಿಶ್ಲೇಷಣೆ ಯನ್ನು ಮಾಡಲಾಗಿದೆ.

4.3.3. ಕೋಷ್ಟಕ - 15 : ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಪಡೆದುಕೊಂಡ ತರಬೇತಿ :

ಕ್ರ.ಸಂ.	ಗ್ರಾಮದ ಹೆಸರು	ಗ್ರಾಮ ಶಿಕ್ಷಣ ಸಮಿತಿ ತರಬೇತಿ	ವಿ.ಇ.ಸಿ. ಮೇಳ	ಇತರೆ	ಒಟ್ಟು
01	ಗಜಾಪುರ	03	02	00	05
02	ಜಂಗಮಸೋವೇನಹಳ್ಳಿ	02	02	00	04
03	ಮರಬಾನಹಳ್ಳಿ	02	02	00	04
04	ನಂದಿಬಂಡಿ	02	04	00	06
05	ದೇವಲಾಪುರ	04	02	00	06
	ಒಟ್ಟು :-	**13**	**12**	**00**	**25**

ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಶಾಲಾ ಅಭಿವೃದ್ಧಿಗಾಗಿ ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ. ಆದ್ದರಿಂದ ಗ್ರಾ.ಶಿ.ಸಮಿತಿ ಸದಸ್ಯರಿಗೆ ಅವರ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಅಗತ್ಯವಾದ ತರಬೇತಿ ನೀಡಬೇಕಾಗುತ್ತದೆ. ಅಂತಹ ತರಬೇತಿ ಪಡೆದ ವಿವರವನ್ನು ಕೋಷ್ಟಕದಲ್ಲಿ ನೀಡಲಾಗಿದೆ. ಈ ಕೋಷ್ಟಕದಲ್ಲಿಯ ಅಂಶಗಳಿಗೆ ಒಟ್ಟು ಐದು ಗ್ರಾಮದ 25 ಸದಸ್ಯರು ಉತ್ತರ ನೀಡಿದ್ದು, ಉಳಿದ 22 ಸದಸ್ಯರು ಪ್ರತಿಕ್ರಿಯಿಸಿಲ್ಲ. ಇದಕ್ಕೆ ಕಾರಣವೂ ಇದೆ. ಡಿ.ಪಿ.ಇ.ಪಿ. ವತಿಯಿಂದ ಪ್ರತಿ ತಾಲೂಕಿನಿಂದಲೂ ಬಿ.ಆರ್.ಸಿ. ಮೂಲಕ (ಬ್ಲಾಕ್ ರಿಸೋರ್ಸ್ ಸೆಂಟರ್) ಗ್ರಾಮ ಶಿಕ್ಷಣ ಸಮಿತಿ ಸದಸ್ಯರಿಗೆ ತರಬೇತಿ ನೀಡಲಾಗುತ್ತಿದೆ. ಪ್ರತಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರಿಗೆ ಈ ತರಬೇತಿಯಲ್ಲಿ ಶಿಕ್ಷಣದ ಬಗ್ಗೆ ತಿಳಿಸಿ ಕೊಡಲಾಗುತ್ತಿದೆ. ನಾಲ್ಕು ದಿನಗಳ ಕಾಲ ನೀಡುವ ಈ ತರಬೇತಿಯಲ್ಲಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರ ಕರ್ತವ್ಯಗಳು-ಜವಾಬ್ದಾರಿಗಳು, ಸ್ಥಳೀಯ ಶಾಲಾ ಸಮಸ್ಯೆಗಳು ಅವುಗಳಿಗೆ ಪರಿಹಾರ, ಶಾಲೆಗಾಗಿ ಸಂಪನ್ಮೂಲಗಳ ಕ್ರೋಢೀಕರಣ, ಸೂಕ್ಷ್ಮ ಯೋಜನಾ ಕಾರ್ಯಕ್ರಮ ಪರಿಚಯ, ಸಮುದಾಯವನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಇತ್ಯಾದಿ ಕುರಿತು ತರಬೇತಿ ನೀಡಲಾಗುತ್ತಿದೆ. ಆ ರೀತಿ ಈ ಐದು ಗ್ರಾಮಗಳಲ್ಲಿ ತರಬೇತಿ ಪಡೆದವರ ಸಂಖ್ಯೆ 13 ಸದಸ್ಯರು ಮಾತ್ರ.

ಈ 13 ಸದಸ್ಯರಲ್ಲಿ 12 ಸದಸ್ಯರು ವಿ.ಇ.ಸಿ. ಮೇಳಗಳಲ್ಲಿ ಭಾಗವಹಿಸಿರುವುದು ಕಂಡು ಬಂದಿರುತ್ತದೆ. ವಿ.ಇ.ಸಿ. ಮೇಳ ಅಥವಾ ಗ್ರಾಮ ಶಿಕ್ಷಣ ಸಮಿತಿ ಮೇಳವನ್ನು ಪ್ರತಿ ಸಮೂಹ ಸಂಪನ್ಮೂಲ ಕೇಂದ್ರದಲ್ಲಿ ತರಬೇತಿ ಪಡೆದ ಎಲ್ಲಾ ಸದಸ್ಯರಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಇದು ಒಂದು ದಿನದ ಮೇಳವಾಗಿರುತ್ತದೆ. ಈ ಮೇಳದಲ್ಲಿ ಆಯಾ ಗ್ರಾಮದ ಶಾಲಾ ಅಭಿವೃದ್ಧಿ ಕುರಿತು, ಮಕ್ಕಳ ದಾಖಲಾತಿ ಕುರಿತು, ಶಾಲಾ ಅನುದಾನದ ಬಳಕೆ ಕುರಿತು ಅನುಭವಗಳನ್ನು ಹಂಚಿಕೊಳ್ಳಲಾಗುತ್ತಿದೆ. ಇದು ಒಂದು ರೀತಿಯ ಕಾರ್ಯಗಾರದಂತೆ ಇರುತ್ತದೆ. ಭಾಗವಹಿಸಿದ ಎಲ್ಲಾ ಸದಸ್ಯರು ಇಡೀ ದಿನವಿದ್ದು, ಸಮುದಾಯವು ಶಿಕ್ಷಣ ಪ್ರಕ್ರಿಯೆಯಲ್ಲಿ ತೊಡಗಿಸುವ ಕುರಿತು ಅರಿವು ಮೂಡಿಸುವ ಬಗ್ಗೆ ಚಿಂತನೆ ಮಾಡುತ್ತಾರೆ. ಐದು ಗ್ರಾಮಗಳಿಂದ 12 ಸದಸ್ಯರು ಭಾಗವಹಿಸಿದ ಮೇಲೆ ಶಿಕ್ಷಣದ ಪರವಾಗಿ ಹೆಚ್ಚಿನ ಒಳವು ತೋರಿರುವುದು ಕಂಡು ಬಂದಿದೆ.

4.3.4. ಕೋಷ್ಟಕ - 16 ಸೂಕ್ಷ್ಮ ಯೋಜನೆ ಕಾರ್ಯಕ್ರಮದ ಅರಿವು:

ಕ್ರಮ ಸಂಖ್ಯೆ	1	2	3	4	5	6
ಗ್ರಾಮದ ಹೆಸರು	ಗಜಾಪುರ	ಜಂಗಮ ಸೋವೇನಹಳ್ಳಿ	ಮರಬಾನ ಹಳ್ಳಿ	ನಂದಿ ಬಂಡಿ	ದೇವಲಾ ಪುರ	ಒಟ್ಟು
ಶಾಲೆಯ ಹೊರಗುಳಿದಿರುವ ಮಕ್ಕಳನ್ನು ದಾಖಲು ಗೊಳಿಸುವುದು	2	1	1	2	3	**9**
ಶಾಲೆಬಿಟ್ಟ ಮಕ್ಕಳನ್ನು ಮರು ದಾಖಲಾತಿ ಮಾಡುವುದು	0	1	0	2	2	**5**
ಗೈರು ಹಾಜರಾಗುವ ಮಕ್ಕಳನ್ನು ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ಮಾಡುವುದು	1	1	1	2	3	**8**
ಅನೌಪಚಾರಿಕ ಶಿಕ್ಷಣ ಕೇಂದ್ರಗಳಿಗೆ ಮಕ್ಕಳನ್ನು ಕಳುಹಿಸುವುದು	3	2	1	2	2	**10**
ಶಾಲೆಯ ಒಳಗೆ ಮತ್ತು ಹೊರಗೆ ಪರಿಸರವನ್ನು ಕಾಪಾಡುವುದು	1	2	2	1	2	**8**
ಪಾಲಕರನ್ನು ಒಲಿಸಿ ಮಕ್ಕಳನ್ನು ಶಾಲೆಗೆ ನಿರಂತರ ವಾಗಿ ಕಳುಹಿಸಲು ಪ್ರೇರೇಪಿಸುವುದು	1	1	0	1	2	**5**
ಶಿಕ್ಷಣದ ಮಹತ್ವ ಕುರಿತು ಸಮುದಾಯದಲ್ಲಿ ಸಮುದಾಯದಲ್ಲಿ ಅರಿವನ್ನು ಮೂಡಿಸುವುದು	0	0	0	0	2	**2**
ಒಟ್ಟು :-	**8**	**8**	**5**	**10**	**16**	**47**

ಸೂಕ್ಷ್ಮ ಯೋಜನೆ ಕಾರ್ಯಕ್ರಮ ಕುರಿತು, ಗ್ರಾಮ ಶಿಕ್ಷಣ ಸಮಿತಿ ಸದಸ್ಯರಿಗೆ ನಮೂನೆಯಲ್ಲಿಯ ಪ್ರಶ್ನೆಗಳನ್ನು ಕೇಳಲಾಗಿ ಎಲ್ಲಾ 47 ಸದಸ್ಯರು 'ಹೌದು' ಎಂಬ ಉತ್ತರ ನೀಡಿದ್ದಾರೆ. ಶಾಲೆಯ ಅಭಿವೃದ್ಧಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಪ್ರಶ್ನೆಗೆ ಮುಖ್ಯವಾದ ಕಾರ್ಯಕ್ರಮಗಳ ಮೇಲೆ 7 ಸದಸ್ಯರು ವಿವಿಧ ಅಭಿಪ್ರಾಯಗಳನ್ನು ನೀಡಿದ್ದಾರೆ.

ಅಭಿಪ್ರಾಯಗಳಲ್ಲಿ 10 ಸದಸ್ಯರು ತಮ್ಮ ಗ್ರಾಮದಲ್ಲಿ ಸೂಕ್ಷ್ಮ ಯೋಜನೆ ಕಾರ್ಯಕ್ರಮದ ನಂತರ ಅನೌಪಚಾರಿಕ ಶಿಕ್ಷಣ ಕೇಂದ್ರಗಳಿಗೆ ಮಕ್ಕಳನ್ನು ಕಳುಹಿಸುವ ಕುರಿತು ಹೇಳಿದ್ದರೆ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ದಾಖಲುಗೊಳಿಸುವ ಬಗ್ಗೆ ಗೈರುಹಾಜರಾದ ಮಕ್ಕಳನ್ನು ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ಮಾಡುವ ಸಲುವಾಗಿ ತಲಾ ಎಂಟು ಸದಸ್ಯರು, ಶಾಲೆ ಬಿಟ್ಟ ಮಕ್ಕಳನ್ನು ಮರು ದಾಖಲಾತಿ ಮಾಡುವ ಬಗ್ಗೆ ಹಾಗು ಪಾಲಕರನ್ನು ಮನವೊಲಿಸಿ ಮಕ್ಕಳನ್ನು ಶಾಲೆಗೆ ನಿರಂತರವಾಗಿ ಕಳುಹಿಸಲು ಪ್ರೇರೇಪಿಸಿದವರು ತಲಾ ಐದು ಸದಸ್ಯರು. ಶಿಕ್ಷಣದ ಮಹತ್ವದ ಬಗ್ಗೆ ಸಮುದಾಯದಲ್ಲಿ ಅರಿವನ್ನು ಮೂಡಿಸಿದಂತೆ ಇಬ್ಬರು ಸದಸ್ಯರು ತಮ್ಮ ಪ್ರತಿಕ್ರಿಯೆ ನೀಡಿದ್ದಾರೆ. ಎಲ್ಲಾ ನಲವತ್ತೇಳು ಸದಸ್ಯರು ಈ ಬಗ್ಗೆ ಉತ್ತಮವಾಗಿ ಪ್ರತಿಕ್ರಿಯಿಸಿದ್ದಾರೆ. ಇದು ಆಯಾ ಗ್ರಾಮಗಳಲ್ಲಿ ನಡೆದ ಸೂಕ್ಷ್ಮ ಯೋಜನೆ ಕಾರ್ಯಕ್ರಮದ ಯಶಸ್ಸನ್ನು ಎತ್ತಿ ತೋರಿಸುತ್ತದೆ.

4.3.5. ಕೋಷ್ಠಕ -17 : ಸದಸ್ಯರು ಶಾಲೆಯಲ್ಲಿ ಗಮನಿಸಿದ ಬದಲಾವಣೆಗಳು :

ಕ್ರಮ ಸಂಖ್ಯೆ	1	2	3	4	5	6
ಗ್ರಾಮದ ಹೆಸರು	ಗಜಾಪುರ	ಜಂಗಮ ಸೋವೇನಹಳ್ಳಿ	ಮರಬಾನ ಹಳ್ಳಿ	ನಂದಿ ಬಂಡಿ	ದೇವಲಾ ಪುರ	ಒಟ್ಟು
ಹೌದು ಶಾಲೆಯಲ್ಲಿ ಬದಲಾವಣೆ ಗಮನಿಸಿದ್ದೇವೆ	3	2	1	3	4	**13**
ತರಗತಿ ಕೊಠಡಿಗಳನ್ನು ಅಲಂಕರಿಸಿದ್ದಾರೆ, ಚಿತ್ರ ಗಳನ್ನು ಹಾಕಿದ್ದಾರೆ,ನಕಾಶೆಗಳನ್ನು ಬಿಡಿಸಿದ್ದಾರೆ	0	1	0	2	3	**6**
ಮಕ್ಕಳು ಶಾಲೆಗೆ ಹೆಚ್ಚು ಹಾಜರಾಗುತ್ತಿದ್ದಾರೆ	4	2	0	3	2	**11**
ಎಲ್ಲಾ ಮಕ್ಕಳಿಗೆ ಉಚಿತ ಸೌಲಭ್ಯಗು ಸಿಗುತ್ತಿವೆ (ಅಕ್ಕಿ, ಪುಸ್ತಕ, ಬಟ್ಟೆ)	0	1	2	1	5	**9**
ಶಿಕ್ಷಕರ ಬೋಧನಾ ಚಟುವಟಿಕೆಗಳಲ್ಲಿ ಬದಲಾವಣೆಗಳನ್ನು ಗಮನಿಸಿದೆ.	1	1	1	1	1	**5**
ಮಕ್ಕಳ ಕಲಿಕಾ ಸಾಮರ್ಥ್ಯದಲ್ಲಿ ಪ್ರಗತಿಯನ್ನು ಗಮನಿಸಲಾಗಿದೆ.	0	1	1	0	1	**3**
ಒಟ್ಟು :-	**8**	**8**	**5**	**10**	**16**	**47**

ನಮೂನೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಎಲ್ಲಾ 47 ಸದಸ್ಯರು 'ಹೌದು' ಎಂದು ಪ್ರತಿಕ್ರಿಯಿಸಿದ್ದಾರೆ. ಹೌದಾದರೆ ಯಾವುವು ? ಎನ್ನುವ ಕುರಿತು ಅವರೆಲ್ಲರೂ ಮುಖ್ಯವಾಗಿ ಆರು ಬದಲಾವಣೆಗಳನ್ನು ಗಮನಿಸಿದ್ದಾರೆ. ತರಗತಿ ಕೊಠಡಿಗಳನ್ನು ಅಲಂಕರಿಸಿ, ಚಿತ್ರಗಳನ್ನು ಮತ್ತು ನಕಾಶೆಗಳನ್ನು ಬಿಡಿಸಿರುವ ಬಗ್ಗೆ ಆರು ಸದಸ್ಯರು, ಹನ್ನೊಂದು ಸದಸ್ಯರು ಮಕ್ಕಳು ಶಾಲೆಗೆ ಹಾಜರಾಗುತ್ತಾರೆ ಎಂಬ ಬದಲಾವಣೆ ಗಮನಿಸಿದ್ದಾರೆ. ಎಲ್ಲಾ ಮಕ್ಕಳಿಗೆ ಉಚಿತ ಸೌಲಭ್ಯಗಳು ಸಿಗುತ್ತಿರುವ ಬಗ್ಗೆ ಒಂಭತ್ತು ಸದಸ್ಯರು, ಶಿಕ್ಷಕರ ಬೋಧನಾ ಚಟುವಟಿಕೆಗಳಲ್ಲಿ ಐದು ಜನ ಸದಸ್ಯರು ಬದಲಾವಣೆ ಕಂಡಿದ್ದರೆ, ಮಕ್ಕಳ ಕಲಿಕಾ ಸಾಮರ್ಥ್ಯದಲ್ಲಿ ಮೂರು ಜನ ಸದಸ್ಯರು ಪ್ರಗತಿಯನ್ನು ಗಮನಿಸಿದ್ದಾರೆ.

ಗಮನಿಸಿದ ಬದಲಾವಣೆಗಳಲ್ಲಿ ತರಗತಿ ಕೊಠಡಿಗಳನ್ನು ಅಲಂಕಾರಗೊಳಸಿರುವುದು ಮುಖ್ಯ. ಮಕ್ಕಳು ಶಾಲೆಗೆ ಹಾಜರಾದ ನಂತರ ಅವರನ್ನು ಶಾಲೆಯಲ್ಲಿಯೇ ಉಳಿಯುವಂತೆ ಮಾಡಲು ಶಾಲೆ ಆಕರ್ಷಣೀಯವಾಗಿರಬೇಕಾಗಿರುತ್ತದೆ. ಇದು ಶಿಕ್ಷಣದ ಗುಣಾತ್ಮಕ ಬದಲಾವಣೆಗೂ ಕಾರಣವಾಗುತ್ತದೆ. ಶಿಕ್ಷಕರ ಚಟುವಟಿಕೆಗಳಲ್ಲಿಯೂ ಸದಸ್ಯರು ಬದಲಾವಣೆ ಗಮನಿಸಿರುವುದು ಗಮನಾಹ ಅಂಶ. ಕಳೆದ ಮೂರು ವರ್ಷಗಳಲ್ಲಿ ಶಿಕ್ಷಕರ ಬೋಧನಾ ತಂತ್ರದಲ್ಲಿ ಹೊಸ ಪದ್ಧತಿಗಳನ್ನು ಅಳವಡಿಸಿಕೊಂಡು ಬೋಧನೆ ಮಾಡುತ್ತಿದ್ದಾರೆ. ಚಟುವಟಿಕೆಯುಕ್ತ ಬೋಧನೆ ಪ್ರಮುಖ ಆಕರ್ಷಣೆ. ಬೋಧನಾ ಉಪಕರಣಗಳನ್ನು ತಯಾರಿಸಿಕೊಂಡೇ ವಿಷಯವಾರು ಬೋಧಿಸಬೇಕು. ಇದನ್ನು ಸದಸ್ಯರು ಗಮನಿಸಿದ್ದಾರೆ. ಮಕ್ಕಳ ಕಲಿಕೆ ಸಾಮರ್ಥ್ಯದಲ್ಲಿಯೂ ಸಹ ಸದಸ್ಯರು ಬದಲಾವಣೆ ಕಂಡಿದ್ದಾರೆ. ಈ ಮೂಲಕ ಸಮುದಾಯದ ಭಾಗಿತ್ವ ಹೆಚ್ಚಿದಂತಾಗಿದೆ.

4.3.6. ಕೋಷ್ಟಕ-18: ಸ್ಥಳೀಯ ಸಂಘ-ಸಂಸ್ಥೆಗಳ ಪಾತ್ರ.

ಕ್ರ ಸಂ	ಗ್ರಾಮದ ಹೆಸರು	ಗ್ರಾಮ ಪಂಚಾಯತಿ	ಗ್ರಾಮ ಶಿಕ್ಷಣ ಸಮಿತಿ	ಗ್ರಾಮದ ಯುವಕರು	ಮಹಿಳಾ ಮಂಡಳಿಗಳು	ಶಿಕ್ಷಣ ಇಲಾಖೆ	ಇತರ	ಒಟ್ಟು
1	ಗಜಾಪುರ	0	8	0	0	0	0	**8**
2	ಜಂಗಮಸೋವೇನಹಳ್ಳಿ	1	6	1	0	0	0	**8**
3	ಮರಬಾನಹಳ್ಳಿ	0	2	3	0	0	0	**5**
4	ನಂದಿಬಂಡಿ	2	5	2	1	0	0	**10**
5	ದೇವಲಾಪುರ	3	6	3	1	3	0	**16**
	ಒಟ್ಟು :-	**6**	**27**	**9**	**2**	**3**	**0**	**47**

ಈ ಮೇಲಿನ ಕೋಷ್ಟಕದಲ್ಲಿಯ ದತ್ತಾಂಶಗಳಿಗೆ ಸಂಬಂಧಿಸಿದ ಪ್ರಶ್ನೆಗೆ ಎಲ್ಲಾ ಐದು ಗ್ರಾಮಗಳ 47 ಸದಸ್ಯರು ಉತ್ತರಿಸಿದ್ದಾರೆ. ಶಾಲೆಯ ಅಭಿವೃದ್ಧಿಯ ಬಗ್ಗೆ ಸ್ಥಳೀಯ ಸಂಘ-ಸಂಸ್ಥೆಗಳು ಆಯಾ ಗ್ರಾಮಗಳಲ್ಲಿ ಯೋಚಿಸಿರುವುದನ್ನು ಸದಸ್ಯರು ತಿಳಿಸಿದ್ದಾರೆ. ಅವುಗಳಲ್ಲಿ 'ಗ್ರಾಮ ಶಿಕ್ಷಣ ಸಮಿತಿಯೇ' ಭಾಗಿಯಾಗಿರುವುದರ ಕುರಿತು 27 ಸದಸ್ಯರು ಅಭಿಪ್ರಾಯಿಸಿದ್ದಾರೆ. 'ಗ್ರಾಮದ ಯುವಕರು' ಶಾಲಾ ಅಭಿವೃದ್ಧಿ ಪರ ಯೋಚಿಸುವ ಕುರಿತು 9 ಸದಸ್ಯರು ಸ್ಪಂದಿಸಿದ್ದರೆ, 'ಗ್ರಾಮ ಪಂಚಾಯತಿ' ಭಾಗಿತ್ವದ ಬಗ್ಗೆ 6 ಸದಸ್ಯರು ಒತ್ತು ನೀಡಿದ್ದಾರೆ. 'ಮಹಿಳಾ ಮಂಡಳಿಗಳ' ಕುರಿತು ಇಬ್ಬರು ಸದಸ್ಯರು, ಶಿಕ್ಷಣ ಇಲಾಖೆ ಕುರಿತು ಮೂರು ಸದಸ್ಯರು ಅಭಿಮತ ವ್ಯಕ್ತಪಡಿಸಿದ್ದಾರೆ. ಒಟ್ಟಾರೆ ಗಮನಿಸಿದಾಗ 'ಗ್ರಾಮ ಶಿಕ್ಷಣ ಸಮಿತಿ' ಶೈಕ್ಷಣಿಕ ಅಭಿವೃದ್ಧಿಗಾಗಿ ತೀವ್ರ ಸ್ಪಂದನೆ ನೀಡುತ್ತದೆ ಎಂದು ತಿಳಿದು ಬರುತ್ತದೆ.

4.3.7. ಕೋಷ್ಟಕ - 19: ಗ್ರಾಮ ಪಂಚಾಯತಿ ಮತ್ತು ಶಿಕ್ಷಣದ ಪ್ರಗತಿ.

25	ಚಿತ್ತಪ್ಪ	ಬದಪ್ಪ	ಗಂಡು	11	5ನೇ	ಕೂಲಿ ಕೆಲಸ	ಓದು/ ಬರಹ/ ಲೆಕ್ಕ/	
26	ಮೂರ್ತೆಪ್ಪ	ಕವಳಪ್ಪ	ಗಂಡು	10	5ನೇ	ಹೊಲದ ಕೆಲಸ	ಓದು/ ಬರಹ/ ಲೆಕ್ಕ/	
27	ಕವಳಪ್ಪ	ಕವಳಪ್ಪ	ಗಂಡು	11	5ನೇ	ಕೂಲಿ ಕೆಲಸ	ಓದು/ ಬರಹ/ ಲೆಕ್ಕ/	
28	ಈರಣ್ಣ	ಚಿತ್ತಪ್ಪ	ಗಂಡು	12	5ನೇ	ಹೊಲದ ಕೆಲಸ	ಓದು/ ಬರಹ/ ಲೆಕ್ಕ	
29	ಗೂಳಮ್ಮ	ಚಿತ್ತಪ್ಪ	ಹೆಣ್ಣು	11	5ನೇ	ಹೊಲದ ಕೆಲಸ	ಓದು/ ಬರಹ/ ಲೆಕ್ಕ/	
30	ಚಿತ್ತಪ್ಪ	ಚತ್ತಪ್ಪ	ಗಂಡು	12	5ನೇ	ಕೂಲಿ ಕೆಲಸ	ಓದು/ ಬರಹ/ ಲೆಕ್ಕ/	
31	ದೊಡ್ಡಮ್ಮ	ಚೀಟಿ ಚಿತ್ತಪ್ಪ	ಹೆಣ್ಣು	11	5ನೇ	ದನ ಕಾಯುವುದು	ಓದು/ ಬರಹ/ ಲೆಕ್ಕ/	
32	ರೇಣುಕಮ್ಮ	ದೊಡ್ಡ ಮಲಿಯಪ್ಪ	ಹೆಣ್ಣು	11	5ನೇ	ದನ ಕಾಯುವುದು	ಓದು/ ಬರಹ/ ಲೆಕ್ಕ/	
33	ತಿಪ್ಪಮ್ಮ	ತಿಪ್ಪಯ್ಯ	ಹೆಣ್ಣು	10	5ನೇ	ಬಡತನ	ಓದು/ ಬರಹ/ ಲೆಕ್ಕ/	
34	ಪರುಶುರಾಮ	ಓಬಯ್ಯ	ಗಂಡು	11	5ನೇ	ಕೂಲಿ ಕೆಲಸ	ಓದು/ ಬರಹ/ ಲೆಕ್ಕ/	
35	ಚಿತ್ತಪ್ಪ	ಕವಳಪ್ಪ	ಗಂಡು	11	6ನೇ	ಹೊಲದ ಕೆಲಸ	ಓದು/ ಬರಹ/ ಲೆಕ್ಕ/	

* ಖುಷಿ :- ಖುಷಿಯೋ ಖುಷಿ..

ಕೋಷ್ಟಕ - 39: ಪರ್ಯಾಯ ಶಾಲೆಯ (ಅನೌಪಚಾರಿಕ ಶಿಕ್ಷಣ ಕೇಂದ್ರ) ಮಕ್ಕಳ ಮಾಹಿತಿ (ನಂದಿಬಂಡಿ)

ಕ್ರ. ಸಂ	ಅನೌಪಚಾರಿಕ ಕೇಂದ್ರದಲ್ಲಿನ ಮಗುವಿನ ಹೆಸರು	ತಂದೆ/ ಪೋಷಕರ ಹೆಸರು	ಲಿಂಗ	ವಯಸ್ಸು	ಶಾಲೆ ಬಿಟ್ಟಿದ್ದರೆ ಯಾವ ತರಗತಿಯಲ್ಲಿ	ವಿವರ		ಷರಾ
						ದಾಖಲಾಗಿದ್ದಲ್ಲಿ ಕಾರಣ/ ಶಾಲೆ ಬಿಟ್ಟಿರಲು ಕಾರಣ	ಪ್ರಸ್ತುತ ಶೈಕ್ಷಣಿಕ ಪ್ರಗತಿ ಅಂದರೆ ಸಾಮರ್ಥ್ಯ ಗಳಿಕೆಯ ಮಟ್ಟ	
1	ಭರ್ಮಪ್ಪ	ಕುರುಬರ ಚೆನ್ನಪ್ಪ	ಗಂಡು	11	4ನೇ ತರಗತಿ	ಕುರಿಕಾಯಲು	ಓದು/ ಬರಹ/ ಪ.ವಿ.*	
2	ಸಿದ್ಧಪ್ಪ	ಕುರುಬರ ಸೀನಪ್ಪ	ಗಂಡು	10	4ನೇ ತರಗತಿ	ಬಡನತ - ಕೂಲಿ	ಓದು/ ಬರಹ/ ಪ.ವಿ.	
3	ನಾಗರಾಜ	ಹರಿಜನ ನಾಗವ್ವ	ಗಂಡು	12	6ನೇ ತರಗತಿ	ಮನೆಗೆಲಸ	ಓದು/ ಬರಹ/ ಪ.ವಿ.	
4	ನಾಗರಾಜ	ಹರಿಜನ ಮಾಯಪ್ಪ	ಗಂಡು	14	2ನೇ ತರಗತಿ	ಕೂಲಿ	ಅಕ್ಷರ ಕಲಿಕೆ/ ಓದು	
5	ಬಸವರಾಜ	ಹರಿಜನ ನೀಲಪ್ಪ	ಗಂಡು	9	2ನೇ ತರಗತಿ	ಕುರಿ ಕಾಯಲು	ಅಕ್ಷರ ಕಲಿಕೆ/ ಓದು	
6	ತಿಮ್ಮಯ್ಯ	ವಡ್ಡರ ಹನುಮಕ್ಕ	ಗಂಡು	13	4ನೇ ತರಗತಿ	ಕೂಲಿ ಕೆಲಸಕ್ಕೆ	ಓದು/ ಬರಹ/ ಪ.ವಿ.	
7	ಮಹೇಶ	ವಡ್ಡರ ಹನುಮಕ್ಕ	ಗಂಡು	12	3ನೇ ತರಗತಿ	ಕೂಲಿ ಕೆಲಸ	ಓದು/ ಬರಹ	
8	ಸುರೇಶ	ಈಡಿಗರ ತಮ್ಮಣ್ಣ	ಗಂಡು	11	-	ಮನೆ ಕೆಲಸ	ಋಷಿಯೋ- ಋಷಿ-೧	
9.	ಮಹೇಶ್	ತಳವಾರ ಹನುಮಪ್ಪ	ಗಂಡು	12	-	ವ್ಯವಸಾಯ	ಋಷಿಯೋ- ಋಷಿ-೧	
10.	ಮಹೇಶ್	ಸಿ.ಮೈಲಪ್ಪ	ಗಂಡು	13	-	ಮನೆಕೆಲಸ	ಋಷಿಯೋ- ಋಷಿ-೧	
11.	ಮಹೇಶ್	ವಡ್ಡರ ತಿಮ್ಮಪ್ಪ	ಗಂಡು	12	-	ಬಡತನ	ಋಷಿಯೋ- ಋಷಿ-೧	
12.	ರಾಮಣ್ಣ	ತಾರಳ್ಳಿ ಹನುಮಂತಪ್ಪ	ಗಂಡು	08	-	ಮಕ್ಕಳನ್ನು ನೋಡಿಕೊಳ್ಳಲು	ಋಷಿಯೋ- ಋಷಿ-೧	
13.	ಮಹಾದೇವ	ಹರಿಜನ ಅನ್ನಪೂರ್ಣಮ್ಮ	ಗಂಡು	09	-	ಹೊಲ ಕಾಯಲು	ಋಷಿಯೋ- ಋಷಿ-೧	
14	ಮಾರೆಣ್ಣ	ಉಪ್ಪಾರ ಶೇಖರಪ್ಪ	ಗಂಡು	06	-	ಮೂಢ ನಂಬಿಕೆ	ಋಷಿಯೋ- ಋಷಿ-೧	
15	ಹುಲುಗಪ್ಪ	ಹರಿಜನ ದ್ಯಾಮಪ್ಪ	ಗಂಡು	10	-	ಬಡತನ	ಋಷಿಯೋ- ಋಷಿ-೧	
16	ಮಹೇಶ	ಹರಿಜನ ಮಾಯಪ್ಪ	ಗಂಡು	08	-	ಮನೆಗೆಲಸ	ಋಷಿಯೋ- ಋಷಿ-೧	
17	ರಾಮು	ಹರಿಜನ ಗಂಗವ್ವ	ಗಂಡು	12	-	ಕೂಲಿ	ಋಷಿಯೋ- ಋಷಿ-೧	
18	ಹನುಮಂತ	ಹರಿಜನ ಮಾಯವ್ವ	ಗಂಡು	08	-	ಮನೆಗೆಲಸ	ಋಷಿಯೋ- ಋಷಿ-೧	
19	ಪಂಪಾಪತಿ	ಉಪ್ಪಾರ ಹನುಮಂತಪ್ಪ	ಗಂಡು	08	-	ಆಸಕ್ತಿ ಇಲ್ಲ	ಋಷಿಯೋ- ಋಷಿ-೧	
20	ಹುಲುಗಪ್ಪ	ಉಪ್ಪಾರ ಹುಲಿಗೆಪ್ಪ	ಗಂಡು	06	-	ಬಡತನ	ಋಷಿಯೋ- ಋಷಿ-೧	
21	ಮಹಾಬುನ್ನಿ	ಹಸನ್‌ಸಾಬ್	ಹೆಣ್ಣು	12	2ನೇ ತರಗತಿ	ಬಡತನ	ಓದು/ ಬರಹ	
22	ಗಾಳೆಮ್ಮ	ವಡ್ಡರ ಪಕೀರಪ್ಪ	ಹೆಣ್ಣು	13	3ನೇ ತರಗತಿ	ಕೂಲಿ	ಓದು/ ಬರಹ	
23	ಜ್ಯೋತಿ	ವಡ್ಡರ ಪಕೀರಪ್ಪ	ಹೆಣ್ಣು	11	3ನೇ ತರಗತಿ	ಕೂಲಿ	ಓದು/ ಬರಹ	

*ಪ.ವಿ. :- ಪಠ್ಯ ವಿಷಯ

ಕೋಷ್ಟಕ - 40 : ಪರ್ಯಾಯ ಶಾಲೆಯ (ಅನೌಪಚಾರಿಕ ಶಿಕ್ಷಣ ಕೇಂದ್ರ) ಮಕ್ಕಳ ಮಾಹಿತಿ - ದೇವಲಾಪುರ.

ಕ್ರ. ಸಂ	ಅನೌಪಚಾರಿಕ ಕೇಂದ್ರದಲ್ಲಿನ ಮಗುವಿನ ಹೆಸರು	ತಂದೆ/ ಪೋಷಕರ ಹೆಸರು	ಲಿಂಗ	ವಯಸ್ಸು	ಶಾಲೆ ಬಿಟ್ಟಿದ್ದರೆ ಯಾವ ತರಗತಿಯಲ್ಲಿ	ವಿವರ		ಷರಾ
						ದಾಖಲಾಗದಿದ್ದಲ್ಲಿ ಕಾರಣ/ ಶಾಲೆ ಬಿಟ್ಟಿರಲು ಕಾರಣ	ಪ್ರಸ್ತುತ ಶೈಕ್ಷಣಿಕ ಪ್ರಗತಿ ಅಂದರೆ ಸಾಮರ್ಥ್ಯ ಗಳಿಕೆಯ ಮಟ್ಟ	
1	ಕೆ.ಹುಲುಗಪ್ಪ	ಕೆ. ಶಿವಪ್ಪ	ಗಂಡು	11	2ನೇ ತರಗತಿ	ಕೂಲಿ	ಓದು/ ಬರಹ/ ಖುಷಿ	
2	ಯು. ಮಹೇಶ	ಯು. ದುರುಗಪ್ಪ	ಗಂಡು	6	1ನೇ ತರಗತಿ	ಮನೆಗೆಲಸ	ಓದು/ ಬರಹ	
3	ಕೆ. ಭೀಮ	ಕೆ. ಕನಕಪ್ಪ	ಗಂಡು	12	2ನೇ ತರಗತಿ	ಹೊಲದ ಕೆಲಸ	ಓದು/ ಬರಹ/ ಖುಷಿ	
4	ಕೆ. ಮಲ್ಲೇಶಪ್ಪ	ಕೆ. ಹಾಲಪ್ಪ	ಗಂಡು	10	2ನೇ ತರಗತಿ	ಕೂಲಿ ಕೆಲಸ	ಓದು/ ಬರಹ/ ಖುಷಿ	
5	ಯು.ಹುಲುಗಪ್ಪ	ಯು. ಸೋಮಪ್ಪ	ಗಂಡು	8	1ನೇ ತರಗತಿ	ಮನೆಗೆಲಸ	ಓದು/ ಬರಹ	
6	ಪಿ. ಶಿವಪ್ಪ	ಪಿ. ದುರುಗಪ್ಪ	ಗಂಡು	13	2ನೇ ತರಗತಿ	ಹೊಲದ ಕೆಲಸ	ಓದು/ ಬರಹ/ ಖುಷಿ	
7	ಹೆಚ್. ಗೋಣಿಬಸಪ್ಪ	ಹೆಚ್. ದುರುಗಪ್ಪ	ಗಂಡು	11	2ನೇ ತರಗತಿ	ದನ ಮೇಯಿಸಲು	ಓದು/ ಬರಹ/ ಖುಷಿ	
8	ಸೋಮೇಶ	ಹೆಚ್. ದುರುಗಪ್ಪ	ಗಂಡು	07	1ನೇ ತರಗತಿ	ಮನೆಗೆಲಸ	ಓದು/ ಬರಹ	
9	ಹೆಚ್. ದುರುಗಪ್ಪ	ಹೆಚ್.ದುರುಗಪ್ಪ	ಗಂಡು	10	-	ಹೊಲದ ಕೆಲಸ	ಖುಷಿಯೋ ಖುಷಿ	
10	ಪಿ. ನಾಗರಾಜ	ಪಿ. ತಿಪ್ಪಣ್ಣ	ಗಂಡು	12	5ನೇ ತರಗತಿ	ಹೊಲದ ಕೆಲಸ	ಓದು/ ಬರಹ/ ಲೆಕ್ಕ/ ಸಾಮಾನ್ಯ ಜ್ಞಾನ	
11	ಏ. ಹುಲುಗಪ್ಪ	ಏ. ದುರುಗಪ್ಪ	ಗಂಡು	11	-	ದನ ಮೇಯಿಸಲು	ಖುಷಿಯೋ ಖುಷಿ-೧	
12	ಹೆಚ್. ಹನುಮಂತಪ್ಪ	ಹೆಚ್. ಪಕೀರಪ್ಪ	ಗಂಡು	13	1ನೇ ತರಗತಿ	ಹೊಲದ ಕೆಲಸ	ಓದು/ ಬರಹ	
13	ಯಮನೂರ	ಹೆಚ್. ಹುಚ್ಚಮ್ಮ	ಗಂಡು	6	1ನೇ ತರಗತಿ	ಮನೆಗೆಲಸ	ಓದು/ ಬರಹ	
14	ಎನ್. ದುರುಗಜ್ಜ	ಎನ್. ಪಕೀರ್ಪ	ಗಂಡು	6	=-	ಮನೆಗೆಲಸ	ಖುಷಿಯೋ ಖುಷಿ-೧	
15	ಕೆ. ದುರುಗಪ್ಪ	ಕೆ. ಹೇಮಗಿರೆಪ್ಪ	ಗಂಡು	10	1ನೇ ತರಗತಿ	ಹೊಲದ ಕೆಲಸ	ಓದು/ ಬರಹ	
16	ಹೆಚ್. ಪರಸಪ್ಪ	ಹೆಚ್. ದುರುಗಪ್ಪ	ಗಂಡು	9	2ನೇ ತರಗತಿ	ಹೊಸಲದ ಕೆಲಸ	ಓದು/ ಬರಹ/ ಖುಷಿ	
17	ಸಣ್ಣ ಹುಲಗಪ್ಪ	ಹೆಚ್. ಮರಿಯಪ್ಪ	ಗಂಡು	7	1ನೇ ತರಗತಿ	ಮನೆಗೆಲಸ	ಓದು/ ಬರಹ	
18	ಮಂಜಪ್ಪ	ಹೆಚ್. ಪರಸಪ್ಪ	ಗಂಡು	11	4ನೇ ತರಗತಿ	ಹೊಲದ ಕೆಲಸ	ಓದು/ ಬರಹ/ ಲೆಕ್ಕ/ ಸಾಮಾನ್ಯ ಜ್ಞಾನ	
19	ಎನ್. ಗಂಗಮ್ಮ	ಬಟ್ಟಿ ಹನುಮಂತಪ್ಪ	ಹೆಣ್ಣು	10	3ನೇ ತರಗತಿ	ಮಕ್ಕಳನ್ನು ಆಡಿಸಲು	ಓದು/ ಬರಹ/ ಲೆಕ್ಕ	
20	ಟಿ. ಉಮ್ಮಕ್ಕ	ಟಿ. ಹನುಮವ್ವ	ಹೆಣ್ಣು	12	3ನೇ ತರಗತಿ	ಕೂಲಿ ಕೆಲಸ	ಓದು/ ಬರಹ/ ಲೆಕ್ಕ	
21	ಯು. ರೂಪ	ಯು. ಹುಲುಗಪ್ಪ	ಹೆಣ್ಣು	13	4ನೇ ತರಗತಿ	ಹೊಲದ ಕೆಲಸ	ಓದು/ ಬರಹ/ ಲೆಕ್ಕ/ ಸಾಮಾನ್ಯ ಜ್ಞಾನ	
22	ಏ.ಕೆ. ಹುಲಿಗೆಮ್ಮ	ಏ.ಕೆ. ಭರಪ್ಪ	ಹೆಣ್ಣು	8	2ನೇ ತರಗತಿ	ಮನೆ ಗೆಲಸ	ಓದು/ ಬರಹ/ ಖುಷಿ	
23	ಹೆಚ್. ಮಂಜವ್ವ	ಹೆಚ್. ಭರಮವ್ವ	ಹೆಣ್ಣು	13	4ನೇ ತರಗತಿ	ಕೂಲಿ ಕೆಲಸ	ಓದು/ ಬರಹ/ ಸಾಮಾನ್ಯ ಜ್ಞಾನ	

ಪರ್ಯಾಯ ಶಾಲೆಗೆ ದಾಖಲಾಗಿರುವ ಮಕ್ಕಳ ಕ್ರೋಢೀಕರಣ ಪಟ್ಟಿ :

ಗ್ರಾಮದ ಹೆಸರು	ಗಂಡು	ಹೆಣ್ಣು	ಒಟ್ಟು
ಗಜಾಪುರ	19	07	26
ಜಂಗಮಸೇನಹಳ್ಳಿ	11	23	34
ಮರಬನಾಹಳ್ಳಿ	14	21	35
ನಂದಿಬಂಡಿ	23	16	39
ದೇವಲಾಪುರ	18	05	23
ಒಟ್ಟು :-	85	72	157

ಆಧಾರ:- ಆಯಾ ಶಾಲಾ ಮುಖ್ಯಗುರುಗಳಿಂದ ಪಡೆದ ಮಾಹಿಯನ್ನು ಆಧರಿಸಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಿಂದ ಪಡೆದ ಮಾಹಿತಿ ಆಧಾರ.

ಕೂಡ್ಲಿಗಿ ತಾಲೂಕಿನಲ್ಲಿ 1998-99ರಲ್ಲಿ ಈ ಪರ್ಯಾಯ ಶಾಲೆಗಳನ್ನು ಜಾರಿಗೊಳಿಸಲಾಗಿದ್ದು, 2000-01ರ ವರೆಗೆ ನಡೆದಿದೆ. ಅದೇರೀತಿ ಹೊಸಪೇಟೆ ತಾಲೂಕಿನಲ್ಲಿ ಎರಡು ಪರ್ಯಾಯ ಶಾಲೆಗಳು 1999-2000ರಲ್ಲಿ ಪ್ರಾರಂಭವಾಗಿ 2000-01 ರವರೆಗೆ ಮುಂದುವರೆದಿವೆ.

ಕೇಂದ್ರದಲ್ಲಿ ಮಕ್ಕಳು ಸುಲಭವಾಗಿ ಕಲಿಯಲು ಖುಷಿಯೋ ಖುಷಿ ,3 ಮತ್ತು 4ನೇ ತರಗತಿ ಮಕ್ಕಳಿಗೆ ತರಗತಿ ಪಠ್ಯ ವಿಷಯವನ್ನು ಕಲಿಸಲಾಗಿದೆ. ದೀರ್ಘಕಾಲ ಗೈರುಹಾಜರಾದ ಮಕ್ಕಳು ಕೂಡಲೇ ಕಲಿಯಲು ಸಾಧ್ಯವಾಗದಿರುವುದು ಕಂಡುಬಂದಿದೆ. ಮಕ್ಕಳು ಆಯಾ ವಯಸ್ಸು ಮತ್ತು ಆಯಾ ತರಗತಿಗನು ಗುಣವಾಗಿ ಎಲ್ಲಾ ಸಾಮರ್ಥ್ಯಗಳನ್ನು ಕಲಿಯಲು ಸಾಧ್ಯವಾಗಿಲ್ಲದಿರುವುದು ಕಂಡುಬಂದಿದೆ. ಪರ್ಯಾಯ ಶಾಲೆಯ ಮೂಲಕ ಮಕ್ಕಳು ಈಗಾಗಲೇ ಶಾಲಾ ಮುಖ್ಯವಾಹಿನಿಗೆ ಸೇರ್ಪಡೆಯಾಗಿದ್ದು, ಅವರ ನಿರಂತರತೆಗೆ ಸಮುದಾಯ, ಶಿಕ್ಷಕರು ಹಾಗೂ ಪಾಲಕ-ಪೋಷಕರು ಸತತ ಬೆಂಬಲದ ಅಗತ್ಯ ಕಂಡುಬರುತ್ತದೆ.

4ನೇ ಅಧ್ಯಾಯದಲ್ಲಿ ಮುಖ್ಯವಾಗಿ ಶಿಕ್ಷಣದ ಅಭಿವೃದ್ಧಿಗಾಗಿ ವಿವಿಧ ಕುಟುಂಭದವರಿಂದ ಹಿಡಿದು ಪಾಲಕ ಪೋಷಕರು, ಗ್ರಾಮ ಶಿಕ್ಷಣ ಸಮಿತಿ ಸದಸ್ಯರು, ಶಿಕ್ಷಕರು, ಮುಖ್ಯ ಗುರುಗಳು ಎಲ್ಲರೂ ನಿರಂತರವಾಗಿ ಬೆಂಬಲ ನೀಡುವುದು ಮುಖ್ಯವೆನಿಸುತ್ತದೆ. ಸೂಕ್ಷ್ಮ ಯೋಜನೆ ಕಾರ್ಯಕ್ರಮ ಅದರ ಮುಂದುವರಿಕೆಯ ಅಗತ್ಯತೆ, ಶಾಲೆ ಬಿಟ್ಟ ಮಕ್ಕಳು ಶಾಲೆಗೆ ನಿರಂತರವಾಗಿ ಹಾಜರಾಗಲು ಸಮುದಾಯ ಮತ್ತು ಗ್ರಾಮ ಶಿಕ್ಷಣ ಸಮಿತಿಗಳು ಕಾಳಜಿ ವಹಿಸುವ ಅಗತ್ಯವಿದೆ.

ಅಧ್ಯಾಯ - ಐದು

ಸಮಾರೋಪ

''ಪ್ರಸಿದ್ಧ ದಾರ್ಶನಿಕ 'ನಿಯಾಶೆ'ಯವರು 20-21ನೇ ಶತಮಾನದಲ್ಲಿ ಮನುಕುಲಕ್ಕೆ ಶಿಕ್ಷಣವೇ ಒಂದು ಮಹಾ ಸವಾಲಾಗುತ್ತದೆ'' ಎಂದು ಭವಿಷ್ಯ ನುಡಿದಿದ್ದರು. ಭಾರತದ ಶೈಕ್ಷಣಿಕ ಪ್ರಗತಿಯನ್ನು ಗಮನಿಸಿದರೆ, ಅವರ ಭವಿಷ್ಯ ನುಡಿ ನಿಜವಾಗಿರುವುದರಲ್ಲಿ ಸಂದೇಹವಿಲ್ಲ. 21ನೇ ಶತಮಾನಕ್ಕೆ ಪ್ರತಿಶತ 45 ಮಂದಿ ಅನಕ್ಷರಸ್ಥರನ್ನು ಹೊತ್ತು ಭಾರತ ಪಾದಾರ್ಪಣೆ ಮಾಡಿದೆ. ವಿಶ್ವದ ಅತೀ ಹೆಚ್ಚು ಅನಕ್ಷರಸ್ಥರನ್ನು ಹೊಂದಿರುವ ದೇಶವೆಂಬ ಅಪಕೀರ್ತಿಯನ್ನು ಹೊಂದಿದೆ. ವಿಶ್ವದ ಪ್ರತಿ 5 ಅನಕ್ಷರಸ್ಥರಲ್ಲಿ 3 ಜನ ಭಾರತೀಯ ರಾಗಿದ್ದಾರೆ.

ಈ ಪರಿಸ್ಥಿತಿಗೆ ಕಾರಣವೇನು ಎನ್ನುವುದೇ ಚಿಂತಕರ , ಶಿಕ್ಷಣ ತಜ್ಞರ, ಆಡಳಿತಗಾರರನ್ನು ಕೆಣಕುತ್ತಿರುವ ಪ್ರಶ್ನೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಅಧ್ಯಯನವು ರೂಪುಗೊಂಡು ಸಂಶೋಧನೆಯನ್ನು ನಡೆಸಿದೆ. ಹಿಂದಿನ ಅಧ್ಯಾಯಗಳಲ್ಲಿ ಮೂಡಿ ಬಂದ ಸಾರಾಂಶವನ್ನು ಕ್ರೋಢೀಕರಿಸಿ, ಶಿಕ್ಷಣದ ಯಶಸ್ಸಿಗೆ ಅವಶ್ಯಕವಾದ ಮೂಲಭೂತ ಪ್ರಶ್ನೆಗಳನ್ನು ಅಂತ್ಯದಲ್ಲಿ ಎತ್ತಲಾಗಿದೆ.

ಎಲ್ಲಿಯವರೆಗೆ ಜನತೆ ಜಾಗೃತಿಗೊಂಡು ತಮ್ಮ ಅಭಿವೃದ್ಧಿಗೆ ತಾವೇ ಪ್ರಯತ್ನಿಸುವುದಿಲ್ಲವೋ, ಅಲ್ಲಿಯವರೆಗೂ ಜನತೆಗೆ ಸಮಸ್ಯೆಗಳಿಂದ ಮುಕ್ತಿ ಇರುವುದಿಲ್ಲ. ಪರಾವಲಂಬನೆ ಪ್ರತಿಯೊಬ್ಬನ ದುರಂತಕ್ಕೆ ಕಾರಣವಾಗುತ್ತದೆ. 'ಕಷ್ಟಪಟ್ಟು ತನ್ನ ಅದೃಷ್ಟವನ್ನು ರೂಪಿಸಿಕೋ' ಎಂಬುದು ಗೀತೆಯ ಸಾರ. ಈ ಹಿನ್ನೆಲೆಯಲ್ಲಿ ಪರಿಭಾವಿಸಿದಾಗ ಭಾರತದ ಶಿಕ್ಷಣ ವ್ಯವಸ್ಥೆಯನ್ನು, ಅದರಲ್ಲೂ ಶಾಲಾ ಮಟ್ಟದ ಶಿಕ್ಷಣ ವ್ಯವಸ್ಥೆಯನ್ನು ಕಾಡುತ್ತಿರುವ ಸಮಸ್ಯೆಗಳಿಗೆ ಕಾರಣಗಳು ತಾವೇ ಅನಾವರಣಗೊಳ್ಳುತ್ತವೆ. ಕಳೆದ ಐವತ್ತೈದು ವರ್ಷಗಳಿಂದಲೂ ಭಾರತದ ಜನತೆಗೆ ಸರ್ಕಾರ ನೀಡಿದ ಆಶ್ವಾಸನೆಯೋ ಅಥವಾ ಜನತೆಯ ಬೇಜವಾಬ್ದಾರಿ ಮನೋಭಾವವೋ ಅಥವಾ ನೂರಾರು ವರ್ಷಗಳ ಪರಾಳ್ವಿಕೆಗೆ ಒಳಗಾದ ಪರಾಧೀನ ಮನೋಭಾವವೋ , ತಮ್ಮ ಪ್ರಗತಿಯ ರೂವಾರಿಗಳು ತಾವೇ ಆಗಬೇಕೆಂಬ ಮನೋಭಾವನೆ ಇನ್ನೂ ಮೂಡದೇ ಇರುವುದು ಶೋಚನೀಯ ಸಂಗತಿ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನೆಯು ರೂಪುಗೊಂಡು ತನ್ನ ಅಧ್ಯಯನದಿಂದ ಕಂಡುಕೊಂಡ ಅಂಶಗಳನ್ನು ಕಳೆದ ಪುಟಗಳಲ್ಲಿ ವಿಸ್ತಾರವಾಗಿ ಚರ್ಚಿಸಿದೆ.

ಆರಂಭಿಕ ಅಧ್ಯಾಯವು 'ಸೂಕ್ಷ್ಮ ಯೋಜನೆ'ಯ ಅರ್ಥ, ಸ್ವರೂಪ, ವ್ಯಾಪ್ತಿ, ಕಾರ್ಯವಿಧಾನಗಳ ಸೂಕ್ಷ್ಮ ಪರಿಚಯ ಮಾಡಿ, ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ ಅವಲೋಕನದ ಪ್ರಯತ್ನವನ್ನು ಮಾಡಿದೆ. ಮೂಡಿಬಂದ ಚಿತ್ರಣವೆಂದರೆ; ಶಿಕ್ಷಣದ ಬಗ್ಗೆ ವಿಫುಲವಾದ ಸಾಹಿತ್ಯ ಲಭ್ಯವಿದ್ದರೂ ಸಹ 'ಸೂಕ್ಷ್ಮ ಯೋಜನೆ'ಗೆ ಸಂಬಂಧಿಸಿದಂತೆ ಸಾಹಿತ್ಯ ಸಂಶೋಧನೆಗಳ ಕೊರತೆಯಿದೆ ಎಂಬ ಅಂಶ ತಿಳಿದು ಬರುತ್ತದೆ. ಸೂಕ್ಷ್ಮ ಯೋಜನೆಯ ಪರಿಕಲ್ಪನೆ ನಾಡಿನ ಜನತೆಗೆ ಪರಿಚಯವಾದುದು ಇತ್ತೀಚಿಗೆ. ಹೀಗಾಗಿ ಶಿಕ್ಷಣ ತಜ್ಞರು, ಸಂಶೋಧಕರು ಇದರ ಬಗ್ಗೆ ಚಿಂತಿಸಲು, ಸಂಶೋಧಿಸಲು ಪ್ರಯತ್ನಿಸಬೇಕಾಗಿದೆ.

ಮೊದಲನೆಯ ಅಧ್ಯಾಯವು ಈ ಸಂಶೋಧನೆಯ ಗುರಿ, ವ್ಯಾಪ್ತಿ, ಮಾಹಿತಿ ಸಂಗ್ರಹಣೆಗೆ ಅನುಸರಿಸಿದ ಮಾರ್ಗ, ಬಳಸಿದ ಸಾಧನ ಸಾಮಗ್ರಿಗಳು ವಿಶ್ಲೇಷಣೆ ಅನುಸರಿಸಿದ ತಾರ್ಕಿಕ ಚೌಕಟ್ಟಿನ ಬಗ್ಗೆ ಪರಿಚಯ ಮಾಡಿಕೊಡುತ್ತದೆ.

ಎರಡನೆಯ ಅಧ್ಯಾಯವು ಭಾರತದಲ್ಲಿ ಶಿಕ್ಷಣವು ನಡೆದು ಬಂದ ಐತಿಹಾಸಿಕ ಪಥದ ಸಿಂಹಾವಲೋಕನದ ಪ್ರಯತ್ನ ಮಾಡುತ್ತದೆ. ಭಾರತದ ಶಿಕ್ಷಣದಲ್ಲಿ ಬ್ರಿಟೀಷರು ವಹಿಸಿದ ಪಾತ್ರ, ರಚಿಸಿದ ಆಯೋಗಗಳು, ಗಾಂಧೀಜಿಯವರ ಪ್ರಯತ್ನಗಳ ಸೂಕ್ಷ್ಮ ಪರಿಶೀಲನೆ ಮಾಡಿ, ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗೆಗಿನ ವಿವಿಧ ವಿವಿಧ ಚಿಂತನೆಗಳ ಪರಾಮರ್ಶನೆ ಮಾಡುತ್ತಲೇ, ದೇಶದ ಜನತೆಗೆ ಶಿಕ್ಷಣ ಒದಗಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಾಡಿದ ಪ್ರಯತ್ನಗಳ ಕಿರು ಪರಿಚಯ ಮಾಡಿಕೊಳ್ಳಲು, ಭಾರತದ ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣದ ಬಗೆಗೆ ಮಾಡಿದ ಪ್ರಯತ್ನಗಳನ್ನು ಅರ್ಥ ಮಾಡಿಕೊಳ್ಳಲು ಈ ಅಧ್ಯಾಯ ಪ್ರಯತ್ನಿಸಿದೆ. ತದನಂತರ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಆದಿಯಾಗಿ ವಿವಿಧ ಶಿಕ್ಷಣದ ಪ್ರಗತಿಯ ಕಿರು ಸಮೀಕ್ಷೆ ನಡೆಸಿ, ಈ ಅಧ್ಯಯನ ಕ್ಷೇತ್ರವಾದ ಬಳ್ಳಾರಿ ಜಿಲ್ಲೆಯ ಶೈಕ್ಷಣಿಕ ಪರಿಸ್ಥಿತಿಯ ಪಕ್ಷಿ ನೋಟವನ್ನು ನೋಡಲು ಪ್ರಯತ್ನಿಸಿದೆ.

ಈ ಅಧ್ಯಾಯದಿಂದ ಮೂಡಿ ಬಂದ ಚಿತ್ರಣವೆಂದರೆ:-

ಐರೋಪ್ಯರ ಆಗಮನದಿಂದ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ನಂತರ ಬ್ರಿಟೀಷರು ಶಿಕ್ಷಣ ಪ್ರಗತಿಗಾಗಿ ನಡೆಸಿದ ಪ್ರಯತ್ನಗಳು ದೇಶದ ಪ್ರಾಥಮಿಕ ಶಿಕ್ಷಣದಲ್ಲಿ ನಿರೀಕ್ಷಿತ ಫಲ ನೀಡಲಿಲ್ಲ. ಅಲ್ಲದೆ, ಆಧುನಿಕ ಶಿಕ್ಷಣಕ್ಕೆ ಬ್ರಿಟೀಷರು ನಾಂದಿ ಹಾಡಿದರೂ ಸಹ ಅಗತ್ಯವಾದ ಪ್ರಯತ್ನವನ್ನು ಮಾಡಲಿಲ್ಲವೆಂದು ತಿಳಿದುಬರುತ್ತದೆ. ಸ್ಥಳೀಯ ಶೈಕ್ಷಣಿಕ ಪ್ರಗತಿಗೆ ಗಮನ ನೀಡದಿರುವುದೂ ಸಹ ಕಂಡು ಬರುತ್ತದೆ. ಸ್ವಾತಂತ್ರ್ಯೋತರ ಅವಧಿಯಲ್ಲಿಯೂ ಸಹ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹೊಸ ಹೊಸ ಯೋಜನೆಗಳನ್ನು ರೂಪಿಸಿದ್ದರೂ ಪ್ರಯತ್ನ ಮಂದಗತಿ ಇದ್ದದ್ದು ಕಂಡು ಬರುತ್ತದೆ. ಆಯೋಗಗಳ ರಚಿಸಿ, ಶಿಕ್ಷಣದ ಕಲ್ಪನೆಯ ಬಗ್ಗೆ, ಶಿಕ್ಷಣದ ಕಲ್ಪನೆ ವಿಧಿ ವಿಧಾನಗಳ ಬಗ್ಗೆ ತರ್ಕಗಳನ್ನುಮಾಡಲು ಕಾಲವ್ಯಯ ವಾಯಿತೇ ಹೊರತು ಶಿಕ್ಷಣ ಪ್ರಗತಿಗೆ ಅವಶ್ಯಕ ಭೂಮಿಕೆಯನ್ನು ನಿರ್ಮಿಸಲು ಪ್ರಯತ್ನಿಸಲಿಲ್ಲ.

ಸ್ವಾತಂತ್ರ್ಯದ ನಂತರ ಯೋಜನೆಗಳಲ್ಲಿ ಶಿಕ್ಷಣಕ್ಕೆ ದ್ವಿತೀಯ ಆಧ್ಯತೆ ನೀಡಿ, ಅನುದಾನ ಒದಗಿಸುವ ಪ್ರಯತ್ನ ನಡೆಯಿತೇ ವಿನಃ ವ್ಯವಸ್ಥೆಯನ್ನು ಸದೃಢಗೊಳಿಸುವ ಬಗೆಗೆ ಕಾಳಜಿ ತೋರಲಿಲ್ಲ. ಕರ್ನಾಟಕ ದಲ್ಲಿಯೂ ಸಹ ಶಿಕ್ಷಣದ ವಿವಿಧ ಪ್ರಕಾರಗಳು ಜನ್ಮ ತಾಳಿ ಚಾಲ್ತಿಯಲ್ಲಿದ್ದರೂ, ಸಾಕ್ಷರತೆಯ ಮಟ್ಟವೇನೂ ಉತ್ತಮಗೊಂಡಿಲ್ಲವೆಂಬುದು ತಿಳಿದುಬರುತ್ತದೆ. ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲೊಂದಾದ ಬಳ್ಳಾರಿಯಲ್ಲಿಯೂ ಸಹ ಸಹಜವಾಗಿ ಅನೇಕ ಐತಿಹಾಸಿಕ, ಆರ್ಥಿಕ , ಸಾಮಾಜಿಕ, ರಾಜಕೀಯ ಕಾರಣ ಗಳಿಂದಾಗಿ, ಶೈಕ್ಷಣಿಕವಾಗಿ ಹಿಂದುಳಿದೆ ಎಂಬುದು ಈ ಅಧ್ಯಾಯದಲ್ಲಿ ತೆಗೆದುಕೊಂಡ ವಿಶ್ಲೇಷಣೆಯು ತಿಳಿಸುತ್ತದೆ.

ಆರನೇ ರಾಷ್ಟ್ರೀಯ ಶಿಕ್ಷಣ ಸಮೀಕ್ಷೆಯ ಪ್ರಕಾರ ದೇಶದಲ್ಲಿ 1995ರವರೆಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ 50ರಷ್ಟು ಶಾಲಾ ಸೌಲಭ್ಯಗಳು ಇರಲಿಲ್ಲವೆಂದು ತಿಳಿಸಿದೆ. 1993-94ರಲ್ಲಿ ಶಾಲೆಯನ್ನು ತೊರೆಯುವ ಮಕ್ಕಳ ಸಂಖ್ಯೆ ಶೇ. 52.80. ಇದರಲ್ಲಿ ಗಂಡು ಮಕ್ಕಳು 49.95 , ಹೆಣ್ಣು ಮಕ್ಕಳು 56.78. ಎಂದು ಕಂಡುಬರುತ್ತದೆ. ಇದು ಶಿಕ್ಷಣದ ಅಭಿವೃದ್ಧಿಗೆ ಅಡೆತಡೆಯಾಗಿರುವುದಲ್ಲದೆ, ಸಂಪೂರ್ಣ ಸಾರ್ವತ್ರೀಕರಣಕ್ಕೆ ಹಿನ್ನೆಡೆಯಾಗಿದೆ ಎಂಬ ಅಂಶ ಕಂಡುಬರುತ್ತದೆ.

ಅನಕ್ಷರತೆ ಜಾಸ್ತಿ ಇರುವ ಕಡೆ ಸಾಮಾಜಿಕವಾಗಿ ಜಾಗೃತರಾಗದ ಜನರಲ್ಲಿ ಗೊಂದಲಗಳು ಸಹಜವಾಗುತ್ತಿವೆ. ಕರ್ನಾಟಕವು ಕಳೆದ ಕೆಲವು ದಶಕಗಳಲ್ಲಿ ಸಾಕ್ಷರತೆ ಕುರಿತಂತೆ ಪ್ರಗತಿ ಸಾಧಿಸಿದ್ದರೂ, ಸಾಧನೆ ಸಾಧಾರಣವಾಗಿದೆ. ಸಾಕ್ಷರತಾ ಪ್ರಮಾಣ 1961ರಲ್ಲಿ ಶೇ. 30ರಷ್ಟು ಇದ್ದದ್ದು, 1991ರಲ್ಲಿ ಶೇ. 56ನ್ನು ತಲುಪಿರುವುದು ಜನಗಣತಿ ಅಂಕಿ-ಅಂಶಗಳಿಂದ ತಿಳಿದುಬರುತ್ತದೆ. ಈ ದರ 1996ರಲ್ಲಿ ಶೇ. 63ನ್ನು ಮೀರಿರುವ ಕುರಿತು ಶಿಕ್ಷಣ ಇಲಾಖೆ ತಿಳಿಸಿದೆ. 2001ರ ಜನಗಣತಿ ಪ್ರಕಾರ ಶೇ. 67.4ರಷ್ಟು ಏರಿಕೆ ಕಂಡರೂ ಪುರುಷರ ಮತ್ತು ಸ್ತ್ರೀಯರ ಶಿಕ್ಷಣ ಅಂತರ ಕಡಿಮೆಯಾಗಿ ಇತರೆ ರಾಜ್ಯಗಳಿಗಿಂತ ಹೆಚ್ಚಾಗಿದೆ. ಪುರುಷರ ಸಾಕ್ಷರತಾ ಪ್ರಮಾಣ 1991ರಲ್ಲಿ ಶೇ. 67.26 ಇದ್ದು, 2001ರಲ್ಲಿ ಶೇ. 76.29, ಅದೇ ರೀತಿ ಮಹಿಳೆಯರಲ್ಲಿ 1991ರಲ್ಲಿ ಶೇ. 44.34 ಇದ್ದು, 2001ರಲ್ಲಿ ಶೇ. 57.45. ಈ ಬೆಳವಣಿಗೆ ಕರ್ನಾಟಕದ ಮಟ್ಟಿಗೆ ಆಶಾಭಾವನೆ ತಾಳ ಬಹುದಾದರೂ ಇನ್ನೂ ಶೇ. 33ರಷ್ಟು ಅನಕ್ಷರಸ್ಥರಿರುವುದು ಕಂಡು ಬಂದಿದೆ. ಇದು ಆರೋಗ್ಯಕರ ಬೆಳವಣಿಗೆ ಎನಿಸುವುದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ 1991ರಲ್ಲಿ ಒಟ್ಟು ಶೇ. 45.89ರಷ್ಟು ಸಾಕ್ಷರತೆ ಇದ್ದದ್ದು, 2001ರಲ್ಲಿ ಶೇ. 58.04 (12.04 ಹೆಚ್ಚಳ) ಪುರುಷರು 1991ರಲ್ಲಿ ಶೇ. 59.11 ಸಾಕ್ಷರರಾದರೆ, 2001ರಲ್ಲಿ ಶೇ. 69.59 (10.48 ಹೆಚ್ಚಳ) ಮಹಿಳೆಯರ ಸಾಕ್ಷರತಾ ಪ್ರಮಾಣ 1991ರಲ್ಲಿ ಶೇ. 32.24 ಇದ್ದದ್ದು, 2001ರಲ್ಲಿ ಶೇ. 46.16 (13.92 ಹೆಚ್ಚಳ) ಕಂಡುಬಂದಿದೆ. ಶಿಕ್ಷಣದಲ್ಲಿಯ ಈ ಅಂತರ ಕಡಿಮೆಯಾಗಬೇಕಾದರೆ, ವಿಕೇಂದ್ರೀಕೃತ ಶಿಕ್ಷಣ ಯೋಜನೆ ಅವಶ್ಯಕ. ಶಿಕ್ಷಣದ ಅಭಿವೃದ್ಧಿಗಾಗಿ **ಸಮುದಾಯ ಭಾಗವಹಿಸುವುದು** ಹೆಚ್ಚಾಗಬೇಕು ಎಂಬ ಅಂಶ ಕಂಡು ಬಂದಿದೆ.

ಮೂರನೆಯ ಅಧ್ಯಾಯವು ಸಮುದಾಯ ಮತ್ತು ಶಿಕ್ಷಣದ ನಡುವಿನ ಅವಿನಾ ಬಾಂಧವ್ಯವನ್ನು ಚರ್ಚಿಸಿ ಶಿಕ್ಷಣದ ಪ್ರಗತಿಯಲ್ಲಿ ಸಮುದಾಯ ಪಾತ್ರದ ಸ್ಥೂಲ ಪರಿಚಯವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಶಿಕ್ಷಣದ ವ್ಯವಸ್ಥೆಯ ವಿಕೇಂದ್ರೀಕರಣದ ಅವಶ್ಯಕತೆಯನ್ನು ವಿಶ್ಲೇಷಿಸಿ ಅದರ ವಿಧಿ-ವಿಧಾನಗಳ ಬಗ್ಗೆ ಸೂಕ್ಷ್ಮ ಪರಿಚಯ ಮಾಡಿಕೊಡುತ್ತದೆ.

ಶಿಕ್ಷಣದ ಅಭಿವೃದ್ಧಿಗೆ ಸಮುದಾಯವು ತನ್ನನ್ನು ತಾನು ತೊಡಗಿಸಿಕೊಳ್ಳಬೇಕು, ಸಮುದಾಯವೇ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿಕೊಳ್ಳಬೇಕು, ಈ ಯೋಜನೆಯ ಮೂಲಕ ಶಿಕ್ಷಣವು ಸಾರ್ವತ್ರೀಕರಣಗೊಳ್ಳುತ್ತದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವೇ ಶಿಕ್ಷಣದ ಅಭಿವೃದ್ಧಿಗೆ ಮೂಲವಾಗುತ್ತದೆ. ಸಮುದಾಯವು ಹೆಚ್ಚು ಹೆಚ್ಚು ಜಾಗೃತಿಗೊಂಡಾಗಲೆಲ್ಲ 'ಶಿಕ್ಷಣ'ದತ್ತ ಒಲವು ಹೆಚ್ಚಾಗುತ್ತದೆ. ಈ ಸಾಧ್ಯತೆ ಸೂಕ್ಷ್ಮಯೋಜನೆಯಂತಹ ಪ್ರಕ್ರಿಯೆಗೆ ಮೂಲವಾಗಿರುತ್ತದೆ. ವಂಚಿತರಾದ ಮಕ್ಕಳನ್ನು ಪರ್ಯಾಯ ಶಾಲೆಗೆ ತರಬಹುದು, ಮತ್ತೆ ಮುಖ್ಯವಾಹಿನಿಯ ಮುಖಾಂತರ ಅವರ ಭವಿಷ್ಯವನ್ನು ಸುಂದರಗೊಳಿಸಬಹುದು. ಕೂಡ್ಲಿಗಿ ಮತ್ತು ಹೊಸಪೇಟೆ ತಾಲೂಕಿನಲ್ಲಿ ತೆರೆಯಲಾಗಿದ್ದ ಪರ್ಯಾಯ ಶಾಲಾ ಕೇಂದ್ರಗಳಲ್ಲಿ 1991 ಮಕ್ಕಳು ಕಲಿತು, 1639 ಮಕ್ಕಳು ಮುಖ್ಯವಾಹಿನಿಗೆ ಪ್ರವೇಶಪಡೆದು ಶಿಕ್ಷಣವನ್ನು ಮುಂದುವರಿಸಿದ್ದಾರೆ. ಇದರಿಂದ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವಾಗಲು ಇದೊಂದು ಪೂರಕ ಪ್ರಕ್ರಿಯೆಯಾಗಿರುತ್ತದೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಸಮುದಾಯವು ಶಿಕ್ಷಣ ಪ್ರಕ್ರಿಯೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಂಡು ಜನವಸತಿ ಪ್ರದೇಶಗಳಲ್ಲಿ ಅವರ ಅಗತ್ಯಕ್ಕೆ ತಕ್ಕಹಾಗೆ ಯೋಜನೆಗಳನ್ನು ಅವರೇ ರೂಪಿಸಿಕೊಂಡು ಯೋಜನಾ ಬದ್ಧವಾಗಿ ಅನುಷ್ಠಾನಗೊಳಿಸಿದರೆ ಶಿಕ್ಷಣವು ಅಭಿವೃದ್ಧಿಗೊಳ್ಳುತ್ತದೆ. ಫಲಿತಾಂಶವೂಕೂಡ ನಿರೀಕ್ಷಿತ ಮಟ್ಟದಲ್ಲಿ ಲಭಿಸುತ್ತದೆ ಎಂಬ ಅಂಶವು ಈ ಅಧ್ಯಾಯದಲ್ಲಿ ಕಂಡುಬರುತ್ತದೆ.

ಮುಂದುವರಿದ ನಾಲ್ಕನೆಯ ಅಧ್ಯಾಯವು ಈ ಸಂಶೋಧನೆಯು ಮಾಡಿದ ಕ್ಷೇತ್ರಾಧ್ಯಯನದಿಂದ ಸಂಗ್ರಹಿಸಿದ ದತ್ತಾಂಶಗಳ ವಿಶ್ಲೇಷಣೆಗೆ ಅರ್ಪಿಸಲಾಗಿದೆ. ಈ ಅಧ್ಯಾಯವು ಕ್ಷೇತ್ರಾಧ್ಯಯನಕ್ಕೆ ಆಯ್ದುಕೊಂಡ ಗ್ರಾಮಗಳ ಸಾಮಾಜಿಕ ಚಿತ್ರಣವನ್ನು ನೀಡುತ್ತದೆ. ಮಾಹಿತಿಯಿಂದ ತಿಳಿದುಬಂದ ಸಂಗತಿಯೆಂದರೆ ಎರಡು ಗ್ರಾಮಗಳನ್ನು ಹೊರತುಪಡಿಸಿ, ಮೂರು ಗ್ರಾಮಗಳಲ್ಲಿ ಪುರುಷರ ಸಂಖ್ಯೆಯೇ ಜಾಸ್ತಿಯಿದೆ. ಅವಿಭಕ್ತ ಹಾಗೂ ವಿಸ್ತೃತ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತಿದ್ದು 'ವಿಭಕ್ತ' ಕುಟುಂಬಗಳೇ ಹೆಚ್ಚಾಗಿ ಕಂಡು ಬಂದಿವೆ. ಜಂಗಮ ಸೋವೆನಹಳ್ಳಿಯಲ್ಲಿ ಪ್ರತಿಶತ 98ರಷ್ಟು, ದೇವಲಾಪುರದಲ್ಲಿ ಶೇ.48ರಷ್ಟು ಮೇಲುವರ್ಗದವರು, ಹಳ್ಳಿಯಲ್ಲಿ ಕಂಡುಬಂದರೆ ಉಳಿದ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರೇ ಅಧಿಕವಾಗಿರುವುದು ಕಂಡುಬರುತ್ತಾರೆ.

ಅಧ್ಯಯನದ ಗ್ರಾಮಗಳ ವೃತ್ತಿಯನ್ನು ವಿಶ್ಲೇಷಿಸಿದಾಗ ಐದು ಗ್ರಾಮಗಳ ಬಹುತೇಕ ಕುಟುಂಬಗಳು ಕೃಷಿಯನ್ನೇ ಮುಖ್ಯ ವೃತ್ತಿಯನ್ನಾಗಿ ಅವಲಂಬಿಸಿವೆ.

ಶೈಕ್ಷಣಿಕವಾಗಿ ನೋಡಿದಾಗ ದತ್ತಾಂಶದ ಐದು ಗ್ರಾಮಗಳನ್ನು ಗಣನೆಗೆ ತೆಗೆದುಕೊಂಡಾಗ ಶೇಕಡ 63ರಷ್ಟು ಗಂಡಸರು, ಶೇಕಡ 59ರಷ್ಟು ಹೆಂಗಸರು ಅಕ್ಷರಸ್ಥರಿದ್ದರೆ, ಶೇಕಡ 37ರಷ್ಟು ಗಂಡಸರು ಹಾಗೂ ಶೇಕಡ 46ರಷ್ಟು ಹೆಂಗಸರು ಅನಕ್ಷರಸ್ಥರಿದ್ದಾರೆಂದು ಕಂಡು ಬಂದಿದೆ. ಆ ಪ್ರಕಾರ ಪ್ರತಿಗ್ರಾಮಗಳ ಅನಕ್ಷರಸ್ಥರಲ್ಲಿ

ಮಹಿಳೆಯರ ಸಂಖ್ಯೆಯೇ ಅಧಿಕವಾಗಿದೆ. ಆರ್ಥಿಕವಾಗಿ ನೋಡಿದಾಗ ಅಧ್ಯಯನ ಮಾಡಿದ ಐದು ಗ್ರಾಮಗಳ ಬಹುತೇಕ ಕುಟುಂಬಗಳ ಮಾಸಿಕ ವರಮಾನ ಸಾಮಾನ್ಯವಾಗಿ 1000 ರೂಪಾಯಿಗಳ ಒಳಗೇ ಇದ್ದು, ಬಹುಷ್ಟು ಕುಟುಂಬಗಳು ಬಡತನರೇಖೆಯ ಕೆಳಗೆ ಇವೆ ಎಂದು ಕಂಡುಬರುತ್ತದೆ.

ಅಧ್ಯಯದ ಎರಡನೇ ಭಾಗವು 'ಸೂಕ್ಷ್ಮ ಯೋಜನೆ'ಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿದೆ. ದತ್ತಾಂಶದ ಪ್ರಕಾರ ಸಮೀಕ್ಷೆ ನಡೆಸಿದ ಎಲ್ಲಾ ಗ್ರಾಮಗಳಲ್ಲಿಯೂ ಪ್ರತಿಶತ 100ರಷ್ಟು ಜನರಿಗೆ ಸೂಕ್ಷ್ಮ ಯೋಜನೆಯ ಅರಿವು ಮೂಡಿರುವುದು ಗಮನಾರ್ಹವಾದ ಅಂಶ. ಇದೇ ರೀತಿ ಯೋಜನೆಯ ಪ್ರಕ್ರಿಯೆಯ ವಿವಿಧ ಚಟುವಟಿಕೆಗಳಲ್ಲಿ ಜನರು ಪಾಲ್ಗೊಂಡಿರುವುದು ಈ ರೀತಿ ಕಂಡು ಬರುತ್ತದೆ. ಶೇಕಡ 47ರಷ್ಟು ಗ್ರಾಮಗಳಲ್ಲಿ ಗ್ರಾಮಸ್ಥರು ಗ್ರಾಮನಕ್ಷೆಯನ್ನು ಹಾಕುವುದರಲ್ಲಿ ಪಾಲ್ಗೊಂಡಿದ್ದರೆ, ಶೇಕಡ 14 ರಷ್ಟು ಜನರು, ಸಂಪನ್ಮೂಲ ವ್ಯಕ್ತಿಗಳು ಗ್ರಾಮಸಭೆಯಲ್ಲಿ ಸೂಚನೆಯನ್ನು ನೀಡಿದರು ಎಂಬ ಪ್ರತಿಕ್ರಿಯೆ ಮೂಡಿ ಬಂದಿದೆ. ಯೋಜನೆಯ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದರ ಮುಂಚೂಣಿಯಲ್ಲಿ ಯಾವ ಹಳ್ಳಿಗಳಲ್ಲಿ ಸಂಪನ್ಮೂಲ ವ್ಯಕ್ತಿಗಳು ಶ್ರಮಿಸಿದ್ದಾರೆಯೋ ಅಲ್ಲೆಲ್ಲಾ ಜನರ ಭಾಗವಹಿಸುವಿಕೆ ಹೆಚ್ಚಾಗಿರುವು ಕಂಡುಬಂದಿದೆ. ಆದರೂ ಶೈಕ್ಷಣಿಕವಾಗಿ ಹಿಂದುಳಿದ ಮರಬಾನ ಹಳ್ಳಿ, ನಂದಿಬಂಡಿ ಗ್ರಾಮಗಳಲ್ಲಿ ಉತ್ತಮ ಪ್ರತಿಕ್ರಿಯೆ ಕಂಡು ಬಂದಿಲ್ಲ.

ಸೂಕ್ಷ್ಮ ಯೋಜನೆಯ ಪ್ರಭಾವದ ಬಗ್ಗೆ ವಿಚಾರಿಸಲಾಗಿ ಮಕ್ಕಳನ್ನು ಶಾಲೆಗೆ ದಾಖಲಾಯಿಸುವುದರ ಮೇಲೆ ಯೋಜನೆ ಇತ್ಯಾತ್ಮಕ ಪರಿಣಾಮ ಬೀರಿದೆಯೆಂದು ಕಂಡುಬರುತ್ತದೆ. ಇದರಿಂದ ಸೂಕ್ಷ್ಮ ಯೋಜನೆ ಜನರನ್ನು ಪ್ರೇರಣೆಗೊಳಿಸಬಹುದಾದ ಸಮರ್ಥಸಾಧನವೆಂದು ಭಾವಿಸಬಹುದು. ಗ್ರಾಮಸಭೆಗಳಲ್ಲಿ 'ಸೂಕ್ಷ್ಮ ಯೋಜನೆ' ಕುರಿತು ಚರ್ಚಿಸಿದ ವಿಷಯವನ್ನು ಜನರು ತಮ್ಮ ನೆನಪಿನಲ್ಲಿ ಉಳಿಸಿಕೊಂಡಿರುವುದು ಗಮನಾರ್ಹವಾದ ಸಂಗತಿ. ತೆಗೆದುಕೊಂಡ ತೀರ್ಮಾನ ಮತ್ತು ಅವುಗಳ ಅನುಷ್ಠಾನದ ನಡುವಿನ ಅಂತರ ನಮ್ಮ ದೇಶದ ಒಂದು ರೀತಿಯ ದುರಂತವೆಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ಅಧ್ಯಯನ ಮಾಡಿದ ಗ್ರಾಮಗಳಲ್ಲಿಯೂ ಸಹ ಸೂಕ್ಷ್ಮ ಯೋಜನೆಯ ಬಗ್ಗೆ ಗ್ರಾಮ ಸಭೆಯು ತೆಗೆದುಕೊಂಡ ತೀರ್ಮಾನಗಳನ್ನು ಗ್ರಾಮದ ಕುಟುಂಬಗಳು ಸಮರ್ಪಕವಾಗಿ ಪಾಲಿಸಬೇಕಾಗಿದೆ. ಆದರೂ ಶಾಲೆಬಿಟ್ಟ ಮಕ್ಕಳ ಪೋಷಕರ ಮನವೊಲಿಸಿ ಮಕ್ಕಳನ್ನು ಮತ್ತೆ ಶಾಲೆಗೆ ಕಳುಹಿಸುವಂತೆ ಮಾಡಿರುವ ಪ್ರಯತ್ನ ಸ್ವಾಗತಾರ್ಹವಾದುದು.

ಎಲ್ಲಾ ಗ್ರಾಮಗಳಲ್ಲಿಯೂ 'ಗ್ರಾಮಶಿಕ್ಷಣ ಸಮಿತಿ' ಯ ಬಗೆಗೆ ಅರಿವಿದ್ದು ಶೇಕಡ 35 ರಷ್ಟು ಕುಟುಂಬದವರು ಶಾಲೆಯ ಅಭಿವೃದ್ಧಿಗಾಗಿ ದೇಣಿಗೆ ನೀಡುವ ಬಗ್ಗೆ ಆಸಕ್ತಿ ತಳೆದಿದ್ದಾರೆ. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ಮೂಡಿ ಶಾಲೆಯ ಪರಿಸರವನ್ನು ಚೊಕ್ಕಟವಾಗಿರುವ ಬಗ್ಗೆ ಪ್ರಯತ್ನ ನಡೆದಿರುವುದು ಒಂದು ಆರೋಗ್ಯ ಪೂರ್ಣ ಬೆಳವಣಿಗೆ. ವಿವಿಧ ಹಳ್ಳಿಗಳ ತುಲನೆ ಮಾಡಿದಾಗ 'ಗ್ರಾಮ ಶಿಕ್ಷಣ ಸಮಿತಿ'ಗಳ ಕಾರ್ಯಾನು

ಸ್ಥಾನತೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಯಾವ ಹಳ್ಳಿ ಸಾಮಾಜಿಕವಾಗಿ, ಆರ್ಥಿಕವಾಗಿ ಪ್ರಗತಿ ಪೂರಕ ಹಾಗೂ ಪೋಷಕ ಎಂಬ ಅಂಶ ಸ್ಪಷ್ಟವಾಗಿ ತಿಳಿಯುತ್ತದೆ.

'ಗ್ರಾಮ ಶಿಕ್ಷಣ ಸಮಿತಿ' ಸದಸ್ಯರು ಶಿಕ್ಷಣ ಅಭಿವೃದ್ಧಿಗೆ ಸ್ಪಂದಿಸುವವರಾಗಿರುವುದರಿಂದ ಶೇಕಡ 37 ಕುಟುಂಬದವರು ಸಕಾರಾತ್ಮಕ ಅಭಿಪ್ರಾಯ ನೀಡಿದ್ದಾರೆ. ಶೇಕಡ 63 ಕುಟುಂಬದವರು ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರನ್ನು ಸಂಪರ್ಕಿಸಿ ಶಾಲೆಯ ಅಭಿವೃದ್ಧಿ ಕುರಿತು, ಅಲ್ಲಿಯ ಸಮಸ್ಯೆಗಳ ಕುರಿತು ಚರ್ಚಿಸಿರುವುದು ಕಂಡುಬರುತ್ತದೆ. ಬಹುತೇಕ ಕುಟುಂಬ ಗಳು ಶಾಲಾ ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸುವುದರ ಬಗ್ಗೆ ಮತ್ತು ಮಕ್ಕಳಿಗೆ ನೀರು ಮತ್ತು ಶೌಚಾಲಯ ಸರಬರಾಜು ಕುರಿತು ಚರ್ಚಿಸಿದ್ದಾರೆ. ಮಕ್ಕಳಿಗೆ ನೀರು ಮತ್ತು ಶೌಚಾಲಯ ಬಹಳ ಮುಖ್ಯವಾದುದು. ಮೂಲಭೂತ ಸೌರ್ಕಗಳಲ್ಲೊಂದಾದುದರಿಂದ ಈ ಬಗ್ಗೆ ಸದಸ್ಯರಲ್ಲಿ ಚರ್ಚಿಸಿರುವುದು ಉತ್ತಮ ಬೆಳವಣಿಗೆ. ಮಕ್ಕಳ ಸುಳ್ಳು ಹಾಜರಾತಿ ಬಗ್ಗೆ ನಿಗಾವಹಿಸಲು ಗಜಾಪುರ ಮತ್ತು ದೇವಲಾಪುರ ಗ್ರಾಮದಲ್ಲಿ ಎಚ್ಚರಿಸುವುದೂ ಕೂಡ ಶಿಕ್ಷಕರು ಶಾಲೆಗೆ ಬಾರದೇ ಇರುವ ಮಕ್ಕಳ ಹಾಜರಾತಿಯನ್ನು ಹಾಕುವುದನ್ನು ನಿಲ್ಲಿಸಲು ಇದೊಂದು ಉತ್ತಮ ಹೆಜ್ಜೆ ಎಂದೇ ಹೇಳಬಹುದು. ಮರಬಾನ ಹಳ್ಳಿ ಶೇಕಡ 70 ರಷ್ಟು ಕುಟುಂಬದವರು ಶೌಚಾಯಲ ನೀರು ಸರಬರಾಜುವಿನ ಬಗ್ಗೆ ಚರ್ಚಿಸಿರುವುದು ಕಂಡುಬರುತ್ತದೆ.

ಅಧ್ಯಾಯದ ಮೂರನೆಯ ಭಾಗವು ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯ ಭಾಗವಹಿಸುವಿಕೆ ಯಾವ ರೀತಿ ಇದೆ. ಎಂಬ ಕುರಿತು ನೇರವಾಗಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಸಂದರ್ಶಿಸಿ ಅವರ ಅಭಿಪ್ರಾಯವನ್ನು ಕ್ರೋಢೀಕರಿಸಿ ವಿಶ್ಲೇಷಿಸಲಾಗಿದೆ.

ಐದು ಗ್ರಾಮಗಳ 47 ಗ್ರಾಮಶಿಕ್ಷಣ ಸಮಿತಿ ಸದಸ್ಯರನ್ನು ಖುದ್ದು ಭೇಟಿಮಾಡಿ, ಸಂದರ್ಶನದ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ. ಕೆಲವುಕಡೆ ಶಾಲೆಗೆ ನೇರವಾಗಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಕರೆದು ಗುಂಪು ಚರ್ಚೆಗಳ ಮೂಲಕ ಮಾಹಿತಿ ಪಡೆದು ವಿಶ್ಲೇಷಿಸಲಾಗಿದೆ. ಎಲ್ಲಾ ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಶಾಲೆಯಅಭಿವೃದ್ಧಿ ಕುರಿತು ಕೇಳಲಾದ ಪ್ರಶ್ನೆಗೆ ಸಕಾರಾತ್ಮಕ ಉತ್ತರ ನೀಡಿದ್ದಾರೆ. ಶಾಲೆಗೆ ಭೌತಿಕ ಸೌಕರ್ಯಗಳನ್ನು ಒದಗಿಸುವ ಕುರಿತು 12 ಸದಸ್ಯರು ಶಾಲೆಯ ಶಿಕ್ಷಣ ಪ್ರಕ್ರಿಯೆಯಲ್ಲಿ ಗ್ರಾಮದ ಸಮುದಾಯವನ್ನು ಪಾಲ್ಗೊಳಿಸಲು 10 ಸದಸ್ಯರು, ಮಕ್ಕಳನ್ನು ಶಾಲೆಗೆ ಸೇರಿಸುವ ಕುರಿತು ಕ್ರಮ ಕೈಗೊಂಡ ಕುರಿತು 11 ಸದಸ್ಯರು, ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು 14 ಸದಸ್ಯರು ಕ್ರಮ ಅನುಸರಿಸುವುದು ತಿಳಿದು ಬಂದಿದೆ. ಗ್ರಾಮ ಶಿಕ್ಷಣ ಸಮಿತಿಯ ಎಲ್ಲಾ ಸದಸ್ಯರು ಶಾಲೆಯ ಅಭಿವೃದ್ಧಿಗಾಗಿ ಒಂದಲ್ಲ ಒಂದು ವಿಷಯದ ಕುರಿತು ಕ್ರಮ ಅನುಸರಿಸಿರುವುದು ಅವರಲ್ಲಿ ಮೂಡಿರುವ ಅರಿವನ್ನು ಎತ್ತಿ ತೋರಿಸುತ್ತದೆ.

ಶಾಲಾ ಅಭಿವೃದ್ಧಿಗಾಗಿ ಸದಸ್ಯರು ಹಮ್ಮಿಕೊಂಡಿರುವ ಚಟುವಟಿಕೆಗಳ ಕುರಿತು ಪ್ರಶ್ನಿಸಲಾಯಿತು. ಸೋಜಿಗವೆಂದರೆ ಎಂಟು ಸದಸ್ಯರು ಯಾವ ಪ್ರತಿಕ್ರಿಯೆಯನ್ನು ನೀಡದಿರುವುದು ಕಂಡು ಬಂದಿತು. ಉಳಿದ 38 ಸದಸ್ಯರು ತಾವು ವಿವಿಧ ಚಟುವಟಿಕೆಗಳನ್ನು ರೂಪಿಸಿರುವುದನ್ನು ತಿಳಿಸಿದ್ದಾರೆ. ಒಟ್ಟಾರೆ ವಿದ್ಯಾರ್ಥಿಗಳಿಗೆ ಶೌಚಾಲಯ ನಿರ್ಮಿಸುವುದರ ಕುರಿತು ಮತ್ತು ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರುವುದರ ಬಗ್ಗೆ ಕಾರ್ಯಕ್ರಮ ರೂಪಿಸಿಕೊಂಡಿರುವುದು ಸ್ವಾಗತಾರ್ಹ ಅಂಶವಾಗಿದೆ. ಬಾಲಕಾರ್ಮಿಕ ಮಕ್ಕಳು ಶಾಲೆಯಿಂದ ವಂಚಿತರಾಗುತ್ತಿರುವುದು ಅವರ ಬಡತನವನ್ನು ಎತ್ತಿ ತೋರಿಸುತ್ತದೆ. ಈ ಬಗ್ಗೆ ಗ್ರಾಮದ ಸದಸ್ಯರು ಗಮನಹರಿಸಿರುವುದು ಸಮಾಜದ ಆರೋಗ್ಯಕರ ಬೆಳವಣಿಗೆ ಎಂಬ ಅಂಶಕಂಡು ಬರುತ್ತದೆ.

ಗ್ರಾಮ ಶಿಕ್ಷಣ ಸಮಿತಿ ಸದಸ್ಯರಿಗೆ ಶಿಕ್ಷಣದಲ್ಲಿ ಆಗುತ್ತಿರುವ ಹೊಸ ಹೊಸ ಬದಲಾವಣೆಗಳ ಕುರಿತು ಅರಿವು ಮೂಡಿಸುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಅವರಿಗೆ ಡಿ.ಪಿ.ಇ.ಪಿ.ವತಿಯಿಂದ ವಿವಿಧ ತರಬೇತಿಯನ್ನು ನೀಡಲಾಗುತ್ತದೆ. ಐದು ಗ್ರಾಮದ 47 ಸದಸ್ಯರಲ್ಲಿ 22 ಸದಸ್ಯರು ತರಬೇತಿಯನ್ನು ಪಡೆದುಕೊಂಡಿದ್ದಾರೆ. ಗ್ರಾಮ ಶಿಕ್ಷಣ ಸಮಿತಿ ಸದಸ್ಯರ 4 ದಿನಗಳ ತರಬೇತಿಯನ್ನು 13 ಸದಸ್ಯರು ಪಡೆದುಕೊಂಡಿದ್ದು 12 ಸದಸ್ಯರು ವಿ.ಇ.ಸಿ. ಮೇಳಗಳಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಗ್ರಾಮಶಿಕ್ಷಣ ಸಮಿತಿ ಸದಸ್ಯರ ಕರ್ತವ್ಯಗಳು, ಜವಾಬ್ದಾರಿಗಳು, ಸ್ಥಳೀಯ ಶಾಲಾ ಸಮಸ್ಯೆಗಳು ಅವುಗಳಿಗೆ ಪರಿಹಾರ, ಶಾಲೆಗಾಗಿ ಸಂಪನ್ಮೂಲಗಳ ಕ್ರೋಢೀಕರಣ, ಸೂಕ್ಷ್ಮ ಯೋಜನಾ ಕಾರ್ಯಕ್ರಮ ಪರಿಚಯ, ಸಮುದಾಯವನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಇತ್ಯಾದಿ ವಿಷಯದ ಮೇಲೆ ಗ್ರಾಮ ಶಿಕ್ಷಣ ಸಮಿತಿ ಸದಸ್ಯರಿಗೆ ತರಬೇತಿ ನೀಡಲಾಗುತ್ತಿದೆ. ಈ ಅಂಶ ಸದಸ್ಯರ ವೈಯಕ್ತಿಕ ಬೆಳವಣಿಗೆಗೆ ಮಾರಕವಲ್ಲದೆ ಇದೊಂದು ಅತ್ಯುತ್ತಮ ಬೆಳವಣಿಗೆ ಎಂಬ ಅಂಶ ಕಂಡುಬರುತ್ತದೆ. ವಿ.ಇ.ಸಿ. ಮೇಳವೂ ಕೂಡ ಗ್ರಾಮದಿಂದ ಗ್ರಾಮಕ್ಕೆ ಶಿಕ್ಷಣದ ಅಭಿವೃದ್ಧಿಯ ಕಾಳಜಿಯ ಅನುಭವಗಳನ್ನು ಹಂಚಿಕೊಳ್ಳುವುದು ಸ್ತುತ್ಯಾರ್ಹ ಬೆಳವಣಿಗೆಯಾಗಿದೆ. ಮೇಲಿನ ತರಬೇತಿ ಹಾಗೂ ಕಾರ್ಯಗಾರದಿಂದ ಸದಸ್ಯರಲ್ಲಿ, ಸಮುದಾಯದಲ್ಲಿ ಶಿಕ್ಷಣದ ಬಗ್ಗೆ ಒಲವು ಮೂಡಿರುವುದು ಉತ್ತಮಾಂಶವೆನ್ನಬಹುದು.

ಗ್ರಾಮಗಳಲ್ಲಿ ನಡೆದ 'ಸೂಕ್ಷ್ಮ ಯೋಜನೆ ಕಾರ್ಯಕ್ರಮ' ದ ನಂತರ ಏನೇನು ಆಗಿದೆ, ಕುರಿತು ಕೇಳಲಾದ ಪ್ರಶ್ನೆಗೆ ಎಲ್ಲ 47 ಸದಸ್ಯರು ಪ್ರತಿಕ್ರಿಯಿಸಿದ್ದು, ಸೂಕ್ಷ್ಮ ಯೋಜನಾ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿರುವುದು ಕಂಡು ಬರುತ್ತದೆ. ಸೂಕ್ಷ್ಮ ಯೋಜನೆ ಕಾರ್ಯಕ್ರಮದ ನಂತರ ಸದಸ್ಯರು ಗ್ರಾಮದಲ್ಲಿ ಪರ್ಯಾಯ ಶಾಲೆಗೆ (ಅನೌಪಚಾರಿಕ ಶಿಕ್ಷಣ ಕೇಂದ್ರ) ಮಕ್ಕಳನ್ನು ಕಳುಹಿಸುತ್ತಿರುವ ಬಗ್ಗೆ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ದಾಖಲು ಗೊಳಿಸುವುದು, ಗೈರು ಹಾಜರಾದ ಮಕ್ಕಳನ್ನು ನಿರಂತರ ಹಾಜರಾಗುವಂತೆ ಪ್ರೇರೇಪಿಸುವುದು, ಶಿಕ್ಷಣದ ಮಹತ್ವ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸಿರುವ ಬಗ್ಗೆ ಪ್ರತಿಕ್ರಿಯಿಸಿರುತ್ತಾರೆ. ಸೂಕ್ಷ್ಮ ಯೋಜನೆ ಕಾರ್ಯಕ್ರಮವು ಸಮುದಾಯದಲ್ಲಿ ಹೆಚ್ಚು ಜಾಗೃತಿ ಮೂಡಿಸಿದ ಬಗ್ಗೆ ಅದರ ಯಶಸ್ಸನ್ನು ಎತ್ತಿ ತೋರಿಸುತ್ತದೆ.

ಶಾಲೆಯಲ್ಲಿ ಆದ ಬದಲಾವಣೆಗಳನ್ನು ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಗುರುತಿಸಿದ್ದಾರೆ. ಅವುಗಳಲ್ಲಿ ತರಗತಿ ಕೊಠಡಿಗಳನ್ನು ಅಲಂಕಾರ ಗೊಳಿಸಿರುವುದು ಮುಖ್ಯ. ಮಕ್ಕಳು ಹಾಜರಾದ ನಂತರ ಅವರು ನಿರಂತರ ಹಾಜರಾಗುತ್ತಲೇ ಇರಬೇಕು. ಇದಕ್ಕೆ ಶಾಲೆ ಆಕರ್ಷಣೀಯವಾಗಿರಬೇಕಾಗುತ್ತದೆ. ಇದು ಶಿಕ್ಷಣದ ಗುಣಾತ್ಮಕ ಬದಲಾವಣೆಗೂ ಕಾರಣವಾಗುತ್ತದೆ. ಶಿಕ್ಷಕರ ಚಟುಚಟಿಕೆಗಳಲ್ಲಿಯೂ ಸದಸ್ಯರೂ ಬದಲಾವಣೆಯನ್ನು ಗಮನಿಸಿರುವುದು ಗಮನಾರ್ಹ ಅಂಶ. ಮಕ್ಕಳ ಕಲಿಕಾ ಸಾಮರ್ಥ್ಯದಲ್ಲಿಯೂ ಸದಸ್ಯರು ಬದಲಾವಣೆಯನ್ನು ಕಂಡು ಕೊಂಡಿದ್ದಾರೆ. ಈ ಮೂಲಕ ಸಮುದಾಯದ ಭಾಗಿತ್ವ ಹೆಚ್ಚಿದಂತಾಗಿದೆ.

ಶಾಲಾ ಅಭಿವೃದ್ಧಿಯ ಬಗ್ಗೆ ಸ್ಥಳೀಯ ಸಂಘ-ಸಂಸ್ಥೆಗಳು ಆಯಾ ಗ್ರಾಮಗಳಲ್ಲಿ ಯೋಚಿಸಿರುವುದನ್ನು ಸದಸ್ಯರು ತಿಳಿಸಿದ್ದಾರೆ. 'ಗ್ರಾಮ ಶಿಕ್ಷಣ ಸಮಿತಿ' 'ಗ್ರಾಮ ಪಂಚಾಯಿತಿ' 'ಗ್ರಾಮದ ಯುವಕರು' 'ಮಹಿಳಾ ಮಂಡಳಿಗಳು' ಈ ಎಲ್ಲಾ ಸಂಘ-ಸಂಸ್ಥೆಗಳಲ್ಲಿ 'ಗ್ರಾಮ ಶಿಕ್ಷಣ ಸಮಿತಿ' ಯು ಶೈಕ್ಷಣಿಕ ಅಭಿವೃದ್ಧಿಗಾಗಿ ತಿವ್ರ ಸ್ಪಂದಿಸಿರುವುದಾಗಿ ತಿಳಿಸಿರುವುದು ಕಂಡುಬರುತ್ತದೆ.

'ಗ್ರಾಮ ಪಂಚಾಯಿತಿ' ಶಿಕ್ಷಣದ ಪ್ರಗತಿಗಾಗಿ ಬಹುಮುಖ್ಯ ಪಾತ್ರ ವಹಿಸುತ್ತದೆ ಎಂಬ ಅಂಶ ಸದಸ್ಯರು ನೀಡಿದ ಅಭಿಪ್ರಾಯದಿಂದ ಕಂಡುಬರುತ್ತದೆ. ಭೌತಿಕ ಸೌಕರ್ಯಗಳು ಶಾಲೆಗೆ ಅಗತ್ಯ. ಶಾಲೆಗೆ ಮೂಲ ಭೂತ ಸೌಕರ್ಯಗಳನ್ನು ಒದಗಿಸುವುದು ಗ್ರಾಮ ಪಂಚಾಯಿತಿಗಳ ಜವಾಬ್ದಾರಿಯಾಗಿದೆ. ಗ್ರಾಮಶಿಕ್ಷಣ ಸಮಿತಿ ಸದಸ್ಯರು ಇಬ್ಬರು ಅಥವಾ ಮೂವರು ಗ್ರಾಮ ಪಂಚಾಯಿತಿ ಸದಸ್ಯರೇ ಆಗಿರುತ್ತಾರೆ. ಹಾಗಾಗಿ 'ಪಂಚಾಯಿತಿ' ವತಿಯಿಂದ ಶಾಲೆಯ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಬಹುದು. 47 ಸದಸ್ಯರಲ್ಲಿ 17 ಸದಸ್ಯರು ಈ ಮೂಲಕ ಕ್ರಮ ಅನುಸರಿಸಿದ್ದು ಶಾಲೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿರುವುದು ಕಂಡುಬರುತ್ತದೆ. ಶಾಲೆಗೆ ಕೊಠಡಿಗಳ ನಿರ್ಮಾಣ ಕಲ್ಪಿಸಿಕೊಂಡಿದ್ದಾರೆ. ಈ ಬಗ್ಗೆ ಗಜಾಪುರದ ಸದಸ್ಯರು ಸ್ಪಂದಿಸಿಲ್ಲ. ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಶಾಲೆಯ ಸಮಸ್ಯೆಗಳ ಕುರಿತು ಎಲ್ಲಾ ಗ್ರಾಮಗಳಲ್ಲಿಯೂ ಚರ್ಚೆ ನಡೆದಿರುವುದು ವಿಕೇಂದ್ರೀಕರಣ ವ್ಯವಸ್ಥೆಯ ಉತ್ತಮ ಬೆಳವಣಿಗೆ ಎನ್ನಬಹುದು. ಶಿಕ್ಷಕರ ಕೊರತೆ ನೀಗಿಸುವ ಕುರಿತು ಚರ್ಚೆ ನಡೆದಿದೆ. ಮಕ್ಕಳಿಗೆ ಆಟದ ಸಾಮಾಗ್ರಿಗಳನ್ನೂ ಪಡೆದಿರುವ ಬಗ್ಗೆ ತಿಳಿದು ಬಂದಿದೆ. 'ಗ್ರಾಮ ಪಂಚಾಯಿತಿ' ಶಿಕ್ಷಣ ಅಭಿವೃದ್ಧಿಗೆ ಒಂದು ಪ್ರಮುಖ ಕೊಂಡಿ ಎನ್ನಬಹುದು. ಶಾಲೆಯಲ್ಲಿ ಅಭಿವೃದ್ಧಿಗಾಗಿ ಹಾಕಿಕೊಂಡು ಶೈಕ್ಷಣಿಕ ಯೋಜನೆಗಳ ಕುರಿತು ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಪ್ರಶ್ನಿಸಲಾಯಿತು. ಶಾಲೆಯ ಅಭಿವೃದ್ಧಿಗಾಗಿ ಎಲ್ಲಾ ಐದು ಗ್ರಾಮದ 47 ಸದಸ್ಯರು ಪ್ರತಿಕ್ರಿಯಿಸಿದ್ದಾರೆ. ಅವರು ರೂಪಿಸಿಕೊಂಡ ಯೋಜನೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಹೆಚ್ಚಿಸುವುದು, ದೇಣಿಗೆ ಸಂಗ್ರಹಿಸುವುದು, ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸುವುದು, ಖಾಲಿ ಇರುವ ಶಿಕ್ಷಕರನ್ನು ತುಂಬಿಸುವುದು, ಶಾಲೆಗಳಿಗೆ ಕೊಠಡಿಗಳನ್ನು ನಿರ್ಮಿಸುವುದು, ನೀರಿನ ಸೌಕರ್ಯ ಒದಗಿಸುವುದರ ಕುರಿತು ಯೋಜನೆಗಳನ್ನು ರೂಪಿಸಿಕೊಂಡಿರುವುದು ಕಂಡು ಬರುತ್ತದೆ. ಇದು ಸ್ಥಳೀಯರೇ ತಮ್ಮ ಬೇಕು-ಬೇಡಿಕೆಗಳನ್ನು ರೂಪಿಸಿಕೊಂಡು ಪರಿಹಾರ ಕಂಡುಕೊಳ್ಳಲು ಯತ್ನಿಸಿರುವುದು ತಿಳಿದುಬರುತ್ತದೆ.

ಹಾಕಿಕೊಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯಾರು? ಯಾರು ? ಸಹಕರಿಸಿದ್ದಾರೆ, ಯಾರ ಮುಖಾಂತರ ಜಾರಿಗೊಳಿಸಲು ಪ್ರಯತ್ನಿಸಲಾಗಿದೆ ಎಂಬ ಪ್ರಶ್ನೆಗೆ ಎಲ್ಲಾ ಐದೂ ಗ್ರಾಮಗಳಲ್ಲಿಯೂ ಸ್ಥಳೀಯ ಸಮುದಾಯದ ಮೂಲಕ ಮತ್ತು ಗ್ರಾಮ ಪಂಚಾಯಿತಿಯ ಸಹಕಾರದಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಪ್ರಯತ್ನ ನಡೆಸಲಾಗಿದೆ. ಶಾಲಾ ಮಕ್ಕಳ ಹಾಜರಾತಿ ಹೆಚ್ಚಿಸಲು ಗ್ರಾಮ ಶಿಕ್ಷಣ ಸಮಿತಿ ಮತ್ತು ಶಾಲಾ ಮುಖ್ಯಗುರುಗಳು ಸಹಕರಿಸಿದ್ದಾರೆ. ಆಡಳಿತಾಧಿಕಾರಿಗಳ ಸಹಕಾರದಿಂದ ಶಿಕ್ಷಕರನ್ನು ತುಂಬುವ ಕುರಿತ ಯತ್ನ ನಡೆದಿದೆ. ಒಟ್ಟಾರೆ ಶಾಲಾ ಅಭಿವೃದ್ಧಿಗೆ ಸಮುದಾಯ ಸಕ್ರಿಯವಾಗುತ್ತಾ ನಡೆದಿರುವುದು ಇದರಿಂದ ತಿಳಿದು ಬರುತ್ತದೆ.

ಗ್ರಾಮಗಳಲ್ಲಿ ಸ್ಥಳೀಯ ಸಂಘ ಸಂಸ್ಥೆಗಳಿವೆಯೆ? ಎಂದು ಕೇಳಲಾಗಿದ್ದ ಪ್ರಶ್ನೆಗೆ 42 ಸದಸ್ಯರು ಪ್ರತಿಕ್ರಿಯೆಯನ್ನು ನೀಡಿದ್ದು, 5 ಸದಸ್ಯರು ಪ್ರತಿಕ್ರಿಯಿಸದಿರುವುದು ಸೋಜಿಗದ ವಿಷಯ. 'ಐದು' ಸದಸ್ಯರೂ ಮಹಿಳಾ ಸದಸ್ಯರಾಗಿರುವುದರಿಂದ ನಮ್ಮ ಸಾಮಾಜಿಕ ವ್ಯವಸ್ಥೆಯ ಲಿಂಗ-ತಾರತಮ್ಯ ಸಾಮಾಜಿಕ ಅರಿವಿನ ಕೊರತೆ ಎದ್ದು ಕಾಣುತ್ತದೆ. ಶಾಲೆಯ ಬಗ್ಗೆ ಸ್ಪಂದಿಸುವಂತಹ ಸಂಘ-ಸಂಸ್ಥೆಗಳಲ್ಲಿ 'ಯುವಕರ ಸಂಘ' ಮತ್ತು 'ಮಹಿಳಾ ಸಂಘ'ಗಳು ಸ್ಥಳೀಯ ಸಮಸ್ಯೆಗಳ ಪರಿಹಾರದ ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಗ್ರಾಮಾಭ್ಯುದಯಕ್ಕೆ ಶ್ರಮಿಸುತ್ತವೆ ಎಂಬ ಅಂಶ ಕಂಡುಬರುತ್ತದೆ.

ಒಟ್ಟಾರೆ ಈ ಭಾಗದಲ್ಲಿ ಕಂಡು ಬರುವ ಅಂಶವೆಂದರೆ ಗ್ರಾಮಶಿಕ್ಷಣ ಸಮಿತಿಗಳ ಮೂಲಕ ಸದಸ್ಯರು ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಬೆಂಬಲ ನೀಡುತ್ತಿದ್ದಾರೆ. ಸಮುದಾಯವೂ ಕೂಡ ವಿವಿಧ ಚಟುವಟಿಕೆಗಳ ಮೂಲಕ ಜಾಗೃತಗೊಂಡು ಶೈಕ್ಷಣಿಕ ಅಭಿವೃದ್ಧಿಗೆ ಚಿಂತನೆ ನಡೆಸತೊಡಗಿದೆ ಎಂದು ಕಂಡು ಬಂದಿದೆ.

ಈ ಅಧ್ಯಾಯದ ಭಾಗ 4 ಕ್ಕೆ ಸಂಬಂಧಿಸಿದ 'ಸೂಕ್ಷ್ಮ ಯೋಜನೆ' ಕಾರ್ಯಕ್ರಮವು ನಡೆದ ಗ್ರಾಮಗಳಲ್ಲಿ ಶಾಲೆಯಿಂದ ಹೊರಗುಳಿದ ಮತ್ತು ಶಾಲೆಯನ್ನು ತೊರೆದ ಮಕ್ಕಳಿಗಾಗಿ ಪರ್ಯಾಯ ಶಾಲೆಯನ್ನು ತೆರೆಯಲಾಗಿದೆ. ಎಲ್ಲಾ ಐದು ಗ್ರಾಮಗಳಲ್ಲಿಯೂ ಪರ್ಯಾಯ ಶಾಲೆಗಳನ್ನು ತೆರೆಯಲಾಗಿದೆ. ಐದು ಗ್ರಾಮಗಳಲ್ಲಿ ಈ ಪರ್ಯಾಯ ಶಾಲೆಗೆ ದಾಖಲಾದ ಮಕ್ಕಳು 141. ಇವರ ಪಾಲಕ/ಪೋಷಕರಿಗೆ ಪ್ರಶ್ನೆಗಳನ್ನು ಕೇಳಿ ಹಲವಾರು ಮಾಹಿತಿಯನ್ನು ಸಂಗ್ರಹಿಸಿಲಾಗಿದೆ.

ಮಕ್ಕಳನ್ನು ಶಾಲೆಗೆ ಕಳುಹಿಸಲು ಉತ್ತೇಜನ ನೀಡಿದವರು ಬಹುತೇಕ 'ಸೂಕ್ಷ್ಮ ಯೋಜನೆ ಕಾರ್ಯಕ್ರಮ' ತಂಡದ ಸಂಪನ್ಮೂಲ ವ್ಯಕ್ತಿಗಳೇ ಎಂಬ ಅಂಶ ಪಾಲಕರಿಂದ ತಿಳಿದು ಬರುತ್ತದೆ. ಜನರಿಗೆ ಅರಿವನ್ನು ಮೂಡಿಸಲು ಇಂತಹ ಒಂದು ತಂಡದ ಅಗತ್ಯವಿರುವುದು ಕಂಡುಬರುತ್ತದೆ. ಶಿಕ್ಷಕರು, ಪರ್ಯಾಯ ಶಾಲಾ ಕೇಂದ್ರದ ಬೋಧಕರು, ಸದಸ್ಯರು, ಊರಿನ ಹಿರಿಯರು ಸಹ ಶಾಲೆ ಬಿಟ್ಟ ಮಕ್ಕಳನ್ನು ಪರ್ಯಾಯ ಶಾಲೆಗೆ ಸೇರಿಸುವಂತೆ ಕೇಳಿಕೊಂಡಿದ್ದಾರೆ.

ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರಲು ಕಾರಣಕ್ಕೆ ಪಾಲಕ/ಪೋಷಕರು ನೀಡಿದ ಉತ್ತರ ಸಹಜವಾಗಿರುವಂತೆ ಕಂಡುಬರುತ್ತದೆ. ಈ ಸಹಜತೆ ಎಲ್ಲಾ ಗ್ರಾಮಗಳಲ್ಲಿಯೂ ಕಂಡುಬಂದಿದೆ. 'ಮನೆಗೆಲಸಕ್ಕಾಗಿ', 'ದನಕಾಯಲು', ಮನೆಯಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನು ಆಡಿಸಲು(ಹೆಣ್ಣು ಮಕ್ಕಳು) ಶಾಲೆಯಿಂದ ಮಕ್ಕಳನ್ನು ಬಿಡಿಸುತ್ತಿರುವುದು ತಿಳಿದುಬರುತ್ತದೆ. ಬೇರೆಯವರ ಮನೆಗೆಲಸಕ್ಕೆ ಕಳಿಹಿಸುವುದೂ ಕೂಡ ಕಂಡುಬಂದಿದೆ. ಹಾಗೂ ಕೆಲವು ಪಾಲಕರಲ್ಲಿ ಆಸಕ್ತಿ ಇಲ್ಲದಿರುವುದೂ ಸಹ ಎದ್ದುಕಾಣುವುದರಿಂದ ಮಕ್ಕಳನ್ನು ಶಾಲೆ ಬಿಡಿಸಲಿಕ್ಕೆ ಕಾರಣವಾಗಿದೆ. ಹಾಗಾದರೆ ಈ ಮಕ್ಕಳು ಶಾಲೆಯ ಶಿಕ್ಷಣದಿಂದ ವಂಚಿತರಾಗಬೇಕೆ? ಶಾಲೆಬಿಟ್ಟ ಮಕ್ಕಳಲ್ಲಿ ಬಡತನ ಕುಟುಂಬದ ವರ್ಗದವರೇ ಹೆಚ್ಚಿದ್ದಾರೆ. ಇಂತಹ ಮಕ್ಕಳಿಗೆ ಪರ್ಯಾಯ ಪರಿಹಾರವೇನು? ಎಂಬ ಬಗ್ಗೆ ಸಮುದಾಯವೇ ಚಿಂತನ ನಡೆಸಿದೆ. ಈ ಮಕ್ಕಳಿಗಾಗಿ ಪರ್ಯಾಯ ಶಾಲೆಯನ್ನು ತೆರೆಯಲಾಗಿದೆ. ಸಾಯಂಕಾಲ ಮೂರುತಾಸು ಈ ಮಕ್ಕಳ ಕಲಿಕೆಗೆ ಸಮಯ ನಿಗದಿಮಾಡಿ ಗ್ರಾಮಸ್ಥರೇ ಸ್ಥಳೀಯ ಅರ್ಹ (ಕನಿಷ್ಠ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರು) ಬೋಧಕರನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಆ ಮೂಲಕ ಶಾಲೆಯಿಂದ ವಂಚಿತಗೊಂಡ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರಲು ಅವಕಾಶವನ್ನು ಕಲ್ಪಿಸಲಾಗಿದೆ. ಇದು ಗಮನಾರ್ಹವಾದ ಅಂಶವೆಂದು ಕಂಡುಬಂದಿದೆ.

ಪರ್ಯಾಯ ಶಾಲೆಗೆ ಸರಿಯಾಗಿ ಹಾಜರಾಗದ ಮಕ್ಕಳ ಬಗ್ಗೆ ಪ್ರಶ್ನೆ ಕೇಳಲಾಗಿ ಪಾಲಕರು ತಾತ್ಕಾಲಿಕವಾಗಿ ಗೈರು ಹಾಜರಾಗಿರುತ್ತಾರೆಂದು ತಿಳಿಸಿ, ಮತ್ತೆ ಶಾಲೆಗೆ ಕಳುಹಿಸಿರುವ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಈ ಭಾಗದಲ್ಲಿ ಒಟ್ಟಾರೆಯಾಗಿ ಕಂಡುಬಂದ ಅಂಶವೆಂದರೆ, ಶಾಲೆಯಿಂದ ವಂಚಿತಗೊಂಡ ಮಕ್ಕಳ ಪಾಲಕ/ಪೋಷಕರು ತಮ್ಮ ಮಕ್ಕಳನ್ನು ಪರ್ಯಾಯ ಶಾಲೆಗೆ ಕಳುಹಿಸಿ ಶಿಕ್ಷಣದ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬ ಅಂಶ ಕಂಡು ಬರುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳ ಶಿಕ್ಷಣ ಸೌಲಭ್ಯಕ್ಕಾಗಿ ಇಂತಹ ಪರ್ಯಾಯ ಶಾಲೆಗಳು ಅಗತ್ಯ ಇವೆ ಎಂಬ ಅಂಶ ಕಂಡು ಬರುತ್ತದೆ.

ಅಧ್ಯಯನಕ್ಕೊಳಪಟ್ಟ ಐದೂ ಗ್ರಾಮಗಳ ಶಾಲೆಗಳಿಂದ ವಿದ್ಯಾರ್ಥಿಗಳ ದಾಖಲಾತಿಯ ಬಗ್ಗೆ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಯಿತು. ದತ್ತಾಂಶಗಳ ವಿಶ್ಲೇಷಣೆಯಿಂದ ತಿಳಿದು ಬಂದ ಅಂಶವೆಂದರೆ, ಒಂದರಿಂದ -ಐದನೆಯ ತರಗತಿಯವರೆಗೆ ಮಕ್ಕಳ ದಾಖಲಾತಿಯಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗಿರುವುದು ಕಂಡು ಬರುತ್ತದೆ. ವಿಶೇಷವಾದ ಅಂಶವೆಂದರೆ ಹೆಣ್ಣು ಮಕ್ಕಳ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಕ್ಕಳ ದಾಖಲಾತಿಯಲ್ಲೂ ಹೆಚ್ಚಳ ಕಂಡು ಬಂದಿದೆ. ಶಾಲೆಗೆ ಹಾಜರಾಗುವ ಹಾಗೂ ನಿರಂತರವಾಗಿ ಗೈರು ಹಾಜರಾಗುತ್ತಿರುವ ಮಕ್ಕಳಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಲಾಗಿ ಈ ವಿದ್ಯಾಮಾನದಲ್ಲಿ ಹೆಚ್ಚು ಭಿನ್ನತೆ ಕಂಡುಬರುತ್ತದೆ. ಶಾಲಾ ಮಕ್ಕಳ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಹಿನ್ನೆಲೆ ಅವರುಗಳ ಶಾಲಾ ಹಾಜರಾತಿ ಮೇಲೆ ಪರಿಣಾಮ ಬೀರಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ಗ್ರಾಮೀಣ ಜನರ ಬಡತನ ಮತ್ತು ಅನಕ್ಷರತೆ ಗ್ರಾಮೀಣ ಮಕ್ಕಳ ಶೈಕ್ಷಣಿಕ ಹಿಂಬೀಳಿಕೆಗೆ ಮುಖ್ಯಕಾರಣ.

ಗ್ರಾಮ ಶಿಕ್ಷಣ ಸಮಿತಿಯು ಗ್ರಾಮದ ಶೈಕ್ಷಣಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಅನೇಕ ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಪರ್ಯಾಯ ಶಾಲೆಗಳ ಸ್ಥಾಪನೆ ಒಂದು ಪ್ರಮುಖ ವಿಧಾನವೆಂದರೆ ತಪ್ಪಾಗಲಾರದು. ಈ ಸಂಶೋಧನೆಯ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾದರಿ ಗ್ರಾಮಗಳ ಪರ್ಯಾಯ ಶಾಲೆಗಳಲ್ಲದೆ ಪಕ್ಕದ ತಾಲೂಕುಗಳಲ್ಲಿಯೂ ಸ್ಥಾಪಿತವಾಗಿರುವ 57 ಪರ್ಯಾಯ ಶಾಲೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಯಿತು. ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟ ಬಹುತೇಕ ಮಕ್ಕಳು, ಪರ್ಯಾಯ ಶಾಲೆಗೆ ದಾಖಲಾಗಿ ಶಿಕ್ಷಣವನ್ನು ಮುಂದುವರಿಸುತ್ತಿರುವುದಲ್ಲದೆ, ಅವರಲ್ಲಿ ಅನೇಕರು ಔಪಚಾರಿಕ ಶಿಕ್ಷಣದ ಮುಖ್ಯವಾಹಿನಿಗೆ ಮತ್ತೆ ಹಿಂದಿರುಗಿರುವುದು ಅತಿ ಗಮನಾರ್ಹವಾದ ಸಂಗತಿ.

ಪ್ರಬಂಧದ ಪುಟಗಳಲ್ಲಿ ಹರಿದುಬಂದ ಮಾಹಿತಿ ಹಾಗೂ ವಿಶ್ಲೇಷಣೆಯನ್ನು ಗಮನಿಸಿದಾಗ ಶಾಲಾ ಮಟ್ಟದ ಶಿಕ್ಷಣ ಅದರಲ್ಲೂ ಗ್ರಾಮೀಣ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದೂವರೆಗೂ ಚಾಲ್ತಿಯಲ್ಲಿದ್ದ ಅನೇಕ ನಂಬಿಕೆಗಳು ಹುಸಿಯಾಗುವುದಲ್ಲದೇ ಹೊಸ ಆಯಾಮಗಳತ್ತ ನಮ್ಮ ಕಣ್ಣನ್ನು ತೆರೆಸುತ್ತವೆ. ಶಿಕ್ಷಣ ಹಿಂದುಳಿವಿಕೆಗೆ ಶಿಕ್ಷಣದ ಬಗೆಗಿನ ಮೂಲಭೂತ ಅನಾಸಕ್ತಿಯೇ ಕಾರಣ ಎಂಬುದು ಸತ್ಯಕ್ಕೆ ದೂರವಾದ ವಾದ. ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಟ್ಟರೆ ಬಹುತೇಕ ಮಕ್ಕಳು ಶಿಕ್ಷಣದ ಬಗೆಗೆ ಆಸಕ್ತಿ ತಾಳುತ್ತಾರೆ. ನಮ್ಮ ದೇಶ ಸಾಂಪ್ರದಾಯಿಕ ಶಿಕ್ಷಣ ಪದ್ದತಿಗೆ ಇದುವರೆಗೂ ಕಟ್ಟುಬಿದ್ದುದು ಶಿಕ್ಷಣದ ಪ್ರಗತಿ ಕುಂಠಿತವಾಗಲು ಪ್ರಮುಖ ಕಾರಣ. ಪ್ರಸಿದ್ಧ ಶಿಕ್ಷಣ ತಜ್ಞ ಹಾಗೂ ಕೊಠಾರಿ ಆಯೋಗದ ಕಾರ್ಯದರ್ಶಿಯಾಗಿದ್ದ ಜೆ.ಪಿ.ನಾಯಕ್‌ರವರು ''ಕಳೆದ ನಾಲ್ಕು ದಶಕಗಳಿಂದಲೂ ಅನೌಪಚಾರಿಕ ಶಿಕ್ಷಣ, ಸಂಜೆಶಾಲೆಗಳು ಹಾಗೂ ಪರ್ಯಾಯ ಶಾಲೆಗಳು, ಗ್ರಾಮ ಶಿಕ್ಷಣ ಸಮಿತಿಗಳ ರಚನೆ ಶಿಕ್ಷಣ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಸಮುದಾಯವನ್ನು ಪ್ರಚೋದಿಸುವುದರ ಮಹತ್ವದ ಬಗ್ಗೆ ಹೇಳುತ್ತಲೇ ಬಂದಿದ್ದಾರೆ''. ಈ ಸಂಶೋಧನೆಯೂ ನಾಯಕರ ಅನಿಸಿಕೆಗಳನ್ನು ಸಮರ್ಥಿಸುತ್ತದೆ.

ಬಡತನ ಮತ್ತು ಶಿಕ್ಷಣ ಪ್ರಗತಿ ಇವೆರಡೂ ಜೊತೆಯಾಗಿ ಸಾಗಲಾರವು. ಸಾಮಾನ್ಯವಾಗಿ ಬೆಳಿಗ್ಗೆ ಹತ್ತರಿಂದ ಸಂಜೆ ಐದರವರೆಗೆ ಕಾರ್ಯನಿರ್ವಹಿಸುವ ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಶಾಲೆಗಳಲ್ಲಿ ಗ್ರಾಮೀಣ ಬಡಕುಟುಂಬದಿಂದ ಬರುವ ಬಹುತೇಕ ಮಕ್ಕಳು ತಮ್ಮ ವಿದ್ಯಾಭ್ಯಾಸ ಮುಂದುವರಿಸಲಾರರು. ಬಡತನದ ಕಾರಣದಿಂದಾಗಿ ಅವರ ತಂದೆ-ತಾಯಂದಿರಿಗೆ ಆರ್ಥಿಕವಾಗಿ ನೆರವಾಗುವ ಅವಶ್ಯಕತೆ ಇರುತ್ತದೆ. ಅಂತಹವರುಗಳು ಪರ್ಯಾಯ ಶಾಲೆಗಳಂತಹ ಪರ್ಯಾಯ ಅವಕಾಶಗಳನ್ನು ಕಲ್ಪಿಸಿದಾಗ ಶಿಕ್ಷಣ ಪಡೆಯಬಲ್ಲರು.

ಅಂತಿಮವಾಗಿ ಪ್ರಸ್ತುತ ಸಂಶೋಧನೆ ಒಂದು ಪ್ರಮುಖ ಪ್ರಶ್ನೆಯನ್ನು ಎತ್ತುವುದೇನೆಂದರೆ, ಶಿಕ್ಷಣ ಪ್ರಕ್ರಿಯೆ ಕೇವಲ ಆಡಳಿತ ವರ್ಗದ ಸಾರಥ್ಯದಲ್ಲಿ ಮುಂದುವರಿಯಬೇಕೆ ? ಅಥವಾ ಸಮುದಾಯದ ಮಾರ್ಗದರ್ಶನದಲ್ಲಿ ಮುಂದುವರಿಯಬೇಕೆ? ಸ್ವಾತಂತ್ರ್ಯ ನಂತರ ಭಾರತವು ಹಮ್ಮಿಕೊಂಡ ಶಿಕ್ಷಣವೂ ಸೇರಿದಂತೆ ಅನೇಕ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ವೈಫಲ್ಯಕ್ಕೆ ಸಮುದಾಯ ಪ್ರಜ್ಞೆಯ ಕೊರತೆಯೇ ಕಾರಣ.

ಪ್ರಸಿದ್ಧ ಶಿಕ್ಷಣ ತಜ್ಞ 'ಪಾಲ್ ಫ್ರೈರೆ', ಇವಾನ್ ಇಲಿಚ್, ಪಾಲ್ ಗಾಡ್ ಮನ್‌ರವರುಗಳು ನಡೆಸಿದ ಪ್ರಯೋಗ ಹಾಗೂ ಆಫ್ರಿಕಾ ಮತ್ತು ವಾರ್ಧಾಗಳಲ್ಲಿ ಗಾಂಧೀಜಿ ನಡೆಸಿದ ಪ್ರಯೋಗಗಳನ್ನು ಗಮನಿಸಿದಾಗ ಶಿಕ್ಷಣ ಪ್ರಕ್ರಿಯೆ ಸಫಲವಾಗಲು ಸಮುದಾಯದ ಪಾಲ್ಗೊಳ್ಳುವಿಕೆ ಅತ್ಯವಶ್ಯಕ. ಇದು ಸೂಕ್ಷ್ಮ ಯೋಜನೆ ಯಶಸ್ವಿಯಾಗುವಲ್ಲಿ ನೆರವಾಗಬಲ್ಲದು. ಇಂದು ನಮ್ಮ ಹಳ್ಳಿಗಳಲ್ಲಿ ಗರಿಷ್ಠ ಪ್ರಮಾಣದ ಸಾಕ್ಷರತೆ ಹೆಚ್ಚಿಸಲುತೀವ್ರ ಪ್ರಯತ್ನ ಮಾಡಲಾಗುತ್ತಿದೆ. ಸರಕಾರದ ಆಡಳಿತ ಯಂತ್ರ ಹಂತ ಹಂತವಾಗಿದೂರ ಸರಿಯುತ್ತಾ ಸಮುದಾಯದ ಜನತೆಗೆ ಶಿಕ್ಷಣ ಪ್ರಕ್ರಿಯೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ನೀಡುವುದು ಅತ್ಯವಶ್ಯಕ. ತಾವು ಜನ್ಮ ನೀಡಿದ ಮಕ್ಕಳಿಗೆ ಶಿಕ್ಷಣ ದೊರಕಿಸಿಕೊಡುವ ಹೊಣೆಗಾರಿಕೆ ನಮ್ಮದು ಎಂಬ ಅರಿವು ಸಮುದಾಯಗಳಲ್ಲಿ ಮೂಡಬೇಕು. ಎಂತಹ ಶಿಕ್ಷಣ ಬೇಕು? ಅದನ್ನು ಹೇಗೆ ಒದಗಿಸಬೇಕು? ಇದಕ್ಕಾಗಿ ಎಂತಹ ಸಾಂಸ್ಥಿಕವಾದ ವ್ಯವಸ್ಥೆಯನ್ನು ರಚಿಸಬೇಕು ಎಂಬುದನ್ನು ಜನರೇ ನಿರ್ಧರಿಸುವಂತಾಗಬೇಕು.

ತಜ್ಞರು, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸಾರಥ್ಯವಹಿಸಿ ಜನರಿಗೆ ಉಪಯುಕ್ತ ಮಾರ್ಗದರ್ಶನ ನೀಡುವುದಕ್ಕೆ ಮಾತ್ರ ತಮ್ಮ ಪಾತ್ರಗಳನ್ನು ಸೀಮಿತಗೊಳಿಸಿಕೊಳ್ಳಬೇಕು. ಹೀಗಾದಾಗ ಮಾತ್ರ ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆ ಹಾಗೂ ಅದು ಹಮ್ಮಿಕೊಳ್ಳುವ ಯೋಜನೆಗಳು ಅರ್ಥಪೂರ್ಣವಾಗಿ ವಿಕೇಂದ್ರೀಕರಣವಾಗಲು ಸಾಧ್ಯ. ಕೇಂದ್ರೀಕೃತ ಶಿಕ್ಷಣ ವ್ಯವಸ್ಥೆ ಈಗಾಗಲೇ ಭರಿಸಲಾಗದಷ್ಟು ಅನಾಹುತ ಉಂಟುಮಾಡಿದೆ. ಇನ್ನಾದರೂ ಯೋಜಕರು, ವಿಧಿ-ವಿಧಾನಗಳ ರೂಪಕರು ಎಚ್ಚೆತ್ತುಕೊಳ್ಳಬೇಕು.

ಸಲಹೆಗಳು :

ಅಧ್ಯಯನದಿಂದ ಹೊರಬಂದ ತಥ್ಯಗಳ ಹಿನ್ನೆಲೆಯಲ್ಲಿ ಸಮುದಾಯ ಭಾಗವಹಿಸುವಿಕೆಯ ಗುಣಮಟ್ಟವನ್ನು ಉತ್ತಮಗೊಳಿಸಬಹುದಾದ ಕೆಲವು ಸಲಹೆಗಳನ್ನು ನೀಡಲಾಗಿದೆ.

1. 'ಶಿಕ್ಷಣ ಎಲ್ಲರಿಗಾಗಿ' ಎಂಬ ಗುರಿಯನ್ನು ಹೊಂದಲಾಗಿದೆ. ಈ ಗುರಿಯನ್ನು ಸಾಧಿಸಲು ಜನರಲ್ಲಿ ತಿಳುವಳಿಕೆ ಮೂಡಿಸುವ ಕಾರ್ಯಕ್ರಮಗಳು ತೀವ್ರಗೊಳ್ಳಬೇಕಾದ ಅಗತ್ಯವಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳಾದ ಕಲಾಜಾಥ, ಬೀದಿ ನಾಟಕಗಳು, ಶಿಕ್ಷಣದ ಬಗೆಗಿನ ಹಾಡುಗಳು ಇತ್ಯಾದಿ.

2. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ಗುರಿಯನ್ನು ತಲುಪಲು 'ಸೂಕ್ಷ್ಮ ಯೋಜನೆ ಕಾರ್ಯಕ್ರಮ'ಗಳನ್ನು ಎಲ್ಲಾ ಗ್ರಾಮಗಳಲ್ಲಿ ಕಡ್ಡಾಯವಾಗಿ ಹಮ್ಮಿಕೊಳ್ಳುವ ಅಗತ್ಯವಿದೆ. ಈ ಮೂಲಕ ಸಮುದಾಯವನ್ನು ತೊಡಗಿಸಿಕೊಂಡು ಶಾಲಾ ಶಿಕ್ಷಣದ ಅಭಿವೃದ್ಧಿಗೆ ಪ್ರಯತ್ನಪಡಬಹುದಾಗಿದೆ.

3. ಸ್ಥಳೀಯ ಸಂಘ-ಸಂಸ್ಥೆಗಳು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಹೆಚ್ಚಿನ ಬೆಂಬಲ ನೀಡುವ ಅಗತ್ಯವಿದೆ.

4. ಎಲ್ಲಾ ಶಾಲೆಗಳಲ್ಲಿಯೂ 'ಗ್ರಾಮ ಶಿಕ್ಷಣ ಸಮಿತಿ'ಗಳು ಹೆಚ್ಚು ಬಲಗೊಳ್ಳಬೇಕಾಗಿದೆ. ಈ ಸಮಿತಿಯ ಸಭೆಗಳು ಪ್ರತಿ ತಿಂಗಳು ಕಡ್ಡಾಯವಾಗಿ ನಡೆದು 'ಶಿಕ್ಷಣ ಅಭಿವೃದ್ಧಿ'ಬಗ್ಗೆ ಚರ್ಚಿಸಿ, ಕಾರ್ಯಕ್ರಮಗಳನ್ನು ವಸ್ತುನಿಷ್ಠವಾಗಿ ಯೋಜಿಸಬೇಕಾಗಿದೆ.

5. ಶಾಲಾ ಪಠ್ಯಪುಸ್ತಕಗಳಲ್ಲಿ, ಶಿಕ್ಷಣದ ಅಭಿವೃದ್ಧಿಗಾಗಿ ಸಮುದಾಯ ಭಾಗವಹಿಸುವಿಕೆಯ ಅಗತ್ಯತೆ ಕುರಿತು ಪಠ್ಯ ವಿಷಯವಾಗಿ ಅಳವಡಿಸಿಕೊಳ್ಳುವ ಅಗತ್ಯವಿದೆ.

6. ಶಿಕ್ಷಣ ಅಭಿವೃದ್ಧಿಗಾಗಿ ಸ್ಥಳೀಯ ಸಂಪನ್ಮೂಲಗಳನ್ನು ಹೆಚ್ಚು ಕ್ರೋಢೀಕರಿಸಿಕೊಳ್ಳಲು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ.

ಈ ಮೇಲಿನ ಪ್ರಮುಖ ಸಲಹೆಗಳನ್ನು ಅನುಷ್ಠಾನಗೊಳಿಸಿದಲ್ಲಿ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಸಂಪೂರ್ಣ ಗುರಿಯನ್ನು ಸಾಧಿಸಲು ಸಾಧ್ಯವಾಗಬಹುದಾಗಿದೆ.

ಅನುಬಂಧಗಳು

ಪ್ರಶ್ನಾವಳಿ

ಭಾವಚಿತ್ರಗಳು

ಪಾರಿಭಾಷಿಕ ಪದ ಮತ್ತು ಗ್ರಂಥಸೂಚಿ

ಅನುಬಂಧ - 1

ಪ್ರಶ್ನಾವಳಿ

ಸಮುದಾಯವು ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ

ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ

1. ಗ್ರಾಮದ ಹೆಸರು :-

2. ಸಮೂಹ ಸಂಪನ್ಮೂಲ ಕೇಂದ್ರದ ಹೆಸರು :-

3. ಕುಟುಂಬದ ಮುಖ್ಯಸ್ಥರ ಹೆಸರು :-

4. ಕುಟುಂಬದ ವರ್ಗ : ಜಾತಿ : 1. ಪ. ಜಾ. 2. ಪ. ಪಂ. 3. ಹಿಂ. ವ. 4. ಇತರೆ

5. ಕುಟುಂಬದ ವಿವರ : 1 ವಿಭಕ್ತ ಕುಟುಂಬ 2. ಅವಿಭಕ್ತ ಕುಟುಂಬ 3. ವಿಸ್ತೃತ ಕುಟುಂಬ

6.

ಕ್ರ. ಸಂ.	ಹೆಸರು	ಕುಟುಂಬದ ಮುಖ್ಯಸ್ಥನೊಂದಿಗಿರುವ ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೃತ್ತಿ	ಆದಾಯ (ಮಾಸಿಕ)

ಸೂಚನೆ :- ವಿವರಗಳು

ಕೋಡ್ 4 (ಲಿಂಗ) ಕೋಡ್ - 5 ವಯಸ್ಸು ಕೋಡ್ - 6 (ಶೈಕ್ಷಣಿಕ ಅರ್ಹತೆಗಳು)

1. ಗಂಡು
2. ಹೆಣ್ಣು

1. ಅನಕ್ಷರಸ್ಥ
2. ಪ್ರಾಥಮಿಕ (1-4ನೇ ತರಗತಿ)
3. ಹಿರಿಯ ಪ್ರಾಥಮಿಕ (5-7ನೇ)
4. ಪ್ರೌಢಶಿಕ್ಷಣ
5. ಪಿ.ಯು.ಸಿ.
6. ಪದವಿ (ಬಿ.ಟೆಕ್. ಎಂ.ಬಿ.ಬಿ. ಎಸ್. ಸೇರಿ)
7. ಸ್ನಾತಕೊತ್ತರ ಪದವಿ
8. ಇತರೆ (ನಿರ್ಧಿಷ್ಟಪಡಿಸಿ)

ಆದಾಯದ ಸರಿಯಾದ ಸಂಖ್ಯೆಯನ್ನು ನಮೂದಿಸುವುದು.

ಕೋಡ್ - 7 (ವೃತ್ತಿ)

01. ಕೃಷಿ ಕಾರ್ಮಿಕರು (ಕೂಲಿ)
02. ವ್ಯವಸಾಯ
03. ನಿರ್ಮಾಣದ ಕೆಲಸಗಳು
04. ವ್ಯಾಪಾರ/ಸಣ್ಣ ಕೈಗಾರಿಕೆ ಘಟಕ
05. ಸೇವೆಗಳು
06. ದರ್ಜಿ
07. ನೇಕಾರ
08. ಬಡಗಿ
09. ಅಕ್ಕಸಾಲಿಗ
10. ಪೋರ್ಟರ್ಸ್
11. ಗುತ್ತಿಗೆದಾರ
12. ಇತರೆ (ನಿರ್ಧಿಷ್ಟಪಡಿಸಿ)

ಭಾಗ - 2

ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಪ್ರಶ್ನೆಗಳು

1. ಸೂಕ್ಷ್ಮ ಯೋಜನೆ ಕಾರ್ಯಕ್ರಮವು ನಿಮ್ಮ ಗ್ರಾಮದಲ್ಲಿ ಆಗಿರುವುದು ನಿಮಗೆ ತಿಳಿದಿದೆಯೇ?

1. ಹೌದು 2. ಇಲ್ಲ

1ಎ. ಹೌದಾದರೆ : ಸೂಕ್ಷ್ಮ ಯೋಜನಾ ಸಂಪನ್ಮೂಲ ವ್ಯಕ್ತಿಗಳಿಂದ ಏನೇನು ಆಗಿದೆ?

1. ಗ್ರಾಮಸ್ಥರು ಗ್ರಾಮದ ನಕಾಶೆಯನ್ನು ಹಾಕಿದರು.
2. ಸಂಪನ್ಮೂಲ ವ್ಯಕ್ತಿಗಳು ಗ್ರಾಮ ಸಭೆಯಲ್ಲಿ ಸೂಚನೆಗಳನ್ನು ನೀಡಿದರು.
3. ಮಕ್ಕಳಿಗಾಗಿ ಆಟ ಮತ್ತು ಚಟುವಟಿಕೆಗಳನ್ನು ನಡೆಸಿದರು.
4. ಮನೆ ಮನೆ ಸಮೀಕ್ಷೆಯನ್ನು ಸಂಘಟಿಸಲಾಗಿತ್ತು.
5. ಇತರೆ ಇದ್ದರೆ (ನಿರ್ಧಿಷ್ಟಪಡಿಸಿ).
6. ಅನ್ವಯಿಸುವುದಿಲ್ಲ.

2. ಸೂಕ್ಷ್ಮ ಯೋಜನಾ ಕಾರ್ಯಕ್ರಮದ ನಂತರ ಏನಾಗಿದೆ?

1. ಮಕ್ಕಳು ಶಾಲೆಗೆ ಸೇರಿದರು (ಸಂಖ್ಯೆ ನಮೂದಿಸಿ).
2. ಸಮುದಾಯದಲ್ಲಿ ಭಾಗವಹಿಸುವಿಕೆಯಿಂದ ಶಾಲೆ ಅಭಿವೃದ್ಧಿಗೊಂಡಿದೆ.
3. ಸೂಕ್ಷ್ಮ ಯೋಜನೆ ನಂತರ ಸಮುದಾಯವು ಪ್ರೇರಣೆಗೊಂಡಿದೆ.
4. ಮಹಿಳೆಯರು/ ಯುವಕರು ಮತ್ತು ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಈ ಕಾರ್ಯಕ್ರಮದ ನಂತರ ಪ್ರೇರಣೆ ಹೊಂದಿ ಗ್ರಾಮದ ಶಾಲಾಭಿವೃದ್ಧಿಪಡಿಸುವಲ್ಲಿ ಆಸಕ್ತಿ ತಾಳಿದ್ದಾರೆ.
5. ಸೂಕ್ಷ್ಮ ಯೋಜನೆ ನಂತರ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿ ಹೊಂದಿದ್ದಾರೆ.
5. ಇತರೆ (ನಿರ್ಧಿಷ್ಟಪಡಿಸಿ).

3. ಗ್ರಾಮ ಸಭೆಯಲ್ಲಿ ಚರ್ಚಿಸಿದ ವಿಷಯಗಳು ನಿಮಗೆ ನೆನಪಿದೆಯೆ?

1. ಹೌದು 2. ಇಲ್ಲ

3.ಎ. ಹೌದಾದರೆ ಚರ್ಚಿಸಿದ ವಿಷಯಗಳನ್ನು ಸ್ಪಷ್ಟಪಡಿಸಿ.

1. ಶಾಲೆಯಲ್ಲಿ ದಾಖಲಾದ ಮಕ್ಕಳು.
2. 'ಬಾಲಕಾರ್ಮಿಕ ಮಕ್ಕಳ' ಬಗ್ಗೆ ಪಾಲಕ/ಪೋಷಕರಿಗೆ ಅರಿವನ್ನು ಮೂಡಿಸಲಾಯಿತು.
3. ಗ್ರಾಮ ಶಿಕ್ಷಣ ಸಮಿತಿಯನ್ನು ಬಲಪಡಿಸುವುದು/ ಅವರ ಜವಾಬ್ದಾರಿಯನ್ನು ತಿಳಿಸುವುದು.
4. 'ಹೆಣ್ಣು ಮಕ್ಕಳ' ಶಿಕ್ಷಣದ ಬಗ್ಗೆ.
5. ಮಕ್ಕಳಿಗೆ ಕೆಲಸದ ಹೊರೆ ಹೆಚ್ಚಿಸುವುದು (ಅದರಲ್ಲೂ ಹೆಣ್ಣು ಮಕ್ಕಳನ್ನು).
6. ಮೇಲಿನ ಎಲ್ಲಾ.
7. ಇತರೆ (ಸ್ಪಷ್ಟಪಡಿಸಿ).

4. ಗ್ರಾಮ ಸಭೆಯಲ್ಲಿ ಚರ್ಚಿಸಿದಂತೆ ಕ್ರಮವನ್ನು ಕೈಗೊಳ್ಳಲಾಗಿದೆಯೇ ?

1. ಹೌದು 2. ಇಲ್ಲ 3. ಗೊತ್ತಿಲ್ಲ

4ಎ. ಹೌದಾದರೆ, ದಯವಿಟ್ಟು ಕ್ರಮಕೈಗೊಂಡ ಬಗ್ಗೆ ವಿವರಿಸಿರಿ.

1. ....
2. ....
3. ....
4. ....
5. ....
6. ಅನ್ವಯಿಸುವುದಿಲ್ಲ.

5. ನಿಮ್ಮ ಗ್ರಾಮದಲ್ಲಿ ಗ್ರಾಮ ಶಿಕ್ಷಣ ಸಮಿತಿ ಇರುವುದು ನಿಮಗೆ ತಿಳಿದಿದೆಯೆ ?

1. ಹೌದು 2. ಇಲ್ಲ.

5.ಎ. ಹೌದಾದರೆ, ನಿಮ್ಮ ಗ್ರಾಮದ ಶಾಲೆಯ ಅಭಿವೃದ್ಧಿಗಾಗಿ ಗ್ರಾಮ ಶಿಕ್ಷಣ ಸಮಿತಿಯಿಂದ ಯಾವ ಕಾರ್ಯ ಕೈಗೊಂಡಿದ್ದಾರೆ ಸ್ಪಷ್ಟಪಡಿಸಿ.

1. ....
2. ....
3. ....
4. ....
5. ....
6. ಅನ್ವಯಿಸುವುದಿಲ್ಲ.

6. ಶಾಲಾ ಶೈಕ್ಷಣಿಕ ಸಮಸ್ಯೆಗಳ ಕುರಿತು ಅಥವಾ ಶೈಕ್ಷಣಿಕ ಕೊಡುಗೆ ಕುರಿತು ಯಾವತ್ತಾದರೂ ಗ್ರಾಮ ಶಿಕ್ಷಣ ಸಮಿತಿ ಸದಸ್ಯರನ್ನು ಸಂಪರ್ಕಿಸಿದ್ದೀರಾ ?

1. ಹೌದು 2. ಇಲ್ಲ

6.ಎ. ಹೌದಾದರೆ ವಿವರಿಸಿ.

1. ....
2. ....
3. ....
4. ....
5. ....
6. ಅನ್ವಯಿಸುವುದಿಲ್ಲ.

ಭಾಗ - 3

ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ

(ಗ್ರಾಮ ಶಿಕ್ಷಣ ಸಮಿತಿ ಸದಸ್ಯರೊಂದಿಗೆ)

1. ನಿಮ್ಮ ಶಾಲೆಯ ಅಭಿವೃದ್ಧಿಗಾಗಿ ನೀವು ಎಂದಾದರೂ ಪಾಲ್ಗೊಂಡಿರುವಿರಾ?

1. ಹೌದು 2. ಇಲ್ಲ

1.ಎ. ಹೌದಾದರೆ, ನಿಮ್ಮ ಕೊಡುಗೆಯೇನು?

1. ಶಾಲೆಗಾಗಿ ಭೌತಿಕ ಸೌಕರ್ಯಗಳನ್ನು ಒದಗಿಸಲಾಗಿದೆ.
2. ಗ್ರಾಮದ ಸಮುದಾಯ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಪ್ರೇರಣೆ ನೀಡಲಾಗಿದೆ.
3. ಅರ್ಹರಾದ ಎಲ್ಲಾ ಮಕ್ಕಳನ್ನು ಶಾಲೆಯಲ್ಲಿ ಸೇರಿಸಲಾಗಿದೆ.
4. ಶಾಲೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನ ಮಾಡಲಾಗಿದೆ.
5. ಇತರೆ (ನಿರ್ದಿಷ್ಟ ಪಡಿಸಿ).

2. ನೀವು ಗ್ರಾಮ ಶಿಕ್ಷಣ ಸಮಿತಿ ಸದಸ್ಯರೆ?

1. ಹೌದು 2. ಇಲ್ಲ.

2.ಎ. ಹೌದಾದರೆ ಶಾಲಾಭಿವೃದ್ಧಿಗಾಗಿ ಯಾವ ಯಾವ ಚಟುವಟಿಕೆಗಳನ್ನು ಹಮ್ಮಿಕೊಂಡಿರುವಿರಿ.

1. ....
2. ....
3. ....
4. ....
5. ....
6. ಅನ್ವಯಿಸುವುದಿಲ್ಲ.

2.ಬಿ. ನೀವು ಯಾವುದಾದರೂ ತರಬೇತಿ ಪಡೆದಿರುವಿರಾ?

1. ಹೌದು 2. ಇಲ್ಲ.

2.ಸಿ. ಹೌದಾದರೆ ಯಾವ ತರಬೇತಿ (ಸ್ಪಷ್ಟಪಡಿಸಿ)

....

....

....

3. ಸೂಕ್ಷ್ಮ ಯೋಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವಿರಾ?

1. ಹೌದು 2. ಇಲ್ಲ.

4. ಸೂಕ್ಷ್ಮ ಯೋಜನಾ ಕಾರ್ಯಕ್ರಮವು ಶೈಕ್ಷಣಿಕ ಪ್ರಗತಿಗೆ ಪ್ರಮುಖವಾದ ಚಟುವಟಿಕೆ ಎಂದು ಭಾವಿಸಿರುವಿರಾ ?

1. ಹೌದು. 2. ಇಲ್ಲ. [ ]

5. ನಿಮ್ಮ ಗ್ರಾಮದ ಶಾಲೆಯ ಅಭಿವೃದ್ಧಿಗಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ ನಿರ್ಧಿಷ್ಟವಾಗಿ ತಿಳಿಸಿ.

1. ....
2. ....
3. ....
4. ....
5. ....

6. ನಿಮ್ಮ ಶಾಲೆಯಲ್ಲಿ ಯಾವುದಾದರೂ ಬದಲಾವಣೆಯನ್ನು ಗಮನಿಸಿರುವಿರಾ ?

1. ಹೌದು. 2. ಇಲ್ಲ. [ ]

6ಎ. ಹೌದಾದರೆ ಯಾವುವು ? (ಸ್ಪಷ್ಟಪಡಿಸಿ).

1. ....
2. ....
3. ....
4. ....

7. ಶಾಲೆಯ ಅಭಿವೃದ್ಧಿ ಬಗ್ಗೆ ಯೋಚಿಸುವಂತ ಜನರು/ಸಂಘ-ಸಂಸ್ಥೆಗಳು ನಿಮ್ಮ ಗ್ರಾಮದಲ್ಲಿ ಯಾವುವು? [ ]

1. ಗ್ರಾಮ ಪಂಚಾಯಿತಿ. 2. ಗ್ರಾಮ ಶಿಕ್ಷಣ ಸಮಿತಿ.
3. ಗ್ರಾಮದ ಯುವಕರು. 4. ಮಹಿಳಾ ಮಂಡಳಿಗಳು.
5. ಶಿಕ್ಷಣ ಇಲಾಖೆ. 6. ಇತರೆ (ತಿಳಿಸಿ).

8. 'ಗ್ರಾಮ ಪಂಚಾಯಿತಿ' ಭಾಗಿತ್ವದಲ್ಲಿ ನಿಮ್ಮ ಊರಿನಲ್ಲಿ ಶಿಕ್ಷಣದ ಪ್ರಗತಿಗಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ ? (ಸ್ವಷ್ಟಪಡಿಸಿ).

1. ....
2. ....
3. ....

4. ....

5. ....

9. ಶಾಲಾ ಅಭಿವೃದ್ಧಿಗಾಗಿ ನಿಮ್ಮ ಗ್ರಾಮದಲ್ಲಿ ಯಾವ ರೀತಿ ಯೋಜನೆಯನ್ನು ಹಾಕಿ ಕೊಂಡಿರುವಿರಿ ? (ವಿವರಿಸಿ).

1. ....
2. ....
3 ....
4. ....

10. ಈ ಯೋಜನೆಯನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗಿದೆ ?

1. ಸ್ಥಳೀಯ ಸಮುದಾಯದ ಸಹಕಾರದೊಂದಿಗೆ.
2. ಗ್ರಾಮ ಪಂಚಾಯಿತಿ ಸಹಕಾರದೊಂದಿಗೆ.
3. ವಿಇಸಿ ಮತ್ತು ಮುಖ್ಯ ಗುರುಗಳ ಮುಖಾಂತರ ಜಾರಿಗೊಳಿಸಲಾಗಿದೆ.
4. ಆಡಳಿತ ಅಧಿಕಾರಿಗಳ ಸಹಕಾರದಿಂದ.
5. ಇತರೆ (ಸ್ಪಷ್ಟ ಪಡಿಸಿ). ☐

11. ನಿಮ್ಮ ಗ್ರಾಮದಲ್ಲಿ ಸ್ಥಳೀಯ ಸಂಸ್ಥೆಗಳಿವೆಯೆ ?

1. ಹೌದು. 2. ಇಲ್ಲ. ☐

12. ಹೌದಾದರೆ ಯಾವುವು ? (ಸ್ಪಷ್ಟಪಡಿಸಿ).

1. ....
2. ....
3. ....
4. ....
5. ಅನ್ವಯಿಸುವುದಿಲ್ಲ. ☐

ಭಾಗ - 4

ಪರ್ಯಾಯ ಶಾಲೆಗೆ ಹಾಜರಾಗುವ ಮಕ್ಕಳ ಪಾಲಕರ / ಪೋಷಕರಿಂದ ಮಾಹಿತಿ.

ಶಾಲೆಗಳಿಗೆ ಗೈರು ಹಾಜರಾಗುವ ಮಕ್ಕಳ ಪೋಷಕರಿಗೆ (ಆಯ್ದ) ಪ್ರಶ್ನಾವಳಿಗಳು.

1. ನಿಮ್ಮ ಊರಿನಲ್ಲಿ ಅನೌಪಚಾರಿಕ ಶಿಕ್ಷಣ ಕೇಂದ್ರ ಇದೆಯೆ ?.

   1. ಇದೆ. 2. ಇಲ್ಲ. ☐

2. ಅನೌಪಚಾರಿಕ ಶಿಕ್ಷಣ ಕೇಂದ್ರಕ್ಕೆ ನಿಮ್ಮ ಮಕ್ಕಳನ್ನು ಸೇರಿಸಲು (ದಾಖಲೆ ಮಾಡಲು) ನಿಮ್ಮ ಒಪ್ಪಿಗೆ ಇತ್ತೆ ?

   1. ಹೌದು. 2. ಇಲ್ಲ. ☐

3. ಶಾಲೆಗೆ ಕಳುಹಿಸದ ಮಕ್ಕಳನ್ನು ಶಾಲೆಗೆ / ಅನೌಪಚಾರಿಕ ಶಿಕ್ಷಣ ಕೇಂದ್ರಕ್ಕೆ ಕಳುಹಿಸಿ ಕೊಡಿ ಎಂದು ಯಾರಾದರೂ ನಿಮ್ಮನ್ನು ಕೇಳಿಕೊಂಡರೆ ?

   1. ಹೌದು. 2. ಇಲ್ಲ. ☐

4. ಹೌದಾದರೆ ಅವರ್‍ಯಾರು ? ವಿವರಿಸಿ.

1. ....
2. ....
3. ....
4. ....

5. ನಿಮ್ಮ ಮಕ್ಕಳನ್ನು ಶಾಲೆಗೆ ಏಕೆ ಕಳುಹಿಸಿಲ್ಲ ?

1. ಚಿಕ್ಕ ಮಕ್ಕಳಿರುವುದರಿಂದ.
2. ಮನೆ ಕೆಲಸ ಇರುವುದರಿಂದ.
3. ದನ-ಕರು ಕಾಯಲು.
4. ಬೇರೆ ಮನೆಯವರಲ್ಲಿ ಕೆಲಸಕ್ಕೆ ಹೋಗಲು.
5. ಪೋಷಕರಿಗೆ ಆಸಕ್ತಿ ಇಲ್ಲದಿರುವುದು.
6. ಇತರೆ. ☐

6. ನಿಮ್ಮ ಮಗು ಅನೌಪಚಾರಿಕ ಶಿಕ್ಷಣ ಕೇಂದ್ರಕ್ಕೆ ಸರಿಯಾಗಿ ಹಾಜರಾಗುತ್ತಿದೆಯೇ ?

   1. ಹೌದು. 2. ಇಲ್ಲ. ☐




ಸೂಕ್ಷ್ಮ ಯೋಜನೆ ಕಾರ್ಯಕ್ರಮಕ್ಕೆ 'ಕಲಾಜಾಥ' ತಂಡದವರಿಂದ
ಗ್ರಾಮದಲ್ಲಿ ವಾತಾವರಣ ನಿರ್ಮಾಣ ಮಾಡುತ್ತಿರುವುದು.



ಗ್ರಾಮದ ಶಾಲಾ ಮಕ್ಕಳಿಂದ ಬೀದಿ ಬೀದಿಯಲ್ಲಿ
ವಾತಾವರಣ ನಿರ್ಮಾಣಕ್ಕಾಗಿ ಮೆರವಣಿಗೆ.



ಸೂಕ್ಷ್ಮ ಯೋಜನಾ ತಂಡದವರಿಂದ ಗೃಹಸಮೀಕ್ಷೆ.
ಕುಟುಂಬದ ಸದಸ್ಯರಿಂದ ಮಾಹಿತಿ ಪಡೆಯುತ್ತಿರುವುದು.



ಚಾರ್ಟ್‌ನಲ್ಲಿ ಸಿದ್ಧಪಡಿಸಿದ ಸಾಮಾಜಿಕ ಹಾಗೂ ಸಂಪನ್ಮೂಲ ನಕ್ಷೆ.



ಸಂಪನ್ಮೂಲ ವ್ಯಕ್ತಿಗಳಿಂದ
ಗೃಹ ಸಮೀಕ್ಷೆಯ ಕ್ರೋಢೀಕರಣ ಮಾಡುತ್ತಿರುವ ಚಿತ್ರ.



ಶಾಲೆಗೆ ಬರುವ ಮಕ್ಕಳ ಜವಾಬ್ದಾರಿ ಕುರಿತು ಚರ್ಚೆ.



ಋತುಮಾನ ನಕ್ಷೆಯ ಚಿತ್ರ




ಸಂಪನ್ಮೂಲ ವ್ಯಕ್ತಿಗಳಿಂದ ಜವಾಬ್ದಾರಿ ಚಾರ್ಟ್ ತಯಾರಿಸುವ ಚರ್ಚೆ.



ಮಕ್ಕಳ ಚಟುವಟಿಕೆಗಳನ್ನು ನಡೆಸುತ್ತಿರುವ ಚಿತ್ರ.



ಗ್ರಾಮಸಭೆಯಲ್ಲಿ ಭಾಗವಹಿಸಿದ ಸಮುದಾಯ



ಗ್ರಾಮಸಭೆಗೆ 'ಸೂಕ್ಷ್ಮ ಯೋಜನೆ'ಯಿಂದ ಕಂಡುಕೊಂಡ
ಅಂಶಗಳನ್ನು ಸಮುದಾಯಕ್ಕೆ ಗ್ರಾಮದ ಯುವಕನೇ ವಿವರಿಸುತ್ತಿರುವ ಚಿತ್ರ.



ವಿ.ಇ.ಸಿ. ಮೇಳದಲ್ಲಿ ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಭಾಗವಹಿಸಿದ ಚಿತ್ರ.



ವಿ.ಇ.ಸಿ. ಮೇಳದಲ್ಲಿ ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡಿರುವುದು.



ಗ್ರಾಮದ ಶೈಕ್ಷಣಿಕ ಸಮಸ್ಯೆಗಳನ್ನು ಪಟ್ಟಿ ಮಾಡುತ್ತಿರುವ ಸದಸ್ಯರ ಚಿತ್ರ.



ಸದಸ್ಯರಿಂದ ಮೇಳದಲ್ಲಿ ತೆಗೆದುಕೊಂಡ ಅಂತಿಮ ನಿರ್ಣಯದ ಚರ್ಚೆ.

ಪಾರಿಭಾಷಿಕ

ಅನೌಪಚಾರಿಕ ಶಿಕ್ಷಣ ಕೇಂದ್ರ

ಶಾಲೆಯನ್ನು ಬಿಟ್ಟ ಮಕ್ಕಳಿಗೆ ಅನೌಪಚಾರಿಕವಾಗಿ ಶಿಕ್ಷಣವನ್ನು ನೀಡಿ ಮತ್ತೆ ಶಾಲೆಯ ಪ್ರವೇಶಕ್ಕೆ ಉತ್ತೇಜಿಸುವ ಕೇಂದ್ರ.

ಇ.ಎಂ.ಐ.ಎಸ್. (E.M.I.S. – Education Management & Information System).

ಶೈಕ್ಷಣಿಕ ಅಂಕಿ ಅಂಶಗಳ ಮಾಹಿತಿ ವ್ಯವಸ್ಥೆ. ಜಿಲ್ಲೆಯ ಸಂಪೂರ್ಣ ಶೈಕ್ಷಣಿಕ ಅಂಕಿ ಅಂಶಗಳನ್ನು ಕ್ರೋಢೀಕರಿಸಿ, ಶಿಕ್ಷಣದ ಅಭಿವೃದ್ಧಿಗಾಗಿ ಬಳಸಿಕೊಳ್ಳುವ ವ್ಯವಸ್ಥೆ.

ಖುಷಿಯೋ ಖುಷಿ

ಅನೌಪಚಾರಿಕ ಶಿಕ್ಷಣ ಕೇಂದ್ರಗಳಲ್ಲಿ (ಪರ್ಯಾಯ ಶಾಲೆ) ಕಲಿಯುತ್ತಿರುವ ಮಕ್ಕಳ ಶೈಕ್ಷಣಿಕ ಜ್ಞಾನ ಮಟ್ಟವನ್ನು ಹೆಚ್ಚಿಸಲು ಸಿದ್ಧಪಡಿಸಿದ ಅಭ್ಯಾಸ ಪುಸ್ತಕಗಳು. ಇದರಲ್ಲಿ ಖುಷಿಯೋ ಖುಷಿ-1, ಖುಷಿಯೋ ಖುಷಿ-2 ಪುಸ್ತಕಗಳನ್ನು ಕಲಿಸಲಾಗುತ್ತದೆ.

ಡಿ.ಪಿ. ಇ.ಪಿ. (D.P.E.P – District Primery Education Programme)

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ - ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ 1995ರಿಂದ ಈ ರಾಜ್ಯದ 16 ಜಿಲ್ಲೆಗಳಲ್ಲಿ ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮ. 1995ರಿಂದ ನಾಲ್ಕು ಜಿಲ್ಲೆಗಳಲ್ಲಿ 1997ರಿಂದ ಉಳಿದ 12 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ 1997, ಅಕ್ಟೋಬರ್‌ನಿಂದ ಈ ಕಾರ್ಯಕ್ರಮ ಜಾರಿ ಯಲ್ಲಿದೆ.

ಡಿ. ಎಸ್. ಇ. ಆರ್. ಟಿ. (State Dircctorate of Education Research & Training)

ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಶಿಕ್ಷಕರಿಗೆ ಮತ್ತು ಆಡಳಿತಗಾರರಿಗೆ ತರಬೇತಿ ನೀಡುವ ಸಂಸ್ಥೆ. ಇದರಲ್ಲಿ ಸಂಶೋದನೆಗೂ ಕೂಡ ಆದ್ಯತೆಯನ್ನು ನೀಡಲಾಗುತ್ತದೆ.

ನೀಪಾ (NIEPA – National Institute of Educational Planning & Administration)

ರಾಷ್ಟ್ರದ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ನಿರ್ವಹಣೆ ಕುರಿತು ತರಬೇತಿಯನ್ನು ನೀಡುವ ಸಂಸ್ಥೆ.

ಪರ್ಯಾಯ ಶಾಲೆ

ಶಾಲೆಯನ್ನು ತೊರೆದ ಹಾಗೂ ಶಾಲೆಯಿಂದ ವಂಚಿತರಾದ ಮಕ್ಕಳಿಗಾಗಿ ವಿಶೇಷ ಅವಧಿಯಲ್ಲಿ ಶಿಕ್ಷಣವನ್ನು ಕಲಿಸುವ ಕೇಂದ್ರ.

ಪ್ರಸರಣ :

ಹರಡುವಿಕೆ ಅಥವಾ ಹಬ್ಬುವಿಕೆ.

ಬಿ. ಆರ್. ಸಿ. (B.R.C. – Block Resource Centre)

ಕ್ಷೇತ್ರ ಸಂಪನ್ಮೂಲ ಕೇಂದ್ರ. ಜಿಲ್ಲಾ ಪ್ರಾಥಮಿಕ ಶಿಕ್ಷಣದ ಕಾರ್ಯಕ್ರಮದಡಿಯಲ್ಲಿ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಣದ ಅಭಿವೃದ್ಧಿಗಾಗಿ ಮತ್ತು ಶೈಕ್ಷಣಿಕ ಗುಣ ಮಟ್ಟದ ಸುಧಾರಣೆಗಾಗಿ ಸ್ಥಾಪಿಸಿರುವ ಕೇಂದ್ರ. ಪ್ರತಿ ತಾಲೂಕಿನಲ್ಲಿ ಇದರ ಕೇಂದ್ರ ಸ್ಥಾನವಿದ್ದು, ಇದರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿಯನ್ನು ಸಹ ನೀಡಲಾಗುತ್ತದೆ.

ಬ್ರಿಡ್ಜ್ ಕೋರ್ಸ್ (Bridge -Course)

ಶಾಲೆಯನ್ನು ತೊರೆದ ಮಕ್ಕಳಿಗಾಗಿ ಹಾಗೂ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗಾಗಿ, ಶಿಕ್ಷಣದ ಅವಕಾಶವನ್ನು ಕಲ್ಪಿಸಿಕೊಡುವ ಈ ಕಾರ್ಯಕ್ರಮಕ್ಕೆ ಬ್ರಿಡ್ಜ್ ಕೋರ್ಸ್ ಅಥವಾ 'ಸೇತುಬಂಧ' ಕಾರ್ಯಕ್ರಮವೆಂದು ಕರೆಯಲಾಗುತ್ತದೆ.

ಲೋಕ ಜುಂಬಿಷ್

ಶಾಲೆಯನ್ನು ತೊರೆದ ಮಕ್ಕಳಿಗಾಗಿ ಮತ್ತು ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ವಿಶೇಷ ಆಂದೋಲನದ ಮೂಲಕ ಶಿಕ್ಷಣದ ಅವಕಾಶವನ್ನು ಒದಗಿಸುವ ಕಾರ್ಯಕ್ರಮ. ಈ ಕಾರ್ಯಕ್ರಮವು ರಾಜಸ್ಥಾನದಲ್ಲಿ ಪ್ರಚಲಿತದಲ್ಲಿದೆ.

ವಿ. ಇ. ಸಿ. (V. E. C. – Village Education Committee)

ಗ್ರಾಮ ಶಿಕ್ಷಣ ಸಮಿತಿ. ಸ್ಥಳೀಯ ಶಾಲಾ ಅಭಿವೃದ್ಧಿಗಾಗಿ ರಚನೆಯಾದ ಸಮಿತಿ.

ವಿ. ಇ. ಸಿ. ಮೇಳ

ಒಂದು ಸಮೂಹ ಸಂಪನ್ಮೂಲ ಕೇಂದ್ರದಲ್ಲಿ 15-20 ಗ್ರಾಮ ಶಿಕ್ಷಣ ಸಮಿತಿ ಸದಸ್ಯರು ಒಂದು ಕಡೆ ಸೇರಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಕಾರ್ಯಕ್ರಮ.

ಸಶಕ್ತೀಕರಣ

ದುರ್ಬಲರನ್ನು ಬಲಗೊಳಿಸುವ ಕ್ರಿಯೆ. ಇತ್ತೀಚೆಗೆ ಈ ಪದವು ಮಹಿಳೆಯರ ಸಬಲೀಕರಣಕ್ಕಾಗಿ ಹೆಚ್ಚಿಗೆ ಬಳಕೆಯಾಗುತ್ತಿದೆ.

ಸಿ. ಆರ್. ಸಿ. (C.R.C. – Cluster Resource Centre)

ಸಮೂಹ ಸಂಪನ್ಮೂಲ ಕೇಂದ್ರ. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ತಾಲೂಕುಗಳಲ್ಲಿ ಪ್ರತೀ 15ರಿಂದ 20 ಶಾಲೆಗಳನ್ನೊಳನ್ನೊಳಗೊಂಡ 8 ಕಿ.ಮೀ. ವ್ಯಾಪ್ತಿ ಒಳಗೆ ಸ್ಥಾಪಿಸಿರುವ ಸಮೂಹ ಸಂಪನ್ಮೂಲ ಕೇಂದ್ರ.

ಸಂಪನ್ಮೂಲ ವ್ಯಕ್ತಿ

ಸೂಕ್ಷ್ಮ ಯೋಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತರಬೇತಿ ಹೊಂದಿದ ವ್ಯಕ್ತಿಯೇ ಸಂಪನ್ಮೂಲ ವ್ಯಕ್ತಿ. ಬಿ. ಆರ್. ಸಿ.ಗಳಲ್ಲಿ ಶಾಲಾ ಶಿಕ್ಷಕರಿಗೆ ತರಬೇತಿ ನೀಡಲು ಸಂಪನ್ಮೂಲ ವ್ಯಕ್ತಿಗಳು ನೇಮಕವಾಗಿರುತ್ತಾರೆ.

ಸಮುದಾಯದತ್ತ ಶಾಲೆ

ಕಳೆದ ಎರಡು ವರ್ಷಗಳಿಂದ ಶಿಕ್ಷಣ ಇಲಾಖೆಯು ಜನರನ್ನು ಶಿಕ್ಷಣದ ಅಭಿವೃದ್ಧಿಗಾಗಿ ಹೆಚ್ಚು ತೊಡಗಿಸಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿಗಳನ್ನು ಬಲಪಡಿಸಿದ್ದಾರೆ. ಇತ್ತೀಚೆಗೆ ಇವನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಎಂದು ಪುನರ್‌ರಚಿಸಲಾಗಿದೆ. ಈ ಸಮಿತಿಗಳ ಮೂಲಕ ಶಾಲೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಚಯಿಸಲು ಹಮ್ಮಿಕೊಳ್ಳುವ ಕಾರ್ಯಕ್ರಮವೇ ಸಮುದಾಯದತ್ತ ಶಾಲೆ.

ಗ್ರಂಥ ಸೂಚಿ

ಗ್ರಂಥಗಳು ಮತ್ತು ಲೇಖನಗಳು :

1. ಓಬಳೇಶ ಘಟ್ಟಿ, ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, 1998, ಕೇಂಬ್ರಿಡ್ಜ್ ಪಬ್ಲಿಕೇಷನ್ ಕಂಪನಿ, ಬೆಂಗಳೂರು.
2. ಕರ್ನಾಟಕ ಸರಕಾರ, ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ, 1999, ಯೋಜನಾ ವಿಭಾಗ, ಬೆಂಗಳೂರು.
3. ಡಾ. ಚಂದ್ರ ಪೂಜಾರಿ, ದೇಶೀಯತೆ ನೆರಳಲ್ಲಿ ವಿಕೇಂದ್ರೀಕರಣ, 2000, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಚಂದ್ರಶೇಖರ ಟಿ. ಆರ್., ಸಂ: ವಿಕೇಂದ್ರೀಕರಣ ತತ್ವ- ಆಚರಣೆ, 2000, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಜಾನ್‌ಡ್ಯೂಯಿ - ಯೋಜನಾ, ಜನವರಿ 1994, ಯೋಜನಾ ವಿಭಾಗ, ಬೆಂಗಳೂರು.
6. ಜಾನ್‌ಲಾಕ್- ಯೋಜನಾ, ಜನವರಿ 1999, ಯೋಜನಾ ವಿಭಾಗ, ಬೆಂಗಳೂರು.
7. ಜೇಮ್ಸ್‌ವೆಲ್ಪನ್, ವಿಶ್ವಕೋಶ,
8. ಡ್ರೀಜೆ ಮತ್ತು ಅಮರ್ತ್ಯ ಸೇನ್,1995, *ಬೇಸಿಕ್ ಎಜ್ಯುಕೇಷನ್ ಯಾನ್ ಎ ಪೊಲಿಟಿಕಲ್ ಇಷ್ಯು ಜರ್ನಲ್ ಆಫ್ ಎಜ್ಯುಕೇಷನಲ ಪ್ಲಾನಿಂಗ್ ಅಂಡ್ ಅಡ್ಮಿನಿಷ್ಟ್ರೇಶನ್ ಸಂಚಿಕೆ -9 (1).*
9. ತಿಲಕ್ ಬಿ.ಜಿ. 1992, (ಆಧಾರ ಮಹಬಲೇಶ್ವರರಾವ್,1999, ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು-ಸವಾಲುಗಳು).
10. ತ್ರಿಪಾಠಿ ಆರ್. ಸಿ. ಯೋಜನಾ, ಜನವರಿ 1994, ಯೋಜನಾ ವಿಭಾಗ, ಬೆಂಗಳೂರು.
11. ದ್ವಾರಕನಾಥ್, 2000, ಇಂಪ್ರೂ ಪ್ರೈಮರಿ ಎಜ್ಯುಕೇಷನ್ ಇನ್ ರೂರಲ್ ಇಂಡಿಯಾ, 'ಕುರುಕ್ಷೇತ್ರ' ಸಂ:48 (ಲೇಖನ).
12. ನಾಯಕ್ ಜೆ.ಪಿ., ಭಾರತೀಯ ಶಿಕ್ಷಣದಲ್ಲಿ ಸಮಸ್ಯೆ, ಗುಣ ಮತ್ತು ಪರಿಮಾಣ, 1986, ಕನ್ನಡಕ್ಕೆ: ಜಯಕುಮಾರ್ ಅನುಗೋಳ.
13. ನಾಡ್ಲೇರ್, 1984, ಉಲ್ಲೇಖ: ಕರ್ನಾಟಕದ ಆರ್ಥಿಕತೆ , ಉಷಾ ರಾಮ್‌ಕುಮಾರ್,1997,ಕನ್ನಡ ವಿ.ವಿ., ಹಂಪಿ.
14. ನಾಗಪ್ಪ ಟಿ. ಆರ್., 1985, ವಯಸ್ಕರ ಶಿಕ್ಷಣ ಉಪಾಧ್ಯಾಯರ ಕೈಪಿಡಿ, ಗೀತಾ ಬುಕ್ ಹೌಸ್, ಬೆಂಗಳೂರು
15. ನಾಯಕ್ ಜೆ.ಪಿ., ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ಈಡೇರಿಸಬೇಕಾದ ಭರವಸೆ, 1990, ಗೀತಾ ಬುಕ್ ಹೌಸ್, ಮೈಸೂರು.
16. ನಾರಾಯಣ ಸ್ವಾಮಿ ಕೆ. ಎನ್. , ಪಂಚಾಯತ್ ರಾಜ್ ಮತ್ತು ಮಹಾತ್ಮ ಗಾಂಧಿ.
17. ಫೀಲ್ಡ್ಸ್, 1980, ತಿಲಕ್ ಜೆ.ಬಿ. 1987, ಇಕಾನಮಿಕ್ಸ್ ಆಫ್ ಇನ್ ಇಕ್ವಾಲಿಟಿ ಇನ್ ಎಜ್ಯುಕೇಷನ್, ನ್ಯೂ ಡೆಲ್ಲಿ.
18. ಫೈಡ್, 1995, ಉಲ್ಲೇಖ : ಜೆ. ಕೃಷ್ಣ, ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ, ಅಪ್ರಕಟಿತ ಸಂಶೋಧನಾ ಗ್ರಂಥ, 2000, ಕನ್ನಡ ವಿಶ್ವವಿದ್ಯಾಲಯ, ಹಂಪಿ.
19. ಮಹಬಲೇಶ್ವರ ರಾವ್, 1999, ಪ್ರಾಥಮಿಕ ಶಿಕ್ಷಣ : ಸವಾಲುಗಳು-ಸಮಸ್ಯೆಗಳು.

20. ಡಾ. ಮರುಳ ಸಿದ್ಧಯ್ಯ ಹೆಚ್. ಎಂ,1993, ಮಾನವ ಸಂಪನ್ಮೂಲ ಸಂವರ್ಧನೆ, ವಿಶಾಲ ಪ್ರಕಾಶನ, ಬೆಂಗಳೂರು.

21. ಡಾ. ಮೋಹನ್, ಡಾ. ಜೋಸೆಫ್, ಸೌದರ್ನ್ ಇಕಾನಾಮಿಸ್ಟ್, ಆಗಸ್ಟ್ 1, 2001.

22. ರಜನಿ ಕೊಥಾರಿ, ಇಸ್ಯೂಸ್ ಎನ್ ಡೀಸೆಂಟ್ರಲೈಸ್ಡ್ ಗವರ್ನೆನ್ಸ್, ಅಬ್ದುಲ್ ಅಜೀಜ್, ಡೇವಿಡ್ ಅರ್ನಾಲ್ಡ್ (ಸಂಪಾದಿಸಿದ) ಡೀಸೆಂಟ್ರಲೈಸ್ಡ್ ಗವರ್ನೆನ್ಸ್ ಇನ್ ಏಷಿಯನ್ ಕಂಟ್ರೀಸ್, ನ್ಯೂ ಡೆಲ್ಲಿ, ಸೇಜ್ ಪಬ್ಲಿಕೇಷನ್ಸ್, 1996, ಪು. 34-41, ಆಧಾರ ಗ್ರಂಥ : ದೇಶೀಯತೆ ನೆರಳಲ್ಲಿ ವಿಕೇಂದ್ರೀಕರಣ, ಡಾ: ಎಂ. ಚಂದ್ರ ಪೂಜಾರಿ, 2000, ಕನ್ನಡ ವಿಶ್ವವಿದ್ಯಾಲಯ, ಹಂಪಿ.

23. ರಾಧಾ ಎಸ್. ಎನ್. ಮುಖರ್ಜಿ, ಪಾವರ್ಟಿ ಅಂಡ್ ಪ್ರೈಮರಿ ಸ್ಕೂಲಿಂಗ್, ಇ.ಪಿ. ಡಬ್ಲ್ಯು, ಸಂಪುಟ 35, ನಂಬರ್ 10, ಪಿ.ಪಿ.795-82.

24. ಪ್ರೊ. ರೋಹಿಡೇಕರ್ ಎಸ್. ಆರ್. , ಪಂಚಾಯತ್ ರಾಜ್ ಮತ್ತು ಪ್ರಾಥಮಿಕ ಶಿಕ್ಷಣ, 1987, ಡೆಪ್ಯೂಟಿ ಚನ್ನಬಸಪ್ಪ ಪ್ರತಿಷ್ಠಾನ, ಧಾರವಾಡ.

25. ವರ್ಗೀಸ್ ಎನ್. ವಿ., 1995, ಡಿಸೆಂಟ್ರಲೈಜೇಷನ್ ಎಜ್ಯುಕೇಷನ್ ಪ್ಲಾನಿಂಗ್ ಅಂಡ್ ದಿ ಡಿಸ್ಟ್ರಿಕ್ಟ್ ಪ್ರೈಮರಿ ಎಜ್ಯುಕೇಷನ್ ಪ್ರೋಗ್ರಾಮ್, ನೀಪಾ , ನವ ದೆಹಲಿ.

26. ಡಾ. ವೀರಪ್ಪ ಎನ್. ಎಸ್. 1984, ಭಾರತದಲ್ಲಿ ಆಧುನಿಕ ಶಿಕ್ಷಣ, ಪ್ರಸರಾಂಗ : ಮೈಸೂರು ವಿ.ವಿ., ಮೈಸೂರು.

27. ವೈಟ್ ಹೆಚ್. ಉಲ್ಲೇಖ 1992, ಶಂಕರರಾವ್ ಚ.ನ., ಸಮಾಜಶಾಸ್ತ್ರದ ಪ್ರಾಥಮಿಕ ತತ್ವಗಳು ಮತ್ತು ಚಿಂತನೆಗಳು, ಜೈ ಭಾರತ್ ಪ್ರಕಾಶನ, ಮಂಗಳೂರು.

28. ಶಂಕರರಾವ್ ಚ.ನ., 1992, ಸಮಾಜಶಾಸ್ತ್ರದ ಪ್ರಾಥಮಿಕ ತತ್ವಗಳು ಮತ್ತು ಚಿಂತನೆಗಳು, ಜೈ ಭಾರತ್ ಪ್ರಕಾಶನ, ಮಂಗಳೂರು.

29. ಡಾ. ಶ್ರೀಕಂಠಯ್ಯ ಎಂ.ಕೆ., 1987, ಪ್ರಾಬ್ಲಮ್ಸ್ ಅಂಡ್‌ಪ್ರಾಸ್‌ಪೆಕ್ಟ್ಸ್ ಆಫ್ ರೂರಲ್ ಎಜ್ಯುಕೇಷನ್ ಆ್ಯನ್ ಅನ್ ಪಬ್ಲಿಸ್ಡ್, ಪಿಎಚ್.ಡಿ., ಮಹಾ ಪ್ರಬಂಧ, ಬೆಂಗಳೂರು ವಿ.ವಿ., ಬೆಂಗಳೂರು.

30. ಸೀತಾರಾಮ ಮತ್ತು ಉಷಾ ದೇವಿ, ಎಜ್ಯಕೇಷನ್ ಇನ್ ರೂರಲ್ ಏರಿಯಾಸ್ ಕಾನ್ಸ್‌ಸ್ಟ್ರೆಂಟ್ಸ್ ಅಂಡ್ ಪ್ರಾಸ್‌ಪೆಕ್ಟ್ಸ್, ಆಷಿಶ್, ನ್ಯೂ ಡೆಲ್ಲಿ.

31. ಸ್ವೀಜಿ, 1995, ಹ್ಯೂಮನ್ ಡೆವಲಪ್‌ಮೆಂಟ್ ಇನ್ ಸೌಥ್ ಏಷಿಯಾ, ನ್ಯೂ ಡೆಲ್ಲಿ ಸೇನ್ ಗುಪ್ತ, 1996, ಶರ್ಮ 1989, ಅಡಾಲ್ಪ್ ಎಜ್ಯುಕೇಷನ್ ಇನ್ ಇಂಡಿಯಾ , ಅನ್ ವೆಲ್, ನ್ಯೂ ಡೆಲ್ಲಿ.

32. ಹಕ್, 1998, ಹ್ಯೂಮನ್ ಡೆವಲಪ್‌ಮೆಂಟ್ ಇನ್ ಸೌಥ್ ಏಷಿಯಾ, ಓ.ಯು.ಪಿ., ಡೆಲ್ಲಿ.

33. ಹಾರ್ಲ್ ಆರ್. ಡೌಗ್ಲಾಸ್, ಉಲ್ಲೇಖ: ಡಾ. ವೀರಪ್ಪ ಎನ್. ಎಸ್., 1984, ಭಾರತದಲ್ಲಿ ಆಧುನಿಕ ಶಿಕ್ಷಣ, ಪ್ರಸರಾಂಗ: ಮೈಸೂರು ವಿ.ವಿ., ಮೈಸೂರು.

34. ಹ್ಯೂಯನ್‌ತ್ಸಾಂಗ್ (ಚೀನಾ ಪ್ರವಾಸಿಗ) ಉಲ್ಲೇಖ : ಡಾ. ವೀರಪ್ಪ ಎನ್. ಎಸ್., 1984, ಭಾರತದಲ್ಲಿ ಆಧುನಿಕ ಶಿಕ್ಷಣ, ಪ್ರಸರಾಂಗ: ಮೈಸೂರು ವಿ.ವಿ., ಮೈಸೂರು.

35. ಅಜೀಜ್ ಅಬ್ದುಲ್ ಮತ್ತು ವಾಸುಕಿ ಕೆ.ಜಿ. (ಸಂ,(1997) ಕರ್ನಾಟಕದ ಆರ್ಥಿಕತೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

36. ಚಂದ್ರಶೇಖರ ಟಿ. ಆರ್.(1993) ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ-ಹಂಪಿ.

37. ಚಂದ್ರಶೇಖರ್ ಟಿ. ಆರ್.(1998) ಕರ್ನಾಟಕದಲ್ಲಿ ಸಾಮಾಜಿಕ ವೈಫಲ್ಯ ಸಪ್ತಾಹಿಕ ಪುರವಣಿ, ಪ್ರಜಾವಾಣಿ ನವೆಂಬರ್.

38 ಚಂದ್ರಶೇಖರ್ ಟಿ. ಆರ್. (1996) ಅಭಿವೃದ್ಧಿ ಪ್ರಕ್ರಿಯೆಯ ಲಿಂಗ-ಸಂಬಂಧಿ ಆಯಾಮಗಳು, ಮಹಿಳಾ ಅದ್ಯಯನ, ಸಂಪುಟ1 ಸಂಚಿಕೆ1 ಪುಟ.31-45.

40. ಭೀಮಯ್ಯ ಕೆ. ಎನ್. 1985 ಶಿಕ್ಷಣದಲ್ಲಿ ಆರ್ಥಿಕ ಮೌಲ್ಯ ಪ್ರಸಾರಂಗ ಮೈ.ವಿ.ವಿ., ಮೈಸೂರು.

41. ರೇಣುಕ ಪ್ರಸನ್ನ 1979 ಪ್ರಚಲಿತ ಶಿಕ್ಷಣ ಒಂದು ಚಿಂತನೆ, ವಿಶ್ವನಾಥ ಪ್ರಕಾಶನ, ಸರಸ್ವತಿಪುರಂ ಮೈಸೂರು-9.

42. ಕನ್ನಡ ವಿಶ್ವಕೋಶ, 1979, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

43. ಶೇಷಾದ್ರಿ ಬಿ. ಮತ್ತು ಚಂದ್ರಶೇಖರ್ ಟಿ. ಆರ್. 1998 ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ (ಲೇಖನ) ಪ್ರಜಾವಾಣಿ ಮಾರ್ಚ್ 15.

44. ಶೇಷಾದ್ರಿ ಬಿ. ಮತ್ತು ಚಂದ್ರಶೇಖರ್ ಟಿ. ಆರ್., 1998, ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

45. Acharya paramesh "Unequal Participation at the Elementary Level of Education its Structural and Attitudenal Roots''. Paper presented at the national seminar on " Education and rural development''. Indian Institute of Education, pune , Feb 1982.

46. Bangalore University,Thouughts on Education, department and publication and extonsion Lectures, Bangalore University, Bangalore, 1974, p.p. 60-74.

47. Biswas, A The new Eduicational pattern in India, Vikas, Delhi 1976.

48. CAMP Bell R. and J. Ramseyer. The dynamics of School community relations Allyn and Bacon. 1955.

49. Gurmurthy's, Education in South Inida, New Era publications, Madras, 1979.

50. Jayaram. " Education in the Sixth Five Year plan: during the symptons than the malady"? paper submitted act the VI All Inida Conference of the Indian School of Social Science, Bangalore, June 1979.Education 'New' policy- a critique'' maistream. 24(21). 1986, PP.44-8.

51. A.R.Raman, progress of Education in rural Maharastra, Gokhale Institute Economics polictics, Pune, 1968..

52. Kurien John " Towrds Universal Elementary Edication: promise and performance" Economic and political weekly 16(40) 1981, PP.1608-18.

53. Lane, W.R et al. Foundations of educational administration, Macmillan New York, m.d.

54. Mukerji, Radhakumud. " Ancient Indian Education" in S.K.de, Et al Ed: The cultural heritage of India (Vol.II) the Ramakrishna Mission institute of Culture , Calcutta, 1962.

55. Naik J.P. Eduation plamming in Inida Allied, New Delhi, 1965.

56. Naik. J.P. Policy and performance in Indian education. Orient Lonman Delhi,1975.

57. Naik J.P. The Education commissionanal after. Allied, New Delhi, 1982.

58. Narain Iqbal, "Rural Local Policies and Primary School Management" in S.H. Rudolph and R.I. Rudolph (Editing) Education and politics in India. 148-64.

59. NCERT Second All India Education survey, N.C.E.R.T. New Delhi, 1967.

60. NCERT. Fourth All India Educational survey some statastics on school education. New Delhi, 1978.
61. NESIA. K. Social studies in the school. Oxford university press, Madras, 1952.
62. Nurullah, s. and J.P.Naik , A History of Education in India, Bombay, 1943.
63. Olsen, Educational , School and Community Prontice Hall Engle Wood of New Jeresey, 1965.
64. "Land holding pattern and power relation in a Mysore village" Sociological Gulletin" 17(2). 1968. PP. 201-8.
65. Planning Commission, Government of India, Sixth Five Year Plan, 1980-85, New Delhi.
66. Saiyidain. K.G. Compulsory education in India, Universal Book and stationary Co., Delhi : 1966.
67. Saiyedin. K.G. " The School and Community" National Institute of Educational Journal, 1967.
68. Sen Amartya, " The Crisis in India Education" in S.C.Malik (Ed)., Management and organization of Indian universities, Indian Universities, Indian institute of Advanced study, Simla, 1971, PP 248-278.
69. Sharma, R.C. and C.L. Supra. Wastage and stagnation in prmary and middle schools in India, NCERT, Madras, 1969.
70. YEAER W.A. School – Community relations Dryden Press, New York, 1951.
71. Bray.N. (1991) " Centralisation Versus decentrlisation in educational Administration: Regional Issnes" Educational Policy Vol.5,No, UPP.371-85.
72. Department of Education (1986) :National policy on education 1986. Department of education New Delhi: NHRD.
73. Department of Education (1993) : CABE committee on Centralised Management of Edcuation: A Report Department of Education, New Delhi: NHRD.
74. Deparment of Edcuation (1993) : District Prmiary Education Programme (D.P.E.P.) Department of Education New Delhi : NHRD.
75. National Council of Education Research and Training (1990) : Fifth All India Educational Survey: A Conise Report: New Delhi: NCERT.
76. Planning Commission (1992) : The Fifth Five year Plan. National Development Committeeonliteracy. New Delhi: Planning commission.
77. Mode (1995) : Manual for participatory Microplanning in Elementary Education, (A study sponserd the UNICEF) UNICEFE, New Delhi.
78. NIEPA: National Institute of Edcuational Planning and administration (1989), school mapping , NIEPA, New Delhi.

ಮೇಲಿನ ಗ್ರಂಥಗಳಲ್ಲಿ ಪ್ರಬಂಧದ ವಿಷಯಕ್ಕೆ ಸಂಬಂಧಿಸಿದಂತೆ ನೇರವಾಗಿ ಪ್ರಭಾವವನ್ನು ಬೀರಿರುವ ಗ್ರಂಥಗಳನ್ನು ಸಹ ಉಲ್ಲೇಖಿಸಲಾಗಿದೆ.

- - -